ವಿಶ್ವವಾಣಿ
ವಿಶ್ವಾಸವೇ ವಿಶ್ವ

ಪರ್ಫೆಕ್ಟ್ ಟೆನ್

ಕೇರಳ ವಿರುದ್ಧದ ರಣಜಿ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಎಲ್ಲ 10 ವಿಕೆಟ್ ಪಡೆಯುವ ಮೂಲಕ ಹರಿಯಾಣದ ವೇಗಿ ಅನ್ಸುಲ್ ಕಾಂಬೋಜ್ ಅವರು ಅನಿಲ್ ಕುಂಬ್ಳೆ ಅವರ ಚಾರಿತ್ರಿಕ ಸಾಧನೆಯನ್ನು ಮತ್ತೆ ನೆನಪಿಸಿದ್ದಾರೆ. 90 ವರ್ಷಗಳ ರಣಜಿ ಟ್ರೋಫಿ ಇತಿಹಾಸದಲ್ಲಿ 10 ವಿಕೆಟ್ ಸಾಧನೆ ಮಾಡಿದ ಮೂರನೇ ಬೌಲರ್ ಎಂಬ ಕೀರ್ತಿಗೆ ಅನ್ಸುಲ್ ಪಾತ್ರರಾಗಿದ್ದಾರೆ.

ಪುಟ ತೆರೆದಂತೆ...

'ಮುಸಲ್ಮಾನರ' ಬಗ್ಗೆ ಅಂಬೇಡ್ಕರ್ ಹೇಳಿದ್ದೇನು?
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
ಸಂ.ಪುಟ | 6

ನೆಗೆಟಿವ್ ಆಲೋಚನೆಗಳಿಂದ ಹೊರಬರಲು ಹೀಗೆ ಮಾಡಬೇಕು
ಬಿ ಪಾಸಿಟಿವ್
ಡಾ. ಜಗದೀಶ ಮಾನೆ
ಸಂ.ಗಮ | 7

ಮಾತಂದ್ರೆ ಮಾತು

ಪ್ರಧಾನಿ ಮೋದಿ ಅವರು ವಾರಕ್ಕೆ 100 ಗಂಟೆವರೆಗೆ ಕೆಲಸ ಮಾಡುತ್ತಾರೆ. ದೇಶದ ಯುವಕರು ಅವರಿಗೆ ಮೆಚ್ಚುಗೆ ಸೂಚಿಸಬೇಕಾದರೆ ಅವರಂತೆಯೇ ವಾರಕ್ಕೆ ಕನಿಷ್ಠ 70 ತಾಸಾದರೂ ಕೆಲಸ ಮಾಡಬೇಕು. ಕೆಲಸದ ಅವಧಿ ಕುರಿತು ನನ್ನ ದೃಷ್ಟಿಕೋನವನ್ನು ನಾನು ಸತ್ತರೂ ಬದಲಾಯಿಸಿಕೊಳ್ಳುವುದಿಲ್ಲ.

ಎನ್.ಆರ್.ನಾರಾಯಣಮೂರ್ತಿ
ಇನ್ಫೋಸಿಸ್ ಸಹ ಸಂಸ್ಥಾಪಕ

ದಾರಿದೀಪೋಕ್ತಿ

ನಿಮ್ಮ ಸ್ನೇಹಿತರು ಯಾವತ್ತೂ ನಿಮ್ಮಿಂದ ಹಣವನ್ನೇ ನಿರೀಕ್ಷಿಸುತ್ತಾರೆ ಎಂದು ಅಂದುಕೊಳ್ಳಬಾರದು. ಕೆಲವು ಸಲ ಅವರು, ನೀವು ಬಂದು ಕೈ ಹಿಡಿದುಕೊಳ್ಳಲಿ, ತಲೆ ಸವರಲಿ, ತಮ್ಮ ಮಾತುಗಳನ್ನು ಗಮನವಿಟ್ಟು ಕೇಳಿಸಿಕೊಳ್ಳಲಿ ಎಂದಷ್ಟೇ ಬಯಸುತ್ತಾರೆ. ನೀವು ಅಷ್ಟು ಮಾಡಿದರೆ ಅವರಿಗಾಗುವ ಸಂತಸ ಅಷ್ಟಿಷ್ಟಲ್ಲ. ಇಂಥ ಅವಕಾಶವನ್ನು ತಪ್ಪಿಸಿಕೊಳ್ಳಬಾರದು.

ವಕ್ರತುಂಡೋಕ್ತಿ

ಜಗತ್ತಿನ ಎಲ್ಲರೂ ನಿಮ್ಮ ಜತೆ ಸಂಪರ್ಕ ಬೆಳೆಸಲು ಬಯಸುತ್ತಾರೆ, ಆದರೆ ನೀವು ವೈಫೈ ಆಗಿರಬೇಕಷ್ಟೆ.

ಬಸನಗೌಡ ಪಾಟೀಲ್ ಯತ್ನಾಳ್ ಬಣದಿಂದ ಪ್ರತ್ಯೇಕ ಹೋರಾಟಕ್ಕೆ ಸಿದ್ಧತೆ

ನವೆಂಬರ್ 25 ರಿಂದ ಡಿಸೆಂಬರ್ 25ರವರೆಗೆ ಜನಜಾಗೃತಿ ಅಭಿಯಾನ

ಬಿಜೆಪಿಯಲ್ಲಿ ವಕ್ಫ್ ತಿಕ್ಕಾಟ

ಬೆಂಗಳೂರು: ರಾಜ್ಯದಲ್ಲಿ ವಿವಾದ ಸೃಷ್ಟಿಸಿರುವ ವಕ್ಫ್ ಬೋರ್ಡ್ ಮೂಲಕ ರೈತರ ಜಮೀನಿಗೆ ನೋಟಿಸ್ ನೀಡಲಾಗುತ್ತಿದೆ ಎಂದು ಆರೋಪಿಸಿ ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ನವೆಂಬರ್ 25 ರಿಂದ ಡಿಸೆಂಬರ್ 25 ರವರೆಗೆ ಬೀದರ್‌ನಿಂದ ಜನಜಾಗೃತಿ ಅಭಿಯಾನ ನಡೆಸಲು ಬಿಜೆಪಿ ಭಿನ್ನರ ತಂಡ ನಿರ್ಧರಿಸಿದೆ. ಇನ್ನೊಂದೆಡೆ ಎರಡು ಹಂತಗಳಲ್ಲಿ ಹೋರಾಟ ನಡೆಯಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ. ಹೀಗಾಗಿ ವಕ್ಫ್ ವಿಚಾರವಾಗಿ ಬಿಜೆಪಿಯಲ್ಲಿ ತಿಕ್ಕಾಟ ಮುಂದುವರಿಸಿದೆ.

ಬೆಂಗಳೂರಿನ ಸದಾಶಿವನಗರದಲ್ಲಿರುವ ಮಾಜಿ ಶಾಸಕ ಕುಮಾರ ಬಂಗಾರಪ್ಪ ನಿವಾಸದಲ್ಲಿ ಸುದ್ದಿಗೋಷ್ಠಿ ನಡೆಸಿದ ಬಿಜೆಪಿ ನಾಯಕರಾದ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ, ಅರವಿಂದ ಲಿಂಬಾವಳಿ ಅವರು ಜನಜಾಗೃತಿ ಅಭಿಯಾನದ ಬಗ್ಗೆ ಮಾಹಿತಿ ನೀಡಿದ್ದಾರೆ. ಪ್ರಮುಖವಾಗಿ ಮೂರು ಬೇಡಿಕೆಗಳನ್ನು ಮುಂದಿಟ್ಟುಕೊಂಡು ಬಿಜೆಪಿ ಚಿಹ್ನೆಯಡಿ ಜನಜಾಗೃತಿ ಅಭಿಯಾನ ಪ್ರಾರಂಭಿಸಿರುವ ಭಿನ್ನಮತೀಯ ನಾಯಕರು, ಸಾರ್ವಜನಿಕರು ವಕ್ಫ್‌ನಿಂದ ಯಾವುದೇ ರೀತಿಯ ಅನ್ಯಾಯವಾಗಿದ್ದರೆ 9035675734 ವಾಟ್ಸ್ ಆ್ಯಪ್ ನಂಬರ್‌ಗೆ ಸಂದೇಶ ಕಳುಹಿಸಲು ಮನವಿ ಮಾಡಿದ್ದಾರೆ.

ನ್ಯಾಯಾಲಯದ ಮೂಲಕ ತೀರ್ಮಾನವಾಗಲಿ: ಬಿಜೆಪಿ ಹಿರಿಯ ನಾಯಕ ಬಸನಗೌಡ ಪಾಟೀಲ್ ಯತ್ನಾಳ್ ಮಾತನಾಡಿ, ರೈತರು, ಮಠಗಳಿಗೆ ವಕ್ಫ್ ಆದೇಶದಿಂದ ಅನ್ಯಾಯವಾಗುತ್ತಿದೆ. ನಾವು ಕೇಳುತ್ತಿರುವುದು ಕ್ರಿಮಿನಲ್ ಪ್ರಕರಣಗಳು ರದ್ದಾಗಿ ಎಲ್ಲವೂ ನ್ಯಾಯಾಲಯದ ಮೂಲಕವೇ ತೀರ್ಮಾನವಾಗಬೇಕು. ಕರ್ನಾಟಕದಲ್ಲಿ ಜನಜಾಗೃತಿ ಮಾಡುವ ಅವಶ್ಯಕತೆ ಇದೆ. ಜನಜಾಗೃತಿ ಮೂಲಕ ಜಂಟಿ ಸಂಸದೀಯ ಸಮಿತಿಗೆ ವರದಿ ನೀಡುತ್ತೇವೆ. ಈಗಾಗಲೇ ಕೇಂದ್ರ ಸರಕಾರ ವಕ್ಫ್ ತಿದ್ದುಪಡಿ ತರಲು ಮುಂದಾಗಿದೆ. ಹಲವು ಮಾಹಿತಿ ಯಾವುದೇ ಸರಕಾರಕ್ಕೂ ಇಲ್ಲ ಎಂದರು.

ಜಮೀರ್ ಬೆದರಿಕೆ

ಜಮೀರ್ ಖಾನ್ ಬೆದರಿಕೆ ಹಾಕುತ್ತಿದ್ದಾರೆ. ನಮನ್ನು ಸೈತಾನ್‌ಗೆ ಹೋಲಿಸು ತ್ತಿದ್ದಾರೆ. ಸಿಎಂ ಹೇಳಿದ್ದಾರೆ ಎಂದು ಅಧಿಕಾರಿಗಳಿಗೆ ಬೆದರಿಕೆ ಹಾಕು ತ್ತಿದ್ದಾರೆ. ಹೀಗಾಗಿ ಅಧಿಕಾರಿಗಳು ಬೆಚ್ಚಿ ಬಿದ್ದಿದ್ದಾರೆ. ವಕ್ಫ್ ಗೆ ಮುಸ್ಲಿಂ ಸಮುದಾಯ ಕೂಡ ವಿರೋಧ ಮಾಡಿದೆ.

– ಬಸನಗೌಡ ಪಾಟೀಲ್ ಯತ್ನಾಳ್, ಶಾಸಕ

ಹೋರಾಟಕ್ಕೆ ಬೆಂಬಲ

ಯತ್ನಾಳ್ ಅವರು ನಮ್ಮ ಪಕ್ಷದವರೇ. ರಾಜ್ಯದಲ್ಲಿ ರೈತರ ಪರವಾಗಿ ಯಾರೇ ಹೋರಾಟ ಮಾಡಿದರೂ ಅದಕ್ಕೆ ನಮ್ಮ ಬೆಂಬಲವಿದೆ. ರೈತರ ವಿಷಯದಲ್ಲಿ ಬಿಜೆಪಿ ಹಿಂದೆ ಬೀಳುವ ಪ್ರಶ್ನೆಯೇ ಇಲ್ಲ. ಹೋರಾಟಕ್ಕೆ ಎಲ್ಲ ಶಾಸಕರು ಇರುತ್ತಾರೆ. ಹಿರಿಯರು ಇರುತ್ತಾರೆ.

- ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಮಾಣಿಪ್ಪಾಡಿ ವರದಿ ಜಾರಿಯಾಗಲಿ

1954 ರಿಂದ ಆರಂಭವಾದ ಗೆಜೆಟ್ ಆದೇಶ ರದ್ದು ಮಾಡಬೇಕು. ರೈತರು, ಮಠಗಳು, ಸರಕಾರಿ ಜಾಗಗಳಿಗೆ ವಕ್ಫ್ ಕ್ಲೈಮ್ ಮಾಡುತ್ತಿದೆ. ಆ ಜಾಗಗಳನ್ನು ಕಾಯಂ ವಾಪಸ್ ಕೊಡಬೇಕು ಹಾಗೂ ಅನ್ವರ್ ಮಾಣಿಪ್ಪಾಡಿ ವರದಿ ಜಾರಿಗೊಳಿಸಬೇಕು.

– ಅರವಿಂದ ಲಿಂಬಾವಳಿ, ಮಾಜಿ ಸಚಿವ

ಅನುಮತಿ ಉದ್ಭವಿಸಲ್ಲ

ಜನಜಾಗೃತಿ ಅಭಿಯಾನಕ್ಕೆ ಕೇಂದ್ರದ ಅನುಮತಿ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಈಗಾಗಲೇ ನಮ್ಮ ಕೇಂದ್ರ ಗೃಹ ಸಚಿವರು, ಪ್ರಧಾನಿ ಮೋದಿ ಅವರು ಇದಕ್ಕೆ ಧ್ವನಿಗೂಡಿಸಿದ್ದಾರೆ. ಹೀಗಾಗಿ ಅಭಿಯಾನಕ್ಕೆ ಹೈಕಮಾಂಡ್ ಬೆಂಬಲ ವಿಚಾರವೇ ಬರುವುದಿಲ್ಲ ಎಂದು ಯತ್ನಾಳ್ ಹೇಳಿದರು. ಜನರ ಹಿತದೃಷ್ಟಿಯಿಂದ ಅಭಿಯಾನ ಮಾಡುತ್ತಿದ್ದೇವೆ. ಇದಕ್ಕೆ ಯಾರು ಬೇಕಾದರೂ ಬೆಂಬಲ ಕೊಡಬಹುದು ಎಂದು ಕಾಂಗ್ರೆಸ್ ನಾಯಕರಿಗೆ ಯತ್ನಾಳ್ ಆಹ್ವಾನ ನೀಡಿದರು. ಅವರು ಬಂದರೂ ಅಭಿಯಾನ ನಡೆಸುತ್ತೇವೆ, ಬರದಿದ್ದರೂ ಅಭಿಯಾನ ನಡೆಸುತ್ತೇವೆ. ಬಿಜೆಪಿ ಅಧಿಕಾರದಲ್ಲಿದ್ದ ವೇಳೆ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಯಾರೇ ವಕ್ಫ್‌ನಿಂದ ನೋಟಿಸ್ ಕೊಟ್ಟಿದ್ದರೂ ನಾವು ಸಮರ್ಥಿಸಿಕೊಳ್ಳುವುದಿಲ್ಲ. ಟ್ರಿಬ್ಯುನಲ್ ರದ್ದಾಗಬೇಕು ಎಂಬುದೇ ನಮ್ಮ ಹೋರಾಟದ ಮುಖ್ಯ ಉದ್ದೇಶ ಎಂದು ಹೇಳಿದರು.

ಮಧ್ಯಂತರ ಜಾಮೀನು ಪ್ರಶ್ನಿಸಿ ಸುಪ್ರೀಂಕೋರ್ಟ್ ಮೆಟ್ಟಿಲೇರಲು ಗೃಹ ಇಲಾಖೆಯಿಂದ ಅನುಮತಿ

ದರ್ಶನ್ ಜಾಮೀನು ತೆರವಿಗೆ ಮೇಲ್ಮನವಿ

ಬೆಂಗಳೂರು: ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಆರೋಪಿ, ನಟ ದರ್ಶನ್ ತೂಗುದೀಪ ಅವರಿಗೆ ದೊರೆತಿರುವ ಮಧ್ಯಂತರ ಜಾಮೀನು ತೆರವಿಗೆ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗು ವುದು ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ತಿಳಿಸಿದ್ದಾರೆ.

ಪ್ರಕರಣದಲ್ಲಿ ಪ್ರಮುಖ ಆರೋಪಿಗೆ ದೊರೆ ತಿರುವ ಮಧ್ಯಂತರ ಜಾಮೀನು ತೆರವಿಗೆ ಮೇಲ್ಮ ನವಿ ಸಲ್ಲಿಸಲು ಸರಕಾರದ ಅನುಮತಿ ಕೇಳಲಾಗಿತ್ತು. ಸರಕಾರದಿಂದ ಅನುಮತಿ ದೊರೆತಿದ್ದು, ಸದ್ಯದಲ್ಲೇ ಕೋರ್ಟ್‌ಗೆ ಮನವಿ ಸಲ್ಲಿಸಲಾ ಗುವುದು ಎಂದು ಮಾಹಿತಿ ನೀಡಿದರು.

ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಆರೋಪದಡಿ ಬಂಧನಕ್ಕೊಳಗಾಗಿದ್ದ ದರ್ಶನ್ ಅವರ ಜಾಮೀನು ಅರ್ಜಿ 57ನೇ ಸಿಸಿಎಚ್ ನ್ಯಾಯಾಲಯ ವಜಾಗೊಳಿಸಿತ್ತು. ಈ ಹಿನ್ನೆಲೆಯಲ್ಲಿ ದರ್ಶನ್ ಅವರು ಜಾಮೀನು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಅಕ್ಟೋಬರ್ 22ರಂದು ಹೈಕೋರ್ಟ್ ಅರ್ಜಿಯ ವಿಚಾರಣೆ ನಡೆಸಿತ್ತು. ಈ ವೇಳೆ ದರ್ಶನ್ ಪರ ವಕೀಲರು, ಅರ್ಜಿದಾರ ದರ್ಶನ್ ಬೆನ್ನು ಹುರಿ ನೋವಿನಿಂದ ಬಳಲುತ್ತಿದ್ದಾರೆ. ವಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಆಸ್ಪತ್ರೆ ಯಲ್ಲಿ ಎಂಆರ್‌ಐ ಸ್ಕ್ಯಾನ್ ಮಾಡಿಸಲಾಗಿದೆ. ಬೆನ್ನು ಹುರಿಯ ಸರ್ಜರಿ ಅಗತ್ಯವೆಂದು ವೈದ್ಯರು ಮಾಹಿತಿ ನೀಡಿದ್ದಾರೆ.

- ಬೆನ್ನು ನೋವಿನ ಕಾರಣ ಚಿಕಿತ್ಸೆ ಪಡೆಯಲು ಜಾಮೀನು ಪಡೆದಿದ್ದ ನಟ ದರ್ಶನ್
- ಸದ್ಯ ಬೆಂಗಳೂರಿನ ಬಿಜಿಎಸ್ ಅಪೋಲೊ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲು
- ಜಾಮೀನು ತೆರವಿಗೆ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಸಿದ್ಧತೆ

ವಿಶೇಷ ಅಭಿಯೋಜಕ ಪ್ರಸನ್ನ ಕುಮಾರ್ ಅವರಿಗೆ ಸೂಚನೆ ನೀಡಿ ವಿಚಾರಣೆ ಮುಂದೂಡಿತ್ತು. ಅಕ್ಟೋಬರ್ 30ರಂದು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ಪೀಠ ನಟ ದರ್ಶನ್ ಆರೋಗ್ಯ ತಪಾಸಣೆಗಾಗಿ ಹೈಕೋರ್ಟ್ ಆರು ವಾರಗಳ ಕಾಲ ಷರತ್ತುಬದ್ಧ ಮಧ್ಯಂತರ ಜಾಮೀನು ಮಂಜೂರು ಮಾಡಿತ್ತು. ಜಾಮೀನು ಅರ್ಜಿಯಲ್ಲಿ ಆರೋಗ್ಯ ತಪಾಸಣೆಗಾಗಿ ಮಧ್ಯಂತರ ಜಾಮೀನು ಮಂಜೂರು ಮಾಡುವಂತೆ ಕೋರಿ ದರ್ಶನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಪೀಠ ಎಂಟು ಷರತ್ತುಗಳನ್ನು ವಿಧಿಸಿ ಜಾಮೀನು ನೀಡಿತ್ತು.

ಚುನಾವಣಾ ಆಯೋಗಕ್ಕೆ ಪತ್ರ ಬರೆದ ಕಾಂಗ್ರೆಸ್

ರಾಹುಲ್ ಗಾಂಧಿ ಹೆಲಿಕಾಪ್ಟರ್ ಹಾರಾಟಕ್ಕೆ 45 ನಿಮಿಷ ತಡೆ

ದೆಹಲಿ: ವಿಮಾನ ಸಂಚಾರ ನಿಯಂತ್ರಣ ಕೇಂದ್ರ ಒಪ್ಪಿಗೆ ನೀಡದ ಕಾರಣ ಜಾರ್ಖಂಡ್‌ನ ಗೊಡ್ಡಾದಲ್ಲಿ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ಹೆಲಿಕಾಪ್ಟರ್ ಅನ್ನು 45 ನಿಮಿಷ ತಡೆದ ಘಟನೆ ನಡೆಯಿತು.

ರಾಹುಲ್ ಅವರ ರ‍್ಯಾಲಿಯ ವೇಳಾಪಟ್ಟಿಯನ್ನು ಅಡ್ಡಿಪಡಿಸಲು ಈ ರೀತಿ ಮಾಡಲಾಗಿದೆ ಎಂದು ಆರೋಪಿಸಿರುವ ಕಾಂಗ್ರೆಸ್, ಪ್ರಧಾನಿ ಅವರು ಡಿಯೊಘರ್‌ನಲ್ಲಿ ರ‍್ಯಾಲಿ ನಡೆಸುತ್ತಿದ್ದು, ಎಟಿಸಿ ಅಧಿಕಾರಿಗಳು ಅವರಿಗೇ ಹೆಚ್ಚು ಪ್ರಾಶಸ್ತ್ಯ ನೀಡಿದ್ದಾರೆ ಎಂದು ಕಿಡಿಕಾರಿದರು. ಈ ಘಟನೆಯ ಕುರಿತು ಕಾಂಗ್ರೆಸ್ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದೆ. 'ಪ್ರಚಾರದಲ್ಲಿ ಸಮಬಲದ ಮೈದಾನ ಇರಬೇಕು. ಪ್ರಧಾನ ಮಂತ್ರಿಯವರ ಪ್ರಚಾರವು ಇತರರ ಪ್ರಚಾರಕ್ಕಿಂತ ಆದ್ಯತೆಯನ್ನು ಪಡೆಯಲು ಸಾಧ್ಯವಿಲ್ಲ. ಇಂದು ರಾಹುಲ್‌ಗಾಂಧಿ ಅವರು ಜಾರ್ಖಂಡ್‌ನಲ್ಲಿ ಮುಕ್ಕಾಲು ಗಂಟೆ ಕಾದಿದ್ದಾರೆ' ಎಂದು ಪತ್ರದಲ್ಲಿ ದೂರಿದೆ.

ಮೋದಿ ವಿಮಾನದಲ್ಲಿ ತಾಂತ್ರಿಕ ದೋಷ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಸಂಚರಿಸಬೇಕಿದ್ದ ವಿಮಾನದಲ್ಲಿ ಶುಕ್ರವಾರ ತಾಂತ್ರಿಕ ದೋಷ ಕಂಡುಬಂದಿರುವ ಹಿನ್ನೆಲೆಯಲ್ಲಿ ಪ್ರಧಾನಿಯವರ ದೆಹಲಿ ಪ್ರಯಾಣ ವಿಳಂಬವಾಯಿತು. ಜಾರ್ಖಂಡ್‌ನ ದೇವಘರ್ ವಿಮಾನ ನಿಲ್ದಾಣದಲ್ಲಿ ಘಟನೆ ಸಂಭವಿಸಿದೆ. ಇದರಿಂದಾಗಿ ಪ್ರಧಾನಿ ಮೋದಿ ವಿಮಾನ ನಿಲ್ದಾಣದಲ್ಲೇ ಉಳಿಯಬೇಕಾಯಿತು. ಪ್ರಧಾನಿ ಮೋದಿ ಅವರು ದೆಹಲಿಗೆ ಹಿಂದಿರುಗಲು ವಿಳಂಬವಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಟ್ಟಿಂಗ್ ತಪ್ಪಿಸುವುದಕ್ಕಾಗಿ ಸೋಲಿನ ಸಾಧ್ಯತೆ ಬಗ್ಗೆ ಹೇಳಿಕೆ ಎಂದ ಮಾಜಿ ಸಂಸದ

ಯೋಗಿ ಹೇಳಿಕೆಗೆ ಡಿಕೆಸು ತೇಪೆ

ಬೆಂಗಳೂರು: ಕಾರ್ಯಕರ್ತರು ಬೆಟ್ಟಿಂಗ್ ಜಾಲಕ್ಕೆ ಸಿಲುಕಿ ತೊಂದರೆ ಅನುಭವಿಸದಿರಲಿ ಎಂಬ ಉದ್ದೇಶದಿಂದ ಯೋಗೇಶ್ವರ್ ಹೇಳಿಕೆ ನೀಡಿರಬಹುದು ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ತಿಳಿಸಿದರು.

ಸದಾಶಿವನಗರ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಚನ್ನಪಟ್ಟಣ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ. ಒಬ್ಬೊಬ್ಬರ ಭಾವನೆ ಒಂದೊಂದು ರೀತಿ ಇದೆ. ಅವರು ಹಾಗೂ ನಮಗೆ ಗೆಲ್ಲುವ ವಿಶ್ವಾಸವಿದೆ. ನಮ್ಮ ಕಾರ್ಯಕರ್ತರು ಅನಗತ್ಯವಾಗಿ ಬೆಟ್ಟಿಂಗ್ ಕಟ್ಟಿಕೊಂಡು ತೊಂದರೆ ಮಾಡಿಕೊಳ್ಳುತ್ತಾರೆ. ತಮ್ಮಿಂದ ಅವರ ಮನೆಗಳಲ್ಲಿ ಆರ್ಥಿಕ ಸಂಕಷ್ಟವಾಗುತ್ತದೆಯೋ ಎಂದು ಆ ರೀತಿ ಹೇಳಿರಬಹುದು ಎಂದರು.

ಮಾಧ್ಯಮಗಳಿಗೆ ಕೋಪವೇಕೆ?

ಸಚಿವ ಜಮೀರ್ ಅಹಮದ್ ತಮ್ಮ ಸ್ನೇಹಿತರ ಬಗ್ಗೆ ಹೊಸದಾಗಿ ಹೇಳಿದ್ದರೆ ಇಷ್ಟು ಪ್ರಚಾರ ಮಾಡಬಹುದಾಗಿತ್ತು. ಆದರೆ ಈ ಹಿಂದೆಯೂ ಇಂತಹ ಹೇಳಿಕೆ ನೀಡಿದ್ದರೂ ಆಗ ಹೆಚ್ಚು ಪ್ರಚಾರ ಪಡೆಯದೇ ಚುನಾವಣೆ ಸಮಯದಲ್ಲಿ ಮಾಧ್ಯಮಗಳು ಇಷ್ಟು ದೊಡ್ಡಮಟ್ಟದಲ್ಲಿ ಯಾಕೆ ತೋರಿಸಿದರು? ನಮ್ಮ ಪಕ್ಷದ ಮೇಲೆ ಅವರಿಗೆ ಅಷ್ಟೊಂದು ಕೋಪ ಏಕೆ ಎಂಬುದು ಅರ್ಥವಾಗುತ್ತಿಲ್ಲ ಎಂದು ಡಿ.ಕೆ.ಸುರೇಶ್ ಹೇಳಿದರು.

ದೇವೇಗೌಡರ ಬಗ್ಗೆ ವೈಯಕ್ತಿಕ ಗೌರವವಿದೆ: ದೇವೇಗೌಡರು ಪ್ರಧಾನಮಂತ್ರಿ ಗಳಾಗಿ ಸೇವೆ ಸಲ್ಲಿಸಿದ್ದಾರೆ. ಸಮಾಜದಲ್ಲಿ ಹಾಗೂ ದಕ್ಷಿಣ ಭಾರತದಿಂದ ಅತ್ಯುನ್ನತ ಸ್ಥಾನಕ್ಕೆ ಏರಿದ ನಾಯಕ. ಸಮಾಜ ದವರು ಅವರ ಮೇಲೆ ಗೌರವ ಇಟ್ಟುಕೊಂಡಿದ್ದಾರೆ. ನನಗೂ ಅವರ ಮೇಲೆ ಗೌರವವಿದೆ. ರಾಜಕಾರಣ ವಿಚಾರ ಬಂದಾಗ ನಾನು ಹೋರಾಟ ಮಾಡುತ್ತೇನೆ. ಅದರ ಹೊರತಾಗಿ ವೈಯಕ್ತಿಕವಾಗಿ ನನಗೆ ಅವರ ಮೇಲೆ ಗೌರವವಿದೆ ಎಂದರು.

ಕೆ.ಎಸ್.ಈಶ್ವರಪ್ಪ ವಿರುದ್ಧ ಎಫ್‌ಐಆರ್

ಶಿವಮೊಗ್ಗ: ಪ್ರಚೋದನಕಾರಿ ಹೇಳಿಕೆ ನೀಡಿದ ಆರೋಪದಲ್ಲಿ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ವಿರುದ್ಧ ಶಿವಮೊಗ್ಗದ ಜಯನಗರ ಪೊಲೀಸ್ ಠಾಣೆಯಲ್ಲಿ ಸುಮೋಟೋ ಪ್ರಕರಣ ದಾಖಲಿಸಿಕೊಳ್ಳ ಲಾಗಿದೆ. ಶಿವಮೊಗ್ಗ ದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ 'ಕಾಂಗ್ರೆಸ್ ವಿರುದ್ಧ ಇಸ್ಲಾಮೀಕರಣ ಆರೋಪ ಮತ್ತು ವಕ್ಫ್ ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ ಸಾಧು ಸಂತರ ನೇತೃತ್ವದಲ್ಲಿ ದಂಗೆ ಏಳಬೇಕಾಗುತ್ತದೆ. ಕಾಂಗ್ರೆಸ್ ನಾಯಕರು ಮತ್ತು ಮುಸ್ಲಿಂರನ್ನು ರಸ್ತೆಯಲ್ಲಿ ಹುಡುಕಿ ಕೊಲ್ಲುವ ಕಾಲ ಬರುತ್ತದೆ' ಎಂದು ಪ್ರಚೋದನಾಕಾರಿ ಹೇಳಿಕೆ ನೀಡಿದ್ದರು.

ಅಪ್ರಾಪ್ತ ಪತ್ನಿಯ ಜತೆ ಸಹಮತದ ಲೈಂಗಿಕ ಕ್ರಿಯೆಯೂ ಅತ್ಯಾಚಾರ

ಮುಂಬೈ: ಅಪ್ರಾಪ್ತ ವಯಸ್ಸಿನ ಪತ್ನಿಯ ಸಮ್ಮತಿಯ ಮೇರೆಗೆ ಆಕೆಯೊಂದಿಗೆ ಲೈಂಗಿಕ ಕ್ರಿಯೆ ನಡೆಸುವುದು ಅತ್ಯಾಚಾರವಾಗುತ್ತದೆ ಮತ್ತು ಇಂತಹ ಕೃತ್ಯವನ್ನು ಕಾನೂನಿನಡಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ತೀರ್ಪು ನೀಡಿರುವ ಬಾಂಬೆ ಉಚ್ಚ ನ್ಯಾಯಾಲಯದ ನಾಗ್ಪುರ ಪೀಠವು, ವ್ಯಕ್ತಿಯೋರ್ವನಿಗೆ ವಿಧಿಸ ಲಾದ 10 ವರ್ಷಗಳ ಜೈಲು ಶಿಕ್ಷೆಯನ್ನು ಎತ್ತಿ ಹಿಡಿದಿದೆ.

ಭಟ್ಕಳ ಪುರಸಭೆ ಇಒ ಲೋಕಾಯುಕ್ತ ಬಲೆಗೆ

ಭಟ್ಕಳ: ಇಲ್ಲಿನ ಪುರಸಭೆ ಕಚೇರಿ ಮೇಲೆ ಶುಕ್ರವಾರ ಬೆಳಗ್ಗೆ ದಿಢೀರ್ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ₹50 ಸಾವಿರ ಲಂಚ ಪಡೆಯುತ್ತಿದ್ದ ಮುಖ್ಯಾಧಿಕಾರಿ ನೀಲಕಂಠ ಮೇಸ್ತ ಅವರನ್ನು ವಶಕ್ಕೆ ಪಡೆದಿದ್ದಾರೆ, ಪಟ್ಟಣದ ಕಿದ್ವಾಯಿ ರಸ್ತೆಯಲ್ಲಿರುವ ಹೊಸ ಮನೆಯ ಒಳಚರಂಡಿ ಸಂಪರ್ಕ ಪಡೆಯುವುದಕ್ಕಾಗಿ ನಿರಾಕ್ಷೇಪಣೆ ಪತ್ರಕ್ಕಾಗಿ ಮೊಹಮ್ಮದ ಇದ್ರೀಸ್ ಎನ್ನುವವರು ಅರ್ಜಿ ಸಲ್ಲಿಸಿದ್ದರು. ನಿರಾಪೇಕ್ಷಣಾ ಪತ್ರ ನೀಡಲು ಮುಖ್ಯಾಧಿಕಾರಿ ₹50 ಸಾವಿರ ಪಡೆಯುವ ವೇಳೆ ಸಿಕ್ಕಿಬಿದ್ದಿದ್ದಾರೆ.

ಮುಡಾ-ಪಾಲಿಕೆ ಡಬಲ್ ನೌಕರಿ: ಸೇವೆಯಿಂದ ವಜಾ

ಮೈಸೂರು: ಕಳೆದ 20 ವರ್ಷಗಳಿಂದ ಮೈಸೂರು ಮಹಾನಗರ ಪಾಲಿಕೆ ಹಾಗೂ ಮುಡಾ ಕಚೇರಿಗಳಲ್ಲಿ ಏಕಕಾಲದಲ್ಲಿ ಪಾಳಯದ ಮೇಲೆ ಕೆಲಸ ಮಾಡಿ ಎರಡೂ ಕಡೆ ವೇತನ ಪಡೆಯುತ್ತಿದ್ದ ಬಿ.ಕೆ.ಕುಮಾರ್ ಎಂಬುವವನನ್ನು ಪಾಲಿಕೆ ಆಯುಕ್ತರು ಸೇವೆಯಿಂದ ವಜಾಗೊಳಿಸಿದ್ದು, ಆತನ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲು ಮುಂದಾಗಿದ್ದಾರೆ. ಮೈಸೂರು ಮಹಾನಗರ ಪಾಲಿಕೆಯ ವಾಣಿ ವಿಲಾಸ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗದ ಮಲೀನ ನೀರು ಶುದ್ದೀಕರಣ ಘಟಕದಲ್ಲಿ ದ್ವಿತೀಯ ದರ್ಜೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ಬಿ.ಕೆ.ಕುಮಾರ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ ಹೊರಗುತ್ತಿಗೆ ನೌಕರನಾಗಿ ಎರಡೂ ವೇತನ ಪಡೆದು ಕಾನೂನು ಉಲ್ಲಂಘನೆ ಮಾಡಿರುವುದಾಗಿ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

7 ಐಪಿಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಏಳು ಐಪಿಎಸ್ ಅಧಿಕಾರಿಗಳನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ವರ್ಗಾವಣೆಗೊಳಿಸಿ ರಾಜ್ಯ ಸರಕಾರ ಶುಕ್ರವಾರ ಆದೇಶಿಸಿದೆ.

ಶಾಂತನು ಸಿನ್ಹಾ ಅವರನ್ನು ಸಿಐಡಿ ವಿಭಾಗದ ಖಾಲಿ ಇದ್ದ ಡಿಐಜಿಪಿ ಹುದ್ದೆಗೆ ನೇಮಕ ಮಾಡಲಾಗಿದೆ. ಯಾದಗಿರಿಯ ಎಸ್‌ಪಿ ಜಿ.ಸಂಗೀತಾ ಅವರನ್ನು ಅಪರಾಧ ತನಿಖಾ ಇಲಾಖೆಯ ಎಸ್‌ಪಿಯಾಗಿ ಹಾಗೂ ಅಪರಾಧ ತನಿಖಾ ಇಲಾಖೆಯ ಎಸ್‌ಪಿ ಪೃಥ್ವಿಕ್ ಶಂಕರ್ ಅವರನ್ನು ಯಾದಗಿರಿ ಎಸ್‌ಪಿಯಾಗಿ ವರ್ಗಾವಣೆ ಮಾಡಲಾಗಿದೆ. ಬೆಂಗಳೂರು ಸಿಟಿ ಕ್ರೈಂ ವಿಭಾಗದ ಡಿಸಿಪಿ ಅಬ್ದುಲ್ ಅಹ್ಮದ್ ಅವರನ್ನು ಬಿಎಂಟಿಸಿ ಭದ್ರತಾ ಮತ್ತು ವಿಚಕ್ಷಣೆ ವಿಭಾಗದ ನಿರ್ದೇಶಕರಾಗಿದ್ದ ಸದಾಶಿವ ಪ್ರಭು ಬಿ. ವರ್ಗಾವಣೆ ಹಿನ್ನೆಲೆ ಆ ಜಾಗಕ್ಕೆ ವರ್ಗಾವಣೆ ಮಾಡಲಾಗಿದೆ. ಬೆಂಗಳೂರು ರಾಜ್ಯ ಅಪರಾಧ ದಾಖಲೆ ಬ್ಯೂರೋದ ಎಸ್‌ಪಿ ಲಕ್ಷ್ಮಣ್ ನಿಂಬರಗಿ ಅವರನ್ನು ವಿಜಯಪುರ ಎಸ್‌ಪಿ ಹುದ್ದೆಗೆ ವರ್ಗಾವಣೆಗೊಳಿಸಲಾಗಿದೆ.

ಚೆನ್ನಬಸವಣ್ಣ ಲಂಗೋಟಿ ಅವರನ್ನು ಡಾ. ಎಂ.ಬಿ.ಬೋರಲಿಂಗಯ್ಯ ಅವರಿಂದ ತೆರವಾಗಿದ ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಭಯೋತ್ಪಾದನೆ ನಿಗ್ರಹ ಕೇಂದ್ರ ಬೆಂಗಳೂರಿನ ಎಸ್‌ಪಿ ಶಿವಾಂಶು ರಜಪೂತ್ ಅವರನ್ನು ಅಪರಾಧ ದಾಖಲೆಗಳ ವಿಭಾಗಕ್ಕೆ ವರ್ಗಾವಣೆ ಮಾಡಲಾಗಿದೆ.

ಶಿಖಾ ಕೇಂದ್ರ ಸೇವೆಗೆ

ಹಲವು ವರ್ಷಗಳಿಂದರಾಜ್ಯ ಸೇವೆಯಲ್ಲಿದ್ದ ಐಎಎಸ್ ಅಧಿಕಾರಿ ಸಿ.ಶಿಖಾ ಅವರನ್ನು ಕೇಂದ್ರ ಸರಕಾರದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ಕಾರ್ಯದರ್ಶಿ ಹುದ್ದೆಗೆ ನೇಮಕ ಮಾಡಲಾಗಿದೆ.

ಇಂದು ಹಲವು ಜಿಲ್ಲೆಗಳಲ್ಲಿ ಮಳೆ ಮುನ್ಸೂಚನೆ ನೀಡಿದ ಹವಾಮಾನ ಇಲಾಖೆ

ಚಳಿಯ ನಡುವೆ ಮುಂದುವರಿದ ಮಳೆ ಆಟ

ಬೆಂಗಳೂರು: ಬಂಗಾಳಕೊಲ್ಲಿಯ ನೈರುತ್ಯ ಭಾಗದಲ್ಲಿ ವಾಯುಭಾರ ಕುಸಿತ ಉಂಟಾಗಿರುವ ಪರಿಣಾಮ ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ 6 ಜಿಲ್ಲೆಗಳಲ್ಲಿ ಮಳೆಯಾಗಿದ್ದು, ಶನಿವಾರ ಕೂಡ ಅಲ್ಲಲ್ಲಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಸಹಿತ ಹಲವು ಭಾಗಗಳಲ್ಲಿ ಸಾಧಾರಣ ಮಳೆಯಿದೆ. ಮೈಸೂರು, ಮಂಡ್ಯ, ಕೊಡಗು, ಕೋಲಾರ, ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲೂ ಮಳೆಯಿದೆ. ಕೆಲವು ಕಡೆ ಗುಡುಗು ಸಹಿತ ಮಳೆಯೂ ಆಗಿದೆ. ಬೆಳಗಾವಿ, ಗದಗ, ಧಾರವಾಡ ಜಿಲ್ಲೆಗಳಲ್ಲೂ ಹಗುರದಿಂದ ಸಾಧಾರಣ ಮಳೆ ಆಗಿದೆ. ಶನಿವಾರದಂದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಲಿದೆ. ಕರಾವಳಿ ಭಾಗದ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲೂ ಮಳೆಯಾಗಲಿದೆ. ಮೈಸೂರು, ಮಂಡ್ಯ, ರಾಮನಗರ, ಚಾಮರಾಜನಗರ, ಚಿತ್ರದುರ್ಗ, ಶಿವಮೊಗ್ಗ ಭಾಗದಲ್ಲೂ ಮಳೆಯಾಗಲಿದೆ. ಭಾನುವಾರದಂದೂ ಬೆಂಗಳೂರು ನಗರ, ಗ್ರಾಮಾಂತರ ಮಳೆಯಾಗಬಹುದು ಎನ್ನುವ ಮುನ್ಸೂಚನೆ ನೀಡಲಾಗಿದೆ.

ಸಂಚಾರ ಪೊಲೀಸರ ಸಾಥ್

ಮಳೆಯ ಕಾರಣದಿಂದ ಹೊರಮಾವು ಅಂಡರ್ ಪಾಸ್‌ನಲ್ಲಿ ನೀರು ನಿಂತಿತ್ತು. ಈ ವೇಳೆ ಸಂಚಾರಕ್ಕೆ ಅಡಚಣೆ ಯಾಯಿತು. ಕೂಡಲೇ ಬಾಣಸವಾಡಿ ಸಂಚಾರ ಪೊಲೀಸ್ ಸಿಬ್ಬಂದಿ ಸರಾಗವಾಗಿ ನೀರು ಹರಿಯಲು ಅನುವು ಮಾಡಿದ್ದಾರೆ. ಇದಲ್ಲದೇ ಹಲವು ಭಾಗಗಳಲ್ಲಿ ಮಳೆಯಿಂದ ಸಂಚಾರ ಅಡಚಣೆಯಾಗಿದ್ದು ಕಂಡು ಬಂತು.

ಬೆಂಗಳೂರಿನಲ್ಲಿ ಇನ್ನು 48 ಗಂಟೆಗಳ ಕಾಲ ಮೋಡ ಮುಸುಕಿದ ವಾತಾವರಣವೇ ಬೆಂಗಳೂರಿನಲ್ಲಿ ಇರಲಿದೆ. ಹಗುರದಿಂದ ಸಾಧಾರಣ ಮಳೆಯಾಗಲಿದ್ದು, ಆಗಾಗ ಗುಡುಗು ಸಹಿತ ಮಳೆಯೂ ಸುರಿಯಬಹುದು. ಬೆಂಗಳೂರು ನಗರದಲ್ಲಿ ಗರಿಷ್ಠ ಉಷ್ಣಾಂಶದ ಪ್ರಮಾಣವು 26 ಡಿಗ್ರಿ ಸೆಲ್ಸಿಯಸ್, ಕನಿಷ್ಠ ಉಷ್ಣಾಂಶದ ಪ್ರಮಾಣವು 21 ಡಿಗ್ರಿ ಸೆ. ದಾಖಲಾಗಬಹುದು.

– ಡಾ.ಎನ್.ಪುವಿಯರಸನ್, ಬೆಂಗಳೂರು ಹವಾಮಾನ ಕೇಂದ್ರದ ವಿಜ್ಞಾನಿ

ಬೆಂಗಳೂರಿನಲ್ಲಿ ಮೂರು ದಿನ ಮಳೆ

ಬೆಂಗಳೂರು ನಗರದಲ್ಲಿ ಶುಕ್ರವಾರ ಮಧ್ಯಾಹ್ನದ ನಂತರ ಸಂಪೂರ್ಣ ಮೋಡ ಕವಿದ ವಾತಾವರಣ ಉಂಟಾಗಿತ್ತು. ಸಂಜೆ ವೇಳೆ ಅಲ್ಲಲ್ಲಿ ಮಳೆ ಶುರುವಾಗಿದ್ದರಿಂದ ಮೆಜೆಸ್ಟಿಕ್, ಮೈಸೂರು ರಸ್ತೆ, ಕೋರಮಂಗಲ, ಎಲೆಕ್ಟ್ರಾನಿಕ್ ಸಿಟಿ ಮುಖ್ಯ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಕೆಲವು ಕಡೆಗೆ ಹಗುರ ಮಳೆಯಾಗಿದ್ದರೆ, ಇನ್ನು ಕೆಲವು ಕಡೆಗಳಲ್ಲಿ ಸಾಧಾರಣ ಮಳೆಯಾಗಿದೆ. ಒಂದಷ್ಟು ಭಾಗದಲ್ಲಿ ಗುಡುಗು ಮಿಶ್ರಿತ ಮಳೆಯೂ ಆಗಿದೆ. ಈಗಾಗಲೇ ಭಾರತೀಯ ಹವಾಮಾನ ಇಲಾಖೆಯ ಬೆಂಗಳೂರು ಪ್ರಾದೇಶಿಕ ಕೇಂದ್ರವು ಬೆಂಗಳೂರು ಮಹಾನಗರದಲ್ಲಿ ಶುಕ್ರವಾರದಿಂದ ಮೂರು ದಿನ ಸಾಧಾರಣ ಮಳೆಯಾಗಬಹುದು ಎನ್ನುವ ಮುನ್ಸೂಚನೆ ನೀಡಿದೆ. ಹಿಂಗಾರು ಮಳೆ ಬೆಂಗಳೂರು ಸಹಿತ ಹಲವು ಭಾಗಗಳಲ್ಲಿ ಈಗಾಗಲೇ ಮುಂದುವರಿದಿದೆ. ಇದರ ನಡುವೆ ಚಂಡಮಾರುತ ಪ್ರಭಾವದಿಂದಲೂ ಉತ್ತಮ ಮಳೆಯಾಗಲಿದೆ.

ಜಮೀರ್ ಅಹಮದ್ ಖಾನ್‌ಗೆ ನಾನೆಂದೂ ಕುಳ್ಳ ಎಂದು ಕರೆದಿಲ್ಲ

ಮೈಸೂರು: ನಾನು ಯಾವತ್ತೂ ಜಮೀರ್ ಅವರನ್ನು ಕುಳ್ಳ ಎಂದು ಕರೆದಿಲ್ಲ, ನಮ್ಮ ಸ್ನೇಹ ಇದ್ದದ್ದು ರಾಜಕೀಯವಾಗಿ ಅಷ್ಟೆ. ಈಗ ದುಡ್ಡಿನ ಮದದಿಂದ ಈ ರೀತಿ ಮಾತಾಡುತ್ತಿದ್ದಾರೆ. ಕರಿಯ, ಕುಳ್ಳ ಎಂದು ಮಾತಾಡಿಸಿಕೊಳ್ಳುವ ಸಂಸ್ಕೃತಿಯಿಂದ ಬಂದವ ನಾನಲ್ಲ. ಅವರ ಮಾತುಗಳು ಅವರ ಸಂಸ್ಕೃತಿಯನ್ನು ತೋರಿ ಸುತ್ತದೆ ಎಂದು ತಮ್ಮನ್ನು ಕರಿಯ ಎಂದು ಕರೆದಿದ್ದ ಸಚಿವ ಜಮೀರ್ ಅಹಮದ್ ಖಾನ್ ಅವರಿಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಿರುಗೇಟು ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಚಾಮುಂಡಿ ತಾಯಿ ಮುಂದೆ ನಿಂತು ಹೇಳುತ್ತಿದ್ದೇನೆ. ಬಸವರಾಜ ಹೊರಟ್ಟಿ ಅವತ್ತು ಒಮ್ಮೆ ನನ್ನನ್ನು ಕುಮಾರ ಎಂದಾಗ ಅವರನ್ನು ಹೊಡೆಯಲು ಹೋಗಿದ್ದ ಗಿರಾಕಿ ಇವರು. ಹೊರಟ್ಟಿ ಅವರನ್ನೇ ಕೇಳಬಹುದು. ಅವತ್ತು ಜಮೀರ್ ಹೊಡೆಯಲು ಬಂದಿರಲಿಲ್ಲವಾ ಅಂತ ಕೇಳಬಹುದು' ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಜಮೀರ್ ಮಾತುಗಳನ್ನು ಸಮರ್ಥಿಸಿಕೊಂಡಿದ್ದಾರೆ. ಇದು ನಾಗರಿಕ ಸರಕಾರನಾ? ಇಂಥ ಮಾತು ಹೇಳಿದವರ ಮೇಲೆ ಎಷ್ಟು ಕೇಸ್ ಹಾಕಿ ಜೈಲಿಗೆ ಹಾಕಿಲ್ಲ ಈ ಸರಕಾರ? ಈಗೇಕೆ ಸುಮ್ಮನೆ ಇದೆ? ಎಂದು ಕೇಳಿದರು. ಮುಖ್ಯಮಂತ್ರಿಗೆ ದೇವೇಗೌಡರು ಗರ್ವಭಂಗ ಮಾಡುತ್ತೇನೆ, ಸೊಕ್ಕು ಮುರಿಯುತ್ತೇನೆ ಎನ್ನುವುದು ಮಾನನಷ್ಟ ಹೇಳಿಕೆನಾ? ಎಂದು ಪ್ರಶ್ನಿಸಿದರು.

ಶಾಸಕರ ಖರೀದಿ ಹೇಳಿಕೆ ಎಸ್‌ಐಟಿ ತನಿಖೆ ಮಾಡಿಸಿ

ಸರಕಾರ ಬೀಳಿಸಲು ಬಿಜೆಪಿಯವರು ಕಾಂಗ್ರೆಸ್ ಶಾಸಕರಿಗೆ ₹ 50 ಕೋಟಿ ಆಫರ್ ಮಾಡಿದ್ದಾರೆ ಎಂಬ ಮುಖ್ಯಮಂತ್ರಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಮುಖ್ಯಮಂತ್ರಿ ಹೇಳಿಕೆ ಬಫೂನ್ ರೀತಿ ಇದೆ. 50 ಜನರಿಗೆ ₹ 50 ಕೋಟಿ ಆಫರ್ ಮಾಡಿದ್ದಾರೆಂದು ನಿಖರವಾಗಿ ಹೇಳುತ್ತಿದ್ದಾರೆ. ಈ ಸರಕಾರ ಪ್ರತಿಯೊಂದಕ್ಕೂ ಎಸ್‌ಐಟಿ ತನಿಖೆ ಮಾಡಿ ಸುತ್ತಿದೆ. ಇದನ್ನೂ ಎಸ್‌ಐಟಿಯಿಂದ ತನಿಖೆ ಮಾಡಿಸಲಿ ಎಂದು ಕುಮಾರಸ್ವಾಮಿ ಹೇಳಿದರು.

ಫನ್‌ತರಂಗ

- ರಘುಪತಿ ಶೃಂಗೇರಿ -

ಸ್ಫೋಟಕ ಭವಿಷ್ಯ ನುಡಿದ ಸ್ವಾಮಿ, ರಾಜ್ಯದ ಜನರಲ್ಲಿ ಆತಂಕ



ಸಮಾಚಾರ ಸಣ್ಣದಲ್ಲ

ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ

ದಾವಣಗೆರೆ: ಆಯೋಗದ ನಿರ್ದೇಶನದಂತೆ ಭಾವಚಿತ್ರವಿರುವ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಕಾರ್ಯದ ಪ್ರಗತಿ ವೀಕ್ಷಿಸಲು ತೋಟಗಾರಿಕೆ, ರೇಷ್ಮೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸರ್ಕಾರದ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ. ಶಮ್ಲಾ ಇಕ್ಬಾಲ್ ಇವರನ್ನು ಜಿಲ್ಲೆಯ ಮತದಾರರ ಪಟ್ಟಿಯ ವಿಶೇಷ ವೀಕ್ಷಕರನ್ನಾಗಿ ನೇಮಿಸಲಾಗಿರುತ್ತದೆ. ಇಂದು ದಾವಣಗೆರೆಗೆ ಭೇಟಿ ನೀಡುತ್ತಿದ್ದು ಬೆಳಗ್ಗೆ 11 ಗಂಟೆಗೆ ಮತದಾರರ ಪಟ್ಟಿಯ ಕುರಿತು ಯಾವುದೇ ಸಲಹೆ, ಸೂಚನೆಗಳು ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಾರ್ವಜನಿಕರು ಇವರನ್ನು ಭೇಟಿ ಮಾಡಬಹುದೆಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ.ಜಿ.ಎಂ ತಿಳಿಸಿದ್ದಾರೆ.

ವೃತ್ತಿ ತರಬೇತಿಗೆ ಆಹ್ವಾನ

ದಾವಣಗೆರೆ: ಸಾಲಿನಲ್ಲಿ ಇಂದಿರಾಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರದ ಮೂಲಕ ಮ್ಯಾನ್ಯೂಯಲ್ ಸ್ಕ್ಯಾವೆಂಜರ್ಸ್ ಮತ್ತು ಅವರ ಅವಲಂಬಿತ ಕುಟುಂಬ ಸದಸ್ಯ ಯುವಕ ಮತ್ತು ಯುವತಿಯರಿಗೆ ವೃತ್ತಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ತರಬೇತಿ ಪಡೆಯುವ ಆಸಕ್ತರು 18 ರಿಂದ 35 ವರ್ಷ ವಯೋಮಾನದವರಾಗಿರಬೇಕು. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಮ್ಯಾನ್ಯೂಯಲ್ ಸ್ಕ್ಯಾವೆಂಜರ್ಸ್ ಐ.ಡಿ ಕಾರ್ಡ್ ಹೊಂದಿರಬೇಕು. ಇವರು ಅರ್ಜಿಯನ್ನು ಕಚೇರಿಯಲ್ಲಿ ಪಡೆದು ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರು, ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, 20.33// 16ಎ-16, ಗಣೇಶ್ ಲೇಔಟ್ 1ನೇ ಕ್ರಾಸ್ ಪಿ.ಬಿ.ರಸ್ತೆ, ದಾವಣಗೆರೆ ಸಂಪರ್ಕಿಸಲು ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ಇಂದು

ದಾವಣಗೆರೆ: ಯರಗುಂಟೆ ವಿ.ವಿ ಕೇಂದ್ರ ದಿಂದ ಹೊರಡುವ ಚಿತ್ರಾನಹಳ್ಳಿ, ದೇವರಹಟ್ಟಿ, ಅಮೃತ ನಗರ, ಮಾರ್ಗದ ತುರ್ತು ಕಾಮಗಾರಿ ಇರುವುದರಿಂದ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ದೊಡ್ಡಬೂದಿಹಾಳು, ಚಿಕ್ಕಬೂದಿಹಾಳು, ದೇವರಹಟ್ಟಿ, ಬಿ.ಕಲ್ಪನಹಳ್ಳಿ, ಚಿತ್ತಾನಹಳ್ಳಿ, ಅಮೃತನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಸಂಘದ ಅಭಿವೃದ್ಧಿಗೆ ಶ್ರಮಿಸುವೆ

ಹಿರಿಯೂರು: ಏಕಲವ್ಯ ಬುಡಕಟ್ಟು ಸಹಕಾರ ಸಂಘದ ಅಭಿವೃದ್ಧಿಗೆ ಜನತೆಯ ಸಹಕಾರ ಅಗತ್ಯವಿದ್ದು ಜನತೆ ವಿಶ್ವಾಸ ಪಡೆದು ಸಹಕಾರ ಸಂಘದ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ನೂತನ ಅಧ್ಯಕ್ಷರಾದ ಟಿ.ಬಸವರಾಜ ನಾಯ್ಕ್ ಹೇಳಿದರು. ನಗರದ ಪ್ರವಾಸಿ ಮಂದಿರದಲ್ಲಿ ಏಕಲವ್ಯ ಬುಡಕಟ್ಟು ಜನರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಮಾತನಾಡಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾಗಿ ರಾಮನಾಥ್ ಮರಡಿ, ನಿದೇ9ಶಕರಾಗಿ ಕೃಷ್ಣಪ್ಪ,ಪರಮೇಶ್ವರಪ್ಪ, ಮಂಜುನಾಥ್, ನಾಗರಾಜ್, ನಾಗರಾಜ್, ಪುಟ್ಟರಂಗಪ್ಪ, ಶೇಖರಪ್ಪ, ನಾಗರಾಜ್, ಕವಿತಾ, ಜ್ಯೋತಿ, ಸಿದ್ದೇಶ್ವರ ಸ್ವಾಮಿ ಆಯ್ಕೆ ಆಗಿದ್ದಾರೆ.

ವಿವಾಹ್
ಪ್ರತಿ ಬುಧವಾರ

ಪದಗ್ರಹಣ ಸಮಾರಂಭದಲ್ಲಿ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ್ ಬಿದರಿ

ಲಿಂಗಾಯತ ಸಮುದಾಯದ ಅಭಿವೃದ್ಧಿಗೆ ಒಗ್ಗಟ್ಟು ಪ್ರದರ್ಶಿಸಿ

ಹೊಸದುರ್ಗ: 36 ಲಕ್ಷ ವರ್ಷದಿಂದ ಹಿಂದೆಯೇ ವೀರಶೈವ ಲಿಂಗಾಯತ ಧರ್ಮ ಸ್ಥಾಪನೆಯಾಗಿದೆ. ವೀರಶೈವ ಲಿಂಗಾಯತ ಬೇರೆ ಬೇರೆ ಅಲ್ಲ. ಅವೆರಡೂ ಒಂದೇ. ರಾಜ್ಯದ 7 ಕೋಟಿ ಜನಸಂಖ್ಯೆಯಲ್ಲಿ 3 ಕೋಟಿ ಲಿಂಗಾಯತರೇ ಇದ್ದಾರೆ. ಸಮುದಾಯದ ಅಭಿವೃದ್ಧಿಗೆ ನಮ್ಮೊಳಗಿನ ವೈಯಕ್ತಿಕ ಹಿತಾಸಕ್ತಿ ಮರೆತು, ಒಳಪಂಗಡಗಳನ್ನೂ ಬಂದಿಗಿಟ್ಟು ನಾವೆಲ್ಲರೂ ಲಿಂಗಾಯತರು ಎಂಬ ಒಗ್ಗಟ್ಟು ಪ್ರದರ್ಶಿಸಿದಲ್ಲಿ ಅಭಿವೃದ್ಧಿ ಸಾಧ್ಯ ಎಂದು ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ್ ಮಹಾದೇವ ಬಿದರಿ ಸಲಹೆ ನೀಡಿದರು.

ಪಟ್ಟಣದ ಸಿದ್ಧರಾಮೇಶ್ವರ ಸಮುದಾಯ ಭವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹೊಸದುರ್ಗ ತಾಲೂಕು ಘಟಕಕ್ಕೆ ನೂತನವಾಗಿ ಆಯ್ಕೆಯಾಗಿರುವ ಪದಾಧಿಕಾರಿಗಳು, ಕಾರ್ಯಕಾರಿ ಮಂಡಳಿ ಪದಗ್ರಹಣ ಹಾಗೂ ಅಭಿನಂದನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಈ ಮಹಾಸಭಾ ಪಾತ್ರವನ್ನು 5 ವರ್ಷ ವ್ಯವಸ್ಥಿತವಾಗಿ ನಿರ್ವಹಣೆ ಮಾಡುವ ಮೂಲಕ ಲಿಂಗ ಹೌದೌದೆನ್ನುವ ರೀತಿ ಅಧಿಕಾರ ನಡೆಸಬೇಕು. ನಮ್ಮ ಮಹಾಸಭಾಕ್ಕೆ 120 ವರ್ಷದ ಇತಿಹಾಸ ಹೊಂದಿದೆ. ಲಿಂಗಾಯಿತ ಸಮಾಜ ಶಕ್ತಿಗೊಳಿಸುವ ಕೆಲಸ ಮಾಡಿದೆ. ಈ ಸಮಾಜಕ್ಕೆ ತನ್ನದೇ ಶ್ರೇಷ್ಠತೆ ಇದೆ. ಪ್ರೀತಿ, ಪ್ರೇಮ, ವಿಶ್ವಾಸ, ಸಹಕಾರ ಇಟ್ಟುಕೊಂಡು ನಡೆಯುವ ಸಮಾಜ ನಮ್ಮದು. ಈ ಪರಂಪರೆಯನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗಬೇಕಿದೆ ಎಂದು ತಿಳಿಸಿದರು.

ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕಕ್ಕೆ ನೂತನವಾಗಿ ಅಧ್ಯಕ್ಷ ವಕೀಲರಾದ ಎಸ್. ಮಂಜುನಾಥ್ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶಾಸಕ ಬಿ.ಜಿ.ಗೋವಿಂದಪ್ಪ, ರಾಜ್ಯ ಖನಿಜ ನಿಗಮದ ಮಾಜಿ ಅಧ್ಯಕ್ಷ ಎಸ್.ಲಿಂಗಮೂರ್ತಿ,

ವೀರಶೈವ ಲಿಂಗಾಯತ ಮಹಾಸಭಾ ಹೊಸದುರ್ಗ ತಾಲೂಕು ಘಟಕಕ್ಕೆ ನೂತನವಾಗಿ ಆಯ್ಕೆಯಾಗಿರುವ ಪದಾಧಿಕಾರಿಗಳು, ಕಾರ್ಯಕಾರಿ ಮಂಡಳಿ ಪದಗ್ರಹಣ ಹಾಗೂ ಅಭಿನಂದನೆ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಮುಖಂಡ ಹಂಜಿ ಶಿವಸ್ವಾಮಿ, ನಿಕಟಪೂರ್ವ ಅಧ್ಯಕ್ಷ ಬಿ.ಪಿ.ಓಂಕಾರಪ್ಪ ಮಾತನಾಡಿದರು. ಕಾರ್ಯಕ್ರಮದಲ್ಲಿ ಎಸ್.ನಿಜಲಿಂಗಪ್ಪ ಶಿಕ್ಷಣ ಸಂಸ್ಥೆಯ ಪ್ರಶಿಕ್ಷಣಾರ್ಥಿಗಳು ವಚನನೃತ್ಯ ಅಭಿನಯಿಸಿದರು. ವಿಶೇಷವಾಗಿ ರೈತ ಸಾಧಕರಿಗೆ, ಸಮಾಜದ ಗಣ್ಯರಿಗೆ ಸನ್ಮಾನಿಸಲಾಯಿತು. ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ನೀಡಿ ಗೌರವಿಸಲಾಯಿತು. ಸೇವಾ ದೀಕ್ಷಾ ಹಸ್ತಾಂತರ ಕಾರ್ಯಕ್ರಮ ನಡೆಯಿತು.

ಸಮಾರಂಭದಲ್ಲಿ ವೀರಶೈವ ಲಿಂಗಾಯತ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಮಧುರ ಅಶೋಕ್, ಕಾರ್ಯದರ್ಶಿ ರೇಣುಪ್ರಸಾದ್, ಜಿಲ್ಲಾ ನಿರ್ದೇಶಕಿ ನಾಗಲಾಂಬಿಕ ಕಲ್ಮಠ, ಮಾಜಿ ಶಾಸಕ ಬಸವರಾಜಪ್ಪ, ಶಶಿಧರ್, ಮಹಾಸಭಾ ತಾಲೂಕು ಘಟಕದ ಉಪಾಧ್ಯಕ್ಷೆ ವಿಜಯಶಿವಲಿಂಗಪ್ಪ, ಪ್ರಧಾನಕಾರ್ಯದರ್ಶಿ ಕೆ.ಹೆಚ್ .ದಾನೇಶ್, ಬಾಬು ಚಿತ್ರದುರ್ಗ ಪ್ರಧಾನ ಕಾರ್ಯದರ್ಶಿ, ಅರಳಿಹಳ್ಳಿ ಲೋಕಣ್ಣ, ಹೆಬ್ಬಳ್ಳಿ ಮಲ್ಲಿಕಣ್ಣ, ಎಲ್.ಜಯಪ್ಪ, ಶಶಿಧರ್, ದೀಪಿಕಾ ಸತೀಶ್, ವಿಜಯಾ ಶಿವಲಿಂಗಪ್ಪ, ಎಂಎಲ್ಸಿ ಕೆ.ಎಸ್.ನವೀನ್, ಕೀರ್ತಿಗೌಡ, ಸಿಂಧೂ ಅಶೋಕ್, ನಿಕಟಪೂರ್ವ ಉಪಾಧ್ಯಕ್ಷ ರಾಜಪ್ಪ, ಕೆ.ಪಿ.ಬಸವರಾಜು, ಜಿಲ್ಲೆಯ ವಿವಿಧ ತಾಲೂಕು ಅಧ್ಯಕ್ಷರು ಸೇರಿ ಹಲವು ಮುಖಂಡರು ಹಾಜರಿದ್ದರು.

> **ಪ್ರತಿ ತಾಲೂಕಿನಿಂದ ಕನಿಷ್ಠ 10 ಸಾವಿರ ಜನರನ್ನು ಸದಸ್ಯತ್ವ ಮಾಡಿಕೊಳ್ಳುವುದು, ಅಧಿಕಾರ ವಿಕೇಂದ್ರಿಕರಣದಡಿ ತಾಲೂಕು ಅಧ್ಯಕ್ಷರಿಗೆ ಪೂರ್ಣ ಅಧಿಕಾರ ಕೊಡುವುದು ನಮ್ಮ ಮಹಾಸಭಾದ ಮುಖ್ಯ ಉದ್ದೇಶವಾಗಿದೆ.**
> **-ಶಂಕರ್ ಮಹಾದೇವ ಬಿದರಿ,** ರಾಜ್ಯಾಧ್ಯಕ್ಷ ವೀರಶೈವ ಲಿಂಗಾಯತ ಮಹಾಸಭಾ

ಸಾಂಸ್ಕೃತಿಕ ಸ್ಪರ್ಧೆ ಸೋಲು ಗೆಲುವಿನ ಆಟಗಳಲ್ಲ

ಚಳ್ಳಕೆರೆ: ಸಾಂಸ್ಕೃತಿಕ ಸ್ಪರ್ಧೆ ಎನ್ನುವುದು ಸೋಲು ಗೆಲುವಿನ ಆಟವಲ್ಲ, ನಮ್ಮ ನಾಡು ನುಡಿಯ ಸೊಬಗಿನ ಸಾಂಸ್ಕೃತಿಕ ಹಿರುಮೆಯನ್ನು ತೋರಿಸುವಂತಹ ಮಹತ್ವಪೂರ್ಣವಾದ ಒಂದು ಸ್ಪರ್ಧೆ ಇದಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಕೆ. ತಿಮ್ಮಯ್ಯ ಅಭಿಪ್ರಾಯ ಪಟ್ಟರು.

ಅವರು ನಗರದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ತಾಲೂಕು ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದರು, ತಾಲೂಕಿನ ಸುಮಾರು 25 ಕಾಲೇಜುಗಳಿಂದ ವಿವಿಧ ವಿದ್ಯಾರ್ಥಿಗಳು ಸಾಂಸ್ಕೃತಿಕ ಸ್ಪರ್ಧೆಗೆ ಭಾಗವಹಿಸಿದ್ದರೆ, ಆದ್ದರಿಂದ ಸಾಂಸ್ಕೃತಿಕ ಸ್ಪರ್ಧೆಗೆ ಭಾಗವಹಿಸಿದಂತಹ ಎಲ್ಲಾ ಸ್ಪರ್ಧಾದಳಗಳು ತಮ್ಮ ಪ್ರತಿಭೆಗಳನ್ನು ಇಲ್ಲಿ ಅನಾವರಣಗೊಳಿಸಬೇಕು, ತಮ್ಮ ಅಭಿರುಚಿಯನ್ನು ಇಲ್ಲಿ ಅಭಿವ್ಯಕ್ತ ಪಡಿಸುವ ಮೂಲಕ ಈ ಸ್ಪರ್ಧೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಪಾಲ್ಗೊಂಡು ವಿಜೇತರಾಗಬೇಕೆಂದು ಬಯಸುತ್ತೇನೆ ಎಂದರು.

ಇನ್ನೂ ಜಿಲ್ಲಾ ಉಪನ್ಯಾಸಕರ ಸಂಘದ ಮಾಜಿ ಅಧ್ಯಕ್ಷ ಎಸ್ .ಲಕ್ಷ್ಮಣ್ ಮಾತನಾಡಿ, ಇಡೀ ರಾಜ್ಯದಲ್ಲಿ ಸಂಸ್ಕೃತಿ ಹಾಗೂ ಸಾಂಸ್ಕೃತಿಕ ನೆಲೆಗಟ್ಟನ್ನು ಹೊಂದಿದಂತಹ ನೆಲ ನಮ್ಮ ಚಿತ್ರದುರ್ಗ ಜಿಲ್ಲೆ, ಅಂತಹ ಜಿಲ್ಲೆಯ ಚಳ್ಳಕೆರೆ ತಾಲೂಕಿನಲ್ಲಿ ಇಂದು ಸಾಂಸ್ಕೃತಿಕ ಹಬ್ಬದಂತೆ ನಾವು ಇಂದು ಸಾಂಸ್ಕೃತಿಕ ಸ್ಪರ್ಧೆ ಏರ್ಪಡಿಸಿರುವುದು ತಮ್ಮೆಲ್ಲರಿಗೂ ಖುಷಿ ತಂದಿರುವ ವಿಷಯ ಅದರಂತೆ ಸ್ಪರ್ಧಾಳುಗಳು ಸ್ಪರ್ಧಾ ಮನೋಭಾವದಿಂದ ತಮ್ಮ ಇಚ್ಛಾಶಕ್ತಿ ಇರುವಂತಹ ಜಾನಪದ ಕಲೆ, ನೃತ್ಯ ಭಾವಗೀತೆ, ಜಾನಪದಗೀತೆ, ಭಕ್ತಿಗೀತೆ, ಹೀಗೆ ಅಭಿರುಚಿಗಳನ್ನು ಹೊಂದಿರುವಂತಹ ವಿದ್ಯಾರ್ಥಿಗಳು ತೀರ್ಪುಗಾರರು ಮುಂದೆ ಯಾವುದೇ ಸಂಕೋಚವಿಲ್ಲದೆ ತಮ್ಮ ಅಭಿರುಚಿಯನ್ನು ವ್ಯಕ್ತಪಡಿಸಬೇಕು ಸ್ಪರ್ಧಾಮನೋಭಾವದಿಂದ ಸ್ಪರ್ಧಾಳಗಳು ಈ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಪ್ರಾಂಶುಪಾಲರಾದ ದೇವರಾಜ್, ಭಿಮರೆಡ್ಡಿ, ಕಾಲೇಜಿನ ಉಪನ್ಯಾಸಕರಾದ ನಾಗರಾಜ್ ಬೆಳಗಟ್ಟ, ಶಾಂತಕುಮಾರಿ, ಪುಷ್ಪಲತಾ, ಚ್.ಆರ್. ಅಬಿಬುವುಲ್ಲಾ, ಕೆ.ವಸಂತಕುಮಾರ್, ಕುಮಾರಸ್ವಾಮಿ, ಚಂದ್ರಶೇಖರ್, ಪುಟ್ಟರಂಗಪ್ಪ, ಡಾ.ರೇಖಾ ವಿದ್ಯಾರ್ಥಿಗಳು ಇದ್ದರು.

ನಗರದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ತಾಲೂಕು ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯನ್ನು ಪ್ರಾಂಶುಪಾಲರಾದ ಕೆ. ತಿಮ್ಮಯ್ಯ ಉದ್ಘಾಟಿಸಿದರು.

ಅದ್ದೂರಿ ಕನಕ ಜಯಂತೋತ್ಸವ

ಹೊಸದುರ್ಗ: ಕನಕ ಜಯಂತೋತ್ಸವದ ಅಂಗವಾಗಿ ಪ್ರತಿವರ್ಷ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ ಜತೆಗೆ ಕ್ರೀಡಾಕೂಟಗಳನ್ನು ಆಯೋಜಿಸಲಾಗುತ್ತಿದೆ. ಕ್ರೀಡೆಯು ವ್ಯಕ್ತಿಯ ಸರ್ವಾಂಗೀಣ ಪ್ರಗತಿಗೆ ಪೂರಕವಾಗಿದ್ದು, ಗ್ರಾಮೀಣ ಭಾಗದ ಮಕ್ಕಳಿಗೆ ತಳಮಟ್ಟದಿಂದ ಪ್ರೋತ್ಸಾಹ ನೀಡಿದರೆ ಉತ್ತಮ ಕ್ರೀಡಾಪಟುಗಳಾಗಿ ರೂಪಗೊಳ್ಳಲು ಸಾಧ್ಯ ಎಂದು

ಕನಕ ಗುರುಪೀಠ ಕೆಲ್ಲೋಡು ಶಾಖಾ ಮಠದ ಈಶ್ವರಾನಂದಪುರಿ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಕೆಲ್ಲೋಡು ಕನಕಧಾಮದಲ್ಲಿ ಕನಕ ಜಯಂತ್ಯೋತ್ಸವ ಹಾಗೂ 7ನೇ ವರ್ಷದ ಲಕ್ಷ ದೀಪೋತ್ಸವದ ಅಂಗವಾಗಿ ಶುಕ್ರವಾರ ಆಯೋಜಿಸಲಾಗಿದ್ದ ತಾಲೂಕು ಮಟ್ಟದ ಕ್ರೀಡಾಕೂಟದ ಧ್ವಜಾರೋಹಣದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿ, ಇಂದು ರಾಜ್ಯಮಟ್ಟದ ಹೊನಲು ಬೆಳಕಿನ ಕಬಡ್ಡಿ ಕ್ರೀಡಾಕೂಟ, 17ರ ಭಾನುವಾರ ಟಗರು ಕಾಳಗ ನಡೆಯಲಿದೆ. ಕುಲ ದೇವರುಗಳ ಸಮ್ಮುಖದಲ್ಲಿ ನೂತನ ಮಠದ ಕಟ್ಟಡದ ಉದ್ಘಾಟನೆ ನಡೆಯಲಿದೆ. 18ರ ಸೋಮವಾರ ಬೆಳಿಗ್ಗೆ ಕೃಷಿ ಮೇಳ, ಸಂಜೆ ಮಠಾಧೀಶರು, ಭಕ್ತರ ಸಮ್ಮುಖದಲ್ಲಿ ಲಕ್ಷ ದೀಪೋತ್ಸವ ಆಚರಿಸಲಾಗುತ್ತದೆ ಎಂದರು.

ಕ್ರೀಡಾಕೂಟ ಉದ್ಘಾಟಿಸಿದ ಶಾಸಕ ಬಿ.ಜಿ.ಗೋವಿಂದಪ್ಪ ಮಾತನಾಡಿ, ಮಗುವಿನ ಮಾನಸಿಕ ವಿಕಾಸಕ್ಕೆ ದೈಹಿಕ ಆರೋಗ್ಯ ತುಂಬಾ ಮುಖ್ಯವಾಗಿದೆ. ಮಕ್ಕಳಲ್ಲಿ ಅಡಗಿರುವ ಪ್ರತಿಭೆ ಪ್ರದರ್ಶನಕ್ಕೆ ಕ್ರೀಡಾಕೂಟ ಅವಶ್ಯವಾಗಿದೆ. ಮಕ್ಕಳು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಉತ್ತಮ ಕ್ರೀಡಾಪಟುಗಳಾಗಿ ರೂಪಗೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಭಾರತ ಸೇವಾದಳ ತಾಲೂಕು ಅಧ್ಯಕ್ಷ ಎಂ. ಸಿ.ಮೂರ್ತಿ, ತಾಲೂಕು ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ವಿ.ಮಹಂತೇಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಆರ್. ಮಂಜುನಾಥ್, ಕುರುಬ ಸಮಾಜದ ಮುಖಂಡ ಆಗ್ರೋ ಶಿವಣ್ಣ, ಕೆ.ಟಿ.ಮಂಜುನಾಥ್, ಶಿಕ್ಷಕರಾದ ಪ್ರಶಾಂತ್, ಅಕ್ಷರವಾಣಿ ಶ್ರೀಧರ್, ದೇವರಾಜ್, ಮಂಜುನಾಥ್ ಮತ್ತಿತರಿದ್ದರು.

ಅಪಘಾತ ಪ್ರಮಾಣ ತಗ್ಗಿಸಲು ಅಗತ್ಯ ಕ್ರಮ ಕೈಗೊಳ್ಳಿ

ದಾವಣಗೆರೆ: ಅಪಘಾತಗಳ ಪ್ರಮಾಣವನ್ನು ಗಣನೀಯ ಪ್ರಮಾಣದಲ್ಲಿ ತಗ್ಗಿಸಲು ಜಿಲ್ಲೆಯಲ್ಲಿನ ರಸ್ತೆಗಳ ದುರಸ್ತಿ, ಸುಧಾರಣೆಗೆ ಅವಶ್ಯಕ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ದಾವಣಗೆರೆ ಜಿಲ್ಲೆಯಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಅವೈಜ್ಞಾನಿಕವಾಗಿ ಅಳವಡಿಸಲಾಗಿರುವ ತಡೆಗಳಿಂದ ಅಪಘಾತಗಳು ಸಂಭವಿಸುತ್ತಿರುವ ಹಿನ್ನಲೆಯಲ್ಲಿ ಅಂತಹ ಸ್ಥಳಗಳನ್ನು ಗುರುತಿಸಿ ಕೂಡಲೆ ತೆರವುಗೊಳಿಸಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಹಾಗೂ ಆಯಾ ಪೊಲೀಸ್ ಠಾಣೆಯ ಅಧಿಕಾರಿಗಳೊಂದಿಗೆ ಜಂಟಿ ಪರಿವೀಕ್ಷಣೆಯನ್ನು ಮಾಡಿ ಅವಶ್ಯಕತೆ ಇದ್ದರೆ, ವೈಜ್ಞಾನಿಕ ವೇಗ ತಡೆಗಳನ್ನು ಅಳವಡಿಸಿ ಸೂಕ್ತ ರಸ್ತೆ ಸುರಕ್ಷತಾ ಕ್ರಮಗಳನ್ನು ಅನುಸರಿಸಬೇಕು ಎಂದರು.

ಜಿಲ್ಲಾ ವ್ಯಾಪ್ತಿಯಲ್ಲಿ ವೈಜ್ಞಾನಿಕ ವೇಗತಡೆಗಳಿಗೆ ಥರ್ಮೋಪ್ಲಾಸ್ಟಿಕ್ ಬಣ್ಣವನ್ನು ಅಳವಡಿಸುವುದರ ಜೊತೆಗೆ ವೇಗತಡೆ ಗೋಚರಿಸುವಂತೆ ರೋಡ್ ಸ್ಟಡ್‌ಗಳನ್ನು ಅಳವಡಿಸುವುದು ಮತ್ತು ಸೂಚನಾ ಫಲಕಗಳನ್ನು ಅಳವಡಿಸಬೇಕು ಎಂದು ತಿಳಿಸಿದರು.

ದಾವಣಗೆರೆ ಜಿಲ್ಲಾ ವ್ಯಾಪ್ತಿಯ ತಾಲೂಕು ಕೇಂದ್ರಗಳಿಂದ ಜಿಲ್ಲಾ ಕೇಂದ್ರಗಳಿಗೆ ಸಂಪರ್ಕಿಸುವ ಎಲ್ಲಾ

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆ ನಡೆಸಿದರು.

ರಾಜ್ಯ ಹೆದ್ದಾರಿಗಳು ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಹೆಚ್ಚು ಮಳೆಯ ಆದ ಪರಿಣಾಮ ರಸ್ತೆಗಳು ಕಿತ್ತು ಹೋಗಿರುವುದು ಹಾಗೂ ಕೆಲವು ಸ್ಥಳಗಳಲ್ಲಿ ಗುಂಡಿಗಳು ಸಹ ನಿರ್ಮಾಣವಾಗಿದ್ದು. ಇದರಿಂದ ರಸ್ತೆ ಬಳಕೆದಾರರಾದ ಅದರಲ್ಲೂ ದ್ವಿಚಕ್ರ ವಾಹನ ಸವಾರರು ಹೆಚ್ಚಾಗಿ ಲಘು ಅಪಘಾತಗಳು, ಇಲ್ಲವೇ ಮಾರಣಾಂತಿಕ ಅಪಘಾತಗಳು ಅಗುವುದಕ್ಕೆ ಕಾರಣವಾಗಿರುತ್ತದೆ. ಆದ್ದರಿಂದ ಸಂಬಂಧಪಟ್ಟ ಆಯಾ ತಾಲೂಕು ಮಟ್ಟದ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅಗತ್ಯ ರಸ್ತೆ ಸುರಕ್ಷತಾ ಕ್ರಮಗಳನ್ನು ಅನುಸರಿಸಬೇಕಿದೆ ಎಂದರು.

ಸಭೆಯಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ಅಧೀಕ್ಷಕ ವಿಜಯ್‌ಕುಮಾರ್ ಎಂ.ಸಂತೋಷ್, ಸ್ಮಾರ್ಟ್ ಸಿಟಿ ವ್ಯವಸ್ಥಾಪಕರಾದ ವೀರೇಶ್, ಎಂಜಿನಿಯರ್ಸ್ , ಪೊಲೀಸ್ ಅಧಿಕಾರಿಗಳು ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

> **ಹರಿಹರ ನಗರದಲ್ಲಿ ಅಪಘಾತಗಳು ಸಂಭವಿಸುತ್ತಿರುವ ಹಿನ್ನಲೆಯಲ್ಲಿ ಹರಿಹರ ನಗರಸಭೆಯವತಿಯಿಂದ ಹಾಗೂ ಸುಗಮ ಸಂಚಾರಕ್ಕೆ ಬೇಕಾಗುವ ಸಿಗ್ನಲ್ ಲೈಟ್ಸ್, ಸಿಸಿ ಕ್ಯಾಮೆರಾ ಹಾಗೂ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.**
> **- ಉಮಾ ಪ್ರಶಾಂತ್,** ವರಿಷ್ಠಾಧಿಕಾರಿ

ಬ್ಯಾರೇಜ್ ನ ನೀರಿನ ಒಳಹರಿವು ವೀಕ್ಷಣೆ

ಜಗಳೂರು: ತಾಲೂಕಿನ ಸಿದ್ದಿಹಳ್ಳಿ ಗ್ರಾಮದ ಬಳಿ ರು 4ಕೋಟಿ ವೆಚ್ಚದ ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿ ಪೂರ್ಣಗೊಂಡು ನೀರು ಹರಿಯುತ್ತಿರುವುದನ್ನು ಶಾಸಕ.ಬಿ.ದೇವೇಂದ್ರಪ್ಪ ಅವರು ವೀಕ್ಷಿಸಿ ಹರ್ಷ ವ್ಯಕ್ತಪಡಿಸಿದರು.

ನಂತರ ಮಾತನಾಡಿದ ಅವರು,ನಿಗದಿತ ಸಮಯದಲ್ಲಿ ಪೂರ್ಣಗೊಂಡ ಬ್ರಿಡ್ಜ್ ಕಂ ಬ್ಯಾರೇಜ್ ನಿಂದ ತೊರೆಸಾಲಿನ ಭಾಗದಲ್ಲಿ ಜಿನಿಗಿ ಹಳ್ಳದ ನೆರೆಹೊರೆಯ ಗ್ರಾಮಗಳ ಜಮೀನಿನಲ್ಲಿ ಬೋರ್ ವೆಲ್ ಅಂತರ್ಜಲ ಹೆಚ್ಚಳವಾಗುವುದಲ್ಲದೆ. ಜನಜಾನುವಾರುಗಳಿಗೆ ಜಲದಾಹ ತೀರಿಸುತ್ತದೆ.ಸೇತುವೆ ಮೇಲೆ ಸುಗಮ ರಸ್ತೆ ಸಂಚಾರ ನಡೆಸಬಹುದು.ಆದ್ದರಿಂದ ಕಾಮಗಾರಿ ಹಂತದಲ್ಲಿರುವಾಗ ಭೇಟಿನೀಡಿ ಗುತ್ತಿಗೆದಾರರಿಗೆ ಇಂಜಿನಿಯರ್‌ಗಳಿಗೆ ತ್ವರಿತಗತಿಯಲ್ಲಿ ಗುಣಮಟ್ಟದ ಕಾಮಗಾರಿ ನಿರ್ಮಿಸಲು ಖಡಕ್ ಎಚ್ಚರಿಕೆ ನೀಡಲಾಗಿತ್ತು ಎಂದರು.

ಪ್ರಸಕ್ತವಾಗಿ ಅತಿವೃಷ್ಟಿಯಿಂದ ಜಿನಿಗಿ ಹಳ್ಳಮೈದುಂಬಿ ಹರಿಯುತ್ತಿದೆ.ಈ ಭಾಗದ ರೈತರಲ್ಲಿ ಮಂದಹಾಸ ಮೂಡಿದೆ ಎಂದರು.



ತಾಲೂಕಿನ ಸಿದ್ದಿಹಳ್ಳಿ ಗ್ರಾಮದ ಬಳಿ ?4ಕೋಟಿ ವೆಚ್ಚದ ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿ ಪೂರ್ಣಗೊಂಡು ನೀರು ಹರಿಯುತ್ತಿರುವುದನ್ನು ಶಾಸಕ.ಬಿ.ದೇವೇಂದ್ರಪ್ಪ ಅವರು ವೀಕ್ಷಿಸಿ ಹರ್ಷ ವ್ಯಕ್ತಪಡಿಸಿದರು.

ಸಂದರ್ಭದಲ್ಲಿ ತಹಸೀಲ್ದಾರ್ ಸೈಯದ್ ಕಲೀಂ ಉಲ್ಲಾ,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್ ಮುಖಂಡರಾದ ಬಿ. ಮಹೇಶ್ವರಪ್ಪ,ಗೌಸ್ ಪೀರ್,ತಿಪ್ಪೇಸ್ವಾಮಿ,ಮಾಜಿ ಮಂಜುನಾಥ್ ,ಗಿಡ್ಡನಕಟ್ಟೆ ಕಾಂತರಾಜ್ ಸೇರಿದಂತೆ ಇದ್ದರು.

ಕೇಂದ್ರದ ನಬಾರ್ಡ್ ಆರ್ಥಿಕ ನೆರವು ಕಡಿತ

ಚಿತ್ರದುರ್ಗ : ನಬಾರ್ಡ್ ವತಿಹಯಿಂದ ರಾಜ್ಯಕ್ಕೆ ಬರುತ್ತಿದ್ದ ಆರ್ಥಿಕ ನೆರವಿನಲ್ಲಿ ಶೇ.58ರಷ್ಟು ಕಡಿತ ಮಾಡಿರುವುದು ವಿಷಾದನೀಯ ಸಂಗತಿಯಾಗಿದೆ. ಈ ವರ್ಷ ರಾಜ್ಯಕ್ಕೆ ನಬಾರ್ಡ್ ನೀಡಬೇಕಿದ್ದ 5800 ಕೋಟಿ ರು. ಆರ್ಥಿಕ ನೆರವಿನಲ್ಲಿ, ಕೇವಲ 300 ಕೋಟಿಗಳನ್ನು ಮಾತ್ರ ನೀಡಿದೆ. 3500 ಕೋಟಿ ರು. ಬಿಡುಗಡೆ ಮಾಡಿಲ್ಲ. ಇದು ರಾಜ್ಯಕ್ಕೆ ಉಂಟಾದ ಅನ್ಯಾಯ ಎಂದು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷರಾಗಿರುವ, ಯೋಜನೆ ಮತ್ತು ಸಾಂಖ್ಯಿಕ ಹಾಗೂ ಜಿಲ್ಲಾ ಉಸ್ತುವಾರಿ ಡಿ.ಸುಧಾಕರ್ ಹೇಳಿದರು.

ನಗರದ ಚಳ್ಳಕೆರೆ ರಸ್ತೆಯ ಶ್ರೀರಾಮ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ, 71ನೇ ಅಖಿಲ ಭಾರತ ಸಹಕಾರ ಸಪ್ತಾಹ-2024 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದ ಎಲ್ಲಾ ಡಿಸಿಸಿ ಬ್ಯಾಂಕುಗಳು ನಬಾರ್ಡ್‌ನಿಂದ ಪಡೆದ ಸಾಲ ಮರುಪಾತಿ ಮಾಡಲು ಹೆಚ್ಚಿನ ಬಡ್ಡಿದರ ಸಾಲ ಮಾಡುವ ಪರಿಸ್ಥಿತಿ ಉಂಟಾಗಿದೆ. ನಬಾರ್ಡ್ ಆರ್ಥಿಕ ನೆರವು ಹೆಚ್ಚಿಸುವ ಕುರಿತು, ರಾಜ್ಯದ ಮುಖ್ಯಂತ್ರಿಗಳು ಹಾಗೂ ಸಹಕಾರಿ ಸಚಿವರು, ಪ್ರಧಾನ ಮಂತ್ರಿ ಹಾಗೂ ಹಣಕಾಸು ಸಚಿವರಿಗೆ ಪತ್ರ ಬರೆದಿದ್ದಾರೆ. ನಬಾರ್ಡ್ ನೆರವು ನೀಡದಿದ್ದರೆ ರಾಜ್ಯದ ಸಹಕಾರಿ ಕ್ಷೇತ್ರಕ್ಕೆ ದೊಡ್ಡ ಪೆಟ್ಟು ಬೀಳಲಿದೆ ಎಂದು ಸಚಿವ ಡಿ.ಸುಧಾಕರ್ ತಿಳಿಸಿದರು.

ಸಹಕಾರ ವಾರ ಪತ್ರಿಕೆಯ ವಿಶೇಷ ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿದ ರಾಜ್ಯ ಸಹಕಾರ ಮಹಾಮಂಡಳ ಅಧ್ಯಕ್ಷ ಹಾಗೂ ಶಾಸಕ ಜಿ.ಟಿ.ದೇವೇಗೌಡ, ವಿಧಾನ ಪರಿಷತ್ ಸದಸ್ಯರಾದ ಕೆ.ಎಸ್.ನವೀನ್, ಚಿದಾನಂದ ಎಂ.ಗೌಡ, ಕರ್ನಾಟಕ ಸಹಕಾರ ಎಣ್ಣೆ ಬೀಜ ಬೆಳೆಗಾರರ ಮಹಾ ಮಂಡಳದ ಅಧ್ಯಕ್ಷ ವೆಂಕಟರಾವ್ ನಾಡಗೌಡ, ಸಹಕಾರ ಮಂಡಳಿಯ ನಿರ್ದೇಶಕರಾದ ಎನ್.ಗಂಗಣ್ಣ, ಹೆಚ್.ಮಂಜುನಾಥ್, ಆರ್.ರಾಮರೆಡ್ಡಿ, ಎಸ್.ಆರ್.ಗಿರೀಶ್, ಶಿಮೂಲ್ ನಿರ್ದೇಶಕರಾದ ಜಿ.ಪಿ.ರೇವಣಸಿದ್ದಪ್ಪ, ಸಂಜೀವ್ ಮೂರ್ತಿ, ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಹೆಚ್.ಎಂ.ದ್ಯಾಮಣ್ಣ ಕೋಗುಂಡೆ, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ವ್ಯವಸ್ಥಾಪಕ ಇಲ್ಯಾಸ್ ಉಲ್ಲಾ ಷರೀಫ್, ಸಹಕಾರಿ ಸಂಘಗಳ ಉಪನಿಬಂಧಕ ಆರ್.ಎಸ್.ದಿಲೀಪ್ ಕುಮಾರ್, ಸಹಕಾರ ಸಂಘಗಳ ಸಹಾಯಕ ನಿಬಂಧಕ ಬಾಹುಬಲಿ ಹಂಜೆ ಸೇರಿದಂತೆ ಇತರೆ ಸಹಕಾರ ಮಂಡಳಿಗಳ ಅಧ್ಯಕ್ಷರು, ನಿರ್ದೇಶಕರು, ವ್ಯವಸ್ಥಾಪಕರು ಹಾಗೂ ಸದಸ್ಯರು ಭಾಗವಹಿಸಿದ್ದರು.

ಮಾನ್ಯ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ, ಸೊರಬ.
ಸಿ.ಮಿಸ್.ನಂ 329/2024
ಅರ್ಜಿದಾರರು:- 1) ತೇರಪ್ಪಸೂರಣಗಿ ಬಿನ್ ಹುಳ್ಳಪ್ಪ ವಯಸ್ಸು ಸುಮಾರು 68 ವರ್ಷ ಶಾನವಳ್ಳಿ ಗ್ರಾಮ, ಜಡ ಹೋಬಳಿ, ಸೊರಬ ತಾಲ್ಲೂಕು. 2) ಗುತ್ಯಪ್ಪ ಬಿನ್ ಹುಳ್ಳಪ್ಪ ವಯಸ್ಸು ಸುಮಾರು 64 ವರ್ಷ ಶಾನವಳ್ಳಿ ಗ್ರಾಮ, ಜಡ ಹೋಬಳಿ, ಸೊರಬ ತಾಲ್ಲೂಕು. 3) ನಾಗರಾಜಪ್ಪ ಬಿನ್ ಹುಳ್ಳೇಪ್ಪ ವಯಸ್ಸು ಸುಮಾರು 60 ವರ್ಷ ಶಾನವಳ್ಳಿ ಗ್ರಾಮ, ಜಡೆ ಹೋಬಳಿ, ಸೊರಬ ತಾಲ್ಲೂಕು.
-: ವಿರುದ್ಧ :-
ಎದುರುದಾರರು:- ತಹಶೀಲ್ದಾರ್‌ರವರು ತಾಲ್ಲೂಕು ಕಛೇರಿ ಸೊರಬ.
ಪತ್ರಿಕಾ ಪ್ರಕಟಣೆ
ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಕೆಳಗೆ ನಮೂದಿಸಿದ ವ್ಯಕ್ತಿಯು ಮರಣ ಹೊಂದಿರುವುದರಿಂದ ಮರಣ ದಾಖಲೆಯನ್ನು ಪಡೆದುಕೊಳ್ಳುವ ಸಲುವಾಗಿ ಈ ಕೇಸನ್ನು ದಾಖಲಿಸಿದ್ದು ಇದರ ವಿಚಾರಣೆಯು ದಿನಾಂಕ 28/11/2024ರಂದು ಬೆಳ್ಳಗ್ಗೆ 11 ಘಂಟೆಗೆ ಇರುವುದರಿಂದ ಈ ವಿಷಯದಲ್ಲಿ ಹಿತಾಸಕ್ತಿ ಇರುವುವವರು ಅರ್ಜಿದಾರರಾಗಿ ಅಥವಾ ಎದುರುದಾರರಾಗಿ ಅಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಬಹುದು.
ಮರಣ ಹೊಂದಿದ ವ್ಯಕ್ತಿಯ ಹೆಸರು, ದಿನಾಂಕ ಮತ್ತು ಸ್ಥಳ
ಅರ್ಜಿದಾರರ ತಾಯಿಯಾದ ಗುತ್ಯಮ್ಮ ಕೋಂ ಹುಳ್ಳಪ್ಪ ಆದ ಇವರು ಸೊರಬ ತಾಲ್ಲೂಕು, ಜಡೆ ಹೋಬಳಿ, ಶ್ಯಾನವಳ್ಳಿ ಗ್ರಾಮದ ಸ್ವಗೃಹದಲ್ಲಿ ದಿನಾಂಕ 10/10/1982 ರಂದು ಮರಣ ಹೊಂದಿರುತ್ತಾರೆ. ಆ ಸಂಬಂಧ ಅರ್ಜಿದಾರರು ಅವರ ತಾಯಿಯ ಮರಣ ದಾಖಲೆ ಪಡೆಯುವ ಸಂಬಂಧ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.
ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೇದಾರರು
ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ.
ಅರ್ಜಿದಾರರ ಪರ ವಕೀಲರು
ನಾಗರಾಜ ಹೆಚ್, ಬಿ ಎ ಎಲ್ ಎಲ್ ಬಿ
ವಕೀಲರು ರೋಲ್ ನಂ ಕೆ.ಎ.ಆರ್. 841/2008.
ಮೋ.ನಂ. 9148733680.

ಮಾನ್ಯ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ, ಸೊರಬ.
ಸಿ.ಮಿಸ್.ನಂ 322/2024
ಅರ್ಜಿದಾರರು:- ಬಸವಲಿಂಗಪ್ಪ ಬಿನ್ ಬಸವಣ್ಣಪ್ಪ ವಯಸ್ಸು ಸುಮಾರು 75 ವರ್ಷ, ಗಂಗವಳ್ಳಿ ಗ್ರಾಮ, ಆನವಟ್ಟಿ ಹೋಬಳಿ, ಸೊರಬ ತಾಲ್ಲೂಕು.
-: ವಿರುದ್ಧ :-
ಎದುರುದಾರರು:- ತಹಶೀಲ್ದಾರ್‌ರವರು ತಾಲ್ಲೂಕು ಕಛೇರಿ ಸೊರಬ.
ಪತ್ರಿಕಾ ಪ್ರಕಟಣೆ
ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಕೆಳಗೆ ನಮೂದಿಸಿದ ವ್ಯಕ್ತಿಯು ಮರಣ ಹೊಂದಿರುವುದರಿಂದ ಮರಣ ದಾಖಲಾತಿಯನ್ನು ಪಡೆದುಕೊಳ್ಳುವ ಸಲುವಾಗಿ ಈ ಕೇಸನ್ನು ದಾಖಲಿಸಿದ್ದು ಇದರ ವಿಚಾರಣೆಯು ದಿನಾಂಕ:19-12-2024 ರಂದು ಬೆಳ್ಳಗ್ಗೆ 11 ಘಂಟೆಗೆ ಇರುವುದರಿಂದ ಈ ವಿಷಯದಲ್ಲಿ ಹಿತಾಸಕ್ತಿ ಇರುವವರು ಅರ್ಜಿದಾರರಾಗಿ ಅಥವಾ ಎದುರುದಾರರಾಗಿ ಅಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಬಹುದು.
ಮರಣ ಹೊಂದಿದ ವ್ಯಕ್ತಿಯ ಹೆಸರು, ದಿನಾಂಕ ಮತ್ತು ಸ್ಥಳ
ಅರ್ಜಿದಾರರ ತಂದೆಯಾದ ಬಸವಣ್ಣಪ್ಪ ಬಿನ್ ಚನ್ನಬಸಪ್ಪ ಆದ ಇವರು ಸೊರಬ ತಾಲ್ಲೂಕು, ಆನವಟ್ಟಿ ಹೋಬಳಿ, ಗಂಗವಳ್ಳಿ ಗ್ರಾಮದ ಸ್ವಗೃಹದಲ್ಲಿ ದಿನಾಂಕ: 10-02-1963 ರಂದು ಮರಣ ಹೊಂದಿರುತ್ತಾರೆ. ಆ ಸಂಬಂಧ ಅರ್ಜಿದಾರರು ಅವರ ತಂದೆಯ ಮರಣ ದಾಖಲೆ ಪಡೆಯುವ ಸಂಬಂಧ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.
ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೇದಾರರು
ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ.
ಅರ್ಜಿದಾರರ ಪರ ವಕೀಲರು
ಓಂಕಾರಪ್ಪ ಎಸ್, ಎಂ ಎ.ಎಲ್ ಎಲ್ ಬಿ
ವಕೀಲರು, ರೋಲ್ ನಂ ಕೆ.ಎ.ಆರ್.8/2007

ಮಾನ್ಯ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ, ಸೊರಬ.
ಸಿ.ಮಿಸ್.ನಂ 330/2024
ಅರ್ಜಿದಾರರು:- ರೇಣುಕಮ್ಮ ಮತ್ತು ಇತರರು
-: ವಿರುದ್ಧ :-
ಎದುರುದಾರರು:- ತಹಶೀಲ್ದಾರ್‌ರವರು ತಾಲ್ಲೂಕು ಕಛೇರಿ ಸೊರಬ.
ಪತ್ರಿಕಾ ಪ್ರಕಟಣೆ
ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಕೆಳಗೆ ನಮೂದಿಸಿದ ವ್ಯಕ್ತಿಯು ಮರಣ ಹೊಂದಿರುವುದರಿಂದ ಮರಣ ದಾಖಲೆಯನ್ನು ಪಡೆದುಕೊಳ್ಳುವ ಸಲುವಾಗಿ ಈ ಕೇಸನ್ನು ದಾಖಲಿಸಿದ್ದು ಇದರ ವಿಚಾರಣೆಯು ದಿನಾಂಕ-28/11/2024 ರಂದು ಬೆಳಗ್ಗೆ 11 ಘಂಟೆಗೆ ಇರುವುದರಿಂದ ಈ ವಿಷಯದಲ್ಲಿ ಹಿತಾಸಕ್ತಿ ಇರುವುವವರು ಅರ್ಜಿದಾರರಾಗಿ ಅಥವಾ ಎದುರುದಾರರಾಗಿ ಅಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಬಹುದು.
ಮರಣ ಹೊಂದಿದ ವ್ಯಕ್ತಿಯ ಹೆಸರು, ದಿನಾಂಕ ಮತ್ತು ಸ್ಥಳ
ಅರ್ಜಿದಾರರ ತಂದೆಯಾದ ಹನುಮಂತಪ್ಪ ಬಿನ್ ಬಿಷ್ಟಪ್ಪ ಆದ ಇವರು ಸೊರಬ ತಾಲ್ಲೂಕು, ಜಡೆ ಹೋಬಳಿ, ಶ್ಯಾನವಳ್ಳಿ ಗ್ರಾಮದ ಸ್ವಗೃಹದಲ್ಲಿ ದಿನಾಂಕ 13/08/1993 ರಂದು ಮರಣ ಹೊಂದಿರುತ್ತಾರೆ. ಆ ಸಂಬಂಧ ಅರ್ಜಿದಾರರು ಅವರ ತಂದೆಯ ಮರಣ ದಾಖಲೆ ಪಡೆಯುವ ಸಂಬಂಧ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.
ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೇದಾರರು
ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ.
ಅರ್ಜಿದಾರರ ಪರ ವಕೀಲರು
ನಾಗರಾಜ ಹೆಚ್, ಬಿ ಎ ಎಲ್ ಎಲ್ ಬಿ
ವಕೀಲರು ರೋಲ್ ನಂ ಕೆ.ಎ.ಆರ್. 841/2008.
ಮೋ.ನಂ. 9148733680.

ರೈತರಿಗೆ ಸಾಲ ಮರುಪಾವತಿಗೆ ಒತ್ತಡ ಹೇರುವುದು ಸರಿಯಲ್ಲ

ಹೊನ್ನಾಳಿ: 7ನೇ ವೇತನ ತೆಗೆದುಕೊಳ್ಳುತ್ತಿರುವ ಸರಕಾರಿ ನೌಕರರಿಗೆ ಸಾಲ ವಸೂಲಾತಿಗೆ ಒತ್ತಡ ಹೇರುವ ಬದಲಾಗಿ ರೈತರಿಗೆ ಸಾಲ ಮರುಪಾವತಿಗೆ ಒತ್ತಡ ಹೇರುತ್ತಿರುವುದು ಗಮನಕ್ಕೆ ಬಂದಿದ್ದು ಇದು ಖಂಡನೀಯ ಎಂದು ಶಾಸಕ ಡಿ.ಜಿ.ಶಾಂತನಗೌಡ ಅಧಿಕಾರಿಗಳಿಗೆ ತರಾಟೆ ತೆಗೆದುಕೊಂಡರು.

ಪಟ್ಟಣದ ತರಳಬಾಳು ಸಮುದಾಯ ಭವನದಲ್ಲಿಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ಬೆಂಗಳೂರು, ಸಹಕಾರ ಇಲಾಖೆ ದಾವಣಗೆರೆ, ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ, ಶಿಮುಲ್ ಮಾಚೇನಹಳ್ಳಿ ಮತ್ತಿತರ ಸಹಕಾರ ಸಂಘ-ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸರಕಾರದ ಆದೇಶದನ್ವಯ ಪ್ರತೀ ಗ್ರಾಪಂಗೊಂದೊಂದು ವಿಎಸ್‌ಎಸ್‌ಎನ್ ಸೊಸೈಟಿಯಾಗಬೇಕು ಆದರೆ ಇದುವರೆಗೂ ಕೆಲವು ಕಾನೂನಿನ ತೊಡಕುಗಳಿಂದ ಸಾಕಷ್ಟು ಪಂಚಾಯ್ತಿಗಳಲ್ಲಿ ಇನ್ನೂ ವಿಎಸ್‌ಎಸ್‌ಎನ್ ಸೊಸೈಟಿಗಳು ನಿರ್ಮಾಣವಾಗಿಲ್ಲವೆಂದು ಬೇಸರ ವ್ಯಕ್ತಪಡಿಸಿದರು.

ದೇಶದಲ್ಲೇ ಹಾಲು ಉತ್ಪಾದನೆಯಲ್ಲಿ ಗುಜರಾತ್‌ನ ಶಿಮುಲ್ ಮೊದಲನೇ ಸ್ಥಾನದಲ್ಲಿದ್ದರೆ, ರಾಜ್ಯದ ರೈತರ ಪ್ರಾಮಾಣಿಕ ಹೈನುಗಾರಿಕೆಯಿಂದ ಕರ್ನಾಟಕವು 2 ನೇ ಸ್ಥಾನದಲ್ಲಿದೆ ಎಂದು ಹೇಳಲು ಸಂತಸವಾಗುತ್ತದೆ ಎಂದು ಹರ್ಷ ವ್ಯಕ್ತಪಡಿಸಿದರು.

ಹೊನ್ನಾಳಿ-ಮತ್ತು ನ್ಯಾಮತಿ ತಾಲೂಕು ಕೂಡ ಹಾಲು ಉತ್ಪಾದನೆಯಲ್ಲಿ ಗಣನೀಯ ಕೊಡುಗೆ ನೀಡುತ್ತಿದೆ ಎಂದು ಅಂಕಿ-ಅಂಶಗಳ ಸಮೇತ ಉಲ್ಲೇಖಿಸಿದರು.

ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ, ಶಿಮುಲ್ ಮಾಚೇನಹಳ್ಳಿ ಮತ್ತಿತರ ಸಹಕಾರ ಸಂಘ-ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಶಾಸಕ ಡಿ.ಜಿ.ಶಾಂತನಗೌಡ ಉದ್ಘಾಟಿಸಿದರು.

ರಾಜ್ಯ ಕಾಂಗ್ರೆಸ್ ಸರಕಾರವೂ ಕೂಡ ಹಾಲಿಗೆ ಉತ್ತಮ ಬೆಲೆಯನ್ನು ಕೊಡುತ್ತಿದ್ದು, ಡಿಡಿಸಿಸಿ ಬ್ಯಾಂಕ್‌ಗಳಲ್ಲಿ ಬಡ್ಡಿ ರಹಿತ ಸಾಲ 3 ಲಕ್ಷದಿಂದ 5 ಲಕ್ಷಕ್ಕೂ ಹೆಚ್ಚು ರೈತಾಪಿ ವರ್ಗಕ್ಕೆ ಸಿಗುವಂತಾಗಬೇಕು ಈ ನಿಟ್ಟಿನಲ್ಲಿ ತಾವೂ ಕೂಡ ಸರಕಾರದ ಮೇಲೆ ಒತ್ತಡ ಹೇರಲು ಬದ್ಧ ಎಂದು ಭರವಸೆ ನೀಡಿದರು.

ಜಿಲ್ಲಾ ಡಿಡಿಸಿಸಿ ಬ್ಯಾಂಕ್ ಸಿಇಒ ಕೆ.ಎನ್.ನಂಜುಂಡೇಗೌಡ ಮಾತನಾಡಿ ವಿಎಸ್‌ಎಸ್‌ಎನ್‌ಗಳು ಕಂಪ್ಯೂಟರೀಕರಣವಾಗುವುದರಿಂದ ಇನ್ನು ಮುಂದೆ ಪಾರದರ್ಶಕವಾಗಿ ಕೆಲಸ ನಿರ್ವಹಿಸಲು ಅನುಕೂಲವಾಗುತ್ತದೆ ಎಂದರು.

ಶಿಮುಲ್ ನಿರ್ದೇಶಕ ಹನುಮನಹಳ್ಳಿ ಬಿ.ಜಿ.ಬಸವರಾಜಪ್ಪ ಮಾತನಾಡಿ ಪ್ರತೀ ವರ್ಷವೂ ಸಹಕಾರ ಸಂಘಗಳಲ್ಲಿ ಅನೇಕ ಬದಲಾವಣೆಗಳಾಗುತ್ತವೆ ಅವುಗಳ ಸಮರ್ಪಕ ಮಾಹಿತಿಯನ್ನು ರೈತರಿಗೆ ತಿಳಿಸುವ ಸದುದ್ದೇಶದಿಂದ ಸಹಕಾರ ಸಪ್ತಾಹ ಕಾರ್ಯಕ್ರಮ ಅತ್ಯವಶ್ಯಕವೆಂದು ವಿವರಿಸಿದರು.

ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಸಿರಿಗೆರೆ ರಾಜಣ್ಣ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ, ಉಪಾಧ್ಯಕ್ಷ ಡಿ.ಕುಮಾರ್, ಶಿಮುಲ್ ಉಪಾಧ್ಯಕ್ಷ ಚೇತನ್ ನಾಡಿಗೇರ್, ಡಿಡಿಸಿಸಿ ಬ್ಯಾಂಕ್ ನಿರ್ದೇಶಕ ಡಿ.ಎಸ್. ಸುರೇಂದ್ರಗೌಡ, ಶಿಮುಲ್ ನಿರ್ದೇಶಕರಾದ ಕಂಚುಗಾರನಹಳ್ಳಿ ಎಚ್.ಕೆ.ಬಸಪ್ಪ, ಜಗದೀಶಪ್ಪ ಬಣಕಾರ್,ನಬಾರ್ಡ್ ಡಿ.ಜಿ.ಎಂ. ಶಶಿರೇಖಾ,ಜಿಲ್ಲಾ ಸಹಕಾರ ಸಂಘಗಳ ನಿಬಂಧಕರಾದ ಎಸ್.ಮಂಜುಳ,ಟಿ.ಎ.ಪಿ.ಸಿ.ಎಂ.ಎಸ್. ಅಧ್ಯಕ್ಷ ಎಚ್.ಬಸವರಾಜಪ್ಪ, ಪಿ.ಎಲ್.ಡಿ.ಬ್ಯಾಂಕ್ ಅಧ್ಯಕ್ಷ ಆರುಂಡಿ ಕೆ.ತಿಮ್ಮೇಶಪ್ಪ, ಶಿವ ಬ್ಯಾಂಕ್ ಅಧ್ಯಕ್ಷ ಕೆ.ಎಸ್. ಶಿವಕುಮಾರ್, ಸಹಕಾರ ಅಭಿವೃದ್ಧಿ ಅಧಿಕಾರಿ ಕೆ.ಜಿ.ನವೀನ್, ಡಿಡಿಸಿಸಿ ಬ್ಯಾಂಕ್ ಕ್ಷೇತ್ರಾಧಿಕಾರಿಗಳಾದ ಎಚ್.ಬಿ.ಸುರೇಶ್, ಬಿ.ಪಿ.ವಿಜಯಕುಮಾರ್, ಎ.ಲೋಕೇಶ್, ಪಿ.ಜಿ.ಪಾಲಾಕ್ಷಿ, ಶಿವ ಬ್ಯಾಂಕ್ ಸಿಇಒ ರುದ್ರೇಶ್, ಎಚ್.ಜಿ.ಗಣೇಶ್,ಚೇತನ್ ಮತ್ತಿತರರು ಉಪಸ್ಥಿತರಿದ್ದರು.

> **ಸಹಕಾರ ಕ್ಷೇತ್ರವಿಲ್ಲದ ದೇಶವನ್ನು ಊಹಿಸಿಕೊಳ್ಳಲು ಕಷ್ಟಸಾಧ್ಯವಿದ್ದು, ಹೊಸ ಅನ್ವೇಷಣೆಗಳನ್ನು ಮತ್ತು ನವೀನ ತಾಂತ್ರಿಕತೆಯ ಅಳವಡಿಕೆಯಿಂದ ನಂದಿನಿಯ ಉತ್ಪನ್ನಗಳು ದೇಶದಲ್ಲೇ ಜಗದ್ವಿಖ್ಯಾತಿ ಪಡೆಯಲು ಸಾಧ್ಯವಾಗಿದೆ.**
> **- ಡಿ.ಜಿ.ವಿಶ್ವನಾಥ್,** ಡಿಡಿಸಿಸಿ ಬ್ಯಾಂಕ್ ನಿರ್ದೇಶಕ

ಸಮಾಚಾರ ಸಣ್ಣದಲ್ಲ

ಬಿರ್ಸಾ ಮುಂಡಾ 150ನೇ ಜಯಂತಿ

ಶಿವಮೊಗ್ಗ: ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರ ಭಗವಾನ್ ಬಿರ್ಸಾ ಮುಂಡಾ ತಮ್ಮ ಜೀವತಾವಧಿಯ ಅತ್ಯಲ್ಪ ಕಾಲದಲ್ಲಿ ಬ್ರಿಟೀಷರ ವಿರುದ್ಧ ಮಾತ್ರವಲ್ಲ, ತನ್ನ ಜನರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳುವಂತೆ ಹೋರಾಡಿದ ನಾಯಕ ಎಂದು ಸಂಸದ ಬಿ.ವೈ. ರಾಘವೇಂದ್ರ ಅವರು ಹೇಳಿದರು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಸಂಯುಕ್ತಾಶ್ರಯದಲ್ಲಿ ನಗರದ ವಾಲ್ಮೀಕಿ ಭವನದಲ್ಲಿ ಏರ್ಪಡಿಸಲಾಗಿದ್ದ ಭಗವಾನ್ ಬಿರ್ಸಾ ಮುಂಡಾ ಅವರ 150ನೇ ಜಯಂತಿ/ಜನಜಾತೀಯ ಗೌರವ ದಿವಸ್ ಆಚರಣಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು. ಧರ್ಮದ ವಿರುದ್ಧ ಪ್ರಚಾರ ಮಾಡುತ್ತಿದ್ದ ಮಿಷನರಿಗಳ ವಿರುದ್ಧವೂ ಹೋರಾಟ ನಡೆಸಿದ್ದ ಭೂಮಿಯ ಪಿತಾಮಹ ಎಂದೇ ಖ್ಯಾತರಾಗಿದ್ದ ಮುಂಡಾ ಅವರು, ಬ್ರಿಟೀಷ್ ಅಧಿಕಾರಿಗಳು ಮತ್ತು ಸ್ಥಳೀಯ ಜಮೀನುದಾರರು ಬುಡಕಟ್ಟು ಸಮುದಾಯಗಳನ್ನು ಶೋಷಿಸುತ್ತಿದ್ದಾಗ ಸಿಡಿದೆದ್ದು, ಜನರು ತಮ್ಮ ಹಕ್ಕುಗಳಿಗಾಗಿ ಹೋರಾಡಲು ನಾಯಕತ್ವ ವಹಿಸಿದ್ದರು ಎಂದರು. ಸಹ್ಯಾದ್ರಿ ಕಲಾ ಕಾಲೇಜಿನ ಉಪನ್ಯಾಸಕ ಡಾ.ಮೋಹನ್ ಚಂದ್ರಗುತ್ತಿ ಮುಂಡಾ ಕುರಿತು ವಿಶೇಷ ಉಪನ್ಯಾಸ ನೀಡಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ, ಜಿಲ್ಲಾ ಪಂಚಾಯಿತಿ ಸಿಇಒ ಎನ್.ಹೇಮಂತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್‌ಕುಮಾರ್, ಎಸ್ಟಿ ಕಲ್ಯಾಣಾಧಿಕಾರಿ ಎಸ್.ಜಿ.ಶ್ರೀನಿವಾಸ್ ಇದ್ದರು.

ಗುಡ್ಡೆಕೊಪ್ಪ ಗ್ರಾಪಂ ಸದಸ್ಯೆಯಾಗಿ ಆಯ್ಕೆ

ಹೊಸನಗರ: ತಾಲೂಕಿನ ಎಂ.ಗುಡ್ಡೆಕೊಪ್ಪ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಳೂರು ಗ್ರಾಮದ ಸದಸ್ಯೆಯಾಗಿ ನಿರ್ಮಲ ರಾಘವೇಂದ್ರ ಚೀಟಿ ಮೂಲಕ ಆಯ್ಕೆಯಾಗಿದ್ದಾರೆ. ಕಳೂರು ಕ್ಷೇತ್ರದಿಂದ ಬಿಜೆಪಿ ಬೆಂಬಲಿತ ಗ್ರಾಪಂ ಸದಸ್ಯೆ ರಶ್ಮಿಗೆ ಆಶಾ ಕಾರ್ಯಕರ್ತೆ ಕೆಲಸ ಸಿಕ್ಕಿದ್ದರಿಂದ ಅವರು ರಾಜೀನಾಮೆ ನೀಡಿದ್ದರು. ತೆರವಾದ ಅವರ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಶಶಿಕಲಾ ರಾಮು ಹಾಗೂ ಬಿಜೆಪಿ ಬೆಂಬಲಿತ ಅಭ್ಯರ್ಥಿ ನಿರ್ಮಲ ರಾಘವೇಂದ್ರ ಅವರ ಆಯ್ಕೆಗೆ ಮುಖಂಡರು ಒಂದಾಗಿ ಚುನಾವಣೆ ನಡೆಸುವುದು ಬೇಡ ಎಂದು ತೀರ್ಮಾನಿಸಿ, ಚೀಟಿ ಎತ್ತುವ ಮೂಲಕ ಆರಿಸಿದರು. ಬಿಜೆಪಿ ಅಭ್ಯರ್ಥಿ ನಿರ್ಮಲ ರಾಘವೇಂದ್ರ ಜಯಶಾಲಿಯಾಗಿದ್ದಾರೆ.

ಕಾರ್ತಿಕ ಹುಣ್ಣಿಮೆ: ವಿಶೇಷ ಪೂಜೆ

ಚಂದ್ರಗುತ್ತಿ: ಪುರಾಣ ಪ್ರಸಿದ್ಧ ಶ್ರೀರೇಣುಕಾಂಬ ದೇವಿ ದೇವಸ್ಥಾನಕ್ಕೆ ಕಾರ್ತಿಕ ಹುಣ್ಣಿಮೆ ನಿಮಿತ್ತ ಶುಕ್ರವಾರ ಸಾವಿರಾರು ಭಕ್ತರು ಆಗಮಿಸಿ ದೇವಿಯದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಬ್ಯಾಡಗಿ, ರಾಣೆಬೆನ್ನೂರು, ಹರಿಹರ, ಶಿಕಾರಿಪುರ, ಹಾನಗಲ್, ವಿಜಯಪುರ, ಚಿತ್ರದುರ್ಗ, ಶಿವಮೊಗ್ಗ, ಬೆಳಗಾವಿ, ಬಾಗಲಕೋಟೆ ಜಿಲ್ಲೆಗಳಿಂದ ಸಾವಿರಾರು ಭಕ್ತರು ಆಗಮಿಸಿ ದರ್ಶನ ಪಡೆದು 'ಉಧೋ

ಉಧೋ.. ಎಂದು ಘೋಷ ಹಾಕಿ ಭಕ್ತಿ ಸಮರ್ಪಿಸಿದರು. ಭಕ್ತರು ಸ್ಥಳದಲ್ಲೇ ಒಲೆ ಹೂಡಿಕರಿದ ಹೋಳಿಗೆ, ರೊಟ್ಟಿ, ಬುತ್ತಿ ತಯಾರಿಸಿ ನೈವೇದ್ಯ ಅರ್ಪಿಸಿ ನಂತರ ಬಂಧು ಬಳಗದವರ ಜತೆ ಸಹ ಭೋಜನ ಮಾಡುವದೃಶ್ಯಕಂಡು ಬಂದಿತು. ದೇವಿ ಪಲ್ಲಕ್ಕಿ ಉತ್ಸವ ದೇವಸ್ಥಾನದಿಂದ ವಾದ್ಯ ಮೇಳಗಳೊಂದಿಗೆ ಆರಂಭವಾಗಿ ಸಮೀಪದ ಹೊಳೆ ಜೋಳದಗುಡ್ಡೆ ವರದಾ ನದಿ ತೀರದ ದೇವಸ್ಥಾನಕ್ಕೆ ತೆರಳಿ ಪೂಜಾ ವಿಧಿ ವಿಧಾನಗಳನ್ನು ಆಚರಿಸಲಾಯಿತು. ದೇವಳದ ಇಒ ಪ್ರಮೀಳಾ ಕುಮಾರಿ ಇದ್ದರು.

ವಿ+
ಸೋಮವಾರ

> {ಬಿ.ವೈ.ರಾಘವೇಂದ್ರ, } ಸಂಸದರು
>
> ಶಿವಮೊಗ್ಗ - ತಾಳಗುಪ್ಪ ಮಾರ್ಗದ ರೈಲುಗಳು ಎಲ್ಲಾ ನಿಲ್ದಾಣಗಳಲ್ಲಿ ಕನಿಷ್ಠ ಎರಡು ನಿಮಿಷಗಳ ಕಾಲ ನಿಲುಗಡೆ ಮಾಡುವಂತೆ ತೀರ್ಥಹಳ್ಳಿ ಶಾಸಕ ಆರಗ ಜ್ಞಾನೇಂದ್ರರಿಂದ ಮನವಿ ಬಂದಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಸಮಯ ರೈಲು ನಿಲ್ಲಿಸುವ ಕುರಿತು ಕ್ರಮ ಕೈಗೊಳ್ಳುವಂತೆ ರೈಲ್ವೇ ಅಧಿಕಾರಿಗಳಿಗೆ ಸೂಚನೆ ನೀಡುವೆ.

ವ್ಯಾಪಾರ ವೃದ್ಧಿಗೆ ಗುಣಮಟ್ಟದ ಆಹಾರ ಮುಖ್ಯ | ಸಂಸದ ರಾಘವೇಂದ್ರ

ಮಾದರಿ ಫುಡ್ ಕೋರ್ಟ್‌ಗೆ ಜಾಗ ಶೀಘ್ರ

ಶಿಕಾರಿಪುರದಲ್ಲಿ ಬೀದಿ ಬದಿ ವ್ಯಾಪಾರಿಗಳ ಸಂಘದ ವತಿಯಿಂದ ನಡೆದ ರಾಷ್ಟ್ರೀಯ ದಿನಾಚರಣೆಯನ್ನು ಸಂಸದ ಬಿ.ವೈ.ರಾಘವೇಂದ್ರ ಉದ್ಘಾಟಿಸಿದರು.

ಶಿಕಾರಿಪುರ: ಸ್ವಚ್ಛ ಪರಿಸರ ಶುದ್ಧ ಹಾಗೂ ಗುಣಮಟ್ಟದ ತಿನಿಸುಗಳಿಂದ ಬೀದಿ ಬದಿ ವ್ಯಾಪಾರಸ್ಥರು ವಹಿವಾಟು ವೃದ್ದಿಸಿಕೊಳ್ಳಲು ಸಾಧ್ಯ. ಸಸ್ಯಹಾರಿ ಹಾಗೂ ಮಾಂಸಹಾರಿ ಫುಡ್ ಕೋರ್ಟ ಆರಂಭಕ್ಕೆ ಸೂಕ್ತ ಸ್ಥಳ ಗುರುತಿಸಿ ಅವಕಾಶ ದೊರಕಿಸಿಕೊಡುವುದಾಗಿ ಸಂಸದ ಬಿ.ವೈ. ರಾಘವೇಂದ್ರ ಭರವಸೆ ನೀಡಿದರು.

ಪಟ್ಟಣದ ಶಿವಗಿರಿ ಮರಾಠ ಸಮುದಾಯ ಭವನದಲ್ಲಿ ಶಿಕಾರಿಪುರ ತಾಲೂಕು ಮಲೆನಾಡು ರಸ್ತೆ ಬೀದಿ ಬದಿ ವ್ಯಾಪಾರಿಗಳ ಸಂಘದಿಂದ ವತಿಯಿಂದ ನಡೆದ ರಾಷ್ಟ್ರೀಯ ದಿನಾಚರಣೆ ಹಾಗೂ ಪಂಡಿತ್ ದೀನ್ ದಯಾಳ್ ಉಪಾಧ್ಯಾಯರವರ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬೀದಿ ಬದಿ ವ್ಯಾಪಾರಿಗಳು ಶ್ರಮ ಜೀವಿಗಳಾಗಿದ್ದು,ನಿತ್ಯ ವ್ಯಾಪಾರದಿಂದ ಬದುಕು ನಡೆಸುತ್ತಿದ್ದಾರೆ. ವೃತ್ತಿಯಲ್ಲಿ ಪ್ರಗತಿ ಸಾಧಿಸಿ ಆರ್ಥಿಕವಾಗಿ ಸದೃಡವಾಗಲು ಪ್ರತಿಯೊಬ್ಬ ಬೀದಿ ಬದಿ ವ್ಯಾಪಾರಿ ಸ್ವಚ್ಛ ಪರಿಸರದ ಜತೆಗೆ ಶುದ್ದ ಹಾಗೂ ಗುಣಮಟ್ಟದ ತಿನಿಸುಗಳ ಬಗ್ಗೆ ಹೆಚ್ಚು ನಿಗಾವಹಿಸಬೇಕು ಇದರಿಂದ ಗ್ರಾಹಕರ ಹಿತಾಸಕ್ತಿಯನ್ನು ಸಹ ಕಾಪಾಡಬಹುದಾಗಿದೆ ಎಂದು ಕಿವಿಮಾತು ಹೇಳಿದರು.

ಪಟ್ಟಣದಲ್ಲಿ ಬೀದಿ ಬದಿ ವ್ಯಾಪಾರಿಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದು ಎಲ್ಲರನ್ನು ಒಗ್ಗೂಡಿಸಿ ಫುಡ್ ಕೋರ್ಟ ನಿರ್ಮಾಣದ ಮೂಲಕ ವ್ಯಾಪಾರಸ್ಥರ ಜತೆ ಗ್ರಾಹಕರ ಹಿತ ಕಾಪಾಡಲು ಬದ್ದನಾಗಿರುವುದಾಗಿ ತಿಳಿಸಿದರು. ಮಾದರಿ ಫುಡ್ ಕೋರ್ಟ್ ನಿರ್ಮಾಣಕ್ಕೆ ಗಮನ ಹರಿಸುವುದಾಗಿ ತಿಳಿಸಿದರು.

ಸಂಘದ ಕಾರ್ಯ ಚಟುವಟಿಕೆಗಾಗಿ ಕಟ್ಟಡ ನಿರ್ಮಾಣಕ್ಕೆ ಸಲ್ಲಿಸಿದ ಮನವಿ ಬಗ್ಗೆ ತುರ್ತು ಗಮನಹರಿಸುವುದಾಗಿ ಭರವಸೆ ನೀಡಿದ ಅವರು ಸಮುದಾಯ ಭವನ ರೀತಿ ಕಟ್ಟಡ ನಿರ್ಮಿಸಿ ಸಂಘದ ಅಭಿವೃದ್ದಿಗೆ ಸ್ಪಂದಿಸುವುದಾಗಿ ತಿಳಿಸಿದರು.

ಜಿಲ್ಲಾ ಸಂಘದ ಉಪಾಧ್ಯಕ್ಷ ಶ್ರೀನಿವಾಸ್ ಮಾತನಾಡಿ,ಬೀದಿ ಬದಿ ವ್ಯಾಪಾರಸ್ಥರು ಎಲ್ಲೆಡೆ ಹರಿದು ಹಂಚಿ ಹೋಗಿದ್ದು ಎಲ್ಲರನ್ನು ಒಗ್ಗೂಡಿಸಿ ಸಂಘಟನೆ ಸದೃಡಗೊಳಿಸುವ ದಿಸೆಯಲ್ಲಿ ಜಿಲ್ಲಾ ಸಂಘ ಸಕ್ರೀಯವಾಗಿದೆ ಎಂದ ಅವರು ಈಗಾಗಲೇ ಗ್ರಾಮೀಣ ಭಾಗಕ್ಕೆ ತೆರಳಿ ಪ್ರತಿಯೊಬ್ಬ ಬೀದಿ ಬದಿ ವ್ಯಾಪಾರಿಯನ್ನು ಸಂಘಟನೆ ಮೂಲಕ ಗುರುತಿಸಿಕೊಳ್ಳುವಂತೆ ಹೆಚ್ಚಿನ ನಿಗಾವಹಿಸಲಾಗಿದೆ. ರಾಜ್ಯ ಜಿಲ್ಲಾ ಮಟ್ಟದಲ್ಲಿ ಸಂಘಟನೆಯನ್ನು ಸದೃಡಗೊಳಿಸುತ್ತಿದ್ದು ತಾಲೂಕು ಮಟ್ಟದಲ್ಲಿ ಸಂಘಟನೆಯನ್ನು ಬಲಿಷ್ಟಗೊಳಿಸಲು ಗಮನ ಹರಿಸಲಾಗಿದೆ ಸಂಘದ ಸದಸ್ಯರಿಗೆ ಸರ್ಕಾರದಿಂದ ಸೌಲಭ್ಯ ಪಡೆದುಕೊಳ್ಳುವ ದಿಸೆಯಲ್ಲಿ ಎಲ್ಲ ರೀತಿಯಲ್ಲಿ ಸಹಕರಿಸಲಾಗುವುದು ಎಂದು ಬರವಸೆ ನೀಡಿದರು.

ಖ್ಯಾತ ಉರ್ದು ಸಾಹಿತಿ,ಅಂಜುಮನ್ ಎ ಇಸ್ಲಾಂ ಜಾಮೀಯಾ ಮಸ್ಜಿದ್ ಕಮಿಟಿ ಅಧ್ಯಕ್ಷ ಡಾ.ಮೌಲಾನಾ ಅಮ್ಜದ್ ಹುಸೇನ್ ಹಾಫೀಜ್ ಕರ್ನಾಟಕಿ ಮಾತನಾಡಿ,ಬೀದಿ ಬದಿ ವ್ಯಾಪಾರಸ್ಥರಲ್ಲಿ ಒಗ್ಗಟ್ಟು ಬಹು ಮುಖ್ಯವಾಗಿದ್ದು ಜಾತಿ ಮತ ಬೇಧವಿಲ್ಲದೆ ಪ್ರತಿಯೊಬ್ಬರೂ ಶ್ರಮವಹಿಸಿ ದುಡಿಮೆ ಮೂಲಕ ಬದುಕು ಕಟ್ಟಿಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ಸಂಘದ ಗೌರವಾಧ್ಯಕ್ಷ ಪುರಸಭಾ ಮಾಜಿ ಸದಸ್ಯ ಮಹೇಶ್ ಹುಲ್ಮಾರ್ ಮಾತನಾಡಿ,ರಸ್ತೆ ಬೀದಿ ಬದಿ ವ್ಯಾಪಾಸ್ಥರ ಸಂಘಟನೆ ಬಲಿಷ್ಠವಾಗಿದ್ದು ಸಂಸದರು ಸಂಘಕ್ಕೆ ಸ್ವಂತ ಕಟ್ಟಡ ಹಾಗೂ ಪ್ರತ್ಯೇಕ ಫುಡ್ ಕೋರ್ಟ ನಿರ್ಮಾಣಕ್ಕೆ ಭರವಸೆ ನೀಡಿ ಸಂಘಟನೆಗೆ ಶಕ್ತಿ ತುಂಬುವ ಅಪೇಕ್ಷೆ ಹೊಂದಿದ್ದಾರೆ ಎಂದು ತಿಳಿಸಿದರು.

ಸಂಸದರ ಸಹಿತ ಗಣ್ಯರನ್ನು ಸನ್ಮಾನಿಸಲಾಯಿತು.ಅಧ್ಯಕ್ಷತೆಯನ್ನು ತಾ.ಸಂಘದ ಅಧ್ಯಕ್ಷ ಕೃಷ್ಣಪ್ಪ ಪಾನಿಪೂರಿ ವಹಿಸಿದ್ದರು.ವೇದಿಕೆಯಲ್ಲಿ ಕೆಪಿಸಿಸಿ ಸದಸ್ಯ ಗೋಣಿ ಮಾಲತೇಶ್, ಸಂಘದ ಜಿಲ್ಲಾಧ್ಯಕ್ಷ ಮಣಿ ಗೌಂಡರ್, ತಾ.ಸಂಘದ ಉಪಾಧ್ಯಕ್ಷ ಅಬ್ದುಲ್ ಕರೀಂ, ಬಸವರಾಜ್, ಕಿರಣ್ ಕುಮಾರ್, ರುದ್ರೇಶ್, ಪ್ರಸನ್ನಕುಮಾರ್, ಗಿಡ್ಡಪ್ಪ, ರಾಜಣ್ಣ,ನಾಗರತ್ನಮ್ಮ ಇದ್ದರು.

> **ಸಮುದಾಯ ಭವನ**
>
> ಪಟ್ಟಣದಲ್ಲಿ ಬೀದಿ ಬದಿ ವ್ಯಾಪಾರಿಗಳ ಸಂಘದ ಕಾರ್ಯ ಚಟುವಟಿಕೆಗಾಗಿ ಕಟ್ಟಡ ನಿರ್ಮಾಣಕ್ಕೆ ಸಲ್ಲಿಸಿದ ಮನವಿ ಬಗ್ಗೆ ತುರ್ತು ಗಮನಹರಿಸುವುದಾಗಿ ಭರವಸೆ ನೀಡಿದ ಅವರು ಸಮುದಾಯ ಭವನ ರೀತಿ ಕಟ್ಟಡ ನಿರ್ಮಿಸಿ ಸಂಘದ ಅಭಿವೃದ್ದಿಗೆ ಸ್ಪಂದಿಸುವುದಾಗಿ ಸಂಸದ ಬಿ.ವೈ.ರಾಘವೇಂದ್ರ ತಿಳಿಸಿದರು.

ತುರ್ತು ವೇಳೆ ಸಹಾಯವಾಣಿ ಬಳಸಿ

ಹೊಸನಗರದ ಗುರೂಜಿ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಏರ್ಪಡಿಸಿದ್ದ ಕಾನೂನು ಅರಿವು ಕಾರ್ಯಕ್ರಮದಲ್ಲಿ ಹಿರಿಯ ನ್ಯಾಯಾಧೀಶ ಎಂ.ಎಸ್.ಸಂತೋಷ್ ಮಾತನಾಡಿದರು.

ಹೊಸನಗರ; ಮಕ್ಕಳಿಗೆ ಗುಡ್ ಟಚ್ ಮತ್ತು ಬ್ಯಾಡ್ ಟಚ್ ಬಗ್ಗೆ ಸೂಕ್ತ ಅರಿವು ಇರಬೇಕು. ತುರ್ತು ಸಂದರ್ಭಗಳಲ್ಲಿ ಮಕ್ಕಳ ಸಹಾಯವಾಣಿ ಬಳಕೆ ಮಾಡಬಹುದು ಎಂದು ಎಂದು ಹಿರಿಯ ವ್ಯವಹಾರ ನ್ಯಾಯಾಧೀಶ ಎಂ.ಎಸ್. ಸಂತೋಷ್ ಕುಮಾರ್‌ರವರು ತಿಳಿಸಿದರು.

ಇಲ್ಲಿನ ಗುರೂಜಿ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಏರ್ಪಡಿಸಿದ್ದ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಂವಿಧಾನಾತ್ಮಕವಾಗಿ ಮಕ್ಕಳಿಗಾಗಿ ಇರುವ ವಿಶೇಷ ಹಕ್ಕುಗಳ ಕುರಿತು ಮಕ್ಕಳಿಗೆ ಹಾಗೂ ಪೋಷಕರಿಗೆ ಅರಿವಿರಬೇಕು. ಮಕ್ಕಳಿಗೆ ತಮ್ಮ ಹಕ್ಕುಗಳ ಮಾಹಿತಿ ನೀಡುವ ಜೊತೆಗೆ ಕರ್ತವ್ಯಗಳನ್ನು ತಪ್ಪದೇ ಪಾಲಿಸುವ ಕುರಿತು ಜಾಗೃತಿ ಮೂಡಿಸುವ ಕೆಲಸ ಆಗಬೇಕು ದೇಶದ ಒಳಿತಿಗಾಗಿ ಸಲ್ಲಿಸುವ ಸೇವೆ ನಮ್ಮ ಜೀವನದ ಭಾಗವಾಗಬೇಕು. ಟಿವಿ ಹಾಗೂ ಮೊಬೈಲ್ ಬಳಕೆ ಮಕ್ಕಳ ಹಕ್ಕುಗಳ ವ್ಯಾಪ್ತಿಯಲ್ಲಿ ಬರುವುದಿಲ್ಲ. ಪೋಷಕರು ಅನುಮತಿ ನೀಡಿದಲ್ಲಿ ಮಾತ್ರ ಬಳಸಬಹುದಾಗಿದೆ ಎಂದು ಮಕ್ಕಳಿಗೆ ಅವರು ತಿಳಿಸಿದರು.

ವಿದ್ಯಾಭಾರತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಸುದೇಶ್ ಕಾಮತ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಮುಖರಾದ ಶಾಂತಮೂರ್ತಿ, ಸಂತೋಷ ಕಾಮತ್, ಶೇಷಾಚಲ ಜಿ ನಾಯ್ಕ್, ಪರಮೇಶ್ವರ, ರೇಣುಕೇಶ್ ಮತ್ತಿತರರು ಇದ್ದರು. ಪ್ರಾಚಾರ್ಯೆ ಭವಾನಿ ಸ್ವಾಗತಿಸಿ ಶಿಕ್ಷಕಿಯರಾದ ಸುನಿತಾ ಹಾಗೂ ಸುಷ್ಮಾ ಕಾರ್ಯಕ್ರಮ ನಿರ್ವಹಿಸಿದರು.

ವೃದ್ಧರನ್ನು ಹೊರ ಹಾಕುವವರೇ ಅನಾಥರು : ಕೆ.ಎಲ್.ಅಶೋಕ್

ಆಶ್ರಮಗಳಲ್ಲೂ ವೃದ್ಧರ ಸೇವೆಗೂ ಜನ ಸಿಗ್ತಿಲ್ಲ

ನಗರದ ಜನ್ನಾಪುರ ಕಾರುಣ್ಯ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಸರ್ಕಾರಿ ಶಾಲೆಯ ಬಡ ವಿದ್ಯಾರ್ಥಿಗಳಿಗಾಗಿ ಕಾರುಣ್ಯ ದಾರಿ ದೀಪ ಯೋಜನೆ ಉದ್ಘಾಟಿಸಲಾಯಿತು.

ಭದ್ರಾವತಿ: ವೃದ್ದರ ಸೇವೆ ಮಾಡುವ ಮನೋಭಾವವಿದ್ದಾಗ ಮಾತ್ರ. ವೃದ್ಧಾಶ್ರಮಗಳಲ್ಲೂ ನೆಮ್ಮದಿ ಕಾಣಲು ಸಾಧ್ಯ. ಇಂತಹ ಸಮಾಜಮುಖಿ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದು ನಗರಸಭೆ ಸದಸ್ಯ ಬಿ.ಕೆ ಮೋಹನ್ ಹೇಳಿದರು.

ವಿಐಎಸ್‌ಎಲ್ ಅತಿಥಿಗೃಹ ಸಭಾಂಗಣದಲ್ಲಿ ನಗರದ ಜನ್ನಾಪುರ ಕಾರುಣ್ಯ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಸರ್ಕಾರಿ ಶಾಲೆಯ ಬಡ ವಿದ್ಯಾರ್ಥಿಗಳಿಗಾಗಿ ನೂತನವಾಗಿ ಜಾರಿಗೆ ತಂದಿರುವ ಕಾರುಣ್ಯ ದಾರಿ ದೀಪ ಯೋಜನೆ ಉದ್ಘಾಟಿಸಿ ಮಾತನಾಡಿದರು.

ಎಲ್ಲರ ಸಹಕಾರದೊಂದಿಗೆ ವೃದ್ಧಾಶ್ರಮಗಳನ್ನು ತೆರೆಯುವುದು ಸುಲಭ. ಆದರೆ ಆ ವೃದ್ಧಾಶ್ರಮಗಳಲ್ಲಿ ವೃದ್ದರ ಸೇವೆ ಮಾಡುವವರ ಅಗತ್ಯವಿದೆ. ಇಂದು ನಮ್ಮನ್ನು ಬೆಳೆಸಿದ ತಂದೆ ತಾಯಿಯರನ್ನೇ ಅವರ ವೃದ್ಧಾಪ್ಯದಲ್ಲಿ ನೋಡಿ ಕೊಳ್ಳುವುದು ಕಷ್ಟ. ಅಂತಹ ದಿನಗಳಲ್ಲಿ ಕಾರುಣ್ಯ ಚಾರಿಟೇಬಲ್ ಟ್ರಸ್ಟ್ ವಯೋವೃದ್ದರನ್ನು ಗೌರವಿಸಿ, ಪೋಷಣೆ ಮಾಡುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದರು.

ಮಕ್ಕಳು ತಮ್ಮ ಶಿಕ್ಷಣ ಹಾಗೂ ಆರೋಗ್ಯದ ಕಡೆ ಹೆಚ್ಚು ಗಮನಹರಿಸಬೇಕು. ಸರ್ಕಾರ ದಿಂದ ಸಾಕಷ್ಟು ಸೌಲಭ್ಯ ದೊರೆಯುತ್ತಿದ್ದು, ಅವುಗಳನ್ನು ಸದುಪಯೋಗಪಡಿಸಿಕೊಂಡು ಉತ್ತಮ ಪ್ರಜೆಗಳಾಗಿ ಹೊರಹೊಮ್ಮಬೇಕು. ಟ್ರಸ್ಟ್ ಜಾರಿಗೆ ತಂದಿರುವ ನೂತನ ಯೋಜನೆ ಯಶಸ್ವಿಯಾಗಿ ಮುನ್ನಡೆಯಲು ಎಲ್ಲಾ ರೀತಿಯ ಸಹಕಾರ ನೀಡಲಾಗುವುದು. ಟ್ರಸ್ಟ್ ಸೇವಾ ಕಾರ್ಯಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ನಡೆಯುವಂತಾಗಬೇಕು.

ಟ್ರಸ್ಟ್ ಮುನ್ನಡೆಸಿಕೊಂಡು ಹೋಗುತ್ತಿರುವ ಜಿ. ರಾಜುರವರು ಮೂಲತಃ ಹೋರಾಟದಿಂದ ಬೆಳೆದುಬಂದವರು. ಇದೀಗ ಸಮಾಜಮುಖಿ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಟ್ರಸ್ಟ್‌ಗೆ ಶಾಶ್ವತ ನೆಲೆ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಭರವಸೆ ನೀಡಿದರು.

ಹೋರಾಟಗಾರ ಕೆ.ಎಲ್.ಅಶೋಕ್ ಮಾತನಾಡಿ, ವೃದ್ಧರು ಅನಾಥರಲ್ಲ. ವೃದ್ಧರನ್ನು ಹೊರಹಾಕುವವರ ಅನಾಥರು ಎಂಬುದನ್ನು ನಾವೆಲ್ಲರೂ ಅರ್ಥಮಾಡಿ ಕೊಳ್ಳಬೇಕಾಗಿದೆ. ನಿಸ್ವಾರ್ಥತೆಯಿಂದ ಎಲ್ಲರೊಡನೆ ಬದುಕುವುದು ಕಲಿತಾಗ ಮಾತ್ರ ಸಮಾಜ ಮುಂದುವರೆಯಲು ಸಾಧ್ಯ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎ.ಕೆ.ನಾಗೇಂದ್ರಪ್ಪ ಮಾತನಾಡಿ, ಮನುಷ್ಯ ಮಾನವೀಯತೆ ಯನ್ನು ಮೈಗೂಡಿಸಿಕೊಂಡಾಗ ಮಾತ್ರ ಆತ ದೈವತ್ವವನ್ನು ಪಡೆಯಲು ಸಾಧ್ಯ. ಆಗ ಮಾತ್ರ ಅವರ ಮೇಲೆ ಪೂಜ್ಯ ಭಾವನೆ ಮೂಡುತ್ತದೆ. 15 ಪ್ರೌಢಶಾಲೆಗಳಿಂದ ವಿಶೇಷ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಶಿಕ್ಷಣ ಕೊಡಿಸುವ ಕಾರುಣ್ಯ ಟ್ರಸ್ಟ್‌ಗೆ ಶಿಕ್ಷಣ ಇಲಾಖೆ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ನಗರಸಭೆ ಪ್ರಭಾರ ಅಧ್ಯಕ್ಷ ಎಂ. ಮಣಿ ಎಎನ್‌ಎಸ್. ತಾಲೂಕು ಬಗರ್ ಹುಕುಂ ಸಮಿತಿ ಅಧ್ಯಕ್ಷ ಎಸ್. ಮಣಿಶೇಖರ್, ಸೂಡಾ ಸದಸ್ಯ ಎಚ್. ರವಿಕುಮಾರ್, ಹಿರಿಯ ನ್ಯಾಯವಾದಿ ಕೆ.ಎನ್ ಶ್ರೀಹರ್ಷ, ಟ್ರಸ್ಟ್ ಅಧ್ಯಕ್ಷ ಜಿ.ರಾಜು, ಟ್ರಸ್ಟ್ ಪ್ರಮುಖರಾದ ಗೌರವಾಧ್ಯಕ್ಷ ಡಾ. ವಿಜಯ್ ಜಿ. ದುಬೈ, ನಿರ್ದೇಶಕ ವಿ.ಟಿ ರಮೇಶ್, ಡಾ.ನರೇಂದ್ರ ಬಾಬು, ರಘುರಾಮ್, ಸುರೇಶ್(ಕ್ಲಬ್), ಕೆಡಿಪಿ ಸದಸ್ಯ ರಾಜೇಂದ್ರ, ಡಿಎಸ್‌ಎಸ್ ಮುಖಂಡ ವಿ. ವಿನೋದ್ ಇದ್ದರು.

ಪದವಿ ಮಹಿಳಾ ಕಾಲೇಜಿನ ದಶಮಾನೋತ್ಸವ ಸಂಭ್ರಮ

ಸರಕಾರಿ ಶಾಲೆಗಳಲ್ಲಿ ಓದುವುದೇ ಹೆಮ್ಮೆ

ನಗರದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ದಶಮಾನೋತ್ಸವದ ಸಂಭ್ರಮದಲ್ಲಿ ವಿಧಾನ ಪರಿಷತ್ ಸದಸ್ಯೆ ಬಲ್ಕೀಶ್ ಭಾನು ಮಾತನಾಡಿದರು.

ಶಿವಮೊಗ್ಗ: ಸರಕಾರಿ ಶಾಲೆಗಳಲ್ಲಿ ಓದುವುದೇ ಒಂದು ಹೆಮ್ಮೆ ಎಂದು ವಿಧಾನ ಪರಿಷತ್ ಸದಸ್ಯೆ ಬಲ್ಕೀಶ್‌ಭಾನು ಹೇಳಿದರು.

ನಗರದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ದಶಮಾನೋತ್ಸವದ ಸಂಭ್ರಮದಲ್ಲಿ ಜಿಲ್ಲಾ ಭಾರತ್ ಸ್ಕೌಟ್ಸ್ ಭವನದಲ್ಲಿ ಆಯೋಜಿಸಿದ್ದ ಎನ್‌ಎಸ್‌ಎಸ್ ಸಾಂಸ್ಕೃತಿಕ, ಕ್ರೀಡೆ, ರೆಡ್‌ಕ್ರಾಸ್, ರೇಂಜರ್ಸ್ ಹಾಗೂ ಇತರ ವೇದಿಕೆಗಳ ಉದ್ಘಾಟಿಸಿ ಮಾತನಾಡಿದರು. ಸರಕಾರಿ ಕಾಲೇಜುಗಳೆಂಬ ಕೀಳರಿಮೆ ಮರೆಯಾಗಬೇಕಾಗಿದೆ. ಇಲ್ಲಿ ಅತ್ಯುತ್ತಮ ಮಟ್ಟದ ಶಿಕ್ಷಣ ಸಿಗುತ್ತಿದೆ. ಅದರಲ್ಲೂ ಸರಕಾರ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒತ್ತು ಕೊಡುತ್ತಿದೆ. ಎಲ್ಲಾ ಸೌಲಭ್ಯಗಳು ಕೂಡ ಹೆಚ್ಚುತ್ತಿವೆ. ಇವನ್ನು ಬಳಸಿಕೊಂಡು ನಮ್ಮ ವಿದ್ಯಾರ್ಥಿಗಳು ಬದುಕನ್ನು ರೂಪಿಸಿಕೊಳ್ಳಬೇಕು ಎಂದರು.

ವಿದ್ಯಾರ್ಥಿನಿಯರು ಆಕರ್ಷಣೆಗಳಿಗೆ ಒಳಗಾಗಬೇಡಿ, ಬದುಕು ಬಹಳ ದೊಡ್ಡದಿದೆ. ಅದರಲ್ಲೂ ಸ್ವಾಭಿಮಾನ ಬಿಡಬೇಡಿ. ಸರಿ ತಪ್ಪುಗಳನ್ನು ನಿರ್ಧರಿಸಿಕೊಳ್ಳುವ ವಯಸ್ಸು ನಿಮ್ಮದು.

ತಂದೆ ತಾಯಿ ಮತ್ತು ಗುರುವಿನ ಋಣಗಳನ್ನು ಮರೆಯಬೇಡಿ. ಎಂತಹ ಸಂದರ್ಭ ಬಂದರೂ ವ್ಯಾಸಂಗದಿಂದ ದೂರವಾಗಬೇಡಿ ಎಂದರು.

ಮಂಕುತಿಮ್ಮನ ಕಗ್ಗದ ಖ್ಯಾತ ವ್ಯಾಖ್ಯಾನಕಾರ ಜಿ.ಎಸ್. ನಟೇಶ್ ಮಾತನಾಡಿ, ಬೆಳಕು ನಮ್ಮ ದುಃಖಗಳನ್ನು ಮರೆಸುತ್ತದೆ. ನಮ್ಮ ಗುರಿ ಯಾವಾಗಲೂ ದೊಡ್ಡದಿರಬೇಕು. ಗುರಿಯ ಹಿಂದೆ ಗುರುಗಳು ಇದ್ದಾರೆ ಎಂದರು.

ಕಾಲೇಜಿನ ಪ್ರಾಂಶುಪಾಲ ಯು.ಎಸ್. ರಾಜಕುಮಾರ್ ಅಧ್ಯಕ್ಷತೆವಹಿಸಿದ್ದರು. ಪ್ರಮುಖರಾದ ಒ.ಎಂ. ಉಮಾಶಂಕರ್, ಜಿ.ಸಿ. ಪ್ರಸಾದ್ ಕುಮಾರ್, ಡಾ. ರಂಗನಾಥ ರಾವ್ ಹೆಚ್. ಕರಾಡ, ಡಾ. ನವೀನ್, ಬಿ.ಹೆಚ್. ವಾಸಪ್ಪ, ಬಸವರಾಜಪ್ಪ, ಉಮಾಪತಿ ಇದ್ದರು. ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

> ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿಗೆ ಸ್ವಂತ ಕಟ್ಟಡ ಇಲ್ಲ. ಕಳೆದ 10 ವರ್ಷಗಳಿಂದ ಯಾವ ಸರಕಾರ ಕೂಡ ಕಾಲೇಜಿಗೆ ಸ್ವಂತ ಕಟ್ಟಡ ನೀಡಿಲ್ಲ. ಭರವಸೆಗಳು ಮಾತ್ರ ಆಗಿವೆ. ಶಾಸಕ ಎಸ್.ಎನ್. ಚನ್ನಬಸಪ್ಪ, ಡಿ.ಎಸ್. ಅರುಣ್,, ಡಾ. ಧನಂಜಯ ಸರ್ಜಿ ಅವರ ಸಹಕಾರದೊಂದಿಗೆ ಈ ಕಾಲೇಜಿಗೆ ನಿವೇಶನ ನೀಡಲು ಪ್ರಯತ್ನಿಸುವೆ.
>
> -ಬಲ್ಕೀಶ್ ಬಾನು, ಎಂಎಲ್‌ಸಿ

ಕೆಪಿಟಿಸಿಎಲ್ ನೇಮಕಕ್ಕೆ ಸ್ಪರ್ಧಾತ್ಮಕ ಪರೀಕ್ಷೆ ಇರಲಿ

ವಿದ್ಯಾರ್ಥಿಗಳ ಒಕ್ಕೂಟದ ವತಿಯಿಂದ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಯಿತು.

ಶಿವಮೊಗ್ಗ: ಕೆಪಿಟಿಸಿಎಲ್ ನೇಮಕಾತಿಯನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನಡೆಸಬೇಕು ಎಂದು ಆಗ್ರಹಿಸಿ ವಿದ್ಯಾರ್ಥಿಗಳ ಒಕ್ಕೂಟದ ವತಿಯಿಂದ ಇಂದು ಜಿಲ್ಲಾಧಿಕಾರಿಗಳ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಲಾಯಿತು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ ಕಿರಿಯ ಸ್ಟೇಷನ್ ಪರಿಚಾರಕ ಹಾಗೂ ಪವರ್ ಮ್ಯಾನ್ ನೇಮಕಾತಿಗೆ ಸಂಬಂಧಿಸಿದಂತೆ 2975 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಮತ್ತು ದೈಹಿಕ ಪರೀಕ್ಷೆಯ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಲಾಗಿದೆ. ಇದಕ್ಕಾಗಿ ಅ. 21ರಿಂದ ನ. 20ರವರೆಗೆ ದಿನಾಂಕ ನಿಗದಿಪಡಿಸಲಾಗಿದೆ ಎಂದು ಮನವಿದಾರರು ತಿಳಿಸಿದರು.

ಎಸ್‌ಎಸ್‌ಎಲ್‌ಸಿ ಅಂಕಗಳ ಆಧಾರದ ಮೇಲೆ ನೇಮಕಾತಿ ಪ್ರಕ್ರಿಯೆಯನ್ನು ರದ್ದುಪಡಿಸಿದ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇಮಕಾತಿ ನಡೆಸಿದರೆ ಹೆಚ್ಚು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಇತರೆ ರಾಜ್ಯಗಳಲ್ಲಿ ಈ ರೀತಿಯ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕವೇ ನೇಮಕ ಮಾಡಿಕೊಳ್ಳಲಾಗುತ್ತಿದೆ. ಆದ್ದರಿಂದ ನಮ್ಮ ರಾಜ್ಯದಲ್ಲಿಯೂ ಕೂಡ ಜಾರಿಗೊಳಿಸಲು ಮನವಿಯಲ್ಲಿ ಆಗ್ರಹಿಸಲಾಗಿದೆ.

ಈ ಸಂದರ್ಭದಲ್ಲಿ ವಿದ್ಯಾರ್ಥಿ ಒಕ್ಕೂಟದ ಪ್ರಮುಖರಾದ ಮಣಿಕಂಠ ನಾಯ್ಕ್, ಗೋಪಾಲ್, ಶ್ರೀನಾಥ್ ಇದ್ದರು.

ಕಾಂಗ್ರೆಸ್ ನಾಯಕರ ಹೇಳಿಕೆ ಅರ್ಥವಿಲ್ಲ

ಶಿವಮೊಗ್ಗ: ಆಶ್ರಯ ಮನೆಗಳ ಫಲಾನುಭವಿಗಳ ಸಮಸ್ಯೆ ಪರಿಹಾರಕ್ಕೆ ನಗರಕ್ಕೆ ಬರುವಂತೆ ವಸತಿ ಸಚಿವ ಜಮೀರ್ ಅಹಮ್ಮದ್ ಅವರಿಗೆ ನಾಲ್ಕು ಬಾರಿ ಆಹ್ವಾನ ನೀಡಲಾಗಿತ್ತು. ಆದರೆ ಬಂದಿಲ್ಲ. ಈಗ ವಕ್ಫ್ ಭೂಮಿ ಸಂಬಂಧವಾಗಿ ಅವರನ್ನು ನಗರಕ್ಕೆ ಕರೆ ತರುತ್ತೇವೆ ಎನ್ನುವ ಕಾಂಗ್ರೆಸ್ ನಾಯಕರ ಹೇಳಿಕೆ ಅರ್ಥವಿಲ್ಲದ್ದು ಎಂದು ಶಾಸಕ ಎಸ್.ಎನ್. ಚನ್ನಬಸಪ್ಪ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿವಮೊಗ್ಗಕ್ಕೆ ಬಂದರೆ ಜಮೀರ್ ಅವರಿಗೆ ಹೊಡೆಯವುದಾಗಿ ಎಲ್ಲಿಯೂ ಹೇಳಿಲ್ಲ. ಬದಲಾಗಿ ರಾಜ್ಯದಾದ್ಯಂತ ದೇವಸ್ಥಾನ, ಮಠ, ಮಂದಿರ, ಜಮೀನು, ಸ್ಮಶಾನ ಭೂಮಿಯನ್ನು ವಕ್ಫ್ ಗೆ ಸೇರಿಸುತ್ತಾ ಹೋದರೆ ಜಮೀರ್ ಅಹಮ್ಮದ್ ರಾಜ್ಯದಲ್ಲಿ ಓಡಾಟ ಮಾಡುವುದು ಕಷ್ಟವಾಗುತ್ತದೆ ಎಂದು ಹೇಳಿರುವುದಾಗಿ ಪ್ರಶ್ನೆಯೊಂದಕ್ಕೆ ಸ್ಪಷ್ಟನೆ ನೀಡಿದರು.

ಪ್ರಕೃತಿ ಸಹಜವಾಗಿರುವ ಝುರಿ ನೀರು ಬಳಸುವವರಿಗೆ ಶೇ.3 ರಷ್ಟು ಹಸಿರು ಸೆಸ್ ಹಾಕುವುದಾಗಿ ಹೇಳಿರುವ ಅರಣ್ಯ ಸಚಿವರ ಹೇಳಿಕೆ ಹೊಣೆಗೇಡಿತನದಿಂದ ಕೂಡಿದೆ. ಆದಾಯವಿಲ್ಲ ಎಂಬ ಕಾರಣಕ್ಕೆ ಈ ರೀತಿ ಸೆಸ್ ಹಾಕುವುದಕ್ಕಿಂತ ಶಬರಿ ಮಲೈನಂತಹ ದೊಡ್ಡ ದೇವಸ್ಥಾನಗಳ ಮುಂದೆ ಕುಳಿತು ಭಿಕ್ಷೆ ಬೇಡುವುದು ಒಳ್ಳೆಯದೆಂದು ಸರ್ಕಾರದ ವಿರುದ್ಧ ಹರಿಹಾಯ್ದರು.

'ಅನವರತ'ದಿಂದ 'ಸಿಹಿಮೊಗೆ ಸಂಭ್ರಮ'27ಕ್ಕೆ

ಈ ವೇಳೆ ಕಾರ್ಯಕ್ರಮದ ಪೋಸ್ಟರ್‌ಗಳನ್ನು ಆದ ಶಾಸಕ ಎಸ್.ಎನ್.ಚನ್ನಬಸಪ್ಪ ಬಿಡುಗಡೆ ಮಾಡಿದರು.

ಶಿವಮೊಗ್ಗ: ವಿವಿಧ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಮಾನ ಮನಸ್ಕರ ತಂಡವಾಗಿರುವ'ಅನವರತ' ವತಿಯಿಂದ ನ.27 ರಂದು ಸಾಂಸ್ಕೃತಿಕ ಸೊಗಡು ಬಿಂಬಿಸುವ ಸಿಹಿಮೊಗೆ ಸಂಭ್ರಮ-01 ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ ಎಂದು ಅನವರತ ಗೌರವಾಧ್ಯಕ್ಷರೂ ಆದ ಶಾಸಕ ಎಸ್.ಎನ್.ಚನ್ನಬಸಪ್ಪ ತಿಳಿಸಿದರು.

ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಯಿಂದ ಸುವರ್ಣ ಸಾಂಸ್ಕೃತಿಕ ಭವನದಲ್ಲಿ ಜನಪದ ನೃತ್ಯ, ಜನಪದ ಗೀತೆ, ಚಿತ್ರಕಲೆ ಮತ್ತು ಛಾಯಾಗ್ರಹಣ ಸ್ಪರ್ಧೆ ಆಯೋಜಿಸಲಾಗಿದೆ. ಜಿಲ್ಲೆಯ ಪದವಿ ಪೂರ್ವ, ಪದವಿ ಹಾಗೂ ಸ್ನಾತಕೋತ್ತರ ಪದವಿ ಕಾಲೇಜಿನ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಲಾಗಿದೆ. ಚಿತ್ರಕಲೆ ಮತ್ತು ಛಾಯಾಗ್ರಹಣ ಸ್ಪರ್ಧೆಗೆ 16ರಿಂದ 35 ವರ್ಷದವರಿಗೆ ಮಾತ್ರ ಅವಕಾಶವಿದೆ. ಆಸಕ್ತರು ಆನ್‌ಲೈನ್ ಮೂಲಕ ನೊಂದಾಯಿಸಲು ನ. 24 ಕೊನೆಯ ದಿನವಾಗಿದೆ ಎಂದರು. ಆಸಕ್ತರು ಮೊ. 9449967914ಸಂಪರ್ಕಿಸಬಹುದಾಗಿದೆ ಎಂದರು.

ಈ ವೇಳೆ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಲಾಯಿತು.ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ಎಸ್. ಜ್ಞಾನೇಶ್ವರ್, ಎನ್.ಜಿ. ನಾಗರಾಜ್, ಯಕ್ಷ ಸಂವರ್ಧನ ಟ್ರಸ್ಟ್ನ ಆನಂದ ಶೆಟ್ಟಿ, ಶ್ರೀನಿವಾಸ್ ಆಚಾರ್ಯ, ಕಿರಣ್ ಪೈ, ಮರವಂತೆ ಅಚ್ಯುತ್ ಹೆಬ್ಬಾರ್, ಬಾಬಣ್ಣಫಿ, ಅನವರತ ತಂಡದ ಸುನೀಲ್, ನವೀನ್, ಸಹನಾಚೇತನ್ ಇದ್ದರು.

ಪ್ರಣಾಳಿಕೆಯನ್ನೇ ಮರೆತ ಕಾಂಗ್ರೆಸ್

ಶಿವಮೊಗ್ಗ: ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮತದಾರರಿಗೆ ನೀಡಿದ ಚುನಾವಣಾ ಪ್ರಣಾಳಿಕೆಯನ್ನೇ ಆಡಳಿತಾರೂಢ ಕಾಂಗ್ರೆಸ್ ಮರೆತಿದೆ ಎಂದು ವಿಧಾನಪರಿಷತ್ ಸದಸ್ಯ ಡಿ.ಎಸ್. ಅರುಣ್ ವಾಗ್ದಾಳಿ ನಡೆಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಚುನಾವಣೆ ಮುಗಿದು, ಕಾಂಗ್ರೆಸ್ ಸರ್ಕಾರ ರಚನೆಯಾಗಿ 17ತಿಂಗಳುಗಳೇ ಗತಿಸಿವೆ. ಯಾವ ಇಲಾಖೆಗೂ ಇಲ್ಲಿಯ ವರೆಗೆ ಒಂದು ನಯಾ ಪೈಸೆ ಅನುದಾನ ಬಿಡುಗಡೆಯಾಗಿಲ್ಲ.ಕಾಮಗಾರಿಗೆ ಗುದ್ದಲಿ ಪೂಜೆ ಆಗಿದ್ದನ್ನು ತೋರಿಸಲಿ ಎಂದು ಸವಾಲು ಎಸೆದರು. ಶಿಕ್ಷಕರ ಖಾಲಿ ಹುದ್ದೆ ತುಂಬುವ ಗೋಜಿಗೇ ಸರಕಾರ ಹೋಗಿಲ್ಲ. ಅಜೀಂ ಪ್ರೇಮ್ ಜೀ ಸಂಸ್ಥೆಯ ಸಹಯೋಗದೊಂದಿಗೆ ಮಕ್ಕಳಿಗೆ ಮೊಟ್ಟೆ ಕೊಡುವ ಯೋಜನೆಯೂ ಸಮರ್ಪಕವಾಗಿಲ್ಲ. ಹಾಲು, ಬಾಳೆಹಣ್ಣು,ಚಿಕ್ಕಿ ಕೊಡುತ್ತೇವೆ ಎಂದಿದ್ದ ಸಚಿವ ಮಧು ಬಂಗಾರಪ್ಪ ಅವರ ಮಾತೂ ಕಾರ್ಯರೂಪಕ್ಕೆ ಬರುತ್ತಿಲ್ಲ ಎಂದು ಕಿಡಿ ಕಾರಿದರು. ರೈತ ವಿರೋಧಿ, ದಲಿತ ವಿರೋಧಿ, ಹಿಂದುತ್ವ ವಿರೋಧಿ, ಅಭಿವೃದ್ಧಿ ವಿರೋಧಿ ನೀತಿಗಳೇ ಕಾಂಗ್ರೆಸ್ ಬದ್ಧತೆನಾ? ಎಂದು ವ್ಯಂಗ್ಯವಾಡಿದರು.ಬರುವ ಚಳಿಗಾಲದ ಅಧಿವೇಶನದಲ್ಲಿ ಬಿಜೆಪಿ ಪ್ರಧಾನವಾಗಿ ಕಾಂಗ್ರೆಸ್ ಭ್ರಷ್ಟಾಚಾರ, ಅಭಿವೃದ್ಧಿ ವಿಷಯಗಳನ್ನು ಗಂಭೀರವಾಗಿ ಚರ್ಚೆಗೆ ತೆಗೆದುಕೊಳ್ಳುತ್ತದೆ ಎಂದರು. ಮುಖಂಡರಾದ ಹರಿಕೃಷ್ಣ, ಶಿವರಾಜ್, ಚಂದ್ರಶೇಖರ, ಕೆ.ವಿ.ಅಣ್ಣಪ್ಪ ಇದ್ದರು.

ಸಮಾಚಾರ ಸಣ್ಣದಲ್ಲ

ಮದುವೆ ಮನೆಯಲ್ಲಿ ಚಿನ್ನ ಎಗರಿಸಿದ ಕಳ್ಳರು

ಚಿಕ್ಕಮಗಳೂರು: ವಿವಾಹ ಸಮಾರಂಭದಲ್ಲಿ ವಧುವಿಗೆ ವರನ ಕಡೆಯವರು ನೀಡಿದ್ದ ಚಿನ್ನವನ್ನು ಖದೀಮರು ಎಗರಿಸಿದ ಘಟನೆ ನಡೆದಿದೆ. ಚಿಕ್ಕಮಗಳೂರು ಜಿಲ್ಲೆ ಆಲ್ದೂರು ಠಾಣಾ ವ್ಯಾಪ್ತಿಯ ಹಾಂದಿ ಗ್ರಾಮದಲ್ಲಿರುವ ರಾಯಲ್ ಶಾಲಿಮಾರ್ ಹಾಲ್ ನಲ್ಲಿ ಘಟನೆ ನಡೆದಿದೆ. ಶಾಲಿಮಾರ್ ಹಾಲ್ ನಲ್ಲಿ ಮೂಡಿಗೆರೆ ತಾಲ್ಲೂಕಿನ ಬಂಕೇನಹಳ್ಳಿ ಗ್ರಾಮದ ವಧು ಮತ್ತು ಹ್ಯಾರಗುಡ್ಡೆ ಗ್ರಾಮದ ವರನ ವಿವಾಹ ಏರ್ಪಾಡಾಗಿತ್ತು ಈ ವೇಳೆ ಮೂರು ಲಕ್ಷ ರು. ಮೌಲ್ಯದ ಆಭರಣಗಳನ್ನು ಖದೀಮರು ಎಗರಿಸಿಡದ್ದಾರೆ. ಆಲ್ದೂರು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದರು.

ಶಾಲಾ ಬಸ್ ಪಲ್ಟಿ

ಬೆಳಗಾವಿ: ಮೂವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಂಚರಿಸುತ್ತಿದ್ದ ಖಾಸಗಿ ಶಾಲೆ ಬಸ್ ಪಲ್ಟಿಯಾಗಿದ್ದು ಮಕ್ಕಳಿಗೆ ಸಣ್ಣಪುಟ್ಟ ಗಾಯಗಳಾದ ಘಟನೆ ಶುಕ್ರವಾರ ನಡೆದಿದೆ. ಜಿಲ್ಲೆಯ ಮೂಡಲಗಿ ತಾಲೂಕಿನ ಪಟ್ಟಗುಂದಿ ಗ್ರಾಮದ ಹೊರವಲಯದಲ್ಲಿ ಅಪಘಾತ ಸಂಭವಿಸಿದ್ದು, ಸಿ ಎಸ್. ಮುಗಳಖೋಡ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲಾ ಬಸ್ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿ ಹೊಡೆದಿದೆ. 1ರಿಂದ 7ನೇ ತರಗತಿಯ 30 ವಿದ್ಯಾರ್ಥಿಗಳಿಗೆ ಗಾಯವಾಗಿದ್ದು, ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆಗೆ ಚಾಲಕನ ಅಜಾಗರೂಕತೆ ಕಾರಣ ಎಂದು ಹೇಳಲಾಗುತ್ತಿದ್ದು ಘಟನಾ ಸ್ಥಳಕ್ಕೆ ಬಿಇಓ ಅಜೀತ್ ಮನ್ನಿಕೇರಿ ಭೇಟಿ ನೀಡಿ ಮಕ್ಕಳ ಆರೋಗ್ಯ ಬಗ್ಗೆ ಮಾಹಿತಿ ಪಡೆದುಕೊಂಡರು.

ಮಾನವೀಯತೆ ಮೆರೆದ ಸಚಿವೆ

ಬಾಲಕಿಯ ಸಂಕಷ್ಟಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಸ್ಪಂದನೆ , ಹಾಸ್ಟೆಲ್‌ನಲ್ಲಿ ಶಿಕ್ಷಣಕ್ಕೆ ವ್ಯವಸ್ಥೆ

ಬೆಳಗಾವಿ: ತನ್ನ ಓದುವ ಹುಮ್ಮಸ್ಸಿಗೆ ಅಡ್ಡಿಯಾಗಿರುವ ಸ್ವಂತ ತಂದೆಯ ಕಿರುಕುಳ ತಾಳಲಾರದೆ ತಮ್ಮ ಬಳಿಗೆ ಬಂದ 12 ವರ್ಷದ ಬಾಲಕಿಯ ಕಷ್ಟಕ್ಕೆ ತಕ್ಷಣ ಸ್ಪಂದಿಸಿ ಪರಿಹಾರ ಒದಗಿಸುವ ಮೂಲಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಮಾನವೀಯತೆ ತೋರಿದ್ದಾರೆ.

ಶುಕ್ರವಾರ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ಕ್ಷೇತ್ರದ ವಿವಿಧೆಡೆ ಅಭಿವೃದ್ಧಿ ಕಾಮಗಾರಿಗಳಿಗೆ ಪೂಜೆ ನೆರವೇರಿಸಿ ಮನೆಗೆ ಆಗಮಿಸಿದಾಗ ಬಾಲಕಿಯೊಬ್ಬಳು ತನ್ನ ಅಜ್ಜಿಯ ಜೊತೆಗೆ ನಿಂತಿದ್ದಳು. ಹಿರೇಬಾಗೇವಾಡಿಯವಳಾದ ಬಾಲಕಿಯ ತಂದೆ ನಿತ್ಯ ಕುಡಿದು ಬಂದು ಬಾಲಕಿಗೆ ಮತ್ತು ಆಕೆಯ ತಾಯಿಗೆ ಹಿಂಸೆ ನೀಡುತ್ತಿದ್ದ. ಇದರಿಂದ ಬೇಸತ್ತ ತಾಯಿ ತವರು ಮನೆ ಸೇರಿದಳು. ಆದರೆ, ಹಿರೇಬಾಗೇವಾಡಿಯ ಖಾಸಗಿ ಶಾಲೆಯಲ್ಲಿ 6ನೇ ತರಗತಿ ಓದುತ್ತಿರುವ ಬಾಲಕಿ ಹೋಗಲು ಒಪ್ಪಲಿಲ್ಲ. ಆದರೆ ತಂದೆಯ ಹಿಂಸೆಯನ್ನು ಸಹಿಸುವುದೂ ಸಾಧ್ಯವಿರಲಿಲ್ಲ.

ಸಚಿವರ ಮೊರೆಹೋದ ಬಾಲಕಿ: ಹಾಗಾಗಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರ ಬಳಿ ಹೋದರೆ ಏನಾದರೂ ಪರಿಹಾರ ಸಿಗಬಹುದು ಎಂದು ಅಜ್ಜಿಯನ್ನು ಕರೆದುಕೊಂಡು ಬಂದಿದ್ದಳು. ಅದಾಗಲೇ ಮೃಣಾಲ ಹೆಬ್ಬಾಳಕರ್ ಬಾಲಕಿಯ ಕಷ್ಟ ಆಲಿಸುತ್ತಿದ್ದರು. ಎಲ್ಲೇ ಆದರೂ ಹಾಸ್ಟೆಲ್ ನಲ್ಲಿ ಇದ್ದು ಓದುತ್ತೇನೆ. ಆದರೆ ಮನೆಯಲ್ಲಿ ಇರಲು ಸಾಧ್ಯವಿಲ್ಲ, ಓದನ್ನು ನಿಲ್ಲಿಸುವುದಿಲ್ಲ ಎಂದು ಬಾಲಕಿ ಸಚಿವರ ಬಳಿ ಅಳಲು ತೋಡಿಕೊಂಡಳು.

ತಕ್ಷಣ ಮಹಿಳಾ ಮತ್ತು ಮಕ್ಕಳ ಇಲಾಖೆಯ ಉಪ ನಿರ್ದೇಶಕ ನಾಗರಾಜ್‌ಗೆ ಕರೆಮಾಡಿದ ಲಕ್ಷ್ಮೀ ಹೆಬ್ಬಾಳಕರ್, ತಮ್ಮ ಇಲಾಖೆಯ ಸವದತ್ತಿ


ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಜತೆ ಬಾಲಕಿ.

ಬಾಲಕಿಯರ ವಸತಿ ನಿಲಯದಲ್ಲಿ ಬಾಲಕಿ ಉಳಿದುಕೊಳ್ಳಲು ಮತ್ತು ವಿದ್ಯಾಭ್ಯಾಸ ಮುಂದುವರಿಸಲು ವ್ಯವಸ್ಥೆ ಮಾಡುವಂತೆ ಸೂಚಿಸಿದರು. ಬಾಲಕಿಗೆ ಅಗತ್ಯವಾದ ಬಟ್ಟೆ ಮತ್ತಿತರ ವಸ್ತುಗಳನ್ನು ಖರೀದಿಸಲು ಆರ್ಥಿಕ ನೆರವನ್ನೂ ಸಚಿವರು ಒದಗಿಸಿದರು. ಈ ಬಾಲಕಿ ನನ್ನ ಮಗಳಿದ್ದಂತೆ, ಅವಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಉತ್ತಮ ವಿದ್ಯಾಭ್ಯಾಸ, ಭವಿಷ್ಯಕ್ಕೆ ವ್ಯವಸ್ಥೆ ಮಾಡಬೇಕು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಸೂಚಿಸಿದರು.

ಸವದತ್ತಿ ವಸತಿ ನಿಲಯಕ್ಕೆ ಸೇರ್ಪಡೆ: ಬಾಲಕಿಯನ್ನು ಸಂತೈಸಿದ ಸಚಿವೆ, ನಿನ್ನ ವಿದ್ಯಾಭ್ಯಾಸಕ್ಕೆ ಎಲ್ಲ ರೀತಿಯ ವ್ಯವಸ್ಥೆ ಮಾಡುವೆ. ಉತ್ತಮವಾಗಿ ಓದಿ ಒಳ್ಳೆಯ ಭವಿಷ್ಯ ಕಟ್ಟಿಕೊಳ್ಳಬೇಕು ಎಂದು ಹಾರೈಸಿದರು.

ಕೆಲವೇ ಹೊತ್ತಿನಲ್ಲಿ ಮಕ್ಕಳ ರಕ್ಷಣಾಲಯದ ಸಿಬ್ಬಂದಿ ಜೊತೆಗೆ ಆಗಮಿಸಿದ ನಾಗರಾಜ್ ಅವರು, ಬಾಲಕಿಯನ್ನು ಸವದತ್ತಿ ವಸತಿ ನಿಲಯಕ್ಕೆ ಸೇರಿಸಲು ಕ್ರಮ ತೆಗೆದುಕೊಂಡರು. ಬಾಲಕಿಯನ್ನು ಉತ್ತಮ ರೀತಿಯಲ್ಲಿ ನೋಡಿಕೊಳ್ಳಲಾಗುವುದು. ವರ್ಷದ 365 ದಿನವೂ ಆಕೆಗೆ ಊಟ, ವಸತಿ ಸೇರಿದಂತೆ ಎಲ್ಲ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಪ್ರಚೋದನಾಕಾರಿ ಹೇಳಿಕೆ ಈಶ್ವರಪ್ಪ ವಿರುದ್ಧ ಕೇಸ್

ಶಿವಮೊಗ್ಗ: ಕಾಂಗ್ರೆಸ್ ನಾಯಕರು ಹಾಗೂ ಸರಕಾರದ ವಿರುದ್ಧ ಪ್ರಚೋದನಕಾರಿ ಹೇಳಿಕೆ ನೀಡಿರುವ ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ವಿರುದ್ಧ ಜಯನಗರ ಪೊಲೀಸ್ ಠಾಣೆಯಲ್ಲಿ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡ ಶಿವಮೊಗ್ಗ ಪೊಲೀಸರು

ನ.13 ರಂದು ಶಿವಮೊಗ್ಗದಲ್ಲಿ ರಾಷ್ಟ್ರಭಕ್ತ ಬಳಗದ ಸಂಚಾಲಕ ಕೆ,ಎಸ್ ಈಶ್ವರಪ್ಪ ಪತ್ರಿಕಾಗೋಷ್ಠಿಯಲ್ಲಿ , ವಕ್ಫ್ ಪ್ರಕರಣಗಳು ಹೆಚ್ಚಾಗುತ್ತಲೇ ಹೋಗುತ್ತಿವೆ. ಮುಸಲ್ಮಾನರು ಮಾಡುವ ಅಚಾತುರ್ಯಗಳನ್ನೆಲ್ಲಾ ಗಮನಿಸಿದರೂ ಕೂಡ ಕಾಂಗ್ರೆಸ್ ಸರ್ಕಾರ ಸುಮ್ಮನಿದೆ. ರೈತ ಭೂಮಿ, ದೇವಸ್ಥಾನ ಮಠಗಳು ಇಷ್ಟೇಕೆ ಶಾಲಾ ಕಾಲೇಜುಗಳು ಪುರಾತತ್ವ ಇಲಾಖೆಯ ಪ್ರದೇಶಗಳನ್ನೂ ಕೂಡ ಬಕ್ಫ್ ಆಸ್ತಿ ಎಂದು ಬದಲಾಯಿಸಲಾಗಿದೆ ಎಂದು ಆರೋಪಿಸಿ ದ್ದರು. ಈ ಬಗ್ಗೆ ನ.14ರಂದು ಇನ್‌ಸೆಕ್ಟರ್ ಸಿದ್ದೇಗೌಡ ಎಚ್.ಎಂ. ದೂರು ನೀಡಿದ್ದಾರೆ.

ಈಶ್ವರಪ್ಪ ಹೇಳಿದ್ದೇನು..?: ಸರ್ ಎಂ. ವಿಶ್ವೇಶ್ವರಯ್ಯ ಹುಟ್ಟಿದ ಗ್ರಾಮವನ್ನೂ ವಕ್ಫ್‌ನವರು ಬಿಟ್ಟಿಲ್ಲ. ಮತ್ತೊಂದು ಕಡೆ ಇನ್ನೊಬ್ಬ ಮುಸ್ಲಿಂ ನಾಯಕ ಅಂಬೇಡ್ಕರ್ ಅವರ ಹೆಸರನ್ನು ಬಳಸಿಕೊಂಡಿದ್ದಾನೆ. ಅಂಬೇಡ್ಕರ್ ಅವರು ಇಸ್ಲಾಂಧರ್ಮ ಸೇರಲು ಸಿದ್ಧತೆ ಮಾಡಿಕೊಂಡಿದ್ದರು ಎಂದು ಹೇಳುವ ಮೂಲಕ ಅಂಬೇಡ್ಕರ್‌ಗೆ ಅವಮಾನ ಮಾಡಿದ್ದಾರೆ. ಹೀಗೆ ಅವಮಾನ ಮಾಡಿದ್ದರೂ ಕಾಂಗ್ರೆಸ್ ಒಬ್ಬ ನಾಯಕನೂ ಕೂಡ ಏಕೆಂದು ಪ್ರಶ್ನೆ ಮಾಡಲಿಲ್ಲ. ಇಸ್ಲಾಮೀಕರಣಕ್ಕೆ ಕಾಂಗ್ರೆಸ್ ಸರ್ಕಾರ ನಿರಂತರವಾಗಿ ಬೆಂಬಲ ನೀಡುತ್ತಾ ಬಂದಿದೆ. ಇದೀಗ ಮುಖ್ಯ ಮಂತ್ರಿ ಸಿದ್ದರಾಮಯ್ಯ ಕೂಡ ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಂರಿಗೆ ಶೇಕಡಾ 4 ರಷ್ಟು ಮೀಸಲಾತಿ ಘೋಷಣೆ ಮಾಡಲು ಹೊರಟಿದ್ದಾರೆ ಎಂದು ಆರೋಪಿಸಿದ್ದರು. ಇವರೇನು ಹಿಂದುಸ್ಥಾನವನ್ನು ಪಾಕಿಸ್ತಾನ ಮಾಡಲು ಹೊರಟಿದ್ದಾರೆ. ಇದು ಹೀಗೇ ಮುಂದುವರೆದರೆ ಸಾಧು-ಸಂತರ ನೇತೃತ್ವದಲ್ಲಿ ದಂಗೆ ಏಳುವ ಕಾಲ ದೂರವಿಲ್ಲ ಎಂದು ಈಶ್ವರಪ್ಪ ಎಚ್ಚರಿಕೆ ಕೊಟ್ಟಿದ್ದರು.

ಈ ಸುದ್ದಿ ಪತ್ರಿಕೆಗಳಲ್ಲಿ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಪ್ರಸಾರವಾಗಿದೆ. ಅನ್ಯಕೋಮಿನ ವಿರುದ್ಧ ದ್ವೇಷ ಭಾವನೆಗಳನ್ನು ಕೆರಳಿಸುವ ಪ್ರಚೋದನಕಾರಿ ಮಾತನಾಡಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಲು ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಜಿಲ್ಲಾ ಪಂಚಾಯತ್ ಕಾರ್ಯಾಲಯ, ಮೈಸೂರು
Email: ceo_zp_mys@nic.in Ph: 0821-2526301, 330
ಸಂಖ್ಯೆ: ಇಎಸ್‌ಟಿ(7)/ಇ–34874/2023–24 ದಿನಾಂಕ: 14.11.2024

ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್)

ಮೈಸೂರು ಜಿಲ್ಲಾ ಪಂಚಾಯತ್ ಕಛೇರಿಯ ದೈನಂದಿನ ಬಳಕೆಗೆ ಅಗತ್ಯವಿರುವ ಲೇಖನ ಸಾಮಗ್ರಿಗಳು, ಪ್ರಿಂಟರ್ ಕಾಟ್ರೇಜ್‌ಗಳು ಹಾಗೂ ಕಂಪ್ಯೂಟರ್ ಆಕ್ಸಸೇರಿಸ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಖರೀದಿಸುವ ಬಗ್ಗೆ. **ಟೆಂಡರ್ ಆದೇಶ ಸಂಖ್ಯೆ:** ಇಎಸ್‌ಟಿ(7)/ಇ–34874/2023–24 ದಿ: 14.11.2024 **ಅರ್ಜಿ ಸಲ್ಲಿಸುವ ದಿನಾಂಕ:** 14.11.2024 **ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:** 25.11.2024 ಸಂಜೆ 05.00 ಗಂಟೆ. **ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ:** 27.11.2024ರ ಬೆಳಿಗ್ಗೆ 11.00 **ಟೆಂಡರ್ ಆಹ್ವಾನಿಸುವ ಅಧಿಕಾರಿ:** ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿ.ಪಂ. ಮೈಸೂರು. **ಸಂಪರ್ಕಿಸಬೇಕಾದ ಕಛೇರಿ ವಿಳಾಸ:** ಜಿಲ್ಲಾ ಪಂಚಾಯತ್, ಮೈಸೂರು. **ಟೆಂಡರ್ ಅಂಗೀಕರಿಸುವ ಪ್ರಾಧಿಕಾರ:** ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿ.ಪಂ. ಮೈಸೂರು.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ, ಜಿ.ಪಂ. ಮೈಸೂರು.
DIPR/DDMYS-798/KSMCA-545/2024-25

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, (ಬನಶಂಕರಿದೇವಸ್ಥಾನದ ಹತ್ತಿರ) ಬನಶಂಕರಿ ಬೆಂಗಳೂರು – 560 070
ಸಂಖ್ಯೆ: ಕಾಅ/ಪಂರಾಇಂವಿ/ಬೆಂನ/ಎಇ-2/ಟೆಂಡರ್/30/2024-25 ದಿ: 13.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ನೋಟೀಸ್

ಕೆ.ಪಿ.ಪಿ. ಪೋರ್ಟಲ್ ಟೆಂಡರ್ ಪ್ರಕಟಣೆ (ಏಕ ಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ **TP Anirbanditha Grants** ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಏಕ-ಲಕೋಟೆಯಲ್ಲಿ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು **ದಿನಾಂಕ: 22.11.2024ರ ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
DIPR/CP/AAPL/RO3218/24-25

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಂ.ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 25536567/26096832/910/922 ಫ್ಯಾಕ್ಸ್: 080–25536105
ಇ–ಮೇಲ್: purchase@kmf.coop

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಹಾಲು ಮಹಾಮಂಡಳ ಬೆಂಗಳೂರು ಕಹಾಮ ವಿವಿಧ ಒಕ್ಕೂಟ/ಘಟಕಗಳಿಗೆ ಅವಶ್ಯವಿರುವ ಹಾಲು, ಮೊಸರು ಮತ್ತು ತುಪ್ಪದ ಫಿಲ್ಮ್‌ಗಳ ವಾರ್ಷಿಕ ಅವಧಿಗೆ ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

Sl. No.	Description	Kgs.	EMD (Rs.) Lakhs
1	**IFT No: KMF/PUR/CPC/ e-Proc./Tender-706/2024 Date: 11.11.2024** Supply of LDPE & LLDPE Opaque multi-coloured printed pouch film for packing different variants of milk for **Bamul & Mother Dairy**	2970000	45.68
2	**IFT No: KMF/PUR/CPC/ e-Proc./Tender-707/2024 Date: 11.11.2024** Supply of LDPE & LLDPE Opaque multi-coloured printed pouch film for packing different variants of milk for **Komul, Tumul &Shimul**	2131000	32.65
3	**IFT No: KMF/PUR/CPC/ e-Proc./Tender-708/2024 Date: 11.11.2024** Supply of LDPE & LLDPE Opaque multi-coloured printed pouch film for packing different variants of milk for **Manmul, Mymul, Chamul & Hamul**	1993000	31.41
4	**IFT No: KMF/PUR/CPC/ e-Proc./Tender-709/2024 Date: 11.11.2024** Supply of LDPE & LLDPE Opaque multi-coloured printed pouch film for packing different variants of milk for **Dkmul, Bemul, Damul, Rbkmul, Havmul, Bimul, Gumul & DDIL**	1326000	21.08
5	**IFT No: KMF/PUR/CPC/ e-Proc./Tender-710/2024 Date: 11.11.2024** Supply of 5 Layer Nylon Barrier film for **packing Ghee All Union/Units.**	249000	7.30

ಇ–ಪ್ರೊಕ್ಯೂರ್‌ಮೆಂಟ್ website https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ **11.12.2024 ರಂದು 05.00 ಗಂಟೆಯ** ಒಳಗೆ ಸಲ್ಲಿಸಬಹುದಾಗಿದೆ. ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್‌ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ, ಕನೀನಿನಿ, ಮಬದಕಾನಿ ವಿಭಾಗ ನಂ. 3, ಬ್ಯಾಹಟ್ಟಿ. ತಾ: ಹುಬ್ಬಳ್ಳಿ, ಜಿ: ಧಾರವಾಡ 580023. ಫೋನ್ : 0836–2315225 ಫ್ಯಾಕ್ಸ್ :2315226. ಇ–ಮೇಲ್: eemrbcc3byt@gmail.com
ಸಂ.: ಕನೀನಿನಿ/ಮಬದವಿ–3/ಎ.ಇ–1/ಇ–ಟೆಂಡರ/2024–25/1535
ದಿನಾಂಕ: 15/11/2024

ಟೆಂಡರ ಪ್ರಕಟಣೆ (2ನೇ ಕರೆ)
(ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ರವರ ಪರವಾಗಿ ಕಾರ್ಯನಿರ್ವಾಹಕ ಇಂಜನೀಯರ್ ಕನೀನಿನಿ, ಮಬದಕಾನಿ ವಿಭಾಗ ಸಂ.3, ಬ್ಯಾಹಟ್ಟಿ ವ್ಯಾಪ್ತಿಯ 2701 ಲೆಕ್ಕಶೀರ್ಷಿಕೆ ಅಡಿ ಈ ಕೆಳಗೆ ನಮೂದಿಸಿರುವ ಇಂಡೆಂಟ ನಂಬರಿನ 20 ಕಾಮಗಾರಿಗೆ ಶೇಕಡಾವಾರು ಟೆಂಡರನ್ನು ಏಕಲಕೋಟೆ ಪದ್ದತಿಯಲ್ಲಿ ಇ–ಪ್ರೋಕ್ಯೂರಮೆಂಟ ಮೂಲಕ ಆಹ್ವಾನಿಸಲಾಗಿದೆ.

Indent No: 1782, 1791, 1798, 1842, 1836, 1835, 1845, 1829, 1828, 1827, 1824, 1846, 1830, 1837, 1819, 1816, 1826, 1804, 1802, 1720 (2ನೇ ಕರೆ)

ಕಾಮಗಾರಿಯ ಅಂದಾಜು ಮೊತ್ತ: ರೂ. 1.00 ಲಕ್ಷ ರಿಂದ ರೂ. 28.00 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ. 2500/– ರಿಂದ ರೂ. 25,000/–ವರೆಗೆ. ಪರಿಶಿಷ್ಟ ಜಾತಿಗೆ ಸೇರಿದ ಕಾಮಗಾರಿಗಳ ಸಂಖ್ಯೆ–6 ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಕಾಮಗಾರಿಗಳ ಸಂಖ್ಯೆ–3

ಇ–ಪೋರ್ಟಲ್ ಮೂಲಕ ಟೆಂಡರನ್ನು ದಿನಾಂಕ 06/12/2024 ರ ಸಾಯಂಕಾಲ 4.00 ರ ತನಕ ಸಲ್ಲಿಸಬಹುದಾಗಿದೆ. ಬಿಡ್ ತೆರೆಯುವ ದಿನಾಂಕ: 09/12/2024 ರಂದು ಮುಂಜಾನೆ 11.00 ರಿಂದ. ಹಾಗೂ ಕಾಮಗಾರಿವಾರು ಇತರೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ವೆಬಸೈಟ್ ಮುಖೇನ http://kppp.karnataka.gov.in ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: 0836–2315225 ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ಇಂಜಿನೀಯರರು
ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ
ವಾ.ಸಾ.ಇ./ಧಾರವಾಡ/611/ ಮಣಿಪಾಲ್/2024–25

ಪಟ್ಟಣ ಪಂಚಾಯತ ಕಾರ್ಯಾಲಯ, ಯಕ್ಸಂಬಾ
ತಾ :ಚಿಕ್ಕೋಡಿ ಜಿ : ಬೆಳಗಾವಿ
ಕ್ರಸಂ: :ಪ.ಪಂ.ಯ/ಎಸ್.ಎಫ್.ಸಿ.ವಿ–1/2024–25/ ದಿನಾಂಕ: 15–11–2024

ಟೆಂಡರ ಪ್ರಕಟಣೆ

ಯಕ್ಸಂಬಾ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಪಟ್ಟಣ ಪಂಚಾಯತಿ ಎಸ್.ಎಫ್.ಸಿ ವಿಶೇಷ ಅನುದಾನ ಅಡಿಯಲ್ಲಿ ಈ ಕೆಳಗೆ ವಿವರಿಸಿದ ಕಾಮಗಾರಿಗಳಿಗೆ ಲೋಕೋಪಯೋಗಿ/ಪಂಚಾಯತರಾಜ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಸಿವ್ಹಿಲ್ ಗುತ್ತಿಗೆದಾರರಿಂದ ಕೆಡಬ್ಲ್ಯೂ–2, ಕೆಡಬ್ಲ್ಯೂ–3 ಮತ್ತು ಕೆಡಬ್ಲ್ಯೂ–4 ರ ಪ್ರಕಾರ ಟೆಂಡರನ್ನು ಆಹ್ವಾನಿಸಲಾಗಿದೆ.
ಕಾಮಗಾರಿಗಳ ಅಂದಾಜು ಮೊತ್ತ ರೂ. 20.0 ಲಕ್ಷದಿಂದ ರೂ. 250.00 ಲಕ್ಷಗಳವರೆಗೆ ಇರುತ್ತವೆ. 3)ರೂ.100.0 ಲಕ್ಷವರೆಗಿನ ಕಾಮಗಾರಿಗಳ ಕೊನೆಯ ಮತ್ತು ತೆರೆಯುವ ದಿನಾಂಕಗಳು, ಭರ್ತಿ ಮಾಡಿದ ಟೆಂಡರಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ:29/11/2024 ಸಾಯಂಕಾಲ 4.30 ಘಂಟೆಯವರೆಗೆ. ತಾಂತ್ರಿಕ ಟೆಂಡರ ಬಿಡ್‌ಗಳನ್ನು ತೆರೆಯುವ ದಿನಾಂಕ:02/12/2024 ರಂದು ಮದ್ಯಾಹ್ನ 11.00 ನಂತರ ತೆರೆಯಲಾಗುವುದು. ಆರ್ಥಿಕ ಟೆಂಡರ ಬಿಡ್‌ಗಳನ್ನು ತೆರೆಯುವ ದಿನಾಂಕ:03/12/2024 ರಂದು ಮದ್ಯಾಹ್ನ 11.00 ನಂತರ ತೆರೆಯಲಾಗುವುದು, 4)ರೂ.100.0 ಲಕ್ಷ ಮೇಲ್ಪಟ್ಟ ಕಾಮಗಾರಿಗಳ ಕೊನೆಯ ಮತ್ತು ತೆರೆಯುವ ದಿನಾಂಕಗಳು, ಭರ್ತಿ ಮಾಡಿದ ಟೆಂಡರಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 05/12/2024 ಸಾಯಂಕಾಲ 4.30 ಘಂಟೆಯವರೆಗೆ. ತಾಂತ್ರಿಕ ಟೆಂಡರ ಬಿಡ್‌ಗಳನ್ನು ತೆರೆಯುವ ದಿನಾಂಕ: 07/12/2024 ರಂದು ಮದ್ಯಾಹ್ನ 11.00 ನಂತರ ತೆರೆಯಲಾಗುವುದು. ಆರ್ಥಿಕ ಟೆಂಡರ ಬಿಡ್‌ಗಳನ್ನು ತೆರೆಯುವ ದಿನಾಂಕ: 09/12/2024 ರಂದು ಮದ್ಯಾಹ್ನ 11.00 ನಂತರ ತೆರೆಯಲಾಗುವುದು ಹೆಚ್ಚಿನ ಮಾಹಿತಿ ಕುರಿತು ಇ–ಪ್ರೊಕ್ಯರಮೆಂಟ್ ವೆಬ್‌ಸೈಟ್ https://www.eproc.karnataka.gov.in ಲಾಗಿನ್ ಆಗಿ, ಕಚೇರಿ ವೆಬಸೈಟ್ www.exambatown.mrc.gov.in ನಲ್ಲಿ ಅಥವಾ ಪಟ್ಟಣ ಪಂಚಾಯತ ಕಾರ್ಯಾಲಯವನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/–ಮುಖ್ಯಾಧಿಕಾರಿ — **ಪಟ್ಟಣ ಪಂಚಾಯತ ಯಕ್ಸಂಬಾ**
ಸಹಿ/–ಅಧ್ಯಕ್ಷರು — **ಪಟ್ಟಣ ಪಂಚಾಯತ ಯಕ್ಸಂಬಾ**
DIPR/BGM/RO-NO-1141/KSMCA/2024-25

ಚಿಂತಾಮಣಿಗೂ ಹಬ್ಬಿದ ವಕ್ಫ್ ವಿವಾದ

ಭುಗಿಲೆದ್ದ ವಕ್ಫ್ ಆಸ್ತಿ ಗಲಾಟೆ, ರೈತರ- ಪೊಲೀಸರ ಜಟಾಪಟಿ | ಎರಡು ಗುಂಪುಗಳ ಮಧ್ಯೆ ಮಾತಿನ ಚಕಮಕಿ | ದಲಿತ ಕುಟುಂಬಕ್ಕೂ ಜಾಮಿಯಾ ಮಸೀದಿ ಸಮಿತಿಗೂ ಗಲಾಟೆ

ಚಿಂತಾಮಣಿ: ರಾಜ್ಯಮಟ್ಟದಲ್ಲಿ ಸದ್ದು ಮಾಡುತ್ತಿರುವ ವಕ್ಫ್ ಆಸ್ತಿಯ ಕಿಚ್ಚು ಇದೀಗ ಜಿಲ್ಲೆಯ ಚಿಂತಾಮಣಿಗೂ ವ್ಯಾಪಿಸಿದ್ದು ರೈತರು ಪೊಲೀಸರ ನಡುವೆ ಸಂಘರ್ಷಕ್ಕೆ ಕಾರಣವಾಗಿದೆ.

ತಾಲೂಕಿನ ತಿಮ್ಮಸಂದ್ರ ಗ್ರಾಮದಲ್ಲಿನ ವಕ್ಫ್ ಬೋರ್ಡ್ ಆಸ್ತಿ ವಿವಾದ ಭುಗಿಲೆದ್ದಿದ್ದು, ಕೆಲವು ರೈತರು ತಮ್ಮ ಜಮೀನುಗಳನ್ನು ಉಳುಮೆ ಮಾಡಲು ಮುಂದಾದಾಗ, ಮುಸ್ಲಿಂ ಮುಖಂಡರು ಆ ಜಾಗ ತಮ್ಮದು. ಅಲ್ಲಿ ಯಾರೂ ಉಳುಮೆ ಮತ್ತು ಇತರ ಚಟುವಟಿಕೆ ನಡೆಸಬಾರದೆಂದು ತಗಾದೆ ತೆಗೆದಿದ್ದಾರೆ. ಈ ಹಿನ್ನೆಲೆಯಲ್ಲಿ ಎರಡು ಗುಂಪುಗಳ ಮಧ್ಯೆ ಮಾತಿನ ಚಕಮಕಿ ನಡೆದು ಸ್ಥಳದಲ್ಲಿ ಬಿಗುವಿನ ವಾತಾವರಣವಿತ್ತು. ಪೊಲೀಸರು ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದ್ದಾರೆ.

70 ವರ್ಷಗಳಿಂದ ಉಳುಮೆ: ಕಳೆದ 70 ವರ್ಷಗಳಿಂದ ನಾವು ಈ ಜಮೀನಿನಲ್ಲಿ ಉಳುಮೆ ಮಾಡಿ ಜೀವನ ಮಾಡುತ್ತಿದ್ದೇವೆ. ವಕ್ಫ್ ಮಂಡಳಿಯವರು ನಮ್ಮ ಅತಿಕ್ರಮ ಪ್ರವೇಶ ಮಾಡಿ ನಮ್ಮ ಜಮೀನಿಗೆ ಮುಳ್ಳುತಂತಿ ಬೇಲಿಯನ್ನು ಹಾಕಿ ತೊಂದರೆ ನೀಡುತ್ತಿದ್ದಾರೆಂದು ತಿಮ್ಮಸಂದ್ರದ ಬಡ ದಲಿತ ಕುಟುಂಬ ಆರೋಪಿಸಿದೆ.

ಜಮೀನಿಗೆ ಹಾಕಿದ ಬೇಲಿಯನ್ನು ಕಿತ್ತು ಹಾಕಿ ಟ್ರಾಕ್ಟರ್ ಮೂಲಕ ಉಳುಮೆ ಮಾಡುತ್ತಿದ್ದ ವೇಳೆ

ಚಿತ್ರ ವಿವರ: ತಿಮ್ಮಸಂದ್ರ ಗ್ರಾಮದಲ್ಲಿ ವಕ್ಫ್ ವಿಚಾರವಾಗಿ ಮಸೀದಿ ಸಮಿತಿ ಸದಸ್ಯರು ಮತ್ತು ದಲಿತ ಕುಟುಂಬದ ನಡುವೆ ವಾಗ್ವಾದ ನಡೆದ ಕಾಲಕ್ಕೆ ಪೊಲೀಸರು ಮಧ್ಯಪ್ರವೇಶಿಸಿದರು.

ಸ್ಥಳಕ್ಕೆ ಜಾಮಿಯಾ ಮಸೀದಿ ಸಮಿತಿಯ ಸದಸ್ಯರು ವಾಗ್ವಾದಕ್ಕೆ ಇಳಿದಾಗ ತಳ್ಳಾಟ- ನೂಕಾಟ ನಡೆದು ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

ಪೊಲೀಸರ ಮನವೊಲಿಕೆ: ಸ್ಥಳಕ್ಕೆ ಬಂದ ಚಿಂತಾಮಣಿ ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ಶಿವರಾಜ್ ಮತ್ತು ಸಿಬ್ಬಂದಿ ದಲಿತರು ಹಾಗೂ ಜಾಮಿಯಾ ಮಸೀದಿ ಸಮಿತಿಯ ಸದಸ್ಯರಿಗೆ, ಜಮೀನಿನ ದಾಖಲೆ ತಂದರೆ ಪರಿಶೀಲಿಸಿ ಅರ್ಹರಿಗೆ ನ್ಯಾಯ ಕೊಡಿಸುವುದಾಗಿ ಭರವಸೆ ನೀಡಿದ ನಂತರ ಎರಡೂ ಕಡೆಯವರು ವಾಪಸ್ಸು ತೆರಳಿದ್ದಾರೆ.

ಸ್ಥಳದಲ್ಲಿ ಮುಂಜಾಗ್ರತಾ ಕ್ರಮವಾಗಿ ಗ್ರಾಮದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. ಡಿವೈಎಸ್ಪಿ ಮುರಳಿಧರ್ ನೇತೃತ್ವದಲ್ಲಿ ಪೊಲೀಸರು ಸ್ಥಳದಲ್ಲಿ ಬಿಗಿ ಬಂದೋಬಸ್ತ್ ಮಾಡಿದ್ದಾರೆ.

ಇಡೀ ದಿನ ಜಿಟಿಡಿ ನಾಪತ್ತೆ

ಮೈಸೂರಿಗೆ ಕೇಂದ್ರ ಸಚಿವ ಕುಮಾರಸ್ವಾಮಿ ಭೇಟಿ

ಮೈಸೂರು: ಜೆಡಿಎಸ್ ಪಕ್ಷದ ಕೋರ್ ಕಮಿಟಿ ಅಧ್ಯಕ್ಷ ಹಾಗೂ ಶಾಸಕ ಜಿ.ಟಿ. ದೇವೇಗೌಡರ ಮುನಿಸು ಮತ್ತೆ ಮುಂದುವರೆದಿದ್ದು, ಇದೀಗ ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ಅವರಿಂದ ಅಂತರ ಕಾಯ್ದುಕೊಂಡಿದ್ದಾರೆ.

ಕೇಂದ್ರ ಸಚಿವ ಹೆಚ್ ಡಿಕೆ ಶುಕ್ರವಾರ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿದಾಗಲೂ ಜಿ.ಟಿ. ದೇವೇಗೌಡ ಬಂದಿಲ್ಲ. ಈ ಮೂಲಕ ಕುಮಾರಸ್ವಾಮಿ ಅವರೊಂದಿಗೆ ಅಂತರ ಕಾಯ್ದುಕೊಳ್ಳುವ ಪ್ರಯತ್ನ ನಡೆದಿದೆ.

ಮಾತ್ರವಲ್ಲ, ಮೈಸೂರಿನ ದಟ್ಟಗಳ್ಳಿಯಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಕಾರ್ಯಕ್ರಮ ನಡೆಯುತ್ತಿದ್ದು, ಮೈಸೂರಿನಲ್ಲಿಯೇ ಇದ್ದರೂ ಶಾಸಕ ಜಿ.ಟಿ.ದೇವೇಗೌಡರು ಕಾರ್ಯಕ್ರಮಕ್ಕೆ ಹಾಜರಾಗಿಲ್ಲ.

ದಸರಾ ಸಂದರ್ಭದಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಶಾಸಕ ಜಿ.ಟಿ. ದೇವೇಗೌಡ ಹಾಡಿ ಹೊಗಳಿದ್ದರು. ನಾಡಹಬ್ಬ ದಸರಾ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಪರ ಬ್ಯಾಟಿಂಗ್ ಮಾಡಿ ಖುದ್ದು ಕುಮಾರಸ್ವಾಮಿಗೆ ತಿರುಗೇಟು ಕೊಟ್ಟಿದ್ದರು. ಇದಾದ ಬಳಿಕ ಜೆಡಿಎಸ್ ಸಭೆ ಸಮಾರಂಭ, ನಾಯಕರು, ಮುಖಂಡರ ಜೊತೆ ಜಿ.ಟಿ. ದೇವೇಗೌಡ ಕಾಣಿಸಿಕೊಂಡಿರಲಿಲ್ಲ. ಈ ಮಧ್ಯೆ ಉಪಚುನಾವಣೆಗೆ ಸ್ಟಾರ್ ಪ್ರಚಾರಕರ ಪಟ್ಟಿಯಿಂದಲೂ ಜಿ.ಟಿ.ದೇವೇಗೌಡರ ಹೆಸರು ಕೈಬಿಡಲಾಗಿತ್ತು. ಹೀಗಾಗಿ ಚನ್ನಪಟ್ಟಣ ಚುನಾವಣೆಯಿಂದ ಜಿ.ಟಿ. ದೇವೇಗೌಡರು ಅಂತರ ಕಾಯ್ದುಕೊಂಡಿದ್ದರು.

ಬೆಳಗಾವಿ: ನೌಕರ ಆತ್ಮಹತ್ಯೆ - ತಹಸೀಲ್ದಾರ್ ಕೆಲಸಕ್ಕೆ ಹಾಜರು

ಬೆಳಗಾವಿ: ತಹಸೀಲ್ದಾರ್ ಕಚೇರಿಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದ ಎಸ್ ಡಿ ಎ ನೌಕರ ರುದ್ರಣ್ಣ ಯಡವಣ್ಣವರ ಆತ್ಮಹತ್ಯೆ ಪ್ರಕರಣದ ಪ್ರಮುಖ ಆರೋಪಿ ತಹಸೀಲ್ದಾರ್ ಬಸವರಾಜ ನಾಗರಾಳ ಶುಕ್ರವಾರ ಕರ್ತವ್ಯಕ್ಕೆ ಮರಳಿದ್ದಾರೆ. ನೌಕರ ಆತ್ಮಹತ್ಯೆ ದಿನ ತಲೆಮರೆಸಿಕೊಂಡಿದ್ದ ತಹಸೀಲ್ದಾರ್‌ತಮ್ಮ ಕಚೇರಿಯಲ್ಲಿ ಪ್ರತ್ಯಕ್ಷರಾಗಿದ್ದಾರೆ. ಪ್ರಕರಣದಲ್ಲಿ ಗುರುವಾರ ಸ್ಥಳೀಯ ನ್ಯಾಯಾಲಯ ದಲ್ಲಿ ನಿರೀಕ್ಷಣಾ ಜಾಮೀನು ಪಡೆದಿದ್ದರು.

ಕಳೆದ ನ.5ರಂದು ಬೆಳಿಗ್ಗೆ ನಗರದ ತಹಸೀಲ್ದಾರ್ ಕಚೇರಿಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದ ರುದ್ರಣ್ಣ ತನ್ನ ಸಾವಿಗೆ ತಹಶೀಲ್ದಾರ ಬಸವರಾಜ ನಾಗರಾಳ ಸೇರಿ ಮೂವರ ಹೆಸರು ಬರೆದು ವಾಟ್ಸಪ್ ಸಂದೇಶ ಕಳುಹಿಸಿದ್ದರು. ಆ ನಂತರ ತಹಸೀಲ್ದಾರ್ ವಿರುದ್ಧ ಖಡೇಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಬಾಲಕಿಯ ಮೇಲೆ ವೃದ್ಧನಿಂದ ಅತ್ಯಾಚಾರ

ಕಲಬುರಗಿ: ಕಾಮುಕ ವೃದ್ಧನೊಬ್ಬ ಮನೆಗೆ ನುಗ್ಗಿ 15 ವರ್ಷದ ಅಪ್ರಾಪ್ತ ವಯಸ್ಸಿನ ಬಾಲಕಿಯ ಮೇಲೆ ಅತ್ಯಾಚಾರ ಮಾಡಿದ ಘಟನೆ ಆಳಂದ ತಾಲೂಕಿನ ನರೋಣ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮದಲ್ಲಿ ನಡೆದಿದೆ. 65 ವರ್ಷದ ವೃದ್ಧ ಗೋರಖನಾಥ್ ಚೌಹಾಣ್ ಯಾರೂ ಇಲ್ಲದ ವೇಳೆ ಮನೆಗೆ ನುಗ್ಗಿ ಈ ದುಷ್ಕೃತ್ಯ ನಡೆಸಿದ್ದಾನೆ. ಆರೋಪಿಯನ್ನು ನರೋಣ ಪೊಲೀಸರು ಬಂಧಿಸಿದ್ದಾರೆ.

ಮುಡಾ ಹಗರಣ: ಗುತ್ತಿಗೆ ನೌಕರ ವಜಾ

ನಿವೇಶನ ಅಕ್ರಮ ಮಾರಾಟ ಪ್ರಕರಣದಲ್ಲಿ ಭಾಗಿ ಆರೋಪ | ಎರಡು ಕಡೆ ಕೆಲಸ, ಸಂಬಳ ಪಡೆಯುತ್ತಿದ್ದ ಗುತ್ತಿಗೆ ನೌಕರ ಕುಮಾರ್

ಮೈಸೂರು: ಮುಡಾ ಹಗರಣಕ್ಕೆ ಸಂಬಂಧಪಟ್ಟಂತೆ ಗುತ್ತಿಗೆ ನೌಕರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಬಿ.ಕೆ.ಕುಮಾರ್ ನನ್ನು ಮೈಸೂರು ಪಾಲಿಕೆ ಆಯುಕ್ತ ರೆಹಮಾನ್ ಷರೀಫ್ ವಜಾಗೊಳಿಸಿದ್ದಾರೆ.

ಮುಡಾದಲ್ಲಿ ಅಕ್ರಮ ಸೈಟ್ ಮಾರಾಟದಲ್ಲಿ ಬಿ.ಕೆ.ಕುಮಾರ್ ಸಹ ಭಾಗಿಯಾಗಿದ್ದ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಇದೀಗ ಮೈಸೂರು ಪಾಲಿಕೆ ಆಯುಕ್ತರು ಆತನನ್ನು ಸೇವೆಯಿಂದ ವಜಾಗೊಳಿಸಿ ಆದೇಶ ಹೊರಡಿಸಿದ್ದಾರೆ.

ಏಕಕಾಲದಲ್ಲಿ 2 ಸರಕಾರಿ ನೌಕರಿ: ಕಚೇರಿ ಕೆಲಸಕ್ಕಾಗಿ ಬಿ.ಕೆ. ಕುಮಾರ್ ಮುಡಾಗೆ ನೇಮಕವಾಗಿ ಬಂದಿದ್ದ. ಮುಡಾದಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಪಾಲಿಕೆಯಲ್ಲೂ ಕೆಲಸ ಗಿಟ್ಟಿಸಿಕೊಂಡು ಅಲ್ಲೂ ಕೂಡ ಸಂಬಳ ಪಡೆಯುತ್ತಿದ್ದ. ಏಕಕಾಲದಲ್ಲಿ ಎರಡು ಸರಕಾರಿ ಕಚೇರಿಗಳಲ್ಲಿ ಕುಮಾರ್ ಕೆಲಸ ಮಾಡುತ್ತಿದ್ದು, ನಿಯಮ ಉಲ್ಲಂಘಿಸಿ ಎರಡೂ ಕಡೆ ವೇತನ ಪಡೆಯುತ್ತಿದ್ದ. ಈ ಹಿನ್ನೆಲೆಯಲ್ಲಿ ಇದೀಗ ಆತನನ್ನು ವಜಾಗೊಳಿಸಲಾಗಿದೆ. ಬಿ.ಕೆ.ಕುಮಾರ್ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಬೇವಿನಕೊಪ್ಪ ಗ್ರಾಮದ ನಿವಾಸಿ ಎಂದು ಹೇಳಲಾಗಿದ್ದು, ಈತ ಮುಡಾದ ಅಕ್ರಮಗಳಲ್ಲಿ ಭಾಗಿಯಾಗಿದ್ದಾನೆ ಎಂದು ಆರೋಪಿಸಲಾಗಿದೆ.

ಅಕ್ರಮದಲ್ಲಿ ನೆರವು ಆರೋಪ

ಪ್ರಾಧಿಕಾರದಲ್ಲಿ ಹಿಂದಿನ ಆಯುಕ್ತರಿಗೆ ಖಾಲಿ ನಿವೇಶನಗಳ ಬಗ್ಗೆ ಮಾಹಿತಿ ಹಾಗೂ ಮಂಜೂರಾತಿ ಮಾಡಲು ಅಗತ್ಯವಿದ್ದ ದಾಖಲೆಗಳನ್ನು ತಂದುಕೊಡುತ್ತಿದ್ದ. ಮುಡಾದಲ್ಲಿ ಸಂರಕ್ಷಿಸಿ ಇಡಲಾಗಿದ್ದ 8,000 ಸೈಟುಗಳ ಬಗ್ಗೆ ಆತನಿಗೆ ಮಾಹಿತಿ ಇತ್ತು ಎನ್ನಲಾಗಿದೆ.

50:50 ಅನುಪಾತ ನಿಯಮದಲ್ಲಿ ಈ ಸೈಟ್ ಮಂಜೂರು ಮಾಡಿದ ಆಯುಕ್ತರು ಹಾಗೂ ಮುಡಾ ಕಚೇರಿಯ ಎಲ್ಲ ವಿಭಾಗದಲ್ಲೂ ಕುಮಾರ್ ಪಾರುಪತ್ಯ ನಡೆಸುತ್ತಿದ್ದ. ಹಿಂದಿನ ಆಯುಕ್ತರಾದ ನಟೇಶ್ ಹಾಗೂ ದಿನೇಶ್ ಕುಮಾರ್‌ಗೆ ಅಕ್ರಮದಲ್ಲಿ ಸಹಾಯ ಮಾಡಿರುವ ಆರೋಪ ಕೇಳಿಬಂದಿದೆ. ಹಾಗಾಗಿ ಮೈಸೂರು ಪಾಲಿಕೆ ಆಯುಕ್ತರು ಇದೀಗ ಆತನನ್ನು ವಜಾಗೊಳಿಸಿ ಆದೇಶಿಸಿದ್ದಾರೆ. ಇದೇ ವಿಚಾರಕ್ಕೆ ಇಡಿ ಅಧಿಕಾರಿಗಳು ಕುಮಾರನನ್ನು ವಿಚಾರಣೆಗೆ ಒಳಪಡಿಸಿದ್ದರು. ಸದ್ಯ ಕ್ರಿಮಿನಲ್ ಕೇಸ್ ದಾಖಲಿಸುವುದನ್ನು ಬಾಕಿ ಇರಿಸಿ ಕೆಲಸದಿಂದ ಆತನನ್ನು ವಜಾಗೊಳಿಸಿದ್ದಾರೆ.

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ವಾಲ್ಮೀಕಿ ನಿಗಮದಲ್ಲಿ ಕೋಟಿ ಕೋಟಿ ಲೂಟಿ ಹೊಡೆದು ಜೈಲಿಗೆ ಹೋಗಿ ಬೇಲ್ ಮೇಲೆ ಹೊರ ಬಂದಿರುವ ಭ್ರಷ್ಟ ನಾಗೇಂದ್ರಗೆ ಮತ್ತೆ ಮಂತ್ರಿಗಿರಿ ನೀಡುವುದಾಗಿ ಸಿಎಂ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಜೈಲಿಗೆ ಹೋಗಿ ಬೇಲ್ ಮೇಲೆ ಬಂದವರಿಗೆ ರಾಜಾತಿಥ್ಯ ಗ್ಯಾರಂಟಿ. ಜೈಲಿಗೆ ಹೋಗಿ ಬಂದ ಮೇಲೆಯೇ ಡಿ.ಕೆ. ಶಿವಕುಮಾರ್‌ಗೆ ಕಾಂಗ್ರೆಸ್ ರಾಜ್ಯಾಧ್ಯಕ್ಷಗಿರಿ, ಡಿಸಿಎಂ ಪಟ್ಟ ಸಿಕ್ಕಿದೆ. ನಾಗೇಂದ್ರ ಮತ್ತೆ ಸಚಿವರಾದರೆ ವಾಲ್ಮೀಕಿ ನಿಗಮವೇ ಇಲ್ಲದಂತೆ ನಾಪತ್ತೆ ಆಗುವುದು ಗ್ಯಾರಂಟಿ.

ರಘುಪ್ರವೀಣ, ಕನಕಪುರ

ಪೋಕ್ಸೋ ಪ್ರಕರಣದ ಆರೋಪಿ ಯಡಿಯೂರಪ್ಪ ಅವರಿಗೆ ರಾಷ್ಟ್ರಮಟ್ಟದ ಹುದ್ದೆ ಕೊಟ್ಟಿದ್ದಾರೆ. ನಿಮಗೆ ಯಾವ ನೈತಿಕತೆ ಇದೆ ಬೇರೆಯವರ ಬಗ್ಗೆ ಹೇಳೋದಕ್ಕೆ..

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ :** ಬೆಂಗಳೂರು

ಸಮಸ್ಯೆಯೇನು..?

- ವೈಟ್‌ಫೀಲ್ಡ್ ಮುಖ್ಯ ರಸ್ತೆ, ಪ್ರೆಸ್ಟೀಜ್ ಅಪಾರ್ಟ್‌ಮೆಂಟ್ ಮುಂಭಾಗದಲ್ಲಿ ಹಾದುಹೋಗಿರುವ ರಾಜಕಾಲುವೆಯ ದುರಸ್ತಿ.
- **ಇಲಾಖೆ:** ಮಹಾನಗರ ಪಾಲಿಕೆ
- **ಪರಿಹಾರ:** ಪ್ರೆಸ್ಟೀಜ್ ವೋಜೋನ್ ಅಪಾರ್ಟ್‌ಮೆಂಟ್ ಮುಂಭಾಗದ ರಸ್ತೆಯಿಂದ ಮತ್ತೊಂದು ಕಾಲುವೆಯನ್ನು ಸೇರಿ ದಕ್ಷಿಣ ಪಿನಾಕಿನಿ ನದಿಯವರೆಗೆ ಸೇರುವ ಕಾಲುವೆಯನ್ನು ಅಭಿವೃದ್ಧಿಗೊಳಿಸಲು 4.5 ಕೋಟಿ ರು. ಅನುದಾನದಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಆಹ್ವಾನಿಸಬೇಕಾಗಿದೆ. ಟೆಂಡರ್ ಪ್ರಕ್ರಿಯೆ ಮುಕ್ತಾಯದ ನಂತರ ರಾಜಕಾಲುವೆ ದುರಸ್ತಿ ಕಾಮಗಾರಿ ಕೈಗೊಳ್ಳಲಾಗುತ್ತದೆ.

ಸಮಾಚಾರ ಸಣ್ಣದಲ್ಲ

ಪುರುಷರಿಗೆ ಉಚಿತ ಬಸ್ ಪ್ರಯಾಣ ಇಲ್ಲ

ಹುಬ್ಬಳ್ಳಿ: ಶಕ್ತಿ ಯೋಜನೆಯಡಿ ಸಾರಿಗೆ ಸಂಸ್ಥೆಗಳ ಬಸಗಳಲ್ಲಿ ಪುರುಷರಿಗೆ ಉಚಿತ ಪ್ರಯಾಣದ ಸೌಲಭ್ಯ ಕಲ್ಪಿಸುವ ಪ್ರಸ್ತಾವನೆ ಇಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟಪಡಿಸಿದರು. ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಸಂವಾದ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ವಿಷಯ ಪ್ರಸ್ತಾಪಿಸಿದ್ದಾರೆ. ಅವರನ್ನು ಭೇಟಿ ಮಾಡಿದಾಗ ಈ ಕುರಿತು ವಿಚಾರಿಸುತ್ತೇನೆ ಎಂದರು. ಕಾಂಗ್ರೆಸ್ ಶಾಸಕರನ್ನು ಖರೀದಿಸುವ ಹಿಂದೆ ಕಾಂಗ್ರೆಸ್ ಮುಖಂಡರೇ ಇದ್ದಾರೆ ಎಂಬ ಬಿಜೆಪಿ ಟೀಕೆಯನ್ನು ತಳ್ಳಿಹಾಕಿದ ಸಚಿವರು, ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು ಎಂದು ಹೇಳಿದರು.

ಕಾರ್ತಿಕ್ ಆತ್ಮಹತ್ಯೆ ಜಾಮೀನಿಗೆ ಅರ್ಜಿ

ಮಂಗಳೂರು: ಪಕ್ಷಿಕೆರೆಯಲ್ಲಿ ಕಾರ್ತಿಕ ಭಟ್ ತನ್ನ ಪತ್ನಿ ಪ್ರಿಯಾಂಕಾ ಹಾಗೂ ಮಗು ಹೃದಯ್‌ನನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡ ಪ್ರಕರಣದಲ್ಲಿ ಬಂಧಿತರಾಗಿರುವ ಆತನ ತಾಯಿ ಶ್ಯಾಮಲಾ ಭಟ್ ಹಾಗೂ ಅಕ್ಕ ಕಣ್ಮಣಿ ಜಿ.ರಾವ್ ಜಾಮೀನಿಗಾಗಿ ದಕ್ಷಿಣ ಕನ್ನಡದ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಆರೋಪಿಗಳು ಸಲ್ಲಿಸಿದ ಅರ್ಜಿಯನ್ನು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ನಾಲ್ಕನೇ ಹೆಚ್ಚುವರಿ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ವರ್ಗಾಯಿಸಿದೆ.

{ಸಂತೋಷ್ ಲಾಡ್} ಸಚಿವ

ಹುಬ್ಬಳ್ಳಿ - ಧಾರವಾಡ ನಡುವೆ ಬಿಆರ್‌ಟಿಎಸ್ (ಬಸ್ ರ‍್ಯಾಪಿಡ್ ಟ್ರಾನ್ಸಿಸ್ಟ್ ಸಿಸ್ಟಂ) ಬದಲು ಎಲ್‌ಆರ್‌ಟಿ (ಲೈಟ್ ರೈಲ್ ಟ್ರಾನ್ಸಿಟ್) ತರುವ ಕುರಿತು ಹಾಗೂ ಅದರ ಸಾಧಕ-ಬಾಧಕಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ, ಮುಂದಿನ ಕ್ರಮ ಕೈಗೊಳ್ಳಲಾಗುವುದು.



ಬ್ಯಾಟರಿ ಚಾಲಿತ, ರಿಮೋಟ್ ಮೂಲಕ ನಿಯಂತ್ರಿಸಬಹುದಾದ ಯಂತ್ರ | ಜಿಕೆವಿಕೆ ಕೃಷಿಮೇಳಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಜನರ ಭೇಟಿ

ಕೃಷಿಮೇಳ: ಮೆಚ್ಚುಗೆ ಪಡೆದ ಕೃಷಿಬಾಟ್ ಯಂತ್ರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಈ ಬಾರಿಯ ಕೃಷಿಮೇಳದಲ್ಲಿ ವಿಶೇಷ ರೀತಿಯ ಕಡಲೆಕಾಯಿ ಬಿತ್ತನೆಯಂತ್ರ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿ ಪ್ರದರ್ಶನಕ್ಕೆ ಇರಿಸಿದ್ದು, ಜನರನ್ನು ಆಕರ್ಷಿಸುತ್ತಿದೆ. ಈ ಬ್ಯಾಟರಿ ಚಾಲಿತ ಯಂತ್ರಕ್ಕೆ 'ಕೃಷಿಬಾಟ್' ಎಂದು ಹೆಸರಿಡಲಾಗಿದ್ದು, ರಿಮೋಟ್ ವ್ಯವಸ್ಥೆ ಮೂಲಕ ನಿಯಂತ್ರಿಸಬಹುದು. ಈ ಯಂತ್ರ ಸಣ್ಣ ಹಾಗೂ ಮಧ್ಯಮ ವರ್ಗದ ರೈತರಿಗೆ ಅನುಕೂಲವಾಗಲಿದ್ದು, ಹಳ್ಳಿಗಾಡಿನ ಕೃಷಿ ಕಾರ್ಮಿಕರ ಸಮಸ್ಯೆ ನೀಗಿಸುವ ಕೆಲಸ ಮಾಡಲಿದೆ. ನೆಲಗಡಲೆ ಸುಲಭವಾಗಿ ಬಿತ್ತನೆ ಮಾಡಲು ಅನುಕೂಲವಾಗುವಂತೆ ತಯಾರಾಗಿರುವ ಬ್ಯಾಟರಿಚಾಲಿತ ಕೃಷಿಬಾಟ್ ಕೂಲಿಕಾರರ ಅಗತ್ಯವಿಲ್ಲದೆ ಕಾರ್ಯಾಚರಣೆ ನಡೆಸುತ್ತದೆ.ಇದರಿಂದ ಬೀಜ ಬಿತ್ತನೆ ಮಾಡುವುದರ ಜೊತೆಗೆ ರಸಗೊಬ್ಬರ ಕೂಡ ಸಮಾನವಾಗಿ ಸಿಂಪಡಿಸಬಹುದು. ಕೆಲವೊಮ್ಮೆ ಮಳೆ ಬಿದ್ದಾಗ ಬಿತ್ತನೆ ಮಾಡಲು ಸಕಾಲದಲ್ಲಿ ಕೂಲಿಕಾರರು ಸಿಗದೆ ತೊಂದರೆಪಡುತ್ತಿರುವ ರೈತರಿಗೆ ಈ ಯಂತ್ರ ಸಹಕಾರಿ ಯಾಗಲಿದೆ.

ಸುಧಾರಿತ ಬಿತ್ತನೆ ತಂತ್ರಜ್ಞಾನ: ಕೃಷಿಬಾಟ್ ಸುಧಾರಿತ ಬಿತ್ತನೆ ತಂತ್ರಜ್ಞಾನ ಹೊಂದಿದೆ. ಈ ಯಂತ್ರ ಬಳಸಿ ಪ್ರತಿ ಬೀಜ ಬೇಕಾಗುವ ಆಳ ಮತ್ತು ಗರಿಷ್ಠ ಇಳುವರಿಯನ್ನು ಮನಗಂಡು ಸಮಾನಾಂತರದಲ್ಲಿ ನೀಡಬಹುದಾಗಿದೆ. ಕೃಷಿ ಬಾಟ್ ಯಂತ್ರದ ಸಹಾಯದಿಂದ ವ್ಯರ್ಥ ಬೀಜ ನೆಡುವುದನ್ನು ತಡೆಯಬಹುದಾಗಿದೆ. ಇದು ಕೇವಲ ಬೀಜಗಳನ್ನು ನೆಡುವುದಲ್ಲದೆ, ಗೊಬ್ಬರ ಹಾಕಲು ಕೂಡ ಬಳಕೆಯಾಗಲಿದೆ.

ಕೃಷಿ ಬಾಟ್ ಅನ್ನು ಸಂಪೂರ್ಣವಾಗಿ ರಿಮೋಟ್ ಸಿಸ್ಟಂ ಮೂಲಕ ನಿಯಂತ್ರಿಸಬಹುದಾಗಿದೆ. ಇದರಿಂದ ಗೊಬ್ಬರ ಸಿಂಪಡಿಸುವುದು ಮತ್ತು ಕೃಷಿಯ ಸಂಪೂರ್ಣ ಪ್ರಕ್ರಿಯೆ ದೂರದಿಂದಲೇ ಸುಲಭವಾಗಿ ನಿಯಂತ್ರಿಸಬಹುದಾಗಿದೆ. ಇಡೀ ದಿನದ ಕಾರ್ಯಾಚರಣೆಗೆ ಇದನ್ನು ಸಜ್ಜುಗೊಳಿಸಲಾಗಿದೆ. ಈ ಯಂತ್ರದಲ್ಲಿ ಬ್ಯಾಟರಿ ಬದಲಿಸಲು ಕೂಡ ಅವಕಾಶ ಮಾಡಿಕೊಡಲಾಗಿದೆ. ನಾನಾ ಬೆಳೆಗಳಿಗೆ ರಸಗೊಬ್ಬರ ಹಾಕಲು ಸ್ವಯಂಚಾಲಿತವಾಗಿ ರಗೊಬ್ಬರ ಹಾಕಲು ಕೂಡ ಇದು ಸಹಕಾರಿಯಾಗಿದೆ. ಈ ಉಪಕರಣ ಗೊಬ್ಬರ 7 ಮೀಟರ್ ದೂರದವರೆಗೆ ಹರಡುತ್ತದೆ. ಶಿಫಾರಸು ಮಾಡಿದ ರಸಗೊಬ್ಬರ ನಕ್ಷೆ ಕೂಡ ಒದಗಿಸಲಿದೆ. ಯಾವುದೇ ರಸಗೊಬ್ಬರ ವ್ಯರ್ಥವಾಗದಂತೆ ಏಕರೂಪದ ವಿತರಣೆಗೆ ಇದು ಸಹಾಯ ಮಾಡಲಿದೆ. 20 ನಿಮಿಷಗಳಲ್ಲಿ 1 ಎಕರೆ ವಿಸ್ತೀರ್ಣಕ್ಕೆ ಗೊಬ್ಬರ ಹರಡಬಲ್ಲ ಸಾಮರ್ಥ್ಯ ಕೃಷಿ ಕೃಷಿಬಾಟ್ ಯಂತ್ರಕ್ಕೆ ಇದೆ.

ಬೆಂಗಳೂರಿನ ಜಿಕೆವಿಕೆಯಲ್ಲಿ ನಡೆದಿರುವ ಕೃಷಿಮೇಳದಲ್ಲಿ ಕಾಲಿನಿಂದ ತೆಂಗಿನಕಾಯಿ ಸುಲಿಯುವ ಯಂತ್ರ ಜನರ ಗಮನ ಸೆಳೆಯುತ್ತಿದೆ.

ನಾಟಿಕೋಳಿಗಳಿಗಿಂತ ಹೆಚ್ಚು ಪ್ರಮಾಣದಲ್ಲಿ ಬೆಳೆಯುವ ಬ್ರಾಯ್ಲರ್ ಕೋಳಿ ಕೃಷಿಮೇಳದಲ್ಲಿ ಜನರ ಮತ್ತೊಂದು ಆಕರ್ಷಣೆಯಾಗಿದೆ..

ಕಾಲಿನಿಂದ ತೆಂಗಿನಕಾಯಿ ಸುಲಿಯುವ ಯಂತ್ರ

ಕೃಷಿ ವಿಶ್ವವಿದ್ಯಾಲಯದಲ್ಲಿ ಕೃಷಿಮೇಳ ನಡೆಯುತ್ತಿದ್ದು, ಮೇಳದಲ್ಲಿ ಕೃಷಿಗೆ ಸಂಬಂಧಿಸಿದ ಯಂತ್ರೋಪಕರಣಗಳನ್ನ ಪ್ರದರ್ಶನಕ್ಕೆ ಇಡಲಾಗಿದೆ. ಇವುಗಳಲ್ಲಿ ಕಾಲಿನಿಂದ ತೆಂಗಿನಕಾಯಿ ಸುಲಿಯುವ ಯಂತ್ರ ಜನರ ಗಮನ ಸೆಳೆಯುತ್ತಿದೆ. ಕೃಷಿ ಇಂಜಿನಿಯರಿಂಗ್ ಮಹಾವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಈ ಯಂತ್ರ ಅಭಿವೃದ್ಧಿಪಡಿಸಿದ್ದಾರೆ.

ಪೆಡಲ್ ತುಳಿದು ಸೈಕಲ್ ಓಡಿಸುವಂತೆ, ಇಲ್ಲಿ ಪೆಡಲ್ ಮೂಲಕ ಸುಲಭವಾಗಿ ತೆಂಗಿನಕಾಯಿ ಸುಲಿಯಬಹುದು. ಕೃಷಿ ಯಂತ್ರೋಪಕರಣ ಹಾಗೂ ಶಕ್ತಿ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಡಾ. ಜಯಶ್ರೀ ಜೆ.ಸಿ ಅವರು ಸುಧಾರಿತ ತೆಂಗಿನಕಾಯಿ ಸುಲಿಯುವ ಯಂತ್ರದ ಬಗ್ಗೆ ಮಾಹಿತಿ ನೀಡಿದರು. ಗಂಟೆಗೆ 80 ರಿಂದ 100 ತೆಂಗಿನಕಾಯಿ ಸುಲಿಯಬಹುದು. ಪರಿಣಿತರು ಹೆಚ್ಚಿನ ಕಾಯಿ ಗಳನ್ನು ಸುಲಿಯ ಬಹುದು.

ಹೊಸಬರು ಎರಡರಿಂದ ಮೂರು ತೆಂಗಿನಕಾಯಿ ಸುಲಿಯುವಷ್ಟರಲ್ಲಿ ಯಂತ್ರದ ಬಗ್ಗೆ ಪರಿಣತಿ ಪಡೆಯಬಹುದು. ಗುಜರಿಗೆ ಹಾಕಿದ ಹಳೇ ಸೈಕಲ್‌ಗಳನ್ನು ಬಳಸಿ ಕೊಂಡು ಯಂತ್ರ ತಯಾರಿಸಬಹುದಾಗಿದ್ದು,ಈ ಸುಧಾರಿತ ತೆಂಗಿನ ಕಾಯಿ ಯಂತ್ರಕ್ಕೆ 1,000 ರಿಂದ 1,500 ರು. ಬೆಲೆ ನಿಗದಿ ಪಡಿಸಲಾಗಿದೆ ಎಂದರು.

ಈ ಬಾರಿ ಕೃಷಿಮೇಳದಲ್ಲಿ ರೈತರಿಗೆ ಅನುಕೂಲವಾಗುವ ಸಾಕಷ್ಟು ಯಂತ್ರಗಳನ್ನು ಪರಿಚಯಿಸಲಾಗಿದೆ. ನಾನಾ ಸ್ಟಾರ್ಟ್‌ಅಪ್‌ಗಳು ಆವಿಷ್ಕರಿಸಿರುವ ಯಂತ್ರಗಳನ್ನೂ ಪ್ರದರ್ಶಿಸಲಾಗುತ್ತಿದೆ. ಕಡಲೆಬೀಜ ಬಿತ್ತನೆ, ರಸಗೊಬ್ಬರ ಹಾಕಲು, ಔಷಧ ಸಿಂಪಡಣೆ ಹೀಗೆ ಹಲವು ಕೆಲಸಗಳನ್ನು ಕೂಲಿಕಾರರಿಲ್ಲದೆ ಮಾಡಲು ಇವು ಅನುಕೂಲಕರ ವಾಗಲಿವೆ. ಈ ಯಂತ್ರಗಳಿಂದ ರೈತರು ಲಾಭದಾಯಕ ಹಾಗೂ ವೈಜ್ಞಾನಿಕ ಕೃಷಿಗೆ ಒತ್ತು ನೀಡಬಹುದಾಗಿದೆ.

-ಡಾ.ಎಸ್.ವಿ. ಸುರೇಶ್,
ಕೃಷಿ ವಿಶ್ವವಿದ್ಯಾಲಯದ ಕುಲಪ

ಬೀದರ್‌ನಿಂದ ಚಾಮರಾಜನಗರದವರೆಗೂ ಜಾಥಾ: ಯತ್ನಾಳ್

ವಕ್ಫ್ ರಾದ್ಧಾಂತ: ನ.25ರಿಂದ ಹೋರಾಟ

ಮೈಸೂರು: ರಾಜ್ಯಾದ್ಯಂತ ಭಾರಿ ಸುದ್ದಿಮಾಡಿರುವ ನ.25ರಿಂದ ಡಿ.25ರವರೆಗೆ ಬೀದರ್‌ನಿಂದ ಚಾಮರಾಜನಗರದವರೆಗೂ ವಕ್ಫ್ ಕುರಿತ ಜಾಗೃತಿ ಜಾಥಾ ಆಯೋಜಿಸಲಾಗಿದೆ ಎಂದು ಶಾಸಕ ಹಾಗೂ ಬಿಜೆಪಿ ಬಂಡಾಯ ತಂಡದ ನಾಯಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು.

ಶುಕ್ರವಾರ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಶಾಸಕ ರಮೇಶ್ ಜಾರಕಿಹೊಳಿ, ಮಾಜಿ ಶಾಸಕ ಕುಮಾರ್ ಬಂಗಾರಪ್ಪ ಅವರೊಂದಿಗೆ ಭೇಟಿ ನೀಡಿ ದೇವಿ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ಬಿಜೆಪಿ ರಾಜ್ಯಾಕ್ಷರೂ ಬರಲಿ: ವಕ್ಫ್ ಆಸ್ತಿ ವಿವಾದ ಹಿನ್ನೆಲೆ ಬೀದರ್‌ನಿಂದ ಚಾಮರಾಜನಗರದ ವರೆಗೆ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ವಕ್ಫ್ ನವರು ವಿಧಾನ ಸೌಧವು ನಮ್ಮದೇ, ಮೆಜೆಸ್ಟಿಕ್ ಸಹ ನಮ್ಮದೇ, ಹೊಯ್ಸಳರ ಕಾಲದ ದೇವಾಲಯವು ನಮ್ಮದೇ ಎನ್ನುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ರೈತರು, ಮಠಾಧೀಶರು ಸೇರಿ ಬೀದರ್‌ನಿಂದ ಚಾಮರಾಜನಗರದವರೆ ಜಾಗೃತಿ ಅಭಿಯಾನ ಹಮ್ಮಿಕೊಂಡಿದ್ದೇವೆ. ಇದರಲ್ಲಿ ಯಾರು ಬೇಕಾದರೂ ಭಾಗವಹಿಸಬಹುದು ಎಂದು ಯತ್ನಾಳ್ ಹೇಳಿದರು. ಹಿಂದೂಗಳ ಬಗ್ಗೆ ಕಾಳಜಿ ಇರುವವರೆಲ್ಲ ಈ ಜಾಥಾಕ್ಕೆ ಬರಬಹುದು. ಬಿಜೆಪಿಯಿಂದಲೇ ಈ ಅಭಿಯಾನ ನಡೆಯುತ್ತಿದ್ದು, ಬಿಜೆಪಿ ರಾಜ್ಯಾಕ್ಷರು ಬರಲಿ ಎಂದು ನಿಮ್ಮ ಮುಖಾಂತರ ಮನವಿ ಮಾಡುತ್ತೇನೆ ಎಂದು ತಿಳಿಸಿದರು. ಇದಕ್ಕೆ ದನಿಗೂಡಿಸಿದ ರಮೇಶ್ ಜಾರಕಿಹೊಳಿ, ಬಸನಗೌಡ ಪಾಟೀಲ್ ಯತ್ನಾಳ್ ನೇತೃತ್ವದಲ್ಲಿ ಯಾರೇ ಜಾಥಾಕ್ಕೆ ಬಂದರೂ ಸ್ವಾಗತ ಎಂದು ಹೇಳಿದರು.

ಸಿಎಂ ಹೇಳಿದ್ದು ಡಿಕೆಶಿಗೆ: ನನ್ನ ಮುಟ್ಟಿದರೆ ಜನ ಸುಮ್ಮನಿರಲ್ಲ ಎಂಬ ಸಿಎಂ ಹೇಳಿಕೆಗೆ ಪ್ರತಿಕ್ರಿಯಿಸಿದ ಯತ್ನಾಳ್, ಸಿಎಂ ಸಿದ್ದರಾಮಯ್ಯ ಹೇಳಿರುವುದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ. ಅದು ಬೇರೆ ಯಾರಿಗೂ ಅಲ್ಲ. ಕಾಂಗ್ರೆಸ್ ಶಾಸಕರಿಗೆ 50 ಕೋಟಿ ಆಫರ್ ಬಗ್ಗೆ ಸಿಎಂ ಹೇಳಿದ್ದಾರೆ. ಕಾಂಗ್ರೆಸ್ ಶಾಸಕರ ಖರೀದಿಗೆ ಯಾರು ಬಂದಿದ್ದರು ಎಂಬುದಕ್ಕೆ ಸಿಎಂ ದಾಖಲೆ ಕೊಡಲಿ. ಹಾದಿ, ಬೀದಿಲಿ ಹೋಗೋರು ಈ ಮಾತನ್ನು ಹೇಳಿಲ್ಲ. ರಾಜ್ಯದ ಮುಖ್ಯಮಂತ್ರಿ ಹೇಳಿರುವ ಮಾತು. ಹಾಗಾಗಿ ಅವರು ದಾಖಲೆ ನೀಡಬೇಕು. ಅದನ್ನು ಬಿಟ್ಟು ಸುಮ್ಮನೆ ಏನೇನೋ ಹೇಳಬೇಡಿ ಎಂದು ಕಿಡಿಕಾರಿದರು.

ರಾಜ್ಯಾಧ್ಯಕ್ಷರ ನಿರ್ಧಾರ ಅಂತಿಮ

ಬೆಂಗಳೂರು: ಸರಕಾರ ವಿರುದ್ಧ ಹೋರಾಟ ಮಾಡುವ ಕುರಿತು ರಾಜ್ಯ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಅವರ ತೀರ್ಮಾನವೇ ಅಂತಿಮ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಪರೋಕ್ಷವಾಗಿ ಭಿನ್ನಮತೀಯರಿಗೆ ತಿರುಗೇಟು ನೀಡಿದ್ದಾರೆ.

ಮಲ್ಲೇಶ್ವರದ ಪಕ್ಷದ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ನಡೆಯುವ ಹೋರಾಟಕ್ಕೆ ಮಾನ್ಯತೆ ಇರುತ್ತದೆಯೇ ಹೊರತು ಬೇರೆಯವರು ಪ್ರವಾಸ ಮಾಡಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು. ಬೇರೆಯವರಂತೆ ನಾನು ಕೂಡ ಒಂದು ತಂಡ ತೆಗೆದು ಕೊಂಡು ಪ್ರವಾಸ ಮಾಡುತ್ತೇನೆ ಎಂದರೆ ಹೈಕಮಾಂಡ್ ಅವಕಾಶ ಕೊಡುತ್ತದಾ? ಯಾವುದೇ ಕಾರಣಕ್ಕೂ ಪಕ್ಷದ ಚಿಹ್ನೆ ಹೊರತುಪಡಿಸಿ ನಡೆಯುವ ಪ್ರವಾಸ, ಹೋರಾಟ, ಪ್ರತಿ ಭಟನೆಗಳಿಗೆ ಅನುಮತಿ ನೀಡುವುದಿಲ್ಲ. ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಹೋರಾಟ, ಪ್ರತಿಭಟನೆ ನಡೆಯಬೇಕು. ವಿಜಯೇಂದ್ರ ಹೋರಾಟ ಪ್ರಾರಂಭ ಮಾಡಿದ ಮೇಲೆ ಸರಕಾರ ನೋಟಿಸ್ ನೀಡುವುದನ್ನು ಹಿಂಪಡೆದಿದೆ. ಹೀಗಾಗಿ ಬೇರೆಯವರಿಗೆ ಪ್ರತ್ಯೇಕ ತಂಡ ಮಾಡಲು ನೈತಿಕತೆ ಇಲ್ಲ ಎಂದರು.

ಅನ್ವರ್ ಮಾಣಪ್ಪಾಡಿ ವರದಿ ಜಾರಿಗೊಳಿಸಬೇಕು: ಮಾಜಿ ಸಚಿವ ಅರವಿಂದ ಲಿಂಬಾವಳಿ ಮಾತನಾಡಿ, ಜನರಿಗೆ ತೊಂದರೆ ಆಗುತ್ತಿರುವ ವಕ್ಫ್ ಆಸ್ತಿ ವಿಚಾರ ನಮೆಲ್ಲರ ಗಮನಕ್ಕೆ ಬಂದಿದೆ. ಬಸನಗೌಡ ಪಾಟೀಲ್ ಯತ್ನಾಳ್ ವಿಜಯಪುರದಲ್ಲಿ ಹೋರಾಟ ಪ್ರಾರಂಭಿಸಿದ್ದರು. ಇದರ ಪರಿಣಾಮವಾಗಿ ಕೇಂದ್ರದ ವಕ್ಫ್ ಸಮಿತಿ ಸದಸ್ಯರು ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸಿದರು. ಯತ್ನಾಳ್ ತಾತ್ಕಾಲಿಕವಾಗಿ ಹೋರಾಟ ನಿಲ್ಲಿಸಿದ್ದರು. ಈಗ ವಕ್ಫ್ ವಿಚಾರದಲ್ಲಿ ಸಾಕಷ್ಟು ದೂರುಗಳು ಬಂದಿವೆ. ನವೆಂಬರ್ 25 ರಿಂದ ಡಿಸೆಂಬರ್ 25 ವರೆಗೂ ಜನ ಜಾಗೃತಿ ಅಭಿಯಾನ ಮಾಡುತ್ತೇವೆ ಎಂದು ಮಾಹಿತಿ ನೀಡಿದರು. 1954 ರಿಂದ ಆರಂಭವಾದ ಗೆಜೆಟ್ ಆದೇಶ ರದ್ದು ಮಾಡಬೇಕು. ರೈತರು, ಮಠಗಳು, ಸರಕಾರಿ ಜಾಗಗಳಿಗೆ ವಕ್ಫ್ ಕ್ಲೈಮ್ ಮಾಡುತ್ತಿದೆ. ಆ ಜಾಗಗಳನ್ನು ಕಾಯಂ ವಾಪಸ್ ಕೊಡಬೇಕು ಹಾಗೂ ಅನ್ವರ್ ಮಾಣಪ್ಪಾಡಿ ವರದಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ತಕರಾರಿಲ್ಲ: ವಿಜಯೇಂದ್ರ

ವಕ್ಫ್ ಆಸ್ತಿ ವಿವಾದ ಸಂಬಂಧ ಎರಡು ಹಂತಗಳಲ್ಲಿ ಹೋರಾಟ ನಡೆಸುವ ಬಗ್ಗೆ ತೀರ್ಮಾನ ಆಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಅಧಿವೇಶನ ಪ್ರಾರಂಭ ಆಗುವ ದಿನ ಬೆಳಗಾವಿಯಲ್ಲಿ ರೈತರನ್ನು ಸೇರಿಸಿ ಬೃಹತ್ ಪ್ರತಿಭಟನೆ ಮಾಡುತ್ತೇವೆ. ಒಟ್ಟಾರೆಯಾಗಿ ಪಕ್ಷ ನಿರ್ಧಾರ ಮಾಡಿದೆ, ನಿಶ್ಚಯ ಮಾಡಿದ್ದೇವೆ. ಎರಡು ಹಂತಗಳ ಹೋರಾಟಕ್ಕೆ ಮೂರು ತಂಡಗಳು ಕೂಡ ರಚನೆಯಾಗಿವೆ. ರೈತರ ಪರವಾದ ಹೋರಾಟ ಮಾಡಿದಾಗ ಯಾಕೆ ಮುಜುಗರ ಪಟ್ಟುಕೊಳ್ಳಬೇಕು? ರೈತರ ಪರವಾಗಿ ಯಾರು ಬೇಕಾದರೂ ಹೋರಾಟ ಮಾಡಬಹುದು, ಅದಕ್ಕೆ ನಮ್ಮದೇನು ತಕರಾರಿಲ್ಲ ಎಂದರು.

ಮಂಗಳೂರು ವಿವಿ ವಿರುದ್ಧ ವಿದ್ಯಾರ್ಥಿಗಳ ಪ್ರತಿಭಟನೆ

ಕಾಲೇಜುಗಳ ಶುಲ್ಕ ಹೆಚ್ಚಳಕ್ಕೆ ಖಂಡನೆ

ಮಂಗಳೂರು: ಕಾಲೇಜುಗಳ ಶುಲ್ಕ ಹೆಚ್ಚಳ ವಿರೋಧಿಸಿ ಮಂಗಳೂರು ವಿವಿ ವಿರುದ್ಧ ವಿದ್ಯಾರ್ಥಿ ಸಮೂಹ ಸಿಡಿದೆದ್ದಿದೆ. ಅಂಕಪಟ್ಟಿಯ ಸಮಸ್ಯೆ, ಅವೈಜ್ಞಾನಿಕ ಶುಲ್ಕಗಳ ಹೆಚ್ಚಳ, ಪರೀಕ್ಷಾ ಶುಲ್ಕ ಹೆಚ್ಚಳ ಯುಯುಸಿಎಂಎಸ್‌ನಲ್ಲಿರುವ ಗೊಂದಲ ಮತ್ತು ವಿಶ್ವವಿದ್ಯಾಲಯದಲ್ಲಿರುವ ಹಲವು ಸಮಸ್ಯೆಗಳನ್ನು ಖಂಡಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ನೇತೃತ್ವದಲ್ಲಿ ಮಂಗಳಗಂಗೋತ್ರಿಯ ಆಡಳಿತ ಕಚೇರಿ ಎದುರುಗಡೆ ಬೃಹತ್ ಪ್ರತಿಭಟನೆ ನಡೆಯಿತು.

ಪೊಲೀಸರ ತಡೆ: ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಕಾಲೇಜಿನಿಂದ ಪ್ರತಿಭಟನೆಯಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳು ಮಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳ ಕಚೇರಿಗೆ ಮುತ್ತಿಗೆ ಹಾಕಲು ಮುಂದಾದರು. ಪ್ರತಿಭಟನಕಾರರನನು ವಿವಿ ಆಡಳಿತ ಕಚೇರಿ ಬಳಿ ಬ್ಯಾರಿಕೇಡ್ ಹಾಕಿ ತಡೆಹಿಡಿಯಲಾಗಿತ್ತು. ಆರಂಭದಲ್ಲಿ ಕಚೇರಿ ಎದುರಿನ ರಸ್ತೆಯಲ್ಲಿ ಘೋಷಣೆಗಳನ್ನು ಕೂಗಿದರು. ಬಳಿಕ ಬ್ಯಾರಿಕೇಡ್ ತಳ್ಳಿ ಒಳನುಗ್ಗಿದ ವಿದ್ಯಾರ್ಥಿಗಳು ಆಡಳಿತ ಕಚೇರಿಗೆ ನುಗ್ಗಲು ಪ್ರಯತ್ನಿಸಿದರು.

ಪ್ರವೇಶದ್ವಾರದ ಗಾಜು ಪುಡಿ: ಉದ್ರಿಕ್ತ ವಿದ್ಯಾರ್ಥಿಗಳು ಒಳಹೋಗದಂತೆ ಪೊಲೀಸರು ತಡೆಯೊಡ್ಡಿದಾಗ ನೂಕಾಟ ತಳ್ಳಾಟಗಳ ನಡುವೆ ವಿವಿ ಆಡಳಿತ ಕಚೇರಿಯ ಪ್ರವೇಶ ದ್ವಾರದ ಗಾಜು ಪುಡಿಯಾಗಿದೆ. ಗಾಜಿನ ತುಂಡು ತಗಲಿ ಮಹಿಳಾ ಪೊಲೀಸ್ ಪೇದೆಯೊಬ್ಬರಿಗೆ ಗಾಯವಾಗಿದೆ. ಇದೇ ವೇಳೆ ಒಬ್ಬ ವಿದ್ಯಾರ್ಥಿಯ ಕೈಗೂ ಗಾಯವಾಗಿದೆ.

ವಿದ್ಯಾರ್ಥಿಗಳ ಹೋರಾಟಕ್ಕೆ ಉಪಕುಲಪತಿ ಅಸಮಾಧಾನ: ಸ್ಥಳಕ್ಕೆ ಆಗಮಿಸಿದ ವಿವಿ ಉಪಕುಲಪತಿ ಪಿ.ಎಲ್.ಧರ್ಮ ಪ್ರತಿಭಟನಾನಿರತ ವಿದ್ಯಾರ್ಥಿಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಕಾಲೇಜಿನ ಸ್ವತ್ತಿಗೆ ಹಾನಿ ಎಸಗುವುದು ಒಳ್ಳೆಯ ನಡೆ ಅಲ್ಲ. ಇಂತಹ ಪ್ರವೃತ್ತಿಯನ್ನು ನಾವು ಯಾವುದೇ ಕಾರಣಕ್ಕೆ ಸಹಿಸಲ್ಲ. ಶಾಂತಿಯುತ ಪ್ರತಿಭಟನೆ ಹೆಸರಲ್ಲಿ ಇಂಥದ್ದು ಮಾಡಬೇಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿವಿ ರಿಜಿಸ್ಟ್ರಾರ್ ಇಂದು ಬೆಂಗಳೂರಿಗೆ: ವಿದ್ಯಾರ್ಥಿಗಳ ಸಮಸ್ಯೆ ಆಲಿಸಿ ಮನವಿ ಸ್ವೀಕರಿಸಿದ ಉಪಕುಲಪತಿ, ಬಳಿಕ ವಿದ್ಯಾರ್ಥಿಗಳಿಗೆ ವಿವಿಯಲ್ಲಿರುವ ಸಮಸ್ಯೆಗಳ ಬಗ್ಗೆ ವಿವರಣೆ ನೀಡಿದರು. ಈ ಉತ್ತರಕ್ಕೆ ವಿದ್ಯಾರ್ಥಿಗಳಿಗೆ ಸಮಾಧಾನ ಉಂಟಾಗದ ಹಿನ್ನೆಲೆಯಲ್ಲಿ ಮನವಿಯನ್ನು ಸರಕಾರಕ್ಕೆ ಕಳುಹಿಸುವುದಾಗಿ ತಿಳಿಸಿದರು. ಸಿಂಡಿಕೇಟ್ ಸಭೆ ನಂತರ ಸದಸ್ಯರ ಜತೆ ಮತ್ತೆ ಸ್ಥಳಕ್ಕೆ ಆಗಮಿಸಿದ ಉಪಕುಲಪತಿಯವರು, ಶನಿವಾರ ವಿವಿ ರಿಜಿಸ್ಟ್ರಾರ್ ಅವರನ್ನು ಬೆಂಗಳೂರಿಗೆ ಕಳುಹಿಸುವ ಭರವಸೆ ಕೊಟ್ಟ ನಂತರ ವಿದ್ಯಾರ್ಥಿಗಳು ಪ್ರತಿಭಟನೆ ಕೈಬಿಟ್ಟರು.

ಶುಲ್ಕ ಹೆಚ್ಚಳ ವಿರೋಧಿಸಿ ಮಂಗಳೂರು ವಿವಿ ವಿರುದ್ಧ ವಿದ್ಯಾರ್ಥಿಗಳ ಪ್ರತಿಭಟನೆ.

ಮಹಿಳೆ ಸೀರೆ ಎಳೆದು ಹಲ್ಲೆ

ಬೆಳಗಾವಿ: ಕೌಟುಂಬಿಕ ಕಾರಣದಿಂದಾಗಿ ಬೆಳಗಾವಿಯ ವಡ್ಡರವಾಡಿಯಲ್ಲಿ ವಿವಾಹಿತ ಮಹಿಳೆಯೊಬ್ಬರ ಸೀರೆ ಎಳೆದು ಹಲ್ಲೆ ನಡೆಸಿದ ಪ್ರಕರಣದ ಬಗ್ಗೆ ದೂರು ದಾಖಲಾಗಿದೆ. ಮಾಳಮಾರುತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಗಂಡನ ಮನೆಯಲ್ಲಿ ಸರಿಯಾಗಿ ನೋಡಿಕೊಳ್ಳದ ತಾಯಿ ಮನೆಯಲ್ಲಿ ವಾಸವಿರುವ ವಿವಾಹಿತ ಮಹಿಳೆ ದೂರು ದಾಖಲಿಸಿದ್ದಾರೆ. ಮೇಲೆ ಪಕ್ಕದ ಮನೆಯ ಇಂದ್ರಾ, ಅಷ್ಟೇಕರ್, ಹೂವಪ್ಪ ಅಷ್ಟೇಕರ್, ಮಣಿಕಂಠ ಅಷ್ಟೇಕರ್ ತಮ್ಮ ಮನೆಗೆ ಬಂದು ತಾಯಿಯ ಕೂದಲು ಹಿಡಿದೆಳೆದು ಸೀರೆ ಬಿಚ್ಚಿ ದೌರ್ಜನ್ಯ ಎಸಗಿದ್ದಾರೆ. ಅಲ್ಲದೆ, ತನ್ನ ಮೇಲೆ ಮನಸೋ ಇಚ್ಛೆ ಹಲ್ಲೆ ಮಾಡಿದ್ದಾರೆ. ನ್ಯಾಯ ಕೊಡಿಸಬೇಕೆಂದು ಆಕೆ ಮನವಿ ಮಾಡಿದ್ದಾರೆ.

15 ಲಕ್ಷ ಮೌಲ್ಯದ ಅಕ್ರಮ ಮದ್ಯ ವಶ

ಕಾರ್ಕಳ: ಬೋಳ ಗ್ರಾಮದ ಅಬ್ಬನಡ್ಕದ ಎರಡು ಮನೆಗಳಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ₹15 ಲಕ್ಷ ಮೌಲ್ಯದ ಮದ್ಯವನ್ನು ಅಬಕಾರಿ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಅಬ್ಬನಡ್ಕದ ಅವಿನಾಶ್ ಮಲ್ಲಿ ಮತ್ತು ಮರಿಮಾರುಗುತ್ತು ಎಂಬುವರಿಗೆ ಸೇರಿದ ಮನೆಗಳಲ್ಲಿ ಮದ್ಯ ದಾಸ್ತಾನು ಮಾಡಲಾಗಿತ್ತು. ಎರಡೂ ಕಡೆ ಏಕಕಾಲದಲ್ಲಿ ಶೋಧನೆ ನಡೆಸಿ, 272 ಪೆಟ್ಟಿಗೆಗಳಲ್ಲಿ 2360.850 ಲೀ. ವಿವಿಧ ಬ್ರ್ಯಾಂಡ್‌ಗಳ ಗೋವಾ ಮದ್ಯ ಜಪ್ತಿ ಮಾಡಲಾಗಿದೆ. ತಲೆಮರೆಸಿಕೊಂಡಿರುವ ಅವಿನಾಶ್ ಮಲ್ಲಿ ಮತ್ತು ಆದಿ ಉಡುಪಿಯ ಪ್ರಶಾಂತ್ ಸುವರ್ಣ ಅವರನ್ನು ಪತ್ತೆ ಹಚ್ಚಲು ಪ್ರಯತ್ನ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆರೋಪಿಗಳ ವಿರುದ್ಧ ಪ್ರತ್ಯೇಕ ಪ್ರಕರಣ ದಾಖಲಾಗಿದೆ.

ಕಳ್ಳತನ ಆರೋಪ ಮಹಿಳೆಗೆ ಕಿರುಕುಳ

ಬಾಗಲಕೋಟೆ: ಆಧಾರ್ ಕಾರ್ಡ್ ಮಾಡಿಸಿಕೊಳ್ಳಲು ಬಂದಿದ್ದ ಮಹಿಳೆಯನ್ನು ಮೊಬೈಲ್ ಕಳ್ಳತನದ ಆರೋಪದಡಿ ಗಂಟೆಗಟ್ಟಲೆ ಕೂಡಿ ಹಾಕಿದ ಘಟನೆ ಇಳಕಲ್ ತಹಸೀಲ್ದಾರ್ ಕಚೇರಿಯಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಆಧಾರ್ ಕಾರ್ಡ್ ಮಾಡಿಸಲು ತಹಸೀಲ್ದಾರ್ ಕಚೇರಿಗೆ ಮಹಿಳೆ ಆಗಮಿಸಿದಾಗ ಕಚೇರಿ ಬಳಕೆಗಿದ್ದ ಮೊಬೈಲ್ ಕಾಣೆಯಾಗಿತ್ತು. ಈ ಮಹಿಳೆಯೇ ಮೊಬೈಲ್ ಕದ್ದಿರಬಹುದು ಎಂಬ ಶಂಕಿಸಿದ ಸಿಬ್ಬಂದಿ ಆಕೆಯನ್ನು ಸಂಜೆ 5ರ ವರೆಗೆ ಕೂಡಿ ಹಾಕಿ ದುರ್ವರ್ತನೆ ತೋರಿದ್ದಾರೆ. ಕಚೇರಿಯ ಸಿಬ್ಬಂದಿ ಕುಚೇಷ್ಟೆ ಮಾಡಲೆಂದೇ ಮೊಬೈಲ್ ತೆಗೆದುಕೊಂಡು ಹೋಗಿದ್ದರು. ಸಂಜೆಯ ಹೊತ್ತಿಗೆ ಮೊಬೈಲ್ ಸಿಕ್ಕ ಬಳಿಕ ಸಿಬ್ಬಂದಿ ಮಹಿಳೆಯನ್ನು ಕಳುಹಿಸಿದ್ದಾರೆ.

ನನ್ನ - ಆ ವ್ಯಕ್ತಿ ನಡುವೆ ಯಾವತ್ತೂ ಅಂಥ ಪದಗಳ ಬಳಕೆ ಆಗಿಲ್ಲ, ಅಂಥ ಸಂಸ್ಕೃತಿಯಿಂದ ನಾನು ಬಂದಿಲ್ಲ: ಸಚಿವ ಜಮೀರ್ ಹೇಳಿಕೆಗೆ ಮೌನ ಮುರಿದ ಎಚ್ಡಿಕೆ

ವರ್ಣನಿಂದನೆ: ರಾಜ್ಯ ಸರಕಾರ ಏಕೆ ಸುಮ್ಮನಿದೆ?

ಮೈಸೂರು: ತಮ್ಮ ಬಗ್ಗೆ ಸಚಿವ ಜಮೀರ್ ಅಹಮದ್ ಖಾನ್ ನೀಡಿದ ಹೇಳಿಕೆ ಬಗ್ಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಶುಕ್ರವಾರ ಮೌನ ಮುರಿದಿದ್ದಾರೆ. ತಮ್ಮನ್ನು ವರ್ಣಭೇದ ಹಾಗೂ ಜನಾಂಗೀಯವಾಗಿ ನಿಂದಿಸಿದ ಬಗ್ಗೆ ಅತೀವ ಬೇಸರ ವ್ಯಕ್ತಪಡಿಸಿರುವ ಅವರು, ಸಣ್ಣ ಸಣ್ಣ ವಿಷಯಕ್ಕೂ ಕೇಸುಹಾಕಿ ಜೈಲಿಗೆ ಹಾಕುವ ಸಿದ್ದರಾಮಯ್ಯ ಸರಕಾರ ಈ ಪ್ರಕರಣದಲ್ಲಿ ಹೀಗೇಕೆ ಸುಮ್ಮನಿದೆ ಎಂದು ಪ್ರಶ್ನಿಸಿದ್ದಾರೆ.

ಶುಕ್ರವಾರ ಮೈಸೂರಿನಲ್ಲಿ ಚಾಮುಂಡೇಶ್ವರಿ ದರ್ಶನ ಪಡೆದ ನಂತರ ಮಾಧ್ಯಮಗಳ ಜತೆ ಎಚ್‌ಡಿಕೆ ಮಾತನಾಡಿದರು. ಪ್ರತಿ ವಿಷಯಕ್ಕೂ ಪ್ರತಿಪಕ್ಷ ನಾಯಕರು ಮತ್ತು ಕಾರ್ಯಕರ್ತರ ವಿರುದ್ಧ ವಿನಾ ಕಾರಣ ಕೇಸ್ ಹಾಕಲಾಗುತ್ತಿದೆ. ರಾಜ್ಯಪಾಲರ ಕಚೇರಿಯನ್ನೇ ಶೋಧ ಮಾಡುತ್ತೇನೆ ಎಂದು ಹೊರಟಿದ್ದ ಪೊಲೀಸ್ ಅಧಿಕಾರಿಯನ್ನು ಪ್ರಶ್ನಿಸಿದ್ದಕ್ಕೆ ನನ್ನ ಮೇಲೆ ಎಫ್‌ಐಆರ್ ದಾಖಲು ಮಾಡಲಾಗಿದೆ. ಅದರ ಬಗ್ಗೆ ಹೇಳಿಕೆ ನೀಡಿದ ನಿಖಿಲ್ ಕುಮಾರಸ್ವಾಮಿ ಮೇಲೆ ಹಾಗೂ ಮುಖ್ಯ ಕಾರ್ಯದರ್ಶಿಗೆ ದೂರು ನೀಡಿದ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ವಿರುದ್ಧವೂ ಎಫ್‌ಐಆರ್ ಹಾಕಲಾಗಿದೆ. ಜೆಡಿಎಸ್ ಕಾರ್ಯಕರ್ತರು ಜಾಲತಾಣಗಳಲ್ಲಿ ಯಾರೋ ಹೇಳಿದ್ದನ್ನು ಫಾರ್ವರ್ಡ್ ಮಾಡಿದ್ದಕ್ಕೆ ಕೇಸ್ ಹಾಕುತ್ತಿದ್ದಾರೆ ಎಂದು ಕುಮಾರಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು. ಸಂವಿಧಾನದ ಮೇಲೆ ಪ್ರಮಾಣವಚನ ಸ್ವೀಕರಿಸಿರುವ ಸಚಿವರೊಬ್ಬರು ನನ್ನ ಬಗ್ಗೆ ಕೀಳಾಗಿ ಜನಾಂಗೀಯ ನಿಂದನೆ ಮಾಡಿದ್ದಾರೆ. ದೇವೆಗೌಡರ ಕುಟುಂಬವನ್ನೇ ಖರೀದಿ ಮಾಡುತ್ತೇನೆ ಎಂದರೆ ಸರಕಾರ ಸುಮ್ಮನಿದೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ವರಿಗೆ ಒಂದು ಕಾನೂನು, ಜೆಡಿಎಸ್ ನವರಿಗೆ ಇನ್ನೊಂದು ಕಾನೂನು ಜಾರಿಯಲ್ಲಿ ಇದೆಯೇ ಎಂದು ಎಚ್‌ಡಿಕೆ ತರಾಟೆಗೆ ತೆಗೆದುಕೊಂಡರು.

ಕರಿಯ, ಕುಳ್ಳ ಸಂಸ್ಕೃತಿಯಿಂದ ಬಂದಿಲ್ಲ: ಕರಿಯ, ಕುಳ್ಳ ಎಂದು ಇನ್ನೊಬ್ಬರಿಂದ ಮಾತನಾಡಿಸಿಕೊಳ್ಳುವ ಸಂಸ್ಕೃತಿಯಿಂದ ನಾನು ಬಂದಿಲ್ಲ. ಅವರ ಮಾತುಗಳು ಅವರ ಸಂಸ್ಕೃತಿಯನ್ನು ತೋರಿಸುತ್ತದೆ. ಆ ವ್ಯಕ್ತಿಯನ್ನು ನಾನೆಂದೂ ಕುಳ್ಳ ಎಂದು ಕರೆದಿಲ್ಲ. ಹಣದ ಮದದಿಂದ ಖರೀದಿ ಮಾಡುವ ಹೇಳಿಕೆ ನೀಡಿದ್ದಾರೆ. ಆತನ ಜತೆ ಸ್ನೇಹ ಇದ್ದದ್ದು ಕೇವಲ ರಾಜಕೀಯವಾಗಿ ಅಷ್ಟೇ ಎಂದು ಕುಮಾರಸ್ವಾಮಿ ಕಿಡಿಕಾರಿದರು.

ಹೊರಟ್ಟಿಯನ್ನೇ ಹೊಡೆಯಲು ಹೋಗಿದ್ದ ಜಮೀರ್: ಚಾಮುಂಡಿ ತಾಯಿ ಮುಂದೆ ನಿಂತು ಹೇಳುತ್ತಿದ್ದೇನೆ ಕೇಳಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಿಂದೊಮ್ಮೆ ನನ್ನನ್ನು ಕೇವಲ 'ಕುಮಾರ' ಎಂದು ಕರೆದಿದ್ದಕ್ಕೆ ಅವರನ್ನು ಹೊಡೆಯಲು ಹೋದ ಗಿರಾಕಿ ಅವರು. ಹೊರಟ್ಟಿ ಈಗಲೂ ಇದ್ದಾರೆ, ಅವರನ್ನೇ ಕೇಳಿ ಬೇಕಾದರೆ ಎಂದರು.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಶುಕ್ರವಾರ ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನ ದಲ್ಲಿ ಪೂಜೆ ಸಲ್ಲಿಸಿದರು.

ಜವಾಬ್ದಾರಿಯುತ ಸ್ಥಾನದಲ್ಲಿರುವ ಸಿಎಂ, ಡಿಸಿಎಂ ಹಾಗೂ ಗೃಹ ಸಚಿವರು ಕೆಟ್ಟ ಹೇಳಿಕೆ ಕೊಟ್ಟು ಸಚಿವರ ಮಾತುಗಳನ್ನು ಸಮರ್ಥಿಸಿ ಕೊಂಡಿದ್ದಾರೆ. ಇದು ನಾಚಿಕೆಗೇಡು. ಇಂಥ ಹೇಳಿಕೆ ಕೊಟ್ಟ ಎಷ್ಟು ಜನರ ಮೇಲೆ ಕೇಸ್ ಹಾಕಿ ಜೈಲಿಗೆ ಕಳುಹಿಸಿಲ್ಲ ? ಸರಕಾರ ಏಕೆ ಸುಮ್ಮನೆ ಇದೆ.

- ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಸಿಎಂ ಹೇಳಿಕೆ ಹಾಸ್ಯಾಸ್ಪದ

ತಮ್ಮ ಸರಕಾರ ಬೀಳಿಸಲು ಕಾಂಗ್ರೆಸ್ ಶಾಸಕರಿಗೆ ತಲಾ 50 ಕೋಟಿ ರುಪಾಯಿ ಆಮಿಷ ಒಡ್ಡಿದ್ದಾರೆ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪದ ಬಗ್ಗೆ ಖಾರವಾಗಿ ಪ್ರತಿಕ್ರಿಯಿಸಿದ ಕುಮಾರಸ್ವಾಮಿ,ಈ ಹೇಳಿಕೆ ಹಾಸ್ಯಾಸ್ಪದವಾಗಿದೆ. 50 ಶಾಸಕರಿಗೆ ತಲಾ 50 ಕೋಟಿ ರುಪಾಯಿ ಎಂದು ಅಷ್ಟು ನಿಖರವಾಗಿ ಹೇಳುತ್ತಿದ್ದಾರೆ. ಹಾಗಿದ್ದರೆ ಸಿಎಂ ಬಳಿ ಎಲ್ಲಾ ಮಾಹಿತಿ ಇದೆ ಎಂದಾ ಯಿತು ಎಂದರು. ಕಾಂಗ್ರೆಸ್ ಸರಕಾರ ಪ್ರತಿಯೊಂದಕ್ಕೂ ಎಸ್‌ಐಟಿ ರಚನೆ ಮಾಡಿ ತನಿಖೆ ಮಾಡಿಸುತ್ತಿದ್ದಾರೆ. ಶಾಸಕರ ಖರೀದಿ ವಿಷಯಕ್ಕೂ ಒಂದು ಎಸ್ ಐಟಿ ರಚನೆ ಮಾಡಲಿ ಎಂದು ಲೇವಡಿ ಮಾಡಿದರು.

ನಿಖಿಲ್ ಗೆಲುವು ನಿಶ್ಚಿತ

ಚನ್ನಪಟ್ಟಣದಲ್ಲಿ ಎನ್ ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರು ಜಯಶಾಲಿ ಆಗುತ್ತಾರೆ. ಕಾಂಗ್ರೆಸ್ ಪಕ್ಷದಲ್ಲಿ ಏನೇನು ಆಗಿದೆ ಎಂದು ಸ್ವತಃ ಯೋಗೇಶ್ವರ್ ಅವರೇ ಹೇಳಿದ್ದಾರೆ. ಅದರ ಬಗ್ಗೆ ನಾನೇನೂ ವಿಮರ್ಶೆ ಮಾಡುವುದಿಲ್ಲ. ಜಮೀರ್ ಹೇಳಿಕೆಯಿಂದ ಏನಾಗಿದೆ ಎನ್ನುವುದು ಫಲಿತಾಂಶ ಬರುವ ದಿನ ಗೊತ್ತಾಗುತ್ತದೆ. ನಿಖಿಲ್ ಕುಮಾರಸ್ವಾಮಿ ಅವರನ್ನು ಗೆಲ್ಲಿಸುವ ಮೂಲಕ ಸಿದ್ದರಾಮಯ್ಯ ಅವರ ಸೊಕ್ಕು ಮುರಿಯಬೇಕು ಎಂದು ದೇವೇಗೌಡರು ಹೇಳಿರುವುದು ಮಾನಹಾನಿ ಹೇಳಿಕೆಯೇ? ಅವರ ವಿರುದ್ಧವೂ ಲಘುವಾಗಿ ಹೇಳಿಕೆ ಕೊಡುತ್ತಿದ್ದಾರೆ ಎಂದು ಕಿಡಿಕಾರಿದರು.

ವಿಶ್ವವಾಣಿ

ಸಂಪಾದಕೀಯ

ಡಿಜಿಟಲ್ ಅರೆಸ್ಟ್ ತಡೆಗೆ ಸಾಮಾನ್ಯ ಜ್ಞಾನ ಅಗತ್ಯ

ಇತ್ತೀಚಿನ ದಿನಗಳಲ್ಲಿ ಡಿಜಿಟಲ್ ಅರೆಸ್ಟ್ ಎಂಬುದು ನಿಜಜೀವನದ ದೊಡ್ಡ ಬೆದರಿಕೆಯಾಗಿದೆ. ವಂಚಕರು ಪೊಲೀಸ್, ಸಿಬಿಐ, ಡ್ರಗ್ಸ್ ತಡೆ ಘಟಕ ಮತ್ತು ಕೆಲವೊಮ್ಮೆ ಭಾರತೀಯ ರಿಸರ್ವ್ ಬ್ಯಾಂಕ್ ಅಧಿಕಾರಿಗಳ ಹೆಸರು ಹೇಳಿಕೊಂಡು ವಂಚಿಸಲು ಯತ್ನಿಸುತ್ತಾರೆ. ಈ ವರ್ಷದ ಮೊದಲ ತ್ರೈಮಾಸಿಕದಲ್ಲಿ ಜನರು ಡಿಜಿಟಲ್ ಅರೆಸ್ಟ್‌ನಿಂದಾಗಿ ಸುಮಾರು ₹120 ಕೋಟಿ ಕಳೆದುಕೊಂಡಿದ್ದಾರೆ ಎಂದು ಕೆಲವು ವರದಿಗಳು ಹೇಳುತ್ತಿವೆ. ಡಿಜಿಟಲ್ ಅರೆಸ್ಟ್ ಮಾತ್ರವಲ್ಲ, ನಿಮ್ಮ ಗ್ರಾಹಕರನ್ನು ತಿಳಿದುಕೊಳ್ಳಿ' (ಕೆವೈಸಿ) ಪರಿಷ್ಕರಣೆ, ಬ್ಯಾಂಕ್ ಖಾತೆ, ಷೇರು ವಹಿವಾಟು, ಹೂಡಿಕೆ ಇತ್ಯಾದಿ ಹೆಸರಿನಲ್ಲಿ ಕೂಡ ವಂಚನೆ ನಡೆಯುತ್ತಿದೆ. ವಂಚನೆಯು ಭಾರತದ ಒಳಗಿನಿಂದ ಮಾತ್ರವಲ್ಲದೆ, ಮ್ಯಾನ್ಮಾರ್, ಲಾವೋಸ್, ಕಾಂಬೋಡಿಯಾ ದಂತಹ ದೇಶಗಳಿಂದಲೂ ನಡೆಯುತ್ತಿದೆ ಎಂದು ಗೃಹ ಸಚಿವಾಲಯ ಹೇಳಿದೆ. ಭಾರತೀಯ ಸೈಬರ್ ಅಪರಾಧ ತಡೆ ಸಮನ್ವಯ ಕೇಂದ್ರದ ಮೂಲಕ ಗೃಹ ಸಚಿವಾಲಯವು ಸೈಬರ್ ಅಪರಾಧ ಕೃತ್ಯಗಳನ್ನು ನಿಯಂತ್ರಿಸುತ್ತದೆ. ಆದರೆ, ವಂಚನೆ ನಡೆಸಲು ಈ ಕೇಂದ್ರದ ಹೆಸರನ್ನು ಬಳಸಿಕೊಳ್ಳಲಾಗಿದೆ. ನ್ಯಾಷನಲ್ ಸೈಬರ್ ಕ್ರೈಮ್ ರಿಪೋರ್ಟಿಂಗ್ ಪೋರ್ಟಲ್‌ನಲ್ಲಿ ಈ ವರ್ಷದ ಮೊದಲ ಮೂರು ತಿಂಗಳಲ್ಲಿ ಏಳು ಲಕ್ಷ ದೂರುಗಳು ದಾಖಲಾಗಿವೆ. ಕಳೆದುಕೊಂಡ ಹಣಕ್ಕೆ ಸಮರ್ಪಕ ದಾಖಲೆ ಇಲ್ಲದ ಕಾರಣಕ್ಕೆ ಅನೇಕರು ದೂರು ದಾಖಲಿಸುವ ಗೋಜಿಗೇ ಹೋಗಿಲ್ಲ ಎನ್ನಲಾಗಿದೆ. ಹಾಗಾಗಿ, ಸೈಬರ್ ವಂಚನೆ ಪ್ರಕರಣಗಳ ಸಂಖ್ಯೆ ಇನ್ನೂ ಹೆಚ್ಚೇ ಇರಬಹುದು. ವಿಪರ್ಯಾಸದ ಸಂಗತಿಯೆಂದರೆ ವಿದ್ಯಾವಂತರು ಮತ್ತು ತಿಳಿವಳಿಕೆಯುಳ್ಳವರೇ ಈ ವಂಚನೆಯ ಸಂತ್ರಸ್ತರಾಗಿದ್ದಾರೆ. ಅದಕ್ಕೆ ಮೂಲ ಕಾರಣ ಪ್ರಸ್ತುತ ವಿದ್ಯಮಾನಗಳ ಬಗ್ಗೆ ಜ್ಞಾನದ ಕೊರತೆ. 'ಜನರು ಹೆದರಿಕೊಳ್ಳಬಾರದು ಮತ್ತು ತಮ್ಮ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳಬಾರದು. ಶಾಂತವಾಗಿ ಇರಬೇಕು. ತಕ್ಷಣವೇ ಸೈಬರ್ ಪೊಲೀಸರಿಗೆ ದೂರು ನೀಡಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಹೇಳಿದ್ದಾರೆ. ಆದರೆ ಅವರು ಹೇಳಿದ್ದನ್ನು ಯಾರೂ ಕೇಳಿಸಿಕೊಂಡಂತಿಲ್ಲ. ಅದಕ್ಕೆ ಕಾರಣ, ಅನೇಕರು ಬಾನುಲಿ ಕೇಳದಿರುವುದು, ಸುದ್ದಿಪತ್ರಿಕೆಗಳನ್ನು ಓದದಿರುವುದು. ಪ್ರತಿನಿತ್ಯ ಮನೆಗೆ ಒಂದು ದಿನಪತ್ರಿಕೆಯನ್ನೂ ಹಾಕಿಸಿಕೊಳ್ಳದ ಕೋಟ್ಯಂತರ ಜನರು ದೇಶದಲ್ಲಿ ಇದ್ದಾರೆ. ಹೀಗಾಗಿ ಅನೇಕರಿಗೆ ನಮಗೆ 'ವಂಚನೆಯ ಕರೆ'ಯೊಂದು ಬರುತ್ತದೆ ಎಂಬುದೂ ತಿಳಿಯಂತಾಗಿದೆ. ಮೋಸ ಹೋಗುವ ಜನರಿರುವವರೆಗೂ ಮೋಸ ಮಾಡುವವರು ಇರುತ್ತಾರೆ.

ಸೊಂಪಾದಕೀಯ

ಪೇಸ್ಟ್ ಅಂಡ್ ಕಟ್

ಈಗಿನ ಕಾಲದಲ್ಲಿ ಗಂಡ ಹೆಂಡಿರ ಮಧ್ಯೆ ಡಿವೋರ್ಸ್ ಅನ್ನೋದು ತುಂಬಾ ಸುಲಭವಾಗಿ ಆಗ್ತಾ ಇರೋ ವಿಷಯಗಳಲ್ಲಿ ಒಂದು. ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡಿ ಅಂತಾರೆ, ಆದ್ರೆ ಮದುವೆಗೆ ಸಾವಿರ ಸುಳ್ಳು ಬೇಕಾದ್ರೂ ಡಿವೋರ್ಸ್‌ಗೆ ಮಾತ್ರ ಒಂದೇ ಸಾಕು ಅಥವಾ ಅದೂ ಬೇಡ ಅನ್ನೋ ಥರ ಆಗಿದೆ. ಯಾಕಂದ್ರೆ, ಸಿಲ್ಲಿ, ಸಿಲ್ಲಿ ಕಾರಣಗಳಿಗೋಸ್ಕರ ಇಂದು ಡಿವೋರ್ಸ್‌ಗಳು ಆಗ್ತಾ ಇವೆ. ಈಗ ಹಲ್ಲಿನ ಕಾರಣದ ಸಿಲ್ಲಿ ರೀಸನ್ ಗೋಸ್ಕರ ದಂಪತಿಗಳು ವಿಚ್ಛೇದನ ಕೊಡಿ ಅಂತ ಕೋರ್ಟ್ ಮೆಟ್ಟಿಲು ಹತ್ತಿದ್ದಾರೆ. ಹೌದು, ಗಂಡಿರ ಹೆಂಡಿರ ಜಗಳ ರಾತ್ರಿ ಉಂಡು ಮಲಗೋ ತನಕ ಅಂತಾರೆ. ಆದರೆ ಇವರ ಜಗಳ ಉಂಡು ಮಲಗಿ ಬೆಳಗ್ಗೆ ಎದ್ದ ಮೇಲೆ ಶುರು ಆಗೋ ಕೆಟಗರಿಯದ್ದು. ಬೆಳಗ್ಗೆ ಹಲ್ಲುಜ್ಜಲು ಟೂತ್ ಪೇಸ್ಟ್ ಬಳಸುವಾಗ ಗಂಡ ಟ್ಯೂಬಿನ ತಳಭಾಗದಿಂದ ಒತ್ತಿದರೆ, ಹೆಂಡತಿ ಟ್ಯೂಬಿನ ಕುತ್ತಿಗೆಯನ್ನು ಒತ್ತುತ್ತಿದ್ದಳಂತೆ. ಹೀಗೆ ಶುರು ಆದ ಜಗಳ ಒಬ್ಬರು ಇನ್ನೊಬ್ಬರ ಕುತ್ತಿಗೆ ಒತ್ತೋವರೆಗೂ ಹೋಗಿರೋ ಕಾರಣಕ್ಕೆ ಡಿವೋರ್ಸ್‌ವರೆಗೂ ಹೋಗಿದೆ. ಇದರ ಜೊತೆಗೆ ಕೋರ್ಟಿನಲ್ಲಿ ನ್ಯಾಯಾಧೀಶರ ಮುಂದೆ ಇಬ್ಬರೂ ಇನ್ನೊಂದಷ್ಟು ಸಮಸ್ಯೆಗಳನ್ನೂ ಹೇಳಿಕೊಂಡಿದ್ದಾರೆ. ಹೆಂಡ್ತಿ ಕಾಫಿ ಕೊಡಲ್ಲ, ಅಡುಗೆ ಮಾಡಲ್ಲ, ನೆಂಟರು ಬಂದ್ರೆ ಸರಿಯಾಗಿ ನೋಡ್ಕೊಳಲ್ಲ, ಗೌರವ ಕೊಡದೆ ಏಕವಚನದಲ್ಲಿ ಮಾತಾಡ್ತಾಳೆ ಅಂತ ಗಂಡ ದೂರಿದರೆ, ಫ್ರೆಂಡ್ಸ್ ಜೊತೆ ಇರ್ತಾರೆ, ನನ್ನ ಸಿನಿಮಾ ಪಾರ್ಕ್, ಮಾಲ್‌ಗೆ ಕರ್ಕೊಂಡ್ ಹೋಗಲ್ಲ, ಮೊಬೈಲ್ ಪಾಸ್‌ವರ್ಡ್ ಹೇಳಲ್ಲ ಅಂತ ಹೆಂಡತಿ ದೂರಿದ್ದಾಳೆ. ಒಟ್ಟಿನಲ್ಲಿ ಟೂತ್ ಪೇಸ್ಟ್ ಕಾರಣಕ್ಕಾಗಿ ಶುರು ಆದ ಜಗಳ ಈಗ ಈ ಎಲ್ಲ ಕಾರಣಗಳಿಗಾಗಿ ಡಿವೋರ್ಸ್ ಬೇಕು ಅನ್ನೋ ಮಟ್ಟಕ್ಕೆ ಬಂದಿದೆ. ಇವರ ಮಾತನ್ನು ಕೇಳಿದ ಜಡ್ಜ್ , ಅಯ್ಯೋ ಎರಡು ಸೆಪರೇಟ್ ಟೂತ್ ಪೇಸ್ಟ್ ಇಟ್ಕೊಂಡ್ ಬಿಡಿ, ಸಮಸ್ಯೆ ಇರಲ್ಲ ಅಂತ ಸಮಾಧಾನ ಮಾಡಿದ್ದಾರೆ. ಸದ್ಯಕ್ಕೆ ಟೂತ್ ಪೇಸ್ಟ್‌ನಿಂದ ಸಂಬಂಧ ಕಟ್ ಆಗೋದು ಬೇಡ ಅಂತ ಇಬ್ಬರ ಮಧ್ಯೆ ಕಟ್ ಅಂಡ್ ಪೇಸ್ಟ್ ಮಾಡಿ ತೇಪೆ ಹಾಕೋ ಕೆಲಸ ನ್ಯಾಯಾಧೀಶರಿಂದ ಆಗಿದೆ. ಆದರೆ ಇದು ಎಲ್ಲಿಯವರೆಗೂ ನಡೆಯುತ್ತೋ ಅಂತ ಟೂತ್ ಪೇಸ್ಟ್ ಕಂಪನಿಯವರೇ ಹೇಳ್ಬೇಕು.

ಸಂಪಾದಕರ ಸದ್ಯಶೋಧನೆ

ಮೊಬೈಲ್, ವೈಫೈ ಇಲ್ಲದ ಬದುಕು

ಎಚ್ಚರವಾಗಿದ್ದಾಗ ಎರಡು ತಾಸು ಮೊಬೈಲ್ ಬಿಟ್ಟಿದ್ದರೆ, ಕೆಲವರು ವಿಚಿತ್ರವಾಗಿ ಚಡಪಡಿಸಲಾರಂಭಿಸುತ್ತಾರೆ. ಒಂದು ತಾಸು ವಾಟ್ಸಾಪ್ ನೋಡದೇ ಇದ್ದರೆ, ಶುದ್ಧ ತಿಕ್ಕಲರಂತೆ ವರ್ತಿಸಲಾರಂಭಿಸುತ್ತೀರಿ. ಏನೋ ಜಗತ್ತು ಅಲ್ಲೋಲ ಕಲ್ಲೋಲ ಆದವರಂತೆ ಆಡುತ್ತಾರೆ. ಕನಿಷ್ಠ ಗಂಟೆಗೊಮ್ಮೆಯಾದರೂ ಫೇಸ್ ಬುಕ್ ನೋಡಬೇಕು. ಎರಡು ಗಂಟೆಗೊಮ್ಮೆ ಟ್ವಿಟರ್ ನೋಡಬೇಕು. ಇಲ್ಲದಿದ್ದರೆ ಅವರು ಮನುಷ್ಯರಾಗಿರುವುದಿಲ್ಲ. ಇನ್ನು ಕೆಲವರಿಗೆ ಮೊಬೈಲ್ ನೋಡದೇ ಮಾತಾಡಲು ಬರುವುದೇ ಇಲ್ಲ. ನಿಮ್ಮ ಮಾತುಗಳನ್ನು ಕೇಳಿಸಿಕೊಳ್ಳುತ್ತಾರೆ, ಆದರೆ ಮೊಬೈಲನ್ನು ನೋಡುತ್ತಿರುತ್ತಾರೆ. ಮೊಬೈಲ್ ಆಫ್ ಮಾಡಿ ಮಾತಾಡಿ ಅಂದ್ರೆ, ಅರ್ಧ ಗಂಟೆ ಹೇಗೋ ತಡೆದುಕೊಳ್ಳುತ್ತಾರೆ. ನಂತರ ವರ್ತನೆ ಅಡ್ಡಾದಿಡ್ಡಿ, ವಕ್ರ ವಕ್ರ. ಇನ್ನು ಇಂಟರ್ನೆಟ್ ಅಥವಾ ವೈಫೈ ಇಲ್ಲದಿದ್ದರೆ ನೋಡಬೇಕು, ಥೇಟು ಅಂಡು ಸುಟ್ಟುಕೊಂಡ ಬೆಕ್ಕು! ಬೋರ್ಡ್ ರೂಮ್ ಮೀಟಿಂಗ್‌ಗಳಲ್ಲಿ ಪ್ರತಿ ಒಂದು ಗಂಟೆಗೆ 'ಕಾಫಿ ಬ್ರೇಕ್' ತೆಗೆದುಕೊಳ್ಳುವುದು ಸಾಮಾನ್ಯ. ಈಗ ಅಂಥ ವಿರಾಮಕ್ಕೆ ವಾಟ್ಸಾಪ್ ಬ್ರೇಕ್, ಮೊಬೈಲ್ ಬ್ರೇಕ್ ಎಂದು ಕರೆಯುತ್ತಾರೆ. ಸಿನಿಮಾ ಥಿಯೇಟರುಗಳಲ್ಲಿನ ಇಂಟರ್ವೆಲ್ ಸಹ ಈಗ 'ವಾಟ್ಸಾಪ್ ವಿರಾಮ'ವಾಗಿದೆ. ಕಾಫಿ – ತಿಂಡಿಗಿಂತ ಮೊದಲು ವಾಟ್ಸಾಪ್ ನೋಡಬೇಕು. ಇಲ್ಲದಿದ್ದರೆ ಏನೋ ಚಡಪಡಿಕೆ. ಕೆಲವು ದಿನಗಳ ಹಿಂದೆ, ಸುಮಾರು ಒಂದು ತಾಸಿನ ಕಾಲ, ವಾಟ್ಸಾಪ್ ಸರ್ವರ್ ಡೌನ್ ಆಗಿತ್ತು. ಎಲ್ಲೂ ವಾಟ್ಸಾಪ್ ಸೇವೆ ಇರಲಿಲ್ಲ. ಆಗ ಕೆಲವರು ವರ್ತಿಸಿದ ರೀತಿ ನೋಡಿದರೆ ಆಶ್ಚರ್ಯ, ದಿಗಿಲು. ನಿದ್ದೆ ಮಾಡಿದಷ್ಟು ಹೊತ್ತು ಮಾತ್ರ ಇವೆಲ್ಲವುಗಳಿಂದ ಮುಕ್ತಿ. ಎಚ್ಚರವಾದಾಗ ಬೆಡ್ ಕಾಫಿ ಇಲ್ಲದಿದ್ದರೂ ಆದೀತು, ವಾಟ್ಸಾಪ್ ಇರಲೇಬೇಕು. ಬೇಕಾದರೆ ನೋಡಿ, ಜೈಲಿನಲ್ಲಿ ವೈಫೈ ಸೌಲಭ್ಯವಿರುವ ಮೊಬೈಲ್‌ನ್ನು ಕೊಟ್ಟರೆ, ಜೀವಾವಧಿ ಶಿಕ್ಷೆಯನ್ನು ಇಪ್ಪತ್ತೈದು ವರ್ಷಗಳಿಗೆ ಏರಿಸಿದರೂ, ಯಾವ ಕೈದಿಯೂ ಬೇಸರಿಸಿಕೊಳ್ಳುವುದಿಲ್ಲ. ಸಿನಿಮಾ ನೋಡುತ್ತಾ, ಮೆಸೇಜ್ ಮಾಡುತ್ತಾ, ವಿಡಿಯೋ ಕಾಲ್ ಮಾಡುತ್ತಾ ಹಾಯಾಗಿ ಕಳೆದುಬಿಡುತ್ತಾರೆ. ಕೆಲವರು ಜೈಲಿನ ಹೊರಗಿದ್ದೂ ಕಳೆಯುವುದೂ ಹಾಗೆ ಅಲ್ಲವೇ? ಆಗ ಜೈಲು ವಾಸವನ್ನೇ ಎಲ್ಲರೂ ಇಷ್ಟಪಡಬಹುದು. ಹಾಗೆ ನೋಡಿದರೆ, ವೈಫೈ ಇಲ್ಲದ, ಮೊಬೈಲ್ ಇಲ್ಲದ ಜೀವನವೇ ಅನೇಕರಿಗೆ ಜೈಲು ವಾಸ. ಅಷ್ಟರಮಟ್ಟಿಗೆ ಮನುಷ್ಯ ಮೊಬೈಲ್ ಒಳಗೆ ಬಂದಿ. ಮೊಬೈಲ್ ಇಲ್ಲದ, ವೈಫೈ ಇಲ್ಲದ, ಇಂಟರ್ನೆಟ್ ಇಲ್ಲದ ಮನೆಯೇ ಸೆರೆಮನೆ. ನಾನು ಕೆಲವು ದಿನಗಳ ಹಿಂದೆ, ಶಿರಸಿಯ ನನ್ನ ಸ್ನೇಹಿತನ ಮನೆಯಲ್ಲಿ ನಾಲ್ಕು ದಿನ ಇದ್ದೆ. ಆ ಸಂದರ್ಭದಲ್ಲಿ ಬೇಕೆಂದೇ ದಿನದ ಭಾಳ ಹೊತ್ತು ನನ್ನ ಮೊಬೈಲ್ ಸ್ವಿಚ್ ಆಫ್ ಮಾಡಿದ್ದೆ. ಅಲ್ಲದೇ ಅಲ್ಲಿ ನೆಟ್ ವರ್ಕ್ ಸಂಪರ್ಕವೂ ಸರಿಯಾಗಿರಲಿಲ್ಲ. ಹೀಗಾಗಿ ಫೇಸ್ ಬುಕ್‌ನಲ್ಲಿ ಯಾವ ಪೋಸ್ಟ್ ಮಾಡಿರಲಿಲ್ಲ. ಅಲ್ಲದೇ ಟ್ವೀಟ್ ಕೂಡ ಮಾಡಿರಲಿಲ್ಲ. ಅಷ್ಟಕ್ಕೇ ನನ್ನ ಆತ್ಮೀಯರೊಬ್ಬರು ಆಶ್ಚರ್ಯದಿಂದ, 'ನೀವು ಮೂರ್ನಾಲ್ಕು ದಿನ ಫೇಸ್‌ಬುಕ್ ನೋಡದೇ, ಟ್ವೀಟ್ ಮಾಡದೇ, ವಾಟ್ಸಾಪ್ ಮೆಸೇಜ್ ನೋಡದೇ ಹೇಗೆ ಹಾಯಾಗಿ ಇರುತ್ತೀರಿ?' ಎಂದು ಕೇಳಿದ್ದರು. ಅದಕ್ಕೆ ನಾನು 'ಅವು ಇಲ್ಲದಿರುವುದರಿಂದಲೇ ಹಾಯಾಗಿ ಇರಬಹುದು' ಎಂದಿದ್ದೆ. ಇತ್ತೀಚಿಗೆ ಇಂಥದೇ ಇನ್ನೊಂದು ಸಂದರ್ಭ ಒದಗಿ ಬಂದಿತು. ಒಂದು ದಿನ ಇವೆಲ್ಲವುಗಳಿಂದ ದೂರವಾಗಿದ್ದೆ. ಮರುದಿನ ಅದೇ ನನ್ನ ಆತ್ಮೀಯರಿಗೆ (ಅವರ ಸಮಾಧಾನಕ್ಕೆ) ಹೀಗೆ ಬರೆದೆ – 'ಇಂದು ಇಡೀ ದಿನ ನದಿ, ಬೆಟ್ಟ, ಕಾಡು, ತೋಟದಲ್ಲಿ ಕಳೆದೆ. ಆದರೆ ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಮ್‌ದಲ್ಲಿ ಹಾಕಲು ಒಂದೇ ಒಂದು ಫೋಟೋ ತೆಗೆಯಲಿಲ್ಲ. ಇಡೀ ದಿನ ಕಳೆದಿದ್ದು ಯಾಕೋ ವ್ಯರ್ಥ ಎನಿಸಿತು.' ಇದನ್ನು ಓದಿದ ಅವರು, 'ಈ ವಾಕ್ಯದ ಸಾಲುಗಳನ್ನು ಅಲ್ಲಲ್ಲಿ ತುಂಡರಿಸಿ ಬರೆದಿದ್ದರೆ, ಒಳ್ಳೆಯ ಕವನ ಆಗುತ್ತಿತ್ತಲ್ಲ ಸಾರ್' ಎಂದರು.

'ಮುಸಲ್ಮಾನರ' ಬಗ್ಗೆ ಅಂಬೇಡ್ಕರ್ ಹೇಳಿದ್ದೇನು?

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ಭಾರತಕ್ಕೆ ಬಂದ ಬ್ರಿಟಿಷರು ಮೊದಲು ಮಾಡಿದ ಕೆಲಸವೆಂದರೆ,ಇಲ್ಲಿನ ಸಂಸ್ಕೃತಿಯನ್ನು ಆಳವಾಗಿ ಅಧ್ಯಯನ ಮಾಡಿ, ಅದನ್ನು ನಾಶ ಮಾಡುವ ದೂರದೃಷ್ಟಿಯ ಯೋಜನೆಯನ್ನು ರೂಪಿಸಿ, ತಾವು ದೇಶ ಬಿಟ್ಟು ಹೋದ ನಂತರವೂ ತಮ್ಮ ಯೋಜನೆಗಳು ಧೀರ್ಘ ಕಾಲದವರೆಗೂ ಆಳವಾಗಿ ಸಮಾಜದಲ್ಲಿ ಬೇರೂರುವಂತೆ ಮಾಡಿದ್ದು. ಪ್ರತಿ 25 ಕಿಲೋಮೀಟರಿಗೆ ಬದಲಾಗುವ ಭಾರತದ ಸಂಸ್ಕೃತಿಗೆ ದೊಡ್ಡ ಪೆಟ್ಟು ಕೊಡಲು, ಬ್ರಿಟಿಷರು ಮೊದಲು ಭಾರತದ ಶಿಕ್ಷಣ ವ್ಯವಸ್ಥೆಗೆ ಕೈ ಹಾಕಿದರು.ನಂತರ ಭಾರತದ ನ್ಯಾಯಾಂಗ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿ ಬ್ರಿಟಿಷ್ ಮಾದರಿಯ ಕಾನೂನುಗಳನ್ನು ಜಾರಿಗೆ ತಂದರು, ಬ್ರಿಟಿಷರು ದೇಶ ಬಿಟ್ಟ 77 ವರ್ಷಗಳ ನಂತರವೂ ಅವರ ಶಿಕ್ಷಣ ಮತ್ತು ಕಾನೂನುಗಳು ಭಾರತದಲ್ಲಿ ಜಾರಿಯಲ್ಲಿದೆ. ಅವರು ಬಿಟ್ಟು ಹೋದ ಗುಲಾಮಿ ಕುರುಹುಗಳನ್ನು ತೆಗೆದುಹಾಕುವ ಕೆಲಸ ಮಾಡಿದರೆ ವಿರೋಧ ಪಕ್ಷಗಳು ರಾಜಕೀಯ ಮಾಡುತ್ತವೆ, ಸಾವಿರಾರು ವರ್ಷಗಳ ಹಿಂದೆ ಭಾರತದಲ್ಲಿ ಚಾಲ್ತಿಯಲ್ಲಿದ್ದ ಶಿಕ್ಷಣ ವ್ಯವಸ್ಥೆಯ ಬಗ್ಗೆ ಮಾತನಾಡಿದರೆ, ಬ್ರಾಹ್ಮಣ್ಯದ ಹೇರಿಕೆಯೆಂಬ ರಾಜಕೀಯ ಶುರುವಾಗುತ್ತದೆ. ಬಿಹಾರದ ನಳಂದ ವಿಶ್ವವಿದ್ಯಾಲದಲ್ಲಿ ವ್ಯಾಸಂಗ ಮಾಡಲು ವಿದೇಶಿ ವಿದ್ಯಾರ್ಥಿಗಳು ಸಾವಿರ ವರ್ಷಗಳ ಹಿಂದೆ ಭಾರತಕ್ಕೆ ಬರುತ್ತಿದ್ದರು. ಬ್ರಿಟಿಷರು ತಮ್ಮ 'ಈಸ್ಟ್ ಇಂಡಿಯಾ ಕಂಪನಿ' ಮೂಲಕ ಸೇವೆಯ ಹೆಸರಿನಲ್ಲಿ ಕ್ರಿಶ್ಚಿಯನ್ ಮಿಷನರಿಗಳನ್ನು ಬಳಸಿಕೊಂಡು ಮತಾಂತರ ಮಾಡಿದ್ದರು. ಬಾಬಾಸಾಹೇಬರಿಗೆ ತಮ್ಮ ಬಾಲ್ಯದಲ್ಲಿ ಹಿಂದೂ ಧರ್ಮದಲ್ಲಿ ಅನುಭವಿಸಿದ ತಾರತಮ್ಯದ ಬಗ್ಗೆ ಬಹಳ ನೋವಿತ್ತು. ಹಿಂದೂ ಧರ್ಮದಲ್ಲಿ ತಮ್ಮವರಿಗಾಗಿದ್ದ ಅವಮಾನದ ಬಗ್ಗೆ ಕೊನೆಯವರೆಗೂ ಬಾಬಾಸಾಹೇಬರು ಹೇಳಿದ್ದಾರೆ. ವೀರ ಸಾವರ್ಕರ್ ದಲಿತರಿಗಾಗಿ ಸ್ಥಾಪಿಸಿದ 'ಪತಿತ ಪಾವನ ಮಂದಿರ'ದ ಬಗ್ಗೆ ಬಾಬಾಸಾಹೇಬರಿಗೆ ಹೆಮ್ಮೆ ಇತ್ತು,ಹಿಂದೂ ಧರ್ಮದ ಬಗ್ಗೆ ಬಾಬಾಸಾಹೇಬರಿಗೆ ಬೇಸರವಿದ್ದದ್ದು ನಿಜ,ಹಾಗಂತ ಅವರಿಗೆ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಧರ್ಮದ ಮೇಲೆ ಒಲವಿರಲಿಲ್ಲ. ಬಾಬಾಸಾಹೇಬರು ಮತಾಂತರವಾಗಲು ನಿರ್ಧರಿಸಿದಾಗ, ಅನೇಕರು ತಮ್ಮ ಧರ್ಮಕ್ಕೆ ಬರುವಂತೆ ಆಹ್ವಾನಿಸಿದ್ದರು. ಕ್ರಿಶ್ಚಿಯನ್ ಮತಕ್ಕೆ ಮತಾಂತರವಾಗಿ ಮತ್ತೊಮ್ಮೆ ಭಾರತವನ್ನು 'ಈಸ್ಟ್ ಇಂಡಿಯಾ ಕಂಪನಿ' ಮಾಡುವುದು ಅವರಿಗೆ ಇಷ್ಟವಿರಲಿಲ್ಲ, ಮುಸಲ್ಮಾನರ ರಾಷ್ಟ್ರೀಯತೆಯ ಮೇಲೆ ಅಂಬೇಡ್ಕರರಿಗೆ ನಂಬಿಕೆ ಇರಲಿಲ್ಲ, ಮುಸಲ್ಮಾನರಿಗೆ ದೇಶಕ್ಕಿಂತಲೂ ತಮ್ಮ ಧರ್ಮವೇ ಮುಖ್ಯವಾಗಿದ್ದಂತಹ ವಿಷಯ ಬಾಬಾಸಾಹೇಬರಿಗೆ ತಿಳಿದಿತ್ತು. 1947 ರಲ್ಲಿ ಅಖಂಡ ಭಾರತ ವಿಭಜನೆಯಾದಾಗ ಭಾರತ ಮತ್ತು ಪಾಕಿಸ್ತಾನದ ನಡುವೆ ಸಂಪೂರ್ಣವಾಗಿ ಜನಸಂಖ್ಯಾ ವಿನಿಮಯವಾಗಬೇಕೆಂದು ಅಂಬೇಡ್ಕರರು ಹೇಳಿದ್ದರು. ಹಿಂದೂ ಧರ್ಮದಲ್ಲಿ ತಮಗಾದಂತಹ ಅನ್ಯಾಯಗಳ ಬಗ್ಗೆ ಬಹಳಷ್ಟು ನೊಂದಿದ್ದರೂ ಸಹ ಬಾಬಾಸಾಹೇಬರು ಮುಸಲ್ಮಾನ್ ಧರ್ಮಕ್ಕೆ ಮತಾಂತರವಾಗಲಿಲ್ಲ. ಹೈದರಾಬಾದಿನ ನಿಜಾಮ ಮುಸ್ಲಿಂ ಮತಕ್ಕೆ ಮತಾಂತರವಾಗಲು ಬಾಬಾಸಾಹೇಬರಿಗೆ ದೊಡ್ಡ ಮೊತ್ತದ ಹಣದ ಆಮಿಷವನ್ನು ಒಡ್ಡಿದ್ದ. ಇಸ್ಲಾಂ ಧರ್ಮದಲ್ಲಿನ ಅನಿಷ್ಟ ಪದ್ಧತಿಗಳ ಬಗ್ಗೆ ಬಾಬಾಸಾಹೇಬರು ನಿಷ್ಠೂರವಾಗಿ ಹೇಳಿದ್ದರು, ಹೆಣ್ಣು ಮಕ್ಕಳು ಬುರ್ಖಾ ಧರಿಸಿದರೆ ಹಲವು ರೋಗಗಳಿಗೆ ತುತ್ತಾಗುತ್ತಾರೆಂದು ಹೇಳಿದ್ದರು. ಬಾಬಾಸಾಹೇಬರ ಸಂವಿಧಾನವನ್ನು ಮುನ್ನೆಲೆಗೆ ತಂದು ಮಾತನಾಡುವ ಕಾಂಗ್ರೆಸ್ಸಿನ ನಾಯಕರು ಅವರ ತತ್ವಗಳ ವಿರುದ್ಧವಾಗಿ ಹಿಜಾಬ್ ಧರಿಸುವುದನ್ನು ಸಮರ್ಥಿಸಿಕೊಳ್ಳುತ್ತಾರೆ.

ಗಾಂಧಿಯವರ ಪ್ರಕಾರ ಮುಸಲ್ಮಾನರಷ್ಟು ಬಲಿಷ್ಠರಿನ್ನೊಬ್ಬರಿರಲಿಲ್ಲ, ಇದು ತಿಳಿದಿದ್ದರೂ ಸಹ ಅವರು ಹಿಂದುಗಳಿಗೆ ನೀಡುತ್ತಿದ್ದ ಸಂದೇಶವೆಂದರೆ 'ಸತ್ತರೂ ಪರವಾಗಿಲ್ಲ ಆದರೆ ಕೊಲ್ಲಬೇಡಿ'.ಅಹಿಂಸಾ ಮಾರ್ಗದಿಂದ ಸ್ವಾತಂತ್ರ್ಯ ಸಿಗಬೇಕೆಂದು ಹೇಳುತ್ತಿದ್ದಂತಹ ಗಾಂಧಿಯವರಿಗೆ ಜಗಳ ಇಷ್ಟವಿರಲಿಲ್ಲ. ಮುಸಲ್ಮಾನರು ಎಷ್ಟೇ ತೊಂದರೆ ನೀಡಿದರೂ ಹಿಂದೂಗಳು ಹಿಂಸೆಯ ಮಾರ್ಗ ಹಿಡಿಯಬಾರದೆಂಬುದು ಗಾಂಧಿಯವರ ವಾದವಾಗಿತ್ತು. ದೂರದ ಟರ್ಕಿಯಲ್ಲಿನ ಖಿಲಾಫತ್ ಆಂದೋಲನ ಭಾರತಕ್ಕೆ ಕಾಲಿಟ್ಟಾಗ ಬೆಂಬಲ ಸೂಚಿಸಿದವರೆಲ್ಲರಿಗೂ ಈ ವಿಷಯ ತಿಳಿದಿದ್ದರೂ ಸಹ ಮುಸಲ್ಮಾನರ ಮಾನಸಿಕತೆಯ ಅರಿವು ಯಾರಿಗೂ ಅರ್ಥ ಆಗದಿಲ್ಲದಿರುವುದು ಬಾಬಾಸಾಹೇಬರಿಗೆ ಆಶ್ಚರ್ಯವಾದದ್ದು ನಿಜ.ಮುಸಲ್ಮಾನರಿಂದ ದೂರವಿದ್ದ 'ಬರ್ನಾಡ್ ಶಾ' ಮುಸಲ್ಮಾನರ ಅಸಹನೆಯ ಬಗ್ಗೆ ಸ್ಪಷ್ಟವಾಗಿ ಹೇಳಿದ್ದರು, ಆದರೆ ಹತ್ತಿರದಲ್ಲಿದ್ದ ಗಾಂಧಿಯವರಿಗೆ ಅದರ ಅರಿವಿರದಿದ್ದದ್ದು ಆಶ್ಚರ್ಯ.

ತಮ್ಮ ಧರ್ಮದವರ ರಕ್ಷಣೆಯ ಕಾಳಜಿ ಮುಸಲ್ಮಾನರಲ್ಲಿ ಅದೆಷ್ಟಿತ್ತೆಂದರೆ ಇತರ ವಿಷಯಗಳ ಬಗ್ಗೆ ಅವರ ದೃಷ್ಟಿ ಪೂರಾ ಕಲುಷಿತಗೊಂಡಿತ್ತು. ಸಮಾಜದಲ್ಲಿನ ಇತರ ಧರ್ಮದ ಜನರ ಆಚಾರ, ವಿಚಾರಗಳ ಬಗ್ಗೆ ಅವರಿಗೆ ಲಕ್ಷ್ಯವೇ ಇರಲಿಲ್ಲ, ಮುಸಲ್ಮಾನರಿಗೆ ತಾವುಗಳು ಅಲ್ಪಸಂಖ್ಯಾತರಾಗಿ ಉಳಿದು, ಅದರ ನೆರಳಿನಲ್ಲಿ ತಮಗೆ ಬೇಕಿರುವ ಹಕ್ಕುಗಳನ್ನು ಕಾಪಾಡಿಕೊಳ್ಳಬೇಕೆಂಬುದಷ್ಟೇ ಮೂಲ ಧ್ಯೇಯ. ಹಿಂದೂಗಳು ಬಹುಸಂಖ್ಯಾತರಾಗಿದ್ದರಿಂದ ಸಂವಿಧಾನ ರಚನೆಯ ಸಂದರ್ಭದಲ್ಲಿ ರಾಜಕೀಯವಾಗಿ ಮುಸಲ್ಮಾನರಿಗೆ ಪ್ರತ್ಯೇಕ ಮತದಾರ ಕ್ಷೇತ್ರಕ್ಕಾಗಿ ಬೇಡಿಕೆಯೊಡ್ಡಿ ಸಂವಿಧಾನದಲ್ಲಿ ಸೇರಿಸುವುದು ಅವರ ಉದ್ದೇಶವಾಗಿತ್ತು. ಈ ಮೂಲಕ ಕೇಂದ್ರ ಮತ್ತು ರಾಜ್ಯದಲ್ಲಿ ರಾಜಕೀಯವಾಗಿ ಹೆಚ್ಚಿನ ಪ್ರಾತಿನಿಧ್ಯ ಪಡೆಯುವುದು ಬಹುತೇಕ ಮುಸ್ಲಿಂ ನಾಯಕರ ಉದ್ದೇಶವಾಗಿತ್ತು. 1930 ರಲ್ಲಿ ಮುಸ್ಲಿಮರಿಗೆ ಮತ್ತೊಂದು ಮಾರ್ಗ ಸಿಕ್ಕಿತ್ತು, ಹಿಂದೂಗಳು ಅಲ್ಪಸಂಖ್ಯಾತರಾಗಿರುವ ಹೊಸ ಪ್ರಾಂತ್ಯಗಳನ್ನು ರಚಿಸುವ ಯೋಜನೆಯಿತ್ತು. ಈ ಮೂಲಕ ಮುಸಲ್ಮಾನರು ಬಹುಸಂಖ್ಯಾತರಾಗಿರುವ ಜಾಗಗಳಲ್ಲಿ ಅಲ್ಪಸಂಖ್ಯಾತ ಹಿಂದುಗಳನ್ನು ಒತ್ತೆಯಾಗಿರಿಸಿ, ಬಹುಸಂಖ್ಯಾತ ಮುಸಲ್ಮಾನರರೊಂದಿಗೆ ವ್ಯವಹರಿಸಲು ಒತ್ತಡಕ್ಕೊಳಪಡಿಸುವುದು. ಇದೇ ಉದ್ದೇಶದಿಂದ ಮುಸಲ್ಮಾನರು ಬಹುಸಂಖ್ಯಾತರಾಗಿರುವ ಪ್ರಾಂತ್ಯಗಳನ್ನು ಮಾಡಿಸಿಕೊಂಡು ಅವುಗಳನ್ನು ಶಕ್ತಿಶಾಲಿಯಾಗಿ ಮಾಡುವುದು.ಈ ನಿಟ್ಟಿನಲ್ಲಿ ಅವರು ಪ್ರತ್ಯೇಕ 'ಸಿಂಧ್' ಮತ್ತು 'ವಾಯುವ್ಯ' ಪ್ರಾಂತ್ಯದಲ್ಲಿ ಜವಾಬ್ದಾರಿಯುತ ಸರಕಾರ ಸ್ಥಾಪಿಸುವುದಕ್ಕೆ ಬೇಡಿಕೆ ಇಟ್ಟಿದ್ದರು. ಇದರಿಂದಾಗಿ ಮುಸಲ್ಮಾನರಿಗೆ ನಾಲ್ಕು ಪ್ರಾಂತ್ಯಗಳ ಆಳ್ವಿಕೆ ಸಿಗುವಂತಾಗುತ್ತಿತ್ತು, ಈ ಪ್ರಾಂತ್ಯಗಳನ್ನು ಸದೃಢಗೊಳಿಸಲು ಕೇಂದ್ರವನ್ನು ದುರ್ಬಲಗೊಳಿಸುವ ಪ್ರಯತ್ನವೂ ನಡೆಯಿತು. ಇದರ ಮುಂದುವರೆದ ಭಾಗವಾಗಿ ಈ ಪ್ರಾಂತ್ಯಗಳಿಗೆ ವಿಶೇಷವಾದ ಅಧಿಕಾರ ನೀಡಬೇಕೆಂಬ ಬೇಡಿಕೆಯನ್ನು ಮುಂದಿಟ್ಟಿದ್ದರು. ಒಟ್ಟಾರೆ ಬ್ರಿಟಿಷ್ ಇಂಡಿಯಾ ಇದ್ದಾಗ ನಿರ್ಧರಿಸಿದ್ದ ಸ್ಥಾನಗಳ ಪೈಕಿ ಮೂರನೇ ಒಂದು ಭಾಗವನ್ನು ಮುಸಲ್ಮಾನರಿಗೆ ನೀಡಬೇಕೆಂಬ ಬೇಡಿಕೆಯನ್ನಿಟ್ಟಿದ್ದರು.ಇಂದಿನ ಕಾಲದಲ್ಲಿ ಜಾತ್ಯತೀತತೆಗೆ ಸಂಬಂಧಿಸಿದಂತೆ ಯೋಚಿಸುವಾಗ, ಅಂದಿನ ದಿನಗಳಲ್ಲಿ ಬಾಬಾಸಾಹೇಬರಿಗೆ ಈ ವಿಚಾರದ ಬಗ್ಗೆ ಇದ್ದ ಸ್ಪಷ್ಟತೆ ನಮಗೆ ಆಶ್ಚರ್ಯವವನ್ನುಂಟು ಮಾಡುತ್ತದೆ. ಸಂವಿಧಾನ ಸಮಿತಿಯಲ್ಲಿ 'ಜಾತ್ಯತೀತತೆ' ಕುರಿತು ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಬಾಬಾಸಾಹೇಬರು ಹೀಗೆ ಹೇಳುತ್ತಾರೆ 'ಜಾತ್ಯತೀತ ರಾಜ್ಯವೆಂದರೆ ಜನರ ಧಾರ್ಮಿಕ ಭಾವನೆಗಳನ್ನು ಲೆಕ್ಕಿಸಬೇಕೆಂದಿಲ್ಲ ಎಂಬ ಅರ್ಥವಲ್ಲ, ಅದರ ಅರ್ಥವಿಷ್ಟೆ 'ಯಾವುದೋ ಒಂದು ಮತವನ್ನು ಇತರರ ಮೇಲೆ ಹೇರಲು ಲೋಕಸಭೆಗೆ ಅವಕಾಶವಿಲ್ಲ, ಜಾತ್ಯತೀತತೆಯ ಅರ್ಥ ಯಾವುದೋ ಒಂದು ಮತವನ್ನು ಅಲ್ಲಗಳೆಯುವುದೆಂದಲ್ಲ.

ಸಂವಿಧಾನವನ್ನು ರಚಿಸುವಾಗ ಬಾಬಾಸಾಹೇಬರು 'ಮತನಿರಪೇಕ್ಷತೆ' ಎಂಬ ಪದದ ಅರ್ಥವನ್ನು ಸ್ಪಷ್ಟಪಡಿಸಬೇಕಾಯಿತು, ಬಾಬಾಸಾಹೇಬರು 'ಮತನಿರಪೇಕ್ಷತೆ' ಎಂದರೆ ಧರ್ಮದ ಧಿಕ್ಕಾರವಲ್ಲ, ಸರಕಾರವು ಮತದ ವಿಷಯದಲ್ಲಿ ಯಾರನ್ನೂ ತಲೆಯ ಮೇಲೆ ಕೂರಿಸಿಕೊಳ್ಳಬಾರದು ಅಥವಾ ತುಳಿಯಲು ಬಾರದು ಎಂಬುದನ್ನು ಹೇಳಿದ್ದರು. ಆದರೆ ಬಾಬಾಸಾಹೇಬರ ಸಂವಿಧಾನದ ಬಗ್ಗೆ ಮಾತನಾಡುವ

ಕಾಂಗ್ರೆಸ್ ಪಕ್ಷ ಮುಸಲ್ಮಾನರ ಮತಬ್ಯಾಂಕನ್ನು ಗಟ್ಟಿಗೊಳಿಸುವ ಸಲುವಾಗಿ ಹಲವು ರಾಜ್ಯಗಳಲ್ಲಿ ಪ್ರತ್ಯೇಕವಾಗಿ ಮುಸಲ್ಮಾನರಿಗೆ ಯೋಜನೆಗಳನ್ನು ನೀಡುತ್ತಾ ಬಂದಿದೆ. ಕರ್ನಾಟಕದಲ್ಲಿ ಮುಸಲ್ಮಾನರಿಗೆ ಅಸಂವಿಧಾನಿಕವಾಗಿ ಶೇಕಡಾ 4ರಷ್ಟು ಮೀಸಲಾತಿ ನೀಡಿತ್ತು ಮತ್ತು ಸರಕಾರದ ಗುತ್ತಿಗೆ ಆಧಾರಿತ ಕೆಲಸಗಳಲ್ಲಿ ಶೇಕಡಾ 4ರಷ್ಟು ಮೀಸಲಾತಿಯನ್ನು ಮುಸಲ್ಮಾನರಿಗೆ ನೀಡುವ ಪ್ರಸ್ತಾವನೆ ಕಳುಹಿಸಿದೆ. ಸಂವಿಧಾನ ರಚನೆಯ ಸಂದರ್ಭದಲ್ಲಿ ಪಾಲ್ಗೊಂಡಿದ್ದವರಲ್ಲಿ ಹಲವರಿಗೆ ಹೆಚ್ಚಿನ ಚಿಂತೆ ಸ್ವಂತ ಭವಿಷ್ಯದ್ದು ಮತ್ತು ಸ್ವಲ್ಪ ಮಾತ್ರ ದೇಶದ ಚಿಂತೆ ಎಂಬುದರ ಸ್ಪಷ್ಟ ಅರಿವು ಬಾಬಾಸಾಹೇಬರಿಗಿತ್ತು. ಹಾಗಾಗಿ ಬಾಬಾಸಾಹೇಬರು ಸಂವಿಧಾನ ರಚನೆಯ ಸಂದರ್ಭದಲ್ಲಿ ಬಳಸುವ ಪದಗಳ ಬಗ್ಗೆ ಬಹಳ ಎಚ್ಚರ ವಹಿಸಿದ್ದರು.ಉದಾಹರಣೆಗೆ 'ಅಲ್ಪಸಂಖ್ಯಾತ' ಎಂಬ ಪದವನ್ನು ತೆಗೆದುಕೊಂಡರೆ, ಈ ಶಬ್ದವನ್ನು ಬಳಸಿದ್ದೇ ಆದಲ್ಲಿ ಕೆಲವರು ತಮ್ಮ ಸ್ವಾರ್ಥಕ್ಕಾಗಿ ಹಲವು ಸಮಸ್ಯೆಗಳನ್ನು ಸೃಷ್ಟಿಸುತ್ತಾರೆಂಬುದು ಅವರಿಗೆ ತಿಳಿದಿತ್ತು. ಅದಕ್ಕಾಗಿ ಬಾಬಾಸಾಹೇಬರು 'ಅಲ್ಪಸಂಖ್ಯಾತ' ಎಂಬ ಜಾಗದಲ್ಲಿ 'ಸಮಾಜದ ಯಾವುದೇ ಭಾಗ' ಎಂಬ ಪದವನ್ನು ಬಳಸಿದರು. ಬಾಬಾಸಾಹೇಬರ ಅಂದಿನ ದೂರದೃಷ್ಟಿಯನ್ನೊಮ್ಮೆ ಗಮನಿಸಿದರೆ, ಅವರು ಅಂದು ಹೇಳಿದ ಮಾತು ಇಂದು ನಿಜವಾಗಿದೆ. ಅವರು ಹೇಳಿದ ಹಾಗೆ ಸಂವಿಧಾನ ರಚನೆಯಾದ ಏಳು ದಶಕಗಳ ನಂತರವೂ 'ಅಲ್ಪಸಂಖ್ಯಾತ'ರೆಂಬ ಪದಬಳಕೆಯಿಂದ ಕೆಲ ರಾಜಕೀಯ ಪಕ್ಷಗಳು ಮುಸಲ್ಮಾನರ ಓಲೈಕೆಗಾಗಿ ತಮ್ಮ ಸ್ವಾರ್ಥ ರಾಜಕೀಯ ಮಾಡುತ್ತಿವೆ. ದೇಶದಲ್ಲಿ ಸುಮಾರು ಶೇ.12 ರಷ್ಟು ಜನಸಂಖ್ಯೆ ಹೊಂದಿರುವ ಮುಸಲ್ಮಾನರನ್ನು ಇಂದಿಗೂ ಅಲ್ಪಸಂಖ್ಯಾತರೆನ್ನುವ ಮೂಲಕ ಓಲೈಕೆಯ ರಾಜಕಾರಣ ನಡೆಯುತ್ತಿದೆ.

ಬಾಬಾಸಾಹೇಬರು ಮತಾಂತರಗೊಳ್ಳುವುದಾಗಿ ಹೇಳಿದ ನಂತರ ಅವರ ಮುಂದಿನ ಧರ್ಮದ ಬಗ್ಗೆ ಹಲವು ಊಹಾಪೋಹಗಳು ಸೃಷ್ಟಿಯಾದವು. ಹಿಂದೂ ಮಹಾಸಭಾ ನಾಯಕರು ಅವರ ಮನವೊಲಿಸುವ ಕೆಲಸ ಮಾಡಿದ್ದರು,ಅತ್ತ ಸಿಖ್ ನಾಯಕರೂ ಸಹ ತಮ್ಮ ಧರ್ಮಕ್ಕೆ ಬರುವಂತೆ ಆಹ್ವಾನ ನೀಡಿದ್ದರು. ಬಾಬಾಸಾಹೇಬರಿಗೆ ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗುವ ಉದ್ದೇಶವೇ ಇರಲಿಲ್ಲ, ಅಲ್ಲಿರುವ ಅಸಮಾನತೆಯ ಬಗ್ಗೆ ನೇರವಾಗಿ ಹೇಳಿದ್ದರು. ಅಸ್ಪೃಶ್ಯರು ಮತಾಂತರಗೊಂಡು ಈ ಮತಗಳನ್ನು ಸೇರಿದ ಮೇಲೂ,ಅವರಿಗೆ ಮೊದಲಿನ ರೀತಿಯ ವ್ಯವಹಾರವೇ ಸಿಗುತ್ತಿತ್ತು. ಮತಾಂತರಗೊಂಡು ಕ್ರೈಸ್ತರಾದರೆ ಬ್ರಾಹ್ಮಣ ಕ್ರೈಸ್ತ, ಮರಾಠ ಕ್ರೈಸ್ತ, ಲಿಂಗಾಯಿತ ಕ್ರೈಸ್ತ ಹೀಗೆ ಆ ಸಮಾಜವು ಜಾತಿಗಳಲ್ಲಿ ಒಡೆದಿದೆ ಎಂದು ಹೇಳಿದ್ದರು. ಬಾಬಾಸಾಹೇಬರು ಮತಾಂತರಗೊಳ್ಳುವೆನೆಂದು ಹೇಳಿದ ಕೆಲವೇ ದಿನಗಳಲ್ಲಿ ಮೈಸೂರು ಸರಕಾರವು ದಸರಾ ಸಂದರ್ಭದಲ್ಲಿ ನಡೆಯುವಂತಹ ಮಹಾರಾಜರ ವಿಶೇಷ ದರ್ಬಾರಿನಲ್ಲಿ ಅಸ್ಪೃಶ್ಯರಿಗೂ ಪಾಲ್ಗೊಳ್ಳುವ ಅವಕಾಶವಿದೆಯೆಂಬ ರಾಜಾಜ್ಞೆಯನ್ನು ಘೋಷಿಸಿತು. ಮೈಸೂರು ರಾಜ್ಯದ ಇತಿಹಾಸದಲ್ಲಿ ಇದೊಂದು ಅಭೂತಪೂರ್ವ ಘಟನೆಯಾಯಿತು.ಅದೇ ಸಂದರ್ಭದಲ್ಲಿ ತಿರುವಾಂಕೂರು ಸರಕಾರವು ತನ್ನ ಅಧಿಕಾರದ ವ್ಯಾಪ್ತಿಯಲ್ಲಿರುವ ಸುಮಾರು 1600 ಮಂದಿರಗಳಲ್ಲಿ ಅಸ್ಪೃಶ್ಯರಿಗೆ ಮುಕ್ತ ಪ್ರವೇಶ ನೀಡಲು ನಿರಾಧಾರಿಸಿರುವುದಾಗಿ ಹೇಳಿತ್ತು. ಹಿಂದೂ ಧರ್ಮದಲ್ಲಿರುವ ಜಾತಿ ವ್ಯವಸ್ಥೆಗಳ ಬಗ್ಗೆ ಅಣಕಿಸುವವರು, ಮುಸ್ಲಿಂ ಧರ್ಮದಲ್ಲಿನ ಜಾತಿ ವ್ಯವಸ್ಥೆ ಬಗ್ಗೆ ತಿಳಿದುಕೊಳ್ಳಬೇಕು. ಮುಸಲ್ಮಾನರಲ್ಲಿ ಪಠಾಣ್, ರಿಜ್ವಿ, ಶೇಕ್, ಸಿದ್ದಿಕ್ಕಿ, ಖಾನ್, ಮಿರ್ಜಾ ಎಂಬ ಸಾಮಾನ್ಯ ವರ್ಗವಿದೆ. ಅನ್ಸಾರಿ, ಬೆಹ್ನ, ಚಿಕ್ವಾ, ದುನಿಯಾ, ದರಜಿ, ಗುನಿಯಾ, ಮನ್ಸೂರಿ, ಇರಿಸಿ ಎಂಬ ಇತರ ಹಿಂದುಳಿದ ವರ್ಗಗಳಿವೆ. ಭಟಯಾರ, ಫಕೀರ್, ಶಾ, ಲಾಲ್ ಬೇಗಿ, ರಂಕಿ, ರಂಗ್ರೇಜ್, ಮೋಚಿ, ಮುಖೇರಿ, ಬಿಷ್ತಿ ಎಂಬ ದಲಿತ ಮುಸ್ಲಿಂ ವರ್ಗಗಳಿವೆ. ಮುಸ್ಲಿಂ ಮತದಲ್ಲೂ ಮೇಲ್ವರ್ಗ ಮತ್ತು ಕೆಳವರ್ಗವೆಂಬ ಬೇಧಭಾವವಿದೆ, ಮೇಲ್ವರ್ಗದ ಮುಸಲ್ಮಾನರು ಅಷ್ಟು ಸುಲಭವಾಗಿ ಕೆಳವರ್ಗದ ಮುಸಲ್ಮಾನರೊಂದಿಗೆ ಸಂಬಂಧ ಬೆಳೆಸುವುದಿಲ್ಲ.

ಬಾಬಾಸಾಹೇಬರು ಕೊನೆಯದಾಗಿ ಬೌದ್ಧ ಧರ್ಮಕ್ಕೆ ಮತಾಂತರವಾದರು, ಅವರು ಮತಾಂತರಗೊಂಡ ನಂತರ ಸಾವರ್ಕರ್ ಏನು ಹೇಳುತ್ತಾರೆ ಗೊತ್ತೇ? 'ಅಂಬೇಡ್ಕರರು ಮತಾಂತರವಾಗಿದ್ದುದು ಹಿಂದೂ ಧರ್ಮವು ವಿಶ್ವಾಸಪೂರ್ವಕ ಕೈಗೊಂಡಿರುವ ಒಂದು ಭಾರಿ ನೆಗೆತ. ಬೌದ್ಧ ಅಂಬೇಡ್ಕರರು ಹಿಂದೂ ಅಂಬೇಡ್ಕರರಲ್ಲದೆ ಮತ್ತೇನು? ಅಂಬೇಡ್ಕರರದ್ದು ಒಂದು ಅವೈದಿಕ, ಆದರೆ ಹಿಂದುತ್ವದ ಪರಿವಿಧಿಗೆ ಒಳಪಡುವ ಭಾರತೀಯ ಮತವನ್ನೇ ಸ್ವೀಕರಿಸಿದ್ದಾರೆ' ಎಂದಿದ್ದರು.

ಸಂವೇದನಾಶೀಲ ರಾಜಕಾರಣದ ಅವಶ್ಯಕತೆ

ಕಳೆದೊಂದು ದಶಕದಲ್ಲಿ ಕರ್ನಾಟಕದ ರಾಜಕಾರಣದ ದಿಕ್ಕನ್ನು ಗಮನಿಸಿದರೆ ರಾಜಕಾರಣದಲ್ಲಿ 30-40 ವರ್ಷ ಶಾಶ್ವತವಾಗಿ ನೆಲೆಯೂರಿದ ಹಿರಿಯರು ತಮ್ಮ ಮಕ್ಕಳಿಗೆ ಮಣೆ ಹಾಕಿ ವಂಶವೃದ್ಧಿ ಮಾಡುತ್ತಿದ್ದಾರೆಯೇ ವಿನಹ ಒಬ್ಬನೇ ಒಬ್ಬ ಪಕ್ಷದ ಕಾರ್ಯಕರ್ತನಿಗೆ ಅವಕಾಶ ಕಲ್ಪಿಸಿಕೊಡುವ ಬಗ್ಗೆ ಚಿಂತಿಸಿಲ್ಲ.

ಅಭಿಮತ

ಆದರ್ಶ್ ಶೆಟ್ಟಿ ಉಪ್ಪಿನಂಗಡಿ
vveditoped@gmail.com

ಕರ್ನಾಟಕದ ಹೊಳೆಯಲ್ಲಿ ಅದೆಷ್ಟೋ ರಾಜಕಾರಣದ ನೀರು ಹರಿದು ಸಮುದ್ರ ಸೇರಿವೆ. ಅದೆಷ್ಟೋ ರಾಜಕಾರಣಿಗಳು ಹಲವಾರು ವರ್ಷಗಳ ಕಾಲ ರಾಜಕಾರಣ ನಡೆಸಿದ್ದಾರೆ. ತಮಗೆ ವಯಸ್ಸಾದಾಗ ತಮ್ಮ ಮಕ್ಕಳನ್ನು ಗದ್ದುಗೆಯಲ್ಲಿ ಕೂರಿಸಿ ಕೆಲ ರಾಜಕಾರಣಿಗಳು ಇಹಲೋಕ ತ್ಯಜಿಸಿದರೆ ಇನ್ನು ಕೆಲ ಮಂದಿ ಮನೆಯಲ್ಲಿ ಕೂತು ನಾಲ್ಕು ಗೋಡೆಗಳ ಮಧ್ಯೆ ರಾಜಕೀಯದ ಚದುರಂಗದಾಟದಲ್ಲಿ ತೊಡಗಿದ್ದಾರೆ. ಇನ್ನು ಕೆಲವರು ಅಪ್ಪ ಮಕ್ಕಳು ಜೊತೆ ಜೊತೆಯಾಗಿಯೇ ರಾಜಕೀಯದ ಅಧಿಕಾರ ಅನುಭವಿಸುತ್ತಿದ್ದಾರೆ. ಗಂಡ ಸಚಿವನಾದರೆ ಹೆಂಡತಿ ಶಾಸಕಿ, ಅಪ್ಪ ಶಾಸಕ, ಸಚಿವನಾದರೆ ಮಗಳು ಸಂಸದೆ ಹೀಗೆ ಕುಟುಂಬ ರಾಜಕಾರಣದಲ್ಲಿ ಕರ್ನಾಟಕಕ್ಕೆ ಅಗ್ರ ಪಂಕ್ತಿಯಿದೆ.

ಕರ್ನಾಟಕ ರಾಜಕಾರಣದ ಇತಿಹಾಸದಲ್ಲಿ ಘಟಾನುಘಟಿ ರಾಜಕಾರಣಿಗಳು ತಂದ ಪರಿಣಾಮಕಾರಿ ಯೋಜನೆಗಳು ಒಂದಲ್ಲ ಒಂದು ರೀತಿಯಲ್ಲಿ ಜನಮಾನಸದಲ್ಲಿ ಇಂದಿಗೂ ಅಚ್ಚಳಿಯದೆ ಉಳಿದಿದೆ. ಆ ಕಾಲದ ರಾಜಕೀಯ ಯಾವ ಮಟ್ಟದಲ್ಲಿತ್ತೆಂದರೆ ಹಿಂದುಳಿದ ವರ್ಗಗಳ ಪರವಾಗಿ ಉಳುವವನೇ ಹೊಲದೊಡೆಯ ಕಾನೂನು ಜಾರಿಗೆ ತಂದ ದೇವರಾಜ ಅರಸರು, ಸೂರಿಲ್ಲದೆ ಮರದಡಿಯಲ್ಲಿ ಮಲಗಿದ್ದ ವೃದ್ಧೆಯ ಸ್ಥಿತಿ ಕಣ್ಣಾರೆ ಕಂಡು ಮರುಗಿ ಸೂರಿಲ್ಲದವರಿಗೆ ಆಶ್ರಯ ಯೋಜನೆ ಜಾರಿಗೆ ತಂದ ಎಸ್. ಬಂಗಾರಪ್ಪ ಹೀಗೆ ಸಮಾಜದ ಕಟ್ಟ ಕಡೆಯ ವ್ಯಕ್ತಿಯ ವಸ್ತುಸ್ಥಿತಿಯನ್ನು ಅರಿತು ಆ ಕಾಲದಲ್ಲಿ ಆಗಿನ ರಾಜಕಾರಣಿಗಳು ತಂದ ದೂರದೃಷ್ಟಿಯ ಯೋಜನೆಗಳು ಇಂದಿಗೂ ಮನೆ ಮನಗಳಲ್ಲಿ ಅಚ್ಚಳಿಯದೆ ಉಳಿದಿದೆ. ಇದರ ಜೊತೆಗೆ ಬಡವರ ಮನೆಗಳಲ್ಲಿ ಬೆಳಕು ಕಂಡ ಒಂದು ಬಲ್ಬ್‌ನ ಭಾಗ್ಯಜ್ಯೋತಿ ಯೋಜನೆ, ಗಂಡನನ್ನು ಕಳೆದುಕೊಂಡ ವಿಧವೆಯರಿಗಾಗಿ ವಿಧವಾ ವೇತನ, ವೃದ್ಧರ ಸ್ವಾಭಿಮಾನದ ಬದುಕಿಗಾಗಿ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ಯೋಜನೆ, ಬಾಣಂತಿಯರಿಗಾಗಿ ಮಡಿಲು ಯೋಜನೆ, ಬಡವರು ಬ್ಯಾಂಕ್ ವ್ಯವಹಾರ ನಡೆಸಲು ಹಿಂಜರಿಯುತ್ತಿದ್ದ ಕಾಲದಲ್ಲಿ ಅಂದಿನ ವಿತ್ತ ಸಚಿವ ಬಿ.ಜನಾರ್ದನ ಪೂಜಾರಿಯವರು ಜಾರಿಗೆ ತಂದ ಸಾಲಮೇಳ ಯೋಜನೆ ಇಂದಿಗೂ ಮುಕ್ತ ಬ್ಯಾಂಕ್ ವ್ಯವಹಾರ ನಡೆಸಲು ಜನಸಾಮಾನ್ಯರಿಗೆ ಪ್ರೇರೇಪಣೆ ನೀಡಿದೆ. ಇಂತಹ ಸೂಕ್ಷ್ಮ ಸಂವೇದನಾ ಶೀಲ ರಾಜಕಾರಣ ಇಂದಿನ ಕಾಲದಲ್ಲಿ ರಾಜಕಾರಣಿಗಳಲ್ಲಿ ಬಲು ಅಪರೂಪವೇ ಸರಿ.

ಒಬ್ಬ ಸಚಿವ, ಸಂಸದ, ಶಾಸಕ ಅಥವಾ ಇನ್ನಿತರ ಜನಪ್ರತಿನಿಧಿಗಳು ಅದೆಷ್ಟು ದಿನಪತ್ರಿಕೆಗಳನ್ನು ಓದುವ ಅಥವಾ ಆ ಪತ್ರಿಕೆಗಳಲ್ಲಿ ವರದಿಯಾಗುವ ತನ್ನ ಇಲಾಖೆಗೆ ಸಂಬಂಧ ಪಟ್ಟ ಸಮಸ್ಯೆ, ವಿಶೇಷ ವರದಿಗಳು ಹಾಗೂ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದು ಜನಸಾಮಾನ್ಯರು ತೊಂದರೆಗೆ ಸಿಲುಕಿದ ಸಮಯದಲ್ಲಿ ಪತ್ರಕರ್ತನೋರ್ವ ಆ ಸಮಸ್ಯೆಯ ಬಗ್ಗೆ ವಿಶೇಷ ವರದಿ ಪ್ರಕಟಿಸಿದಾಗ ಆ ಇಲಾಖೆಗೆ ಸಂಬಂಧಿಸಿದ ಸಚಿವ, ಮುಖ್ಯಮಂತ್ರಿ, ಶಾಸಕ, ಸಂಸದ ಸ್ಪಂದಿಸುವ ಸಂವೇದನಾಶೀಲತೆಯನ್ನು ಉಳಿಸಿಕೊಂಡಿದ್ದಾನೆಯೇ? ಉಳಿಸಿಕೊಂಡಿದ್ದಾನೆಂದರೆ ಇವೆಲ್ಲವೂ ಯಶಸ್ವಿ ಜನಪ್ರತಿನಿಧಿಯ ಹಿಂದಿರುವ ಅತಿ ಸಣ್ಣ ಸಂಗತಿಗಳೆಂದೇ ಪರಿಗಣಿಸಬಹುದು. ಒಂದೂರಿನ ಸರಕಾರಿ ಶಾಲೆಯ ದುಸ್ಥಿತಿಯ ಬಗ್ಗೆ, ಜನಸಾಮಾನ್ಯರು ನಡೆದುಕೊಂಡು ಹೋಗಲು ಸರಿಯಾದ ದಾರಿಗಳಿಲ್ಲದ ಸಮಯದಲ್ಲಿ, ಕುಡಿಯುವ ನೀರಿನ ಸಮಸ್ಯೆ, ಮೂಲ ಭೂತ ಸೌಕರ್ಯಗಳ ಬಗ್ಗೆ ಆ ಭಾಗದ ಪತ್ರಕರ್ತರು ಬೆಳಕು ಚೆಲ್ಲಿದಾಗ ಆ ವರದಿಯನ್ನು ನೋಡಿ ಜಿಲ್ಲಾಧಿಕಾರಿಗೋ ಅಥವಾ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡುವ ಪರಿಪಾಠಗಳಿದ್ದವು.

ಆದರೆ ಕಾಲಬದಲಾದಂತೆಲ್ಲ ರಾಜಕಾರಣದ ಮಗ್ಗುಲಲ್ಲಿ ಬದಲಾವಣೆ ಕಾಣತೊಡಗಿದೆ. ಅಂದಿನ ಕಾಲದಂತೆ ಪ್ರಸ್ತುತ ಪತ್ರಿಕಾ ವರದಿಗಳು ಬಿಡಿ ರಾಜಕಾರಣಿಗಳ ಕಣ್ಣೆದುರಿಗೆ ಸಮಸ್ಯೆಗಳು ತಾಂಡವವಾಡುತ್ತಿದ್ದರೂ ಮುಖ ತಿರುಗಿಸಿಕೊಂಡು ಹೋಗುವ, ಪತ್ರಿಕೆ, ದೃಶ್ಯಮಾಧ್ಯಮಗಳು ದಿನವಿಡೀ ಸಮಸ್ಯೆಗಳನ್ನು ಹೊತ್ತ ವರದಿಗಳನ್ನು ಭಿತ್ತರಿಸಿದರೂ ತಮಗೆ ಲಗಾಮೇ ಇಲ್ಲದಂತೆ ರಾಜಕಾರಣಿಗಳು ವರ್ತಿಸುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹಣಕ್ಕಾಗಿ, ಲೋಭಕ್ಕಾಗಿ ಮತದಾರ ತನ್ನ ಮತವನ್ನು ಎಲ್ಲಿಯ ತನಕ ಮಾರಿಕೊಳ್ಳಲು ಸಿದ್ಧನಾಗಿರುತ್ತಾನೋ ಅಲ್ಲಿಯವರೆಗೆ ಈ ಎಲ್ಲಾ ಪ್ರಕ್ರಿಯೆಗಳು ಸದಾ ಚಾಲ್ತಿಯಲ್ಲಿರುವ ಸಂಗತಿಗಳೇ.

ಒಂದು ಕಾಲದಲ್ಲಿ ವಿಚಾರ, ಮೌಲ್ಯ, ಸಿದ್ಧಾಂತ, ಕಾರ್ಯ, ಸಂಘಟನೆ, ಹಿರಿತನದ ಆಧಾರದಲ್ಲಿ ನಡೆಯುತ್ತಿದ್ದ ರಾಜಕಾರಣದ ದಿಕ್ಕು ಬದಲಾಗಿ ಕುಟುಂಬದ ಸುತ್ತ, ಹಣ, ಹೆಂಡ, ಉಡುಗೊರೆ, ಜಾತಿ, ಸಮುದಾಯದ ಆಧಾರದಲ್ಲಿ ಆವರಿಸಿಕೊಂಡಿದೆ. ಈ ಹಿಂದೆಲ್ಲ ಒಬ್ಬ ಅಭ್ಯರ್ಥಿ ಚುನಾವಣೆಗೆ ಸ್ಪರ್ಧೆ ಮಾಡಿದರೆ ಆತನ ಆಸ್ತಿ, ಸಂಪತ್ತು ಘೋಷಣೆಯ ಮೌಲ್ಯ ಆತನ ರಾಜಕಾರಣದ ಪಾರದರ್ಶಕತೆಯನ್ನು ಬಿಂಬಿಸುತ್ತಿದ್ದವು. ಚುನಾವಣೆಯ ಇಡುಗಂಟು(ಠೇವಣಿ) ಪಕ್ಷದ ಕಾರ್ಯಕರ್ತರೇ ಸಂಗ್ರಹಿಸಿ ಕೊಟ್ಟು ಚುನಾವಣೆಯಲ್ಲಿ ಆರಿಸಿ ಕಳುಹಿಸುತ್ತಿದ್ದರು. ಇಂದು ಅಪ್ಪ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಲೋಕಸಭೆಗೆ ನಿಂತರೆ ಮಗ ವಿಧಾನಸಭೆಗೆ, ಗಂಡ ನಿಧನ ಹೊಂದಿ ಉಪಚುನಾವಣೆ ನಡೆದರೆ ಪತ್ನಿ ಇಲ್ಲವೇ ಮಗಳು ಅಭ್ಯರ್ಥಿ. ಇಂದು ವಾಚಾಮಗೋಚರ ನಿಂದಿಸಿಕೊಂಡ ನಾಯಕರು ನಾಳೆ ತಮ್ಮ ಪಕ್ಷದಲ್ಲಿ ಟಿಕೆಟ್ ಸಿಗದಿದ್ದರೆ ವಿರೋಧ ಪಕ್ಷದ ಬಾಗಿಲು ಬಡಿದು ಅಭ್ಯರ್ಥಿಯಾಗಿ ಬಿಡುತ್ತಾರೆ.

ಕಳೆದೊಂದು ದಶಕದಲ್ಲಿ ಕರ್ನಾಟಕದ ರಾಜಕಾರಣದ ದಿಕ್ಕನ್ನು ಗಮನಿಸಿದರೆ ರಾಜಕಾರಣದಲ್ಲಿ 30-40 ವರ್ಷ ಶಾಶ್ವತವಾಗಿ ನೆಲೆಯೂರಿದ ಹಿರಿಯರು ತಮ್ಮ ಮಕ್ಕಳಿಗೆ ಮಣೆ ಹಾಕಿ ವಂಶವೃದ್ಧಿ ಮಾಡುತ್ತಿದ್ದಾರೆಯೇ ವಿನಹ ಒಬ್ಬನೇ ಒಬ್ಬ ಪಕ್ಷದ ಕಾರ್ಯಕರ್ತನಿಗೆ ಅವಕಾಶ ಕಲ್ಪಿಸಿಕೊಡುವ ಬಗ್ಗೆ ಚಿಂತಿಸಿಲ್ಲ. ಬೆಳೆಯುವ ಕಾರ್ಯಕರ್ತ ಎಲ್ಲಿ ತನಗೆ ತನ್ನ ಕುಟುಂಬಕ್ಕೆ ಮಗ್ಗುಲ ಮುಳ್ಳಾಗುತ್ತಾನೋ ಎಂಬ ದೆಸೆಯಿಂದ ಆತನನ್ನು ಚಿವುಟಿ ಡಮ್ಮಿ ನಾಯಕರನ್ನೇ ಬಹುತೇಕ ಜನಪ್ರತಿನಿಧಿಗಳು ಕ್ಷೇತ್ರದ ಪದಾಧಿಕಾರಿಗಳಾಗಿ ಆಯ್ಕೆ ಮಾಡುತ್ತಾ ಬಂದಿದ್ದಾರೆ.

ಇನ್ನು ರಾಜಕಾರಣವೆಂದರೆ ತಮ್ಮ ಸುತ್ತಮುತ್ತಲಿನ ಒಂದಷ್ಟು ಬಳಗವನ್ನು ಕಟ್ಟಿಕೊಂಡು ತಮ್ಮ ಬೇಕು ಬೇಡಗಳನ್ನು ಪೂರೈಸಿಕೊಳ್ಳುವುದು. ಸಣ್ಣ ಕೆಲಸ ಕಾರ್ಯಗಳಿಗೂ ದೊಡ್ಡ ಸಾಧಕರಂತೆ ಸಾಮಾಜಿಕ ಜಾಲತಾಣಗಳಲ್ಲಿ ವಿವಿಧ ಹಾಡುಗಳನ್ನು ಹಾಕಿ ದೊಡ್ಡ ಮಟ್ಟದಲ್ಲಿ ತಮ್ಮ ಹಿಂಬಾಲಕರ ಮೂಲಕ ಪ್ರಚಾರ ಪಡೆಯುವುದು. ಯಾರೋ ತಂದ ಅನುದಾನಗಳಿಗೆ ತೆಂಗಿನಕಾಯಿ ಒಡೆದು ಗುದ್ದಲಿ ಪೂಜೆ ನಡೆಸಿ ತಾನೇ ಅಭಿವೃದ್ಧಿ ಕಾರ್ಯ ಮಾಡಿರುವುದಾಗಿ ಬಿಂಬಿಸಿಕೊಳ್ಳುವ ಪ್ರವೃತ್ತಿಗಳು, ಅತ್ಯಾಚಾರ, ಕೊಲೆ, ಹಗರಣ,ದೌರ್ಜನ್ಯ, ಪಾತಕ ಕೃತ್ಯ, ಸಮಾಜದ್ರೋಹಿ ಕೃತ್ಯ ನಡೆಸಿ, ಅಧಿಕಾರದಲ್ಲಿದ್ದಾಗಲೇ ಜೈಲು ಪಾಲಾಗಿ ಹೊರಬಂದವರನ್ನೇ ಹೀರೋಗಳಂತೆ ಸ್ವೀಕರಿಸುವ ಮಟ್ಟಕ್ಕೆ ತಲುಪಿರುವ ರಾಜಕಾರಣ ಹಾಗೂ ಆಡಳಿತ ಪಕ್ಷ, ಪ್ರತಿಪಕ್ಷಗಳೇ ಹಗರಣಗಳಲ್ಲಿ ಹೊಂದಾಣಿಕೆ ಮಾಡಿಕೊಂಡು ಸಾಗಿದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕಾರಣದ ನೈತಿಕ ಮೌಲ್ಯ ಉಳಿಯಲು ಹೇಗೆ ಸಾಧ್ಯ?

ಕಳೆದ ಎರಡು ದಶಕಗಳ ಹಿಂದಿನ ರಾಜಕಾರಣದ ಸ್ಥಿತಿಗತಿಗಳು ಹೇಗಿದ್ದವು? ವಿಧಾನ ಮಂಡಲ, ಪರಿಷತ್ ಅಧಿವೇಶನದ ಸ್ವರೂಪಗಳು ಹೇಗಿದ್ದವು? ಯಾವುದೇ ಹಗರಣ ಅಥವಾ ಆಡಳಿತ ಪಕ್ಷಗಳಿಂದ ಜನಸಾಮಾನ್ಯರಿಗೆ ತೊಂದರೆಯಾದಾಗ ಅಧಿವೇಶನದಲ್ಲಿ ಪ್ರತಿಪಕ್ಷ ನಾಯಕ, ಸದಸ್ಯರು ಪ್ರತಿಭಟಿಸಿದರೆ ಕಳಂಕ ಹೊತ್ತ ಜನಪ್ರತಿನಿಧಿಗಳ ಮೇಲೆ ಶಿಸ್ತು ಕ್ರಮ, ತನಿಖೆಗೆ ಒಪ್ಪಿಸುವ ಕಾರ್ಯಗಳು ನಡೆಯುತ್ತಿದ್ದವು. ಕರ್ನಾಟಕದಲ್ಲಿನ ಗಂಭೀರ ಪ್ರಕರಣವನ್ನೇ ಗಮನಿಸುವುದಾದರೆ ಇದಕ್ಕೊಂದು ತಾರ್ಕಿಕ ಅಂತ್ಯ ಕಾಣಿಸಲು ಇಂದಿಗೂ ಪ್ರತಿಪಕ್ಷ ಬಿಜೆಪಿಗೆ ಸಾಧ್ಯವಾಗಿಲ್ಲ. ಇನ್ನು ಅಧಿವೇಶನ ಕಲಾಪಗಳಲ್ಲಿ ಸಮಯಕ್ಕೆ ಸರಿಯಾಗಿ ಹಾಜರಾಗದಿರುವುದು, ತಮಗೆ ಖುಷಿ ಬಂದಂತೆ ಸಭೆಯಿಂದ ಎದ್ದು ಹೋಗುವುದು, ತಮ್ಮ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳದೇ ಆಲಸ್ಯತನ ತೋರಿ ಕೇವಲ ಕುರ್ಚಿ ಬಿಸಿ ಮಾಡಿ ಬರುವ ಜನಪ್ರತಿನಿಧಿಗಳಿಗೂ ಕೊರತೆಯಿಲ್ಲ. ಇನ್ನು ಚಿಂತಕರ ಚಾವಡಿ ಪರಿಷತ್ ಸ್ಥಾನಕ್ಕೆ ಟಿಕೆಟ್ ಸಿಗದ ರಾಜಕಾರಣಿಗಳಿಗೆ,ನೇರವಾಗಿ ಗೆಲ್ಲುವ ಸಾಮರ್ಥ್ಯವಿಲ್ಲದವರಿಗೆ,ಅಸಮಾಧಾನಿತರನ್ನು ತೃಪ್ತಿಪಡಿಸಲು ನಾಮನಿರ್ದೇಶನ ಮಾಡಲು ಇರುವ ವೇದಿಕೆಯಂತೆ ಪ್ರಸ್ತುತ ಭಾಸವಾಗುತ್ತಿದೆ.

ಸಾಮಾಜಿಕ ಜಾಲತಾಣ, ಯೂಟ್ಯೂಬ್ ಚಾನೆಲ್, ದೃಶ್ಯ ಮಾಧ್ಯಮಗಳ ಪ್ರಭಾವದ ಹೊರತಾಗಿ ರಾಜಕಾರಣದಲ್ಲಿ ಸಂಘಟನಾ ಕಾರ್ಯ ಮಾಡಿದ ನಾಯಕರನ್ನು ಗಮನಿಸಿದರೆ ವಾಹನ ಸೌಕರ್ಯಗಳಿಲ್ಲದೆ,ಆಧುನಿಕ ತಂತ್ರಜ್ಞಾನದ ಬೆಳವಣಿಗೆಯಿಲ್ಲದ ಸಮಯದಲ್ಲಿ ಪಕ್ಷ ಕಟ್ಟಿದ ನಾಯಕರು ಇಂದಿಗೂ ಕೊನೆಯ ಸಾಲಿನಲ್ಲಿ ಸಂಘಟನೆಯ ಬೆಳವಣಿಗೆಯಲ್ಲಿ ತೃಪ್ತಿಪಟ್ಟುಕೊಂಡಿದ್ದರೆ ವಂಶದ ಕೃಪೆಯಿಂದ, ಹಣದ ಪ್ರಭಾವದಿಂದ, ಜಾತಿ ಬಲದಿಂದ, ಜಾಲತಾಣಗಳ ಪ್ರಭಾವ ಗಿಮಿಕ್‌ನಿಂದ ಜನಪ್ರತಿನಿಧಿಗಳಾದವರು ಮುಂದಿನ ಸಾಲಲ್ಲಿ ಹಿರಿಯ ಕಾರ್ಯಕರ್ತರನ್ನು ಒದ್ದು, ಕನಿಷ್ಠ ಅವರ ಭಾವನೆಗಳಿಗೂ ಬೆಲೆ ನೀಡದೆ ಮೆರೆಯುತ್ತಿರುವುದು ಇಂದು ಎಲ್ಲ ಪಕ್ಷಗಳಲ್ಲಿ ಕಾಣುತ್ತಿದ್ದೇವೆ. ಇಂತಹ ನಾಯಕರಿಗೆ ಜನಸಾಮಾನ್ಯರ ಬಿಡಿ ನಿಷ್ಠಾವಂತ ಕಾರ್ಯಕರ್ತರ ಬೆವರು, ರಕ್ತ, ಶ್ರಮ, ತ್ಯಾಗದ ಬೆಲೆ ತಿಳಿಯಲು ಹೇಗೆ ತಾನೇ ಸಾಧ್ಯ?

ಪ್ರಸ್ತುತ ಸಾಮಾಜಿಕ ವ್ಯವಸ್ಥೆಯಲ್ಲಿ ರಾಜಕಾರಣ ಎಂಬುವುದು ನುಸುಳದ ಕ್ಷೇತ್ರಗಳೇ ಇಲ್ಲ. ಸಮಾಜದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲು ಆಯಾ ಕ್ಷೇತ್ರದ ಶಾಸಕನ ಶಿಫಾರಸು ಬೇಕು. ಸರಕಾರಿ ಶಾಲಾಭಿವೃದ್ಧಿ ಸಮಿತಿಗೆ ಸದಸ್ಯರ ನೇಮಕ, ಧಾರ್ಮಿಕ ಕ್ಷೇತ್ರಕ್ಕೆ ಸದಸ್ಯರ ನೇಮಕ, ಯುನಿವರ್ಸಿಟಿ ಸಿಂಡಿಕೇಟ್ ಸದಸ್ಯರ ನೇಮಕ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಶಾಸಕ, ಸಚಿವರು ಮೂಗು ತೂರಿಸುವುದರಿಂದ ರಾಜಕೀಯ ಪಕ್ಷಗಳ ನಾಯಕರೇ ಪರಮ ಪವಿತ್ರ ಕ್ಷೇತ್ರಗಳಾದ ಶಿಕ್ಷಣ, ಧಾರ್ಮಿಕ, ಸಹಕಾರ ಕ್ಷೇತ್ರಗಳಲ್ಲಿ ತುಂಬಿ ತುಳುಕುತ್ತಿದ್ದಾರೆ. ರಾಜಕಾರಣದ ದಿಕ್ಕು ಸರಳತೆ, ಜನಸ್ನೇಹಿ ನಡೆಗಿಂತ ಐಷಾರಾಮಿ, ಸ್ಪರ್ಧಾತ್ಮಕ ವ್ಯವಸ್ಥೆಯ ಕಡೆ ಸಾಗುತ್ತಿರುವುದು ಕೂಡ ಕಳವಳಕಾರಿ ಸಂಗತಿಯಾಗಿ ಪರಿಣಮಿಸಿದೆ.

ಒದುಗರ ಒಣಿ

ಒದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ದೊಡ್ಡ ಮೊತ್ತದ ವಹಿವಾಟಿಗೆ ನಿರ್ಬಂಧ

ಸ್ಥಿರಾಸ್ತಿಯನ್ನು ಮಾರಾಟ ಮಾಡಿ ದೊರಕಿದ ಕೋಟಿಗಿಂತಲೂ ಹೆಚ್ಚಿನ ಮೊತ್ತದ ನಗದು ಹಣವು ಇತ್ತೀಚೆಗೆ ಕದ್ದು ಹೋಗಿದ್ದು ಸುದ್ದಿಯಾಗಿತ್ತು. ಇಂತಹ ವಹಿವಾಟುಗಳಲ್ಲಿ ಅಷ್ಟೊಂದು ದೊಡ್ಡ ಮೊತ್ತದ ಹಣವನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯುವುದು, ಆಮೇಲೆ ಅದನ್ನು ಮನೆಯಲ್ಲಿ ಇಡುವುದು ಭದ್ರತೆಯ ದೃಷ್ಟಿಯಿಂದ ಅನಪೇಕ್ಷಿತ. ಖರೀದಿದಾರರು ಬ್ಯಾಂಕುಗಳ ಡಿಮ್ಯಾಂಡ್ ಡ್ರಾಫ್ಟ್‌ಗಳ ಮೂಲಕ ಮಾರಾಟಗಾರರಿಗೆ ಆಸ್ತಿಯ ಮೊತ್ತವನ್ನು ನೀಡುವುದು ಸುರಕ್ಷಿತ ಹಾಗೂ ಸರಿಯಾದ ಕ್ರಮವಾಗಿದೆ. ಇಷ್ಟೇ ಅಲ್ಲ, ಡಿಜಿಟಲ್ ಕ್ರಾಂತಿಯ ಹೊರತಾಗಿಯೂ ಈಗ ರಿಯಲ್ ಎಸ್ಟೇಟ್ ವ್ಯವಹಾರ, ಕಟ್ಟಡ ಕಟ್ಟುವಿಕೆ, ಗುತ್ತಿಗೆ, ಸಭೆ, ಸಮಾರಂಭಗಳ ಖರ್ಚು, ವ್ಯಾಪಾರ ಮುಂತಾದ ಹಲವಾರು ಸಂದರ್ಭಗಳಲ್ಲಿ ದೊಡ್ಡ ದೊಡ್ಡ ಮೊತ್ತದ ಹಣವು ಕೈ ಬದಲಾಯಿಸುತ್ತವೆ. ಇವುಗಳಲ್ಲಿ ಕೆಲವೆಲ್ಲ ವಹಿವಾಟುಗಳ ಆದಾಯಗಳು ಸರಿಯಾಗಿ ವರದಿಯಾಗದೆ, ತೆರಿಗೆಯ ವ್ಯಾಪ್ತಿಯಿಂದ ಹೊರಗೇ ಉಳಿಯುವ ಅಪಾಯವೂ ಇಲ್ಲದಿಲ್ಲ. ಈ ರೀತಿಯ ದೊಡ್ಡ ಮೊತ್ತವು ನಗದಿನ ಮೂಲಕ ನಡೆಯದೆ ಬ್ಯಾಂಕು ಖಾತೆಗಳ ಮೂಲಕವೇ ನಡೆಯುವಂತೆ ಸರಕಾರವು ಆದೇಶ ನೀಡಿದರೆ, ಕೋಟ್ಯಂತರ ರುಪಾಯಿಗಳ ತೆರಿಗೆಯು ಕೈ ತಪ್ಪಿಹೋಗುವ ಅವಕಾಶಗಳು ಕಡಿಮೆ. ಆಗ ಬಡವರ ಕಲ್ಯಾಣ ಯೋಜನೆಗಳಿಗೆ, ಮೂಲ ಸೌಕರ್ಯ ವಲಯಗಳ ಅಭಿವೃದ್ಧಿ ಕಾರ್ಯಗಳಿಗೆ ಬೇಕಾದ ಸಂಪನ್ಮೂಲವು ನಿರಾಯಾಸವಾಗಿ ದೊರಕುವಂತಾದೀತು. ಅಷ್ಟೇ ಅಲ್ಲ, ಈ ರೀತಿಯ ದೊಡ್ಡ ಮೊತ್ತವನ್ನು ಬ್ಯಾಂಕಿನಿಂದ ಕೊಂಡೊಯ್ಯುವಾಗ ಹೊಂಚುಹಾಕುತ್ತಿರುವ ಕಳ್ಳರ ಪಾಲಾಗುವ ಸಾಧ್ಯತೆಯೂ ದೂರವಾದೀತು.

– ಬಿ.ಎನ್.ಭರತ್, ಬೆಂಗಳೂರು

ಕನ್ನಡ ಕಲಿಸಬೇಕಿದೆ

ಹೂಡಿಯ ಸಾದಮಂಗಲ ಕೆರೆಯಂಗಳದಲ್ಲಿ ಹಮ್ಮಿಕೊಂಡಿದ್ದ ಛತ್ ಪೂಜಾ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿದ ಮಾಜಿ ಸಚಿವ ಅರವಿಂದ ಲಿಂಬಾವಳಿ 'ಎಲ್ಲ ಹಬ್ಬಗಳನ್ನೂ ಅದ್ದೂರಿಯಾಗಿ ಆಚರಿಸುವ ಕರ್ನಾಟಕದಲ್ಲಿನ ಇತರ ಭಾಷಿಕರು ಕನ್ನಡ ಕಲಿಯುವ ಮೂಲಕ ಗೌರವ ಸಲ್ಲಿಸಬೇಕು' ಎಂದು ಮನವಿ ಮಾಡಿದ್ದಾರೆ. ಇದು ನಾಡಿನ ಭಾಷೆಯ ಕುರಿತ ಅವರ ಕಳಕಳಿಯನ್ನು ಎತ್ತಿ ತೋರುತ್ತದೆ. ನಮ್ಮ ಕನ್ನಡಿಗರೇ ಅವರೊಂದಿಗೆ ಅವರದೇ ಭಾಷೆಯಲ್ಲಿ ಮಾತನಾಡುತ್ತಾ ಅವರಿಗೆ ಕನ್ನಡ ಕಲಿಯುವಲ್ಲಿ ಉದಾಸೀನ ಭಾವ ಮೂಡಿಸುತ್ತಿದ್ದಾರೆ ಎಂದರೆ ತಪ್ಪಾಗಲಾರದು. ಕನ್ನಡ ಮಾತನಾಡದಿದ್ದರೆ ಇಲ್ಲಿ ಉಳಿವಿಲ್ಲ ಎಂಬ ಸ್ಥಿತಿ ನಿರ್ಮಾಣ ಆಗಬೇಕು. ಇದಕ್ಕೆ ನೆರೆ ರಾಜ್ಯ ತಮಿಳುನಾಡನ್ನು ಮಾದರಿಯಾಗಿ ನೋಡಬೇಕು. ಅವರಿಗಿರುವ ಭಾಷಾ ಪ್ರೇಮ ಕಲಿಯಬೇಕು. ಪರಭಾಷಿಕರು ಕನ್ನಡ ಕಲಿಯಲಿಲ್ಲ ಎನ್ನುವುದಕ್ಕಿಂತಾ ಕಲಿಸಬೇಕಾದ ನಮ್ಮ ಪಾತ್ರವೇ ಹೆಚ್ಚು ಮುಖ್ಯ ಎಂಬುದನ್ನು ಮರೆಯಬಾರದು. ಹಾಗಾಗಿ ಕನ್ನಡ ಕಲಿಸುವುದರಲ್ಲಿ ನಾವು ಹೆಜ್ಜೆ ಇಡಬೇಕಿದೆ. ಅಣ್ಣಾವ್ರು ಹಾಡಿದ ಹಾಡಿನ ಸಾಲಿನಲ್ಲಿರುವ 'ಕಲಿಯೋಕೆ ಕೋಟಿ ಭಾಷೆ, ಆಡೋಕೆ ಒಂದೇ ಭಾಷೆ, ಕನ್ನಡಾ... ಕನ್ನಡಾ...' ಎಂಬಂತೆ ಆಗಬೇಕಿದೆ.

–ಪತ್ತಂಗಿ ಎಸ್ ಮುರಳಿ, ಬೆಂಗಳೂರು

ಒದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಚಿದಾನಂದ ಶೆಟ್ಟಿಗಾರ, ಭದ್ರಾವತಿ**
ಭಟ್ರೇ, ಹೆಂಡತಿಯ ಬಳಿ ವಾಗ್ಯುದ್ಧ ಅಂತ ನನ್ನ ದಿನಚರಿಯಲ್ಲಿ ಇದೆಯಲ್ವ?
- **ಅನ್‌ಇಂಟೆನ್ಸಿಂಗ್!**

- **ರೂಪಾ ವಿನೀತ, ಮಳವಳ್ಳಿ**
ಭಟ್ರೇ, ನನ್ನ ಯಜಮಾನ ಕುಡಿದು ಬರ್ತಾನೆ, ಅದನ್ನು ನಿಲ್ಲಿಸಲು ಏನು ಉಪಾಯ?
- **ಅತ ಬರುವ ಮುನ್ನ ನೀವೂ ಕುಡಿದು ಕುಳಿತುಕೊಳ್ಳಿ!**

- **ಸಂದೀಪ ನಾಯಕ, ಬೆಂಗಳೂರು**
ಭಟ್ರೇ, ನಾನು ಸೋತರೆ ಜಮೀರ್ ಕಾರಣ ಅಂತ ಯೋಗೇಶ್ವರ್ ಹೇಳ್ತಿದ್ದಾರಲ್ವ?
- **ಒಂದು ವೇಳೆ ಗೆದ್ದರೆ ಯಾರು ಕಾರಣ ಅಂತಾನೂ ಹೇಳಬೇಕಿತ್ತು!**

- **ವಿಶ್ವೇಶ ಪಟಗಾರ, ಹೊನ್ನಾವರ**
ಭಟ್ರೇ, ರಾಜಕಾರಣಿಗಳನ್ನು ನಂಬಬಹುದಾ?
- **ನೀನು ನಂಬಿದ್ದರೆ ಅವರು ನಿನ್ನನ್ನು ನಂಬುತ್ತಾರೆ!**

- **ಸಂಗೀತಾ ಭಟ್, ಬೊಮ್ಮನಹಳ್ಳಿ**
ಭಟ್ರೇ, ನಾನು ಕಂಡ ಮೊಲಕ್ಕೆ ನಾಲ್ಕು ಕಾಲು ಇದೆಯಲ್ವ?
- **ಹಾಗಾದರೆ ಅದು ಚಿಕ್ಕು!**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ದೇವೇಗೌಡರು ಪ್ಯಾಡು ಕಟ್ಟಿಕೊಂಡರೆ ಯಾರಂತೆ ಕಾಣುತ್ತಾರೆ?
- **ಕ್ರಿಸ್ ಗೇಯ್ಲ್!**

- **ಸಂತೋಷ ಹೆದ್ದುರ್ಗ, (ಇಮೇಲ್ ಮೂಲಕ)**
ಭಟ್ರೇ, ಏನೇ ಮಾಡಿದರೂ ನನ್ನ ಕಂಪ್ಯೂಟರ್ ಓಪನ್ ಆಗ್ತಿಲ್ಲವಲ್ಲ?
- **'ರಾಂಗ್ ಪಾಸ್ ವಾರ್ಡ್' ಎಂಬ ಪಾಸ್‌ವರ್ಡ್‌ನ್ನು ಮೊದಲು ಬದಲಿಸು!**

- **ಸುಧಾ ಹೊನ್ನೇಸರ, ಬೆಂಗಳೂರು**
ಭಟ್ರೇ, ಮದುವೆಯಾಗಿ ಒಂದು ತಿಂಗಳಿಗೆ ಹೆಂಡತಿಗೆ ಗಂಡನ ಬಂಡವಾಳ ಗೊತ್ತಾಗುತ್ತದೆಯಾ?
- **ಗಂಡನಿಗೆ ಮೊದಲ ರಾತ್ರಿಯೇ ಹೆಂಡತಿಯ ಬಂಡವಾಳ ಗೊತ್ತಾಗುತ್ತದೆ!**

- **ಶ್ರೀಕಂಠ ಶಾಸ್ತ್ರಿ, ಶಂಕರಪುರ**
ಭಟ್ರೇ, ನಿಮ್ಮದು ಮತ್ತು ಸಿದ್ದರಾಮಯ್ಯನವರದು ಯಾವ ಕೆಮಿಸ್ಟ್ರಿ?
- **ಕೆಮಿಸ್ಟ್ರಿಯೇನೂ ಇಲ್ಲ, ಬರೀ ಮಿಸ್ಟ್ರಿ!**

- **ಲತಾ ಹೀರೆಮಠ, (ಇಮೇಲ್ ಮೂಲಕ)**
ಭಟ್ರೇ, ಭಟ್ಟರನ್ನು ಹಿಡಿದರೆ ಬಿಡಲು ಮನಸ್ಸು ಬರುವುದೇ ಇಲ್ಲ ಅಂತ ನನ್ನ ಸ್ನೇಹಿತೆ ಹೇಳ್ತಾಳಲ್ಲ?
- **ಭಟ್ಟರ ಪುಸ್ತಕವನ್ನು ಹಿಡಿದರೆ... ಅಂತ ಹೇಳಿರಬೇಕು, ಸರಿಯಾಗಿ ಕೇಳಿಸಿಕೊಳ್ಳಬಾರದೇ?!**

ನೆಗೆಟಿವ್ ಆಲೋಚನೆಗಳಿಂದ ಹೊರಬರಲು ಹೀಗೆ ಮಾಡಬೇಕು

ಬಿ ಪಾಸಿಟಿವ್

ಡಾ. ಜಗದೀಶ ಮಾನೆ
vveditoped@gmail.com

ಈ ಜಗತ್ತಿನಲ್ಲಿ ಮನುಷ್ಯನಿಗೆ ಅರ್ಥವಾಗದ ವಿಷಯ ಎಂದರೆ, ಅದು ನಮ್ಮ ಮಿದುಳು. ಒಬ್ಬ ವಯಸ್ಕನ ಮೆದುಳಿನಲ್ಲಿ ಸುಮಾರು ನೂರಕ್ಕೂ ಹೆಚ್ಚು ಬಿಲಿಯನ್‌ನಷ್ಟು ನ್ಯೂರಾನ್ಸ್‌ಗಳಿರುತ್ತವೆ ಮತ್ತು ಇವುಗಳಲ್ಲಿ ಪ್ರತಿ ನ್ಯೂರಾನ್ ಹತ್ತು ಸಾವಿರದಷ್ಟು ಜೀವಕೋಶಗಳೊಂದಿಗೆ ಸಂಪರ್ಕ ಹೊಂದಿರುತ್ತವೆ. ಈ ಸಂಪರ್ಕಗಳ ಮೂಲಕ ನಮ್ಮ ಮಿದುಳು ಸಿಗ್ನಲ್ ಗಳಲ್ಲಿ ಆಲೋಚನೆಗಳನ್ನು ಸಂದೇಶಗಳ ರೂಪದಲ್ಲಿ ಕಳುಹಿಸುತ್ತದೆ. ಇದನ್ನು ಸಿನ್ಯಾಪ್ಸ್ ಎಂದು ಕರೆಯುತ್ತಾರೆ. ಇವುಗಳನ್ನು ಸರಿಯಾಗಿ ಲೆಕ್ಕ ಹಾಕಿದರೆ ಅವು ನೂರು ಟ್ರಿಲಿಯನ್ ಕನೆಕ್ಷನ್ ಗಳಾಗುತ್ತವೆ. ಇವು ನಮ್ಮ ಗ್ಯಾಲಕ್ಸಿಯಲ್ಲಿರುವ ನಕ್ಷತ್ರಗಳ ಸಂಖ್ಯೆಯನ್ನೂ ಮೀರಿಸುತ್ತವೆ. ಒಂದು ಅಧ್ಯಯನದಿಂದ ತಿಳಿಯುವುದು ಏನೆಂದರೆ ಈ ಸಂಪರ್ಕಗಳ ನಡುವಿನ ಸಿನ್ಯಾಪ್ಸ್ ಒಂದು ಎಲೆಕ್ಟ್ರಿಸಿಟಿಯನ್ನು ಜನರೇಟ್ ಮಾಡುತ್ತದೆ. ನಮ್ಮ ಮೆದುಳಿಗೆ ಸುಮಾರು 70 ಗಂಟೆಗಳ ಕಾಲ ಒಂದು ಸ್ಮಾರ್ಟ್ ಫೋನನ್ನು ಕನೆಕ್ಟ್ ಮಾಡಿದಾಗ ಅದು ಸಂಪೂರ್ಣವಾಗಿ ಚಾರ್ಜ್ ಆಗುವಷ್ಟು ಕರೆಂಟನ್ನು ಉತ್ಪಾದಿಸುವಷ್ಟು ಸಾಮರ್ಥ್ಯ ಅದಕ್ಕಿದೆ. ಸಾಮಾನ್ಯವಾಗಿ ನಮ್ಮ ಮೆದುಳು 2.5 ಮಿಲಿಯನ್ ಗಿಗಾ ಬೈಟ್‌ನಷ್ಟು ಮೆಮೊರಿ ಸಂಗ್ರಹಣೆಯ ಸಾಮರ್ಥ್ಯವನ್ನು ಹೊಂದಿರುತ್ತದೆ. ಈ ಮೆಮೊರಿಯ ಪ್ರಮಾಣವನ್ನು ಅರ್ಥಮಾಡಿಕೊಳ್ಳಲು ಈ ಮೆಮೊರಿಯನ್ನು ಟಿವಿಯಲ್ಲಿ ಪ್ರದರ್ಶಿಸಿದರೆ ಅದನ್ನು ಸಂಪೂರ್ಣವಾಗಿ ನೋಡುವುದಕ್ಕೆ ಸುಮಾರು 300 ವರ್ಷಗಳಷ್ಟು ಸಮಯ ಬೇಕಾಗುತ್ತದೆ. ಅದು ಅಷ್ಟೊಂದು ಪವರ್ ಫುಲ್ ಆಗಿದೆ. ಸಾಮಾನ್ಯವಾಗಿ ಮನುಷ್ಯನು ಯಾವುದೇ ಒಂದು ಅಭ್ಯಾಸವನ್ನು ಸತತವಾಗಿ 21 ದಿನಗಳ ಕಾಲ ಅನುಸರಿಸಿದರೆ ಅದು ನಮ್ಮ ಮೆದುಳು ಆ ಅಭ್ಯಾಸವನ್ನು ನಮ್ಮ ಜೀವನ ಶೈಲಿಯನ್ನು ಬದಲಾಯಿಸುತ್ತದೆ. ಆ 21 ದಿನಗಳ ಅಭ್ಯಾಸವನ್ನು ಅನುಸರಿಸುವ ಮೂಲಕ 6 ಬ್ರೈನ್ ಹ್ಯಾಬಿಟ್‌ಗಳನ್ನು ನಮ್ಮ ಮೆದುಳು ಸೂಪರ್ ಬ್ರೈನ್ ಗೆ ಪರಿವರ್ತಿಸುತ್ತದೆ. ಅದಕ್ಕೆ ಅಷ್ಟೊಂದು ಸಾಮರ್ಥ್ಯವಿದೆ.

'Habits to increase brain health': ನಮ್ಮ ವಯಸ್ಸು ಹೆಚ್ಚಾಗುತ್ತಾ ಹೋದಂತೆ ನಮ್ಮ ಸಾವಿರಾರು ಬ್ರೈನ್ ಸೆಲ್‌ಗಳನ್ನು ಕಳೆದುಕೊಳ್ಳುತ್ತೇವೆ. ಒತ್ತಡ, ಡ್ರಗ್ಸ್ ಮತ್ತು ಮದ್ಯಪಾನದಂತಹ ಮುಂತಾದ ದುಷ್ಚಟಗಳಿಗೆ ಒಳಗಾಗುವುದರಿಂದ ಆ ಬ್ರೈನ್ ಸೆಲ್‌ಗಳನ್ನು ಕಳೆದುಕೊಳ್ಳುತ್ತಾನೆ. ಹೀಗೆ ಕಳೆದುಕೊಂಡ ಬ್ರೈನ್ ಸೆಲ್‌ಗಳನ್ನು ಪುನಃ ಹಿಂದಿರುಗಿ ರಿಫಿಲ್ ಮಾಡಲು ಸಾಧ್ಯವಿಲ್ಲ ಅಂತ ವಿಜ್ಞಾನಿಗಳು ಹೇಳುತ್ತಾರೆ. ಆದರೆ, ಇತ್ತೀಚಿಗೆ ನಡೆದ ಸಂಶೋಧನೆಯೊಂದರ 60 ರಿಂದ 80 ವರ್ಷ ವಯಸ್ಸಿನಲ್ಲಿಯೂ ಹೊಸ ಬ್ರೈನ್ ಸೆಲ್‌ಗಳನ್ನು ಅಭಿವೃದ್ಧಿ ಪಡಿಸಬಹುದೆಂಬುದು ತಿಳಿದು ಬಂದಿದೆ. ಅದರ ಈ ಹೊಸ ಸೆಲ್‌ಗಳನ್ನು ಬೆಳೆಯಲು ನಮ್ಮ ಮೆದುಳಿಗೆ ಬೆಂಬಲ ನೀಡುವುದು ಅಗತ್ಯವಾಗಿದೆ. ನಮ್ಮ ದೇಹದ ತೂಕದಲ್ಲಿ ಕೇವಲ ಎರಡು ಪರ್ಸೆಂಟ್ ಮಾತ್ರ ನಮ್ಮ ಬ್ರೈನಿನ ತೂಕವಿದೆ. ಹಾಗಿದ್ದರೂ ಅದಕ್ಕೆ ಬ್ಲಡ್ ಸರ್ಕ್ಯುಲೇಶನ್ ಶೇಕಡಾ 20ರಷ್ಟು ಅಂದ್ರೆ, ನಮ್ಮ ದೇಹದಲ್ಲಿ ಸಪ್ಲೈ ಆಗುವ ಬ್ಲಡ್ ಸರ್ಕ್ಯುಲೇಶನ್‌ನಲ್ಲಿ ಶೇಕಡಾ 20ರಷ್ಟು ನಮ್ಮ ಮೆದುಳಿಗೆ ಬೇಕಾಗುತ್ತದೆ. ನಮ್ಮ ರಕ್ತದಲ್ಲಿ ಆಕ್ಸಿಜನ್ ಗ್ಲೂಕೋಸ್ ನಮ್ಮ ಬ್ರೈನ್‌ಗೆ ರಕ್ತದ ಸರ್ಕ್ಯುಲೇಶನ್ ಆಗುವುದರಿಂದ ಮತ್ತು ಈ ಎರಡೂ ನಮ್ಮ ಮೆದುಳಿಗೆ ತುಂಬಾ ಅವಶ್ಯಕವಾಗಿರುತ್ತದೆ. ಹೀಗೆ ಬ್ಲಡ್ ಸರ್ಕ್ಯುಲೇಶನ್ ಆಗುವುದರಿಂದ ಬ್ರೈನಿನಲ್ಲಿರುವ ನ್ಯೂರಾನ್ಸ್ ಫೈರ್ ಆಗುತ್ತಿರುತ್ತವೆ. ಹೀಗೆ ನಿರಂತರವಾಗಿ ರಕ್ತದ ಫ್ಲೋ ಕರೆಕ್ಟಾಗಿ ಇದ್ದರೆ ಯಾವುದೇ ರೀತಿಯ ಮರೆಯುವಿಕೆ, 'ಅಲ್ ಝೈಮರ್' ನಂತಹ ಕಾಯಿಲೆಗಳು ಮೆದುಳಿನಿಂದ ದೂರ ಇರುತ್ತವೆ. ಹಾಗಾಗಿ ರಕ್ತದ ಚಲನವು ಸರಾಗವಾಗಿರಬೇಕೆಂದರೆ ನಿತ್ಯ ವಾಕಿಂಗ್, ವ್ಯಾಯಾಮಗಳನ್ನು ಮಾಡಬೇಕು. ಹಾಗಾದಾಗ ದೇಹದಲ್ಲಿ ರಕ್ತದ ಹರಿವು ಹೆಚ್ಚಾಗುತ್ತದೆ ಮತ್ತು ಅದರಿಂದ ಕ್ರಿಯೇಟಿವ್ ಐಡಿಯಾಗಳು ಬರುತ್ತವೆ.

'Habit to increase brain memory': ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಪ್ರತಿ 65 ಜನರಲ್ಲಿ ಒಬ್ಬರಲ್ಲಿ ಬುದ್ಧಿಮಾಂದ್ಯತೆ ಎಂಬ ಆರೋಗ್ಯ ಸಮಸ್ಯೆ ಇರುತ್ತದೆ. ಹಾಗೆ ಸಂಶೋಧನೆಯೊಂದರ ಪ್ರಕಾರ ಈ ಸಂಖ್ಯೆಯ ಪ್ರಮಾಷ 2050ರ ವೇಳೆಗೆ ಈಗಿರುವ ಮೂರರಷ್ಟು ಹೆಚ್ಚಾಗುವ ಸಾಧ್ಯತೆಗಳಿವೆ. ಈ ಬುದ್ಧಿಮಾಂದ್ಯತೆಗೆ ಯಾವುದೇ ಉತ್ತಮ ಚಿಕಿತ್ಸೆಗಳಿಲ್ಲದೆ ಇರುವುದರಿಂದ ನಮ್ಮ ಆಹಾರ ಪದ್ಧತಿಯನ್ನು ಬದಲಾಯಿಸುವುದಷ್ಟೆ ಇದಕ್ಕಿರುವ ಪರಿಹಾರವೆಂಬುದು ವೈದ್ಯರ ಸಲಹೆ. ನಮ್ಮ ಮೆದುಳಿನ ಜ್ಞಾಪಕ ಶಕ್ತಿಯನ್ನು ಉತ್ತಮವಾಗಿಸಲು ನಾವು ತೆಗೆದುಕೊಳ್ಳಬೇಕಾದ ಉತ್ತಮ ಆಹಾರಗಳೆಂದರೆ ಅವು ಬೆರ್ರಿ ಹಣ್ಣುಗಳು. ಸ್ಟ್ರಾಬೆರಿ, ಬ್ಲೂಬೆರಿ, ಬ್ಲಾಕ್ಬೆರಿ ಇತ್ಯಾದಿ ಹಣ್ಣುಗಳು. ಆದರೆ ನಮ್ಮ ದೇಶದಲ್ಲಿ ಇವುಗಳಲ್ಲಿ ಕೆಲವೊಂದು ಹಣ್ಣುಗಳು ಸಿಗುವುದು ಬಹಳ ಕಷ್ಟಸಾಧ್ಯ. ಸ್ಟ್ರಾಬೆರಿ ಕೆಲಸ ಸ್ಥಳಗಳಲ್ಲಿ ಸಿಗುತ್ತದೆ. ನಮ್ಮಲ್ಲಿ ಸಿಗುವ ಬೆಟ್ಟದ ನೆಲ್ಲಿಕಾಯಿ ಕೂಡಾ ಉತ್ತಮ ಆಹಾರ. ಹಾಗೆ ಇಲ್ಲಿ ಹೆಚ್ಚಾಗಿ ಸಿಗುವ ನೇರಳೆಹಣ್ಣಿನ ಜೊತೆಗೆ ಚಿಯಾಸಿಡ್ಸ್, ಸನ್ ಫ್ಲವರ್ ಸೀಡ್ಸ್ ಹಾಗೂ ಪಂಪ್ಕಿನ್ ಸೀಡ್ಸ್ ಇವುಗಳು ನಮ್ಮ ಮೆದುಳಿನ ಆರೋಗ್ಯವನ್ನು ಉತ್ತಮಗೊಳಿಸಲು ಹೆಚ್ಚು ಸಹಕಾರಿಯಾಗಿದೆ. ನಮ್ಮ ಮೆದುಳಿನಲ್ಲಿ ಶೇಕಡ 60ರಷ್ಟು ಫ್ಯಾಟ್ ಇರುತ್ತದೆ. ಆದ್ದರಿಂದ ಮೆದುಳಿಗೆ ಒಮೆಗಾತ್ರಿ ಫ್ಯಾಟಿ ಆ್ಯಸಿಡ್‌ನ್ನು ನಮ್ಮ ಆಹಾರದಲ್ಲಿ ಸೇರಿಸಿಕೊಳ್ಳಬೇಕು. ಇದು ಹೆಚ್ಚಾಗಿ ಸಿಹಿ ಫುಡ್ ಹಾಗೂ ಮೊಟ್ಟೆಯಲ್ಲಿ ದೊರೆಯುತ್ತದೆ. ಈ ಎಲ್ಲ ಆಹಾರಗಳನ್ನು ನಮ್ಮ ಡಯಟ್‌ನಲ್ಲಿ 21 ದಿನಗಳ ಕಾಲ ಉಪಯೋಗಿಸಿದರೆ ನಂತರ ಅದರ ಪರಿಣಾಮ ನಮಗೆ ಸರಳವಾಗಿ ಅರಿವಾಗುತ್ತದೆ.

'Habit to increase brain hydration': ಒಂದು ಕಾರು ಉತ್ತಮವಾಗಿ ಚಲಾಯಿಸಬೇಕಾದರೆ ಅದಕ್ಕೆ ಇಂಧನ ತುಂಬುವುದು ಅಗತ್ಯ. ಹಾಗೆಯೇ ನಮ್ಮ ಮೆದುಳು ಕೂಡ ಪವರ್‌ಫುಲ್ ಆಗಿ ಕಾರ್ಯ ನಿರ್ವಹಿಸಲು ಬೇಕಾದ ಫ್ಯುಲ್ ಅಂದರೆ ಅದು 'ನೀರು'. ನಮ್ಮ ದೇಹದಲ್ಲಿ ಸುಮಾರು ಶೇ.75ರಷ್ಟು ನೀರಿರುತ್ತದೆ. ಆದರೆ ಈ ಮಟ್ಟದಲ್ಲಿ ಒಂದೇ ಒಂದು ಪರ್ಸೆಂಟ್ ಕಡಿಮೆಯಾದರೂ ಅದು ದೇಹದ ಆರೋಗ್ಯದ ಮೇಲೆ ದೊಡ್ಡ ಪ್ರಭಾವ ಬೀರುತ್ತದೆ. ಇದರಿಂದ ಬೇಗನೆ ಸುಸ್ತು ಬರುತ್ತದೆ ಹಾಗೂ ನಿಧಾನವಾಗಿ ಪ್ರತಿಸ್ಪಂದಿಸುತ್ತೇವೆ. ಅಂದ್ರೆ ನಮ್ಮ ಬ್ರೇನಿಗೆ ಬೇಕಾದ ಫ್ಯುಲ್ ಸರಿಯಾಗಿ ದೊರಕುತ್ತಿಲ್ಲ ಎಂಬುದೇ ಇದರ ಅರ್ಥ. ನಮ್ಮ ಮೆದುಳು ಸಂಪೂರ್ಣ ಸಾಮರ್ಥ್ಯದೊಂದಿಗೆ ಕೆಲಸ ಮಾಡಬೇಕಾದರೆ ಅದಕ್ಕೆ ಅಗತ್ಯವಾದಷ್ಟು ನೀರನ್ನು ನಿತ್ಯ ಪೂರೈಸಬೇಕು. ನಾವೆಲ್ಲಾ ಪ್ರತಿನಿತ್ಯ ಉಸಿರಾಡುವ ಉಸಿರಿನಿಂದಲೇ ನಮ್ಮ ದೇಹದಲ್ಲಿ ಒಂದು ಗ್ಲಾಸ್ ನೀರು ನಮಗೆ ತಿಳಿಯದೆ ಖರ್ಚಾಗಿ ಹೋಗುತ್ತದೆ. ಹಾಗೆ ನಿತ್ಯ ನಮ್ಮ ದೇಹದಿಂದ ಹೊರಬರುವ ಕಲ್ಮಶಗಳಿಂದ ಆರು ಗ್ಲಾಸನಷ್ಟು ನೀರು ಹೊರ ಹೋಗುತ್ತದೆ. ಅಂದ್ರೆ ನಾವು ಪ್ರತಿ ದಿನ ಎರಡು ಲೀಟರ್ ನಷ್ಟು ನೀರನ್ನು ಬದುಕಿರಲು ಖರ್ಚು ಮಾಡುತ್ತೇವೆ. ನಮ್ಮ ದೇಹಕ್ಕೆ ಅಗತ್ಯವಾದ ನೀರನ್ನು ನೀಡದೇ ಇದ್ದರೆ ಡಿ ಹೈಡ್ರೇಶನ್ ಆಗಲು ಪ್ರಾರಂಭವಾಗುತ್ತದೆ. ಇದು ಕಾಲ ಕ್ರಮೇಣ



ಶಾರ್ಟ್ ಮೆಮೊರಿ ಲಾಸ್, ತಲೆನೋವು ಹಾಗೂ ದೃಷ್ಟಿ ದೋಷಗಳನ್ನು ಉಂಟುಮಾಡುತ್ತದೆ. ಆದ್ದರಿಂದ ನಾವು ಆರೋಗ್ಯವಾಗಿರಲು ಹೆಚ್ಚು ನೀರನ್ನು ಕುಡಿಯಬೇಕು. ಪುರುಷರು ಕನಿಷ್ಠ 3.7 ಲೀಟರ್ ಮಹಿಳೆಯರು 2.7 ಲೀಟರ್‌ನಷ್ಟು ನೀರನ್ನು ನಿತ್ಯ ಕುಡಿಯಬೇಕು ಹೀಗಾದಾಗ ನಮ್ಮ ಮೆದುಳು ಅದ್ಭುತವಾಗಿ ಕಾರ್ಯನಿರ್ವಹಿಸುತ್ತದೆ.

'Habit to increase brain strength': ನಿತ್ಯ ನಾವು ಈಜುವುದರಿಂದ ನಮ್ಮ ಹೊಟ್ಟೆಯ ಕೆಳಭಾಗದಲ್ಲಿರುವ ಮಜಲ್ಸ್ ಗಳು ಗಟ್ಟಿಯಾಗುತ್ತವೆ. ಹೆಚ್ಚು ತೂಕ ಎತ್ತಿದಾಗ ಮಜಲ್ಸ್ ಗಳು ವೃದ್ಧಿಯಾಗುತ್ತವೆ. ರನ್ನಿಂಗ್ ಮಾಡುವುದರಿಂದ ತೊಡೆಯ ಖಂಡಗಳು ಬೆಳೆಯುತ್ತವೆ. ಹೀಗಾಗಿ ನಾವು ಮಾಡುವ ಪ್ರತಿಯೊಂದು ವ್ಯಾಯಾಮವು ದೇಹದ ಶಕ್ತಿಯೊಂದಿಗೆ ದೇಹದ ಪ್ರತ್ಯೇಕ ಸ್ತರಗಳನ್ನು ವೃದ್ಧಿಸುತ್ತದೆ. ಆದ್ದರಿಂದ ನಮ್ಮ ಬ್ರೈನಿನ ಶಕ್ತಿಯನ್ನು ಹೆಚ್ಚಿಸುವ ವ್ಯಾಯಾಮಗಳನ್ನು ನಾವು ಮಾಡಬೇಕು. ಅದರಲ್ಲಿ ಸಾಮಾನ್ಯವಾಗಿ ಮೂರು ರೀತಿಯ ವ್ಯಾಯಾಮಗಳು ಅವಶ್ಯಕವಾಗಿವೆ. 'Crystallized intelligence'ಅಂದ್ರೆ ಓದಿರುವುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಜ್ಞಾನ ವೃದ್ಧಿಸುವಿಕೆ. 'Fluid intelligence' ಅಂದ್ರೆ, ಇದು ಹೊಸ ಸಮಸ್ಯೆಗಳನ್ನು ಪರಿಹರಿಸುವ ವಿಧಾನವಾಗಿದೆ. ಇನ್ನು 'Emotional intelligence'ನಿಮ್ಮ ಸಾಮಾಜಿಕ ಜೀವನದಲ್ಲಿ ಹೊರಗಿನವರೊಂದಿಗೆ ಉತ್ತಮ ಸಂಬಂಧ ಬೆಳೆಸಲು ಉಪಯೋಗವಾಗುವ ಸಾಮಾಜಿಕ ಇಂಟಲಿಜೆನ್ಸ್‌ಗಳೆಲ್ಲದಕ್ಕೂ ಬೇಕಾದ ಮತ್ತು ಅದಕ್ಕೆ ಸಂಬಂಧಿಸಿದ ವ್ಯಾಯಾಮಗಳನ್ನು ಮಾಡಬೇಕು. ಈ ಮೂರು ಇಂಟಲಿಜೆನ್ಸ್‌ಗಳನ್ನು ಬೂಸ್ಟ್ ಮಾಡಲು ಉತ್ತಮವಾದ ವ್ಯಾಯಾಮ ಅಂದ್ರೆ, ಅದು ಕಲ್ಪಿತ, ಕಾಲ್ಪನಿಕ ಕಥೆಗಳ ಪುಸ್ತಕಗಳನ್ನು ಓದುವುದು. ಯಾಕಂದ್ರೆ, ಒಂದು ಕಲ್ಪಿತ ಕಥೆಯಲ್ಲಿ ಎಲ್ಲ ಇಂಟಲಿಜೆನ್ಸ್ ಗಳಿರುತ್ತವೆ. 'ಮುಖ್ಯಪಾತ್ರ', ತನಗೆ ಬರುವ ಸಮಸ್ಯೆಗಳನ್ನು ಹೇಗೆ ಪರಿಹರಿಸುವುದು, ಬೇರೆಯವರೊಂದಿಗೆ ಹೇಗೆ ಮಾತನಾಡಬೇಕು ಹೀಗೆ ಎಲ್ಲಾ ರೀತಿಯ ಇಂಟಲಿಜೆನ್ಸ್‌ಗಳಿರುತ್ತವೆ. ಆದ್ದರಿಂದ ಕಾಲ್ಪನಿಕ ಕಥೆಯ ಪುಸ್ತಕಗಳನ್ನು ತೆಗೆದುಕೊಂಡು ಅದರಲ್ಲಿಯ ಯಾವುದಾದರೂ ಒಂದು ಉತ್ತಮ ಕಥೆಯ ಪುಸ್ತಕವನ್ನು ಪ್ರತಿದಿನ ಓದಬೇಕು. ಇದು ನಮ್ಮ ಮೆದುಳಿಗೆ ಬಹಳ ಉಪಯುಕ್ತವಾಗುತ್ತದೆ.

'Habit to decrease brain stress'ಒಂದು ನಿರ್ಣಾಯಕ ಹಂತ ಬಂದಾಗ ಸಾಮಾನ್ಯವಾಗಿ ನಮಗೆಲ್ಲ 'ಟ್ರಸ್ಟ್' ಎಂಬುದಿರುತ್ತದೆ. ಒಂದಿಷ್ಟು ಕೆಲಸಗಳನ್ನು ಮಾಡುವ ಸಂದರ್ಭದಲ್ಲಿ ನಮ್ಮ ಮೆದುಳು ಒತ್ತಡಕ್ಕೆ ಗುರಿಯಾಗುವ ಹಂತ ಬ್ರೇನಿನಲ್ಲಿ ಬಯೋಕೆಮಿಕಲ್ ಉತ್ಪತ್ತಿಯಾಗುತ್ತದೆ. ಇವುಗಳು ನಮ್ಮ ಸರ್ವೈವಲ್ ಗೆ ಬಹಳಷ್ಟು ಉಪಯೋಗಕಾರಿ. ಇವುಗಳು ಬಿಡುಗಡೆಯಾಗುವುದರಿಂದ ಒತ್ತಡದ ಕಾರ್ಯಗಳನ್ನು ಸರಳವಾಗಿ ಮಾಡಲು ಸಹಾಯವಾಗುತ್ತವೆ. ನಮ್ಮಲ್ಲಿ ಒತ್ತಡಗಳು ಹೆಚ್ಚಾದಾಗ ಹೊಸ ಆಲೋಚನೆಗಳು ಬರುವುದಿಲ್ಲ, ಮರೆಯುವಿಕೆ ಹೆಚ್ಚಾಗುತ್ತದೆ. ಹೀಗೆ ಹೆಚ್ಚು ಟ್ರಸ್ಟ್ ಆದಾಗ ಅದಕ್ಕೆ ಉಸಿರಾಟದ ವ್ಯಾಯಾಮವು ಬಹಳ ಉಪಯುಕ್ತ. ಈ ವ್ಯಾಯಾಮವನ್ನು ಪ್ರತಿದಿನ 10 ರಿಂದ 15 ಬಾರಿ ಮಾಡಬೇಕು. ಇದರಿಂದ ಮೆದುಳಿನಲ್ಲಿರುವ ಗೊಂದಲಗಳು ಶಾಂತವಾಗಿ ಒತ್ತಡಗಳು ಕಡಿಮೆಯಾಗುತ್ತವೆ.

'Habits to decrease negative thoughts': ಸಂಶೋಧನೆಯೊಂದರ ಪ್ರಕಾರ ಪ್ರತಿನಿತ್ಯ ಮನುಷ್ಯನಿಗೆ ಸುಮಾರು 40,000 ದಷ್ಟು ಆಲೋಚನೆಗಳು ಬರುತ್ತದೆ. ಅವುಗಳಲ್ಲಿ ಹೆಚ್ಚಾಗಿ ನೆಗೆಟಿವ್ ವಿಚಾರಗಳು ಹೆಚ್ಚಾಗಿ ಬರುತ್ತವೆ. ಇವುಗಳನ್ನು ಕಡಿಮೆ ಮಾಡಬೇಕಾದರೆ ಒಂದು ನೋಟ್ ಬುಕ್‌ನಲ್ಲಿ ನಮ್ಮ ಮೆದುಳಿನಲ್ಲಿ ಬರುವ ನೆಗೆಟಿವ್ ಆಲೋಚನೆಗಳೆಲ್ಲವನ್ನು ಬರೆಯಬೇಕು. ಸ್ವಲ್ಪ ಸಮಯದ ನಂತರ ನಾವು ಬರೆದಿದ್ದ ಎಲ್ಲವನ್ನೂ ಓದಬೇಕು. ನಂತರ ಅದು ಸರಿಯೋ ತಪ್ಪೊ ಎಂಬುದನ್ನು ನಾವೇ ಪ್ರಶ್ನಿಸಬೇಕು. ನಂತರ ಉತ್ತರವನ್ನು ಕೆಳಗೆ ಬರೆಯಬೇಕು ಹೀಗೆ ನಿತ್ಯ ಮಾಡುತ್ತಾ ಹೋದಷ್ಟು ನಮ್ಮಲ್ಲಿ ಬರುವ ನೆಗೆಟಿವ್ ಆಲೋಚನೆಗಳು ಕಡಿಮೆಯಾಗುತ್ತಾ ಹೋಗುತ್ತವೆ. ಹೀಗೆ ಬರುವ ಬಹಳಷ್ಟು ಆಲೋಚನೆಗಳು ಮಾನಸಿಕ ತೀವ್ರತೆ ಮತ್ತು ಭಾವನೆಗಳಿಂದ ಬರುತ್ತವೆ. ಈ ಎಲ್ಲ ನ್ಯೂನ್ಯತೆಗಳಿಂದ ನಮ್ಮ ಮೆದುಳು ಮುಕ್ತವಾಗಿ ಕೆಲಸ ಮಾಡಬೇಕೆಂದರೆ ಅದಕ್ಕೆ ಸಂಬಂಧಿಸಿದ ಈ ಎಲ್ಲಾ ಅಭ್ಯಾಸಗಳನ್ನು ನಾವು ಪ್ರತಿನಿತ್ಯ ಮಾಡಬೇಕು. ನಂತರ ಅದರಿಂದ ಆಗುವ ಉಪಯೋಗಗಳು ನಮಗೆ ಸ್ಪಷ್ಟವಾಗಿ ತಿಳಿಯುತ್ತವೆ. ಈ ಮೇಲಿನ ಎಲ್ಲಾ ಅಂಶ ಹಾಗೂ ಸಲಹೆಗಳನ್ನು 'BIOHACK YOUR BRAIN' ಎಂಬ ಕೃತಿಯಲ್ಲಿ ಲೇಖಕರು ಬಹಳ ಅದ್ಭುತವಾಗಿ ಉಲ್ಲೇಖಿಸಿದ್ದಾರೆ.

(ಲೇಖಕ: ರಾಜ್ಯಶಾಸ್ತ್ರ ಪ್ರಾಧ್ಯಾಪಕರು ಹಾಗೂ ವಿಶ್ಲೇಷಕರು)

ಪ್ರಸ್ತುತ

ಮಿರ್ಲೆ ಚಂದ್ರಶೇಖರ

ಅನ್ನಭಾಗ್ಯ ಅನ್ಯರ ಭಾಗ್ಯ ಆಗದಿರಲಿ

ಸರಕಾರದ ಅನ್ನಭಾಗ್ಯ ಯೋಜನೆಯು ಕೂಲಿಕಾರ್ಮಿಕರಿಗೆ ಹಾಗೂ ಕಡುಬಡವರಿಗೆ ಮೂರು ಹೊತ್ತು ಹಸಿವನ್ನು ನೀಗಿಸುವ ಮಹತ್ತರವಾದ ಯೋಜನೆ ಎನ್ನುವುದರಲ್ಲಿ ಯಾವುದೇ ತಕರಾರು ಹಾಗೂ ಅನುಮಾನವಿಲ್ಲ, ಆದರೆ ಸಮರ್ಪಕವಾಗಿ ಹಾಗೂ ಗುಣಾತ್ಮಕವಾಗಿ ಯೋಜನೆಯ ಫಲವು ಸಲ್ಲಬೇಕಾದವರಿಗೇ ಸಲ್ಲುವ ಅನುಷ್ಠಾನದ ಕಾರ್ಯದಲ್ಲಿ ಲೋಪವಾಗುತ್ತಿದೆ ಎನ್ನುವುದು ಸಾರ್ವಜನಿಕರ ಸ್ಪಷ್ಟ ಅಭಿಪ್ರಾಯ. ಸರಕಾರದ ಯೋಜನೆಗಳು ಯಾವುದೇ ಇರಲಿ ಅನುಷ್ಠಾನಗೊಂಡ ಪ್ರಾರಂಭದಲ್ಲಿ ವಂಚನೆಗಳು ಸಹಜ, ತಡೆಯುವ ನಿಟ್ಟಿನಲ್ಲಿ ಸರಕಾರವು ಕಠಿಣವಾದ ಕ್ರಮಗಳನ್ನು ತೆಗೆದುಕೊಂಡಾಗ್ಯೂ ಬಹಳಷ್ಟು ಹಳಿ ತಪ್ಪುವುದುಂಟು ಕ್ರಮೇಣ ಪೂರ್ಣವಲ್ಲದಿದ್ದರೂ ಒಂದು ಮಟ್ಟಕ್ಕೆ ಬಂದು ಯಶಸ್ವಿ ಆಗುವುದು, ದುರದೃಷ್ಟವೆಂದರೆ ಶಕ್ತಿಕೇಂದ್ರದಿಂದ ಹೊರಡುವಾಗ ಚೀಲದ ತುಂಬ ಬರೋಬ್ಬರಿ ಕ್ವಿಂಟಾಲ್ ಇರುತ್ತದೆ, ಕೊನೆಗೆ ಮುಟ್ಟುವಷ್ಟರಲ್ಲಿ ಇಲಿಹೆಗ್ಗಣಗಳು ತಿಂದು ಕ್ವಿಂಟಾಲ್ ಚೀಲ, ಕೆಜಿ ಪ್ರಮಾಣಕ್ಕೆ ಬಂದು ನಿಂತಿರುತ್ತದೆ.

ಅನ್ನಭಾಗ್ಯ ಯೋಜನೆಯಲ್ಲೂ ಇದೇ ಆಗುತ್ತಿದೆ, ಇಲಿಹೆಗ್ಗಣಗಳಿಗಿಂತ ಬಹಳ ಸಂಖ್ಯೆಯಲ್ಲಿ ಹಸಿವು ಏನೆಂದು ತಿಳಿಯದ ಹೊಟ್ಟೆ ತುಂಬಿರುವ ಫಲಾನುಭವಿಗಳೇ ಕಂಟಕವಾಗಿದ್ದಾರೆ. ಇವರು ದುರುಪಯೋಗ ಮಾಡಿಕೊಳ್ಳುತ್ತಿರುವುದನ್ನು ತಡೆಯಲಾಗುತ್ತಿಲ್ಲ. ಅನ್ನಭಾಗ್ಯದಲ್ಲಿ ಹಸಿದವರಿಗಿಂತ ಹೆಚ್ಚು ಎಲ್ಲ ಸೌಲಭ್ಯಗಳನ್ನು ಹೊಂದಿರುವ ಬಲಿಷ್ಟರು ಇದರ ಉಪಯೋಗವನ್ನು ಪಡೆಯುತ್ತಿರು ವುದು ಸುಳ್ಳಲ್ಲ. ಅರ್ಹರಲ್ಲದವರು ಹಾಗೂ ಅರ್ಹರಿದ್ದು ದುಶ್ಚಟಗಳಿಗೆ ಬಲಿಯಾದವರು ನ್ಯಾಯಬೆಲೆ ಅಂಗಡಿಯಲ್ಲಿ ಅವರ ಪಾಲಿನ ಅಕ್ಕಿಯನ್ನು ಪಡೆದು ಅಲ್ಲೇ ಮಾರಿಕೊಳ್ಳುವುದು ಇಲ್ಲವೆ ಮನೆಗಳ ಬಳಿಗೆ ಬಂದು ಪ್ರತೀ ಕೆಜಿಗೆ ರುಪಾಯಿ ಹದಿನೈದು ಅಥವಾ ಅದಕ್ಕಿಂತ ಹೆಚ್ಚು ಹಣವನ್ನು ಕೊಟ್ಟು ತೆಗೆದುಕೊಳ್ಳುತ್ತಿರುವುದು ಎಲ್ಲರಿಗೂ ಗೊತ್ತಿರುವಂತ ಹದ್ದೆ. ವಿಪರ್ಯಾಸವೆಂದರೆ ಐವತ್ತು ಎಕರೆಯಷ್ಟು ಜಮೀನು ಹೊಂದಿರುವವರು, ಲಕ್ಷಗಟ್ಟಲೆ ಬಾಡಿಗೆ ಗಳಿಸುತ್ತಿರುವವರು, ಆರ್ ಸಿಸಿ ಮನೆ ಹೊಂದಿರುವ ಹಾಗೂ ಕಾರುಬೈಕುಗಳಲ್ಲಿ ಓಡಾಡಿಕೊಂಡು ಆರ್ಥಿಕವಾಗಿ ಸಬಲವಾಗಿರುವವರು ಅನ್ನಭಾಗ್ಯದ ಫಲಾನುಭವಿಗಳು. ಅನ್ನಭಾಗ್ಯದ ಅಕ್ಕಿಗೆ ಕಾಳಸಂತೆಯ ಚೋರರು ಹೆಚ್ಚಿನ ಪಾಲಿಶ್ ಕೊಟ್ಟು ಅದೇ ಅಕ್ಕಿಯನ್ನು ಸೊನಾಮಸೂರಿ ಅಥವಾ ಬುಲೆಟ್‌ರೈಸ್ ಹೆಸರಿನಲ್ಲಿ ನೀಟಾಗಿ ಪ್ಯಾಕ್ ಮಾಡಿ ಕೊಂಡ ದರಕ್ಕಿಂತ ಸರಿಸುಮಾರು ನಾಲ್ಕೈದು ಪಟ್ಟು ಹೆಚ್ಚಿನ ದರಕ್ಕೆ ಮಾರುತ್ತಿದ್ದಾರೆಂದರೆ ನಂಬಲಿಕ್ಕೆ ಕಷ್ಟವಾಗಬಹುದು, ಹದಿನೈದಕ್ಕೆ ಕೊಂಡ ಅನ್ನಭಾಗ್ಯದ ಅಕ್ಕಿಯನ್ನು ಅರವತ್ತು ಎಪ್ಪತ್ತಕ್ಕೆ ಮಾರುವುದೆಂದರೆ ಲಾಭದ ವ್ಯಾಪಾರವಲ್ಲವೇ? ಅದಕ್ಕೇ ಹೇಳಿದ್ದು ಅನ್ಯರಭಾಗ್ಯ ಎಂದು.

ಬಿಪಿಎಲ್ ಕಾರ್ಡ್ ಪಡೆದವರೆಲ್ಲ ಬಡವರಲ್ಲ ಹಾಗೆಯೇ ಎಪಿಎಲ್ ಕಾರ್ಡ್ ಹೊಂದಿರುವವರೆಲ್ಲ ಚೆನ್ನಾಗಿದ್ದು ಸಂತೃಪ್ತರಾಗಿ ಜೀವನ ನಡೆಸುತ್ತಿದ್ದಾರೆ ಎಂದು ಅಂದುಕೊಳ್ಳುವುದು ತಪ್ಪು, ಕೆಲವು ಉದ್ಯೋಗಗಳು ಮೇಲ್ನೋಟಕ್ಕೆ ಏನು ಮಹಾ ಅನಿಸುತ್ತದೆ. ಆರ್ಥಿಕವಾಗಿ ಎಷ್ಟು ಸದೃಢರು ಎಂಬುದಕ್ಕೆ ಅವರ ಬ್ಯಾಂಕ್ ಖಾತೆ, ಸ್ಥಿರಾಸ್ಥಿ ಮತ್ತು ಚರಾಸ್ಥಿಗಳನ್ನು ಚೆಕ್ ಮಾಡಿ ನೋಡಿದರೆ ತಿಳಿಯು ವುದು.

ಬಹುಲಾಭಾಂಶ ಇರುವ ಕೆಲವು ವೃತ್ತಿಗಳ ವಾಸ್ತವತೆಯ ಅರಿವು ನಿಮಗಾಗಬೇಕಾದರೆ ನಾನು ಹೇಳುವ ಕೆಲವು ಸಣ್ಣಪುಟ್ಟ ವ್ಯಾಪಾರಗಳು ನಡೆಯುವ ಸ್ಥಳಗಳಲ್ಲಿ ಒಂದು ಗಂಟೆ ನಿಂತು ಚೆಕ್ ಮಾಡಿ ನೋಡಿ ಸತ್ಯಾಂಶ ತಿಳಿಯುವುದು. ಕಾಳಸಂತೆಯಲ್ಲಿ ಕದ್ದು ಸಾಗಿಸುತ್ತಿದ್ದ ಅನ್ನಭಾಗ್ಯದ ಅಕ್ಕಿಯನ್ನು ಪೊಲೀಸರು ಹಿಡಿದಿದ್ದಾರೆ ಎಂಬ ಸುದ್ದಿ ಮಾಧ್ಯಮಗಳ ಒಂದಿಲ್ಲೊಂದು ಪತ್ರಿಕೆಗಳಲ್ಲಿ ಇದ್ದೇಇರುತ್ತದೆ. ಕಾಳಸಂತೆಯಲ್ಲಿ ಅಕ್ಕಿಯನ್ನು ಮಾರುತ್ತಿರುವುದಕ್ಕೆ ಎರಡು ಕಾರಣಗಳೆಂದರೆ: ಒಂದು ಫಲಾನುಭವಿಗಳಲ್ಲಿ ಆರ್ಥಿಕವಾಗಿ ಮೇಲಸ್ತರದಲ್ಲಿ ಇರುವವರು ಮತ್ತೊಂದು ಫಲಾನುಭವಿಗಳೇ ಹೇಳುವಂತೆ ಕೊಡುವ ಅಕ್ಕಿಯನ್ನು ಅನ್ನ ಮಾಡಿಕೊಂಡು ಊಟಮಾಡಲು ಗುಣಾತ್ಮಕವಾಗಿ ಇಲ್ಲದಿರುವುದು. ಸೌಲಭ್ಯವು ಸಮರ್ಪಕವಾಗಿ ಹಾಗೂ ಸೂಕ್ತವಾದವರಿಗೆ ಸಿಗಬೇಕಾದರೆ ಈ ಎರಡು ಅಂಶಗಳ ಬಗ್ಗೆ ಸರಕಾರವು ಕ್ರಮವಹಿಸಿದರೆ ಶೇಕಡ ನೂರರಷ್ಟು ಅನ್ನಭಾಗ್ಯ ಯೋಜನೆಯು ಯಶಸ್ವಿ ಆಗುವುದರಲ್ಲಿ ಸಂದೇಹವೇ ಇಲ್ಲ.

(ಲೇಖಕರು: ಹವ್ಯಾಸಿ ಬರಹಗಾರರು)

ಜಗತ್ತನ್ನೇ ಸೂರೆಗೊಳಿಸುವ ಸೋರಾ!

ಜಗತ್ತನ್ನೇ ಆವರಿಸಿರುವ ಓಪನ್ ಎಐ ಸೋರಾ ದಿಂದ ನಿರ್ಮಿಸಲಾದ ಪ್ರತಿಯೊಂದು ವಿಡಿಯೋ ನೈಜ್ಯವೆಂಬಂತೆ ಭ್ರಮೆಯನ್ನು ಮೂಡಿಸಿದರೂ ಸಹ, ಸೂಕ್ಷ್ಮವಾಗಿ ಗಮನಿಸಿದಾಗ ಅದರಲ್ಲೂ ಹಲವು ದೋಷಗಳು ಇರುವುದು ಕಂಡುಬರುತ್ತದೆ. ಉದಾಹರಣೆಗೆ ತಪ್ಪಾದ ಭೌತಿಕ ಸಿಮ್ಯುಲೇಶನ್‌ಗಳು ಇತ್ಯಾದಿ. ಇವುಗಳ ಬಗ್ಗೆ ಓಪನ್ ಎಐ ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಹೇಳಿಕೊಂಡಿದೆ.

ತಂತ್ರ-ಜ್ಞಾನ

ಸುರೇಂದ್ರ ಪೈ
vveditoped@gmail.com

ಇತ್ತೀಚಿನ ವರ್ಷಗಳಲ್ಲಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಎಂಬುದು ಜಗತ್ತಿನ ಎಲ್ಲ ಕ್ಷೇತ್ರದಲ್ಲೂ ತನ್ನ ಛಾಪನ್ನು ಮೂಡಿಸುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿ. ಚುನಾವಣೆಗಳಲ್ಲಿ ಡೀಪ್ ಫೇಕ್ ತಂತ್ರಜ್ಞಾನ ಬಳಸಿ ಸತ್ತವರನ್ನು ಸೃಷ್ಟಿಸಿದ್ದು ಒಂದು ಕಡೆಯಾದರೆ, ಇತ್ತೀಚೆಗಷ್ಟೇ ಕ್ಯಾಲಿಫೋರ್ನಿಯಾದಲ್ಲಿ ನಡೆದ ಎಲಾನ್ ಮಸ್ಕ್ ಒಡೆತನದ ಟೆಸ್ಲಾ ಕಂಪನಿಯು 'ವಿ ರೋಬೋಟ್' ಕಾರ್ಯಕ್ರಮದಲ್ಲಿ ಸೆಲ್ಫ್ ಡ್ರೈವಿಂಗ್ ಸೈಬರ್‌ಕ್ಯಾಬ್, ರೋಬೋವಾನ್ ಮತ್ತು 'ಅಪ್ಟಿಮಸ್' ಹೆಸರಿನ ಹುಮನಾಯ್ಡ್ ರೋಬೋಟ್ ಎಂಬ ಮೂರು ಉತ್ಪನ್ನಗಳನ್ನು ಪ್ರದರ್ಶಿಸುವ ಮೂಲಕ ಎಐ ತಂತ್ರಜ್ಞಾನ ಕ್ಷೇತ್ರದ ವ್ಯಾಪ್ತಿಗೆ ಮಿತಿಯಿಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಇವುಗಳ ನಡುವೆಯೇ ಜಗತ್ತೇ ನಿಬ್ಬೆರಗಾಗುವ ಹೊಸ ತಂತ್ರಜ್ಞಾನ ಮಾರುಕಟ್ಟೆಗೆ ಬರಲು ಸಿದ್ಧವಾಗುತ್ತಿದೆ. ನೀವು ಸಾಮಾಜಿಕ ಜಾಲತಾಣದಲ್ಲಿ ಒಂದು ಸಣ್ಣ ದ್ವೀಪದ ದೃಶ್ಯವನ್ನು ಡ್ರೋನ್ ಮೂಲಕ ಚಿತ್ರೀಕರಿಸಲ್ಪಟ್ಟಂತೆ, ಮೋಡಗಳ ಮೇಲೆ ಕುಳಿತು ಒಬ್ಬ ವ್ಯಕ್ತಿ ಪುಸ್ತಕ ಓದುತ್ತಿರುವಂತೆ, ಭಾರತದ ಯಾವುದೋ ನಗರದಲ್ಲಿ ಯುವಕರು ಉತ್ಸಾಹದಿಂದ ಬಣ್ಣಗಳ ಮೂಲಕ ಹೋಳಿ ಹಬ್ಬವನ್ನು ಆಚರಿಸುತ್ತಿರುವಂತೆ, ಹೀಗೆ ಹರಿದಾಡುತ್ತಿರುವ ಹತ್ತಾರು ವಿಡಿಯೋಗಳನ್ನು ವೀಕ್ಷಣೆ ಮಾಡಿರಬಹುದು. ಅವುಗಳನ್ನು ನೋಡಿದರೆ ಒಮ್ಮೆ ವಾಸ್ತವದಲ್ಲಿ ಎಲ್ಲೋ ಒಂದು ಕಡೆ ಅಸ್ತಿತ್ವದಲ್ಲಿರುವ ಸ್ಥಳದಂತೆ ಗೋಚರಿಸುತ್ತದೆ. ಆದರೆ ವಾಸ್ತವದಲ್ಲಿ ಅಂತಹ ಯಾವ ಸ್ಥಳವು ಅಸ್ತಿತ್ವದಲ್ಲೇ ಇಲ್ಲ. ಇವೆಲ್ಲವೂ ಆರ್ಟಿಫಿಶಿಯಲ್ ಜನರಲ್ ಇಂಟೆಲಿಜೆನ್ಸ್ (ಎಜಿಐ) ಎಂಬ ತಂತ್ರಜ್ಞಾನದ ಹೊಸ ಆವಿಷ್ಕಾರವಾದ OpenAI Sora (ಓಪನ್ ಎಐ ಸೋರಾ)ನ ಕೈಚಳಕ ಎಂದರೆ ನಂಬಲು ಸಾಧ್ಯವಿಲ್ಲ ಅಲ್ಲವೇ? ನಿಜ, ಇವೆಲ್ಲವೂ ಓಪನ್ ಎಐ ಸೋರಾ ನಿರ್ಮಿತವಾದ ವಿಡಿಯೋ ತುಣುಕುಗಳಾಗಿವೆ. ಈ ತಂತ್ರಜ್ಞಾನವನ್ನು ಜಗತ್ತಿಗೆ ಪರಿಚಯಿಸಿದ ವ್ಯಕ್ತಿ ಅದರ ಸಿಇಒ ಸ್ಯಾಮ್ ಆಲ್ಟ್‌ಮ್ಯಾನ್.

ಇಂದಿನಿಂದ ಸರಿಯಾಗಿ ಎರಡು ವರ್ಷಗಳ ಹಿಂದೆ ಅಂದರೆ ನವೆಂಬರ್ 2022 ರಲ್ಲಿ ಚಾಟ್ ಜಿಪಿಟಿ (ChatGPT) ಎಂಬ ಹೊಸ ತಂತ್ರಜ್ಞಾನವನ್ನು ಮಾರುಕಟ್ಟೆಗೆ ಪರಿಚಯಿಸಿ ಜಗತ್ತನ್ನೇ ಬೆರಗುಗೊಳಿಸುವಂತೆ ಮಾಡಿದ ಓಪನ್ ಎಐ ಕಂಪನಿಯವರ ಇನ್ನೊಂದು ಹೊಸ ಕೊಡುಗೆಯೇ ಈ ಸೋರಾ ಎಐ. ಇದೊಂದು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಸಾಫ್ಟ್‌ವೇರ್ ಆಗಿದೆ. ಈ ಮೊದಲು ಚಾಟ್ ಜಿಪಿಟಿ ತಂತ್ರಜ್ಞಾನ ಟೆಕ್ಸ್ಟ್‌-ಟು-ಟೆಕ್ಸ್ಟ್ ಆಗಿತ್ತು. ಇಲ್ಲಿ ಟೆಕ್ಸ್ಟ್ (ಬರಹ) ಮೂಲಕ ಮಾತ್ರ ಸಂಭಾಷಣೆಯ ನಡೆಸಲು ಸಾಧ್ಯವಿತ್ತು. ನಾವು ಏನಾದರೂ ಬರಹದ ರೂಪದಲ್ಲಿ ಮಾಹಿತಿಯನ್ನು ಕೇಳಿದರೆ ಅದಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಬರಹದ ರೂಪದಲ್ಲೇ ಗ್ರಾಹಕರಿಗೆ ಲಭಿಸುತ್ತಿತ್ತು. ಇದು ಓಪನ್ ಎಐ ಅವರ ಮೊದಲ ಹಂತವಾಗಿತ್ತು. ಇದರ ನಂತರ ಸ್ವಲ್ಪ ದಿನದಲ್ಲಿ DALL-ಉಮತ್ತು ಮಿಡ್ಜರ್ನಿಯಂತಹ ಟೆಕ್ಸ್ಟ್ ಟು-ಇಮೇಜ್ ತಂತ್ರಜ್ಞಾನ ಮಾರುಕಟ್ಟೆಗೆ ಪರಿಚಯಿಸಲಾಯಿತು. ಇದರಲ್ಲಿ ಟೆಕ್ಸ್ಟ್ (ಬರಹ) ಮೂಲಕ ಗ್ರಾಹಕರು ತಮಗೆ ಯಾವ ರೀತಿಯ ಫೋಟೋ ಬೇಕು ಎಂದು ಸಂದೇಶವನ್ನು ರವಾನಿಸಿದರೆ ಸಾಕು, ಅದಕ್ಕೆ ತಕ್ಕಂತೆ ಫೋಟೋ ಸಿದ್ಧವಾಗುತ್ತಿತ್ತು. ಆದರೆ ಈಗ ಪರಿಚಯಿಸಲಾದ ಸೋರಾ ಎಂಬುದು ಟೆಕ್ಸ್ಟ್-ಟು-ವಿಡಿಯೋ ಜನರೇಟರ್ ಆಗಿದೆ. ಇಲ್ಲಿ ಗ್ರಾಹಕರು ತಮಗೆ ಯಾವ ರೀತಿಯ ವಿಡಿಯೋ ಬೇಕೆಂದು ಸರಳ ಇಂಗ್ಲೀಷ್ ಭಾಷೆಯಲ್ಲಿ ಜನರೇಟಿವ್ ಎಐ ಅನ್ನು ಬಳಸಿಕೊಂಡು ಲಿಖಿತ ಪ್ರಾಂಪ್ಟ್‌ಗಳ ಆಧಾರದ ಮೇಲೆ 60 ಸೆಕೆಂಡುಗಳವರೆಗೆ ವೀಡಿಯೊಗಳನ್ನು ರಚಿಸುವಂತೆ ಸಿದ್ಧಪಡಿಸಲಾಗಿದೆ. ಇಷ್ಟೇ ಅಲ್ಲ ಸೋರಾ ಬಳಸಿ 'ಇಮೇಜ್ ಟು-ವಿಡಿಯೋ' ಹಾಗೂ 'ವಿಡಿಯೋ ಟು- ವಿಡಿಯೋ' ಸಹ ಮಾಡಲಾಗುತ್ತದೆ. ಅಂದರೆ ನಿಮ್ಮ ಬಳಿ ಇರುವ ಒಂದು ಫೋಟೋಗೆ ಪ್ರಾಂಪ್ಟ್ ಬಳಸಿ ಅಪ್ಲೋಡ್ ಮಾಡಿದರೆ ಸಾಕು ಅದು ಕ್ಷಣ ಮಾತ್ರದಲ್ಲೇ ವಿಡಿಯೋ ಆಗಿ ಬದಲಾಗುತ್ತದೆ. ಉದಾಹರಣೆಗೆ ನಿಮ್ಮ ಬಳಿ 'ನೀವು ಬಿಳಿ ಬಣ್ಣದ ಕಾರಿನಲ್ಲಿ ಚಲಿಸುತ್ತಿರುವ ವಿಡಿಯೋ ಇದ್ದರೆ ಅದಕ್ಕೆ ಪ್ರಾಂಪ್ಟ್‌ನಲ್ಲಿ ಈ ಕಾರಿನ ಬಣ್ಣ ಬದಲಾಗದೆ ಇದು 70ರ ದಶಕದ ನಗರದಲ್ಲಿ ಸಂಚರಿಸುವಂತೆ ವಿಡಿಯೋ ರಚಿಸಿ ಎಂದು ತಿಳಿಸಿದರೆ ಸಾಕು, ನೋಡ ನೋಡುತ್ತಿದ್ದಂತೆ 70ರ ದಶಕದ ನಗರದಲ್ಲಿ ನೀವು ಬಿಳಿ ಕಾರಿನಲ್ಲಿ ಚಲಿಸುತ್ತಿದ್ದ ಹಾಗೇ ವಿಡಿಯೋ ಸಿದ್ಧವಾಗುತ್ತದೆ. ಇದನ್ನು ಸೋರಾ ಮೂಲಕ ನಿರ್ಮಿಸಲಾದ ವಿಡಿಯೋ ಎಂದು ಪತ್ತೆ ಹಚ್ಚುವುದು ಅಸಾಧ್ಯವೆನಿಸುವಷ್ಟರ ಮಟ್ಟಿಗೆ ಅದು ತನ್ನ ಕಾರ್ಯವನ್ನು ಮಾಡುತ್ತದೆ.

ಈಗ ಒಮ್ಮೆ ಯೋಚಿಸಿ ಸೋರಾ ಬಳಕೆಗೆ ಬಂದರೆ ಎನಿಮೇಟರ್ಸ್, ವಿಡಿಯೋ ಗೇಮ್ ಡಿಸೈನರ್, ಗ್ರಾಫಿಕ್ ಡಿಸೈನರ್ ಅಂತವರ ಅವಶ್ಯಕತೆ ಇನ್ನು ಮುಂದೆ ಇದೆ ಎಂದೆನಿಸುತ್ತದೆಯೇ? ಅಷ್ಟೇ ಅಲ್ಲ ಸ್ಟಾಕ್ ಫೋಟೋ ತಂತ್ರಜ್ಞಾನ, ಸ್ಟಾಕ್ ವಿಡಿಯೋ ತಂತ್ರಜ್ಞಾನವೆಲ್ಲವೂ ಮುಚ್ಚಲ್ಪಡುತ್ತದೆ. ಅರ್ಥಾತ್ ಜಾಗತಿಕವಾಗಿ ಎಲ್ಲವೂ ಬುಡಮೇಲಾಗುತ್ತದೆ. ಸೋರಾ ಮಾರುಕಟ್ಟೆಗೆ ಕಾಲಿಡುವ ಮುನ್ನ ಟೆಕ್ಸ್ಟ್ ಟು-ವಿಡಿಯೋ ಮಾಡಲು ಪಿಕಾ ಲ್ಯಾಬ್ಸ್ ಮತ್ತು ರನ್ ವೇ ಎಂಬ ಕಂಪನಿಗಳು ಜಾಗತಿಕವಾಗಿ ಹೆಚ್ಚು ಬಳಕೆಯಲ್ಲಿದ್ದವು, ವಿಶೇಷವಾಗಿ ಹಾಲಿವುಡ್ ಚಿತ್ರ ಜಗತ್ತಿನಲ್ಲಿ ಇವುಗಳನ್ನು ಬಳಸಲಾಗುತ್ರಿತ್ತು. ಆದರೆ ಸೋರಾ ತಂತ್ರಜ್ಞಾನವು ಅವೆಲ್ಲವನ್ನೂ ಹಿಂದಿಕ್ಕಿದೆ. ಸೋರಾ ದಿಂದ ನಿರ್ಮಿಸಲಾದ ವಿಡಿಯೋ ಅಷ್ಟು ನೈಜತೆಯಿಂದ ಕೂಡಿರಲು ಕಾರಣವೆಂದರೆ ಇದು ಭೌತಶಾಸ್ತ್ರದ ಚಲನೆಯ ನಿಯಮಗಳ ಬಗ್ಗೆ, ಜೀವಿಗಳ ಭಾವನೆ, ಭಾಷೆಯನ್ನು ಅರ್ಥಮಾಡಿಕೊಂಡು ಪ್ರತಿಕ್ರಿಯಿಸುವಂತೆ ವಿನ್ಯಾಸಗೊಳಿಸಲಾಗಿದೆ. ಇದು ಕೇವಲ ಪದಗಳು ಮತ್ತು ವಾಕ್ಯಗಳನ್ನು ಅರ್ಥಮಾಡಿಕೊಳ್ಳುವುದು ಮಾತ್ರವಲ್ಲ, ಸಂದರ್ಭಗಳ ಸೂಕ್ಷ್ಮ ವ್ಯತ್ಯಾಸಗಳು ಮತ್ತು ಭಾಷೆಯ ಹಿಂದಿನ ಉದ್ದೇಶವನ್ನು ಗ್ರಹಿಸುವ ಸಾಮರ್ಥ್ಯ ಹೊಂದಿದೆ. ಉದಾಹರಣೆಗೆ ಒಂದು ಆನೆ ಮತ್ತು ಬೆಕ್ಕು ಹೇಗೆ ಚಲಿಸುತ್ತವೆ ಹಾಗೂ ಅವುಗಳು ಚಲಿಸುವ ಕ್ರಮ ಇತ್ಯಾದಿ. ಇದೆಲ್ಲವೂ ಸಾಧ್ಯವಾಗಲು ಕಾರಣ ಇದರಲ್ಲಿ ಬಳಸಲಾಗಿರುವ ತಂತ್ರಜ್ಞಾನ.

ಸೋರಾ ಚಾಟ್‌ಜಿಪಿಟಿಯಲ್ಲಿ ಬಳಸಲಾದ ಪ್ರಾಥಮಿಕ ತಂತ್ರಾಂಶದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತದೆ. ಚಾಟ್ ಜಿಪಿಟಿ ಟೋಕನ್‌ಗಳ ಬಳಕೆ ಮಾಡುತ್ತಿತ್ತು, ಆದರೆ ಇಲ್ಲಿ ಪ್ಯಾಚಸ್‌ಗಳ ಬಳಕೆ ಮಾಡಲಾಗಿದೆ. ಅಂದರೆ ಸೋರಾ ಕಾರ್ಯವು ಅಲ್ಗಾರಿದಮ್‌ಗಳು ಮತ್ತು ಯಂತ್ರ ಕಲಿಕೆಯ ತಂತ್ರಗಳ ಸಂಕೀರ್ಣ ಮಿಶ್ರಣವನ್ನು ಆಧರಿಸಿದೆ. ಇದು ಮೂರು ಪ್ರಮುಖ ಹಂತಗಳನ್ನು ಒಳಗೊಂಡಿರುತ್ತದೆ. ದೃಶ್ಯ (ವಿಷುಯಲ್)ಎನ್ಕೋಡಿಂಗ್, ಡಿಫ್ಯೂಷನ್ ಟ್ರಾನ್ಸ್ಫಾರ್ಮರ್ (ಡಿಐಟಿ) ಮತ್ತು ದೃಶ್ಯ (ವಿಷುಯಲ್) ಡಿಕೋಡಿಂಗ್ ಮೂಲಕ ಕಾರ್ಯ ನಿರ್ವಹಿಸುತ್ತದೆ.

ಜಗತ್ತನ್ನೇ ಆವರಿಸಿರುವ ಓಪನ್ ಎಐ ಸೋರಾ ದಿಂದ ನಿರ್ಮಿಸಲಾದ ಪ್ರತಿಯೊಂದು ವಿಡಿಯೋ ನೈಜ್ಯವೆಂಬಂತೆ ಭ್ರಮೆಯನ್ನು ಮೂಡಿಸಿದರೂ ಸಹ, ಸೂಕ್ಷ್ಮವಾಗಿ ಗಮನಿಸಿದಾಗ ಅದರಲ್ಲೂ ಹಲವು ದೋಷಗಳು ಇರುವುದು ಕಂಡುಬರುತ್ತದೆ. ಉದಾಹರಣೆಗೆ ತಪ್ಪಾದ ಭೌತಿಕ ಸಿಮ್ಯುಲೇಶನ್‌ಗಳು ಇತ್ಯಾದಿ. ಇವುಗಳ ಬಗ್ಗೆ ಓಪನ್ ಎಐ ತನ್ನ ಅಧಿಕೃತ ವೆಬ್ಸೈಟ್‌ನಲ್ಲಿ ಹೇಳಿಕೊಂಡಿದೆ. ಆದರೆ ಮುಂದಿನ ದಿನಗಳಲ್ಲಿ ಆ ದೋಷಗಳನ್ನು ಗುರುತಿಸಲು ಸಾಧ್ಯವಿಲ್ಲದಂತೆ ಮಾಡುವ ಸಾಮರ್ಥ್ಯವಿದೆ ಎಂಬುದನ್ನು ನಾವು ಅರಿತುಕೊಳ್ಳಬೇಕು.

ಇಂದು ವೇಗವಾಗಿ ಬೆಳೆಯುತ್ತಿರುವ ಎಐ ತಂತ್ರಜ್ಞಾನವು ಭವಿಷ್ಯದ ನೈತಿಕ ಮತ್ತು ಸಾಮಾಜಿಕ ಪರಿಣಾಮಗಳ ಬಗ್ಗೆ ಭಯವನ್ನು ಉಂಟುಮಾಡುತ್ತದೆ. ಮುಂದೊಂದು ದಿನ ಯಾವುದು ನಿಜ, ಯಾವುದು ಸುಳ್ಳು ಎಂಬುದನ್ನು ಗುರುತಿಸಲು ನಮ್ಮ ಕಣ್ಣುಗಳಿಂದಲೂ ಸಾಧ್ಯವಾಗದೆ ಹೋಗಬಹುದು. ಆದ್ದರಿಂದಲೇ ಸೋರಾ ಇನ್ನೂ ಸಾರ್ವಜನಿಕ ಬಳಕೆಗೆ ಲಭ್ಯವಿಲ್ಲ. ಈ ಉಪಕರಣವನ್ನು ಅಧಿಕೃತವಾಗಿ ಬಿಡುಗಡೆ ಮಾಡುವ ಮೊದಲು ಮುಂದಾಗುವ ಎಲ್ಲ ಅಪಾಯಗಳ ಬಗ್ಗೆ, ಕುಂದುಕೊರತೆ ಹಾಗೂ ಉನ್ನತ ಮಟ್ಟದ ಭದ್ರತೆಯನ್ನು ಒದಗಿಸುವ ದೃಷ್ಟಿಯಿಂದ ಇದು ತನ್ನ 'ರೆಡ್ ಟೀಮ್' (ಸೈಬರ್ ಸೆಕ್ಯುರಿಟಿ)ನಿಂದ ನಿರಂತರವಾಗಿ ಪರೀಕ್ಷೆಗೆ ಒಳಪಡಿಸುತ್ತಿದೆ. ಓಪನ್‌ಎಐ ಅವರು ಹೇಳಿರುವಂತೆ ಸೋರಾ ದಿಂದ ನಿರ್ಮಿಸಲ್ಪಟ್ಟ ವಿಡಿಯೋಗಳಿಗೆ ವಾಟರ್ ಮಾರ್ಕ್ ಹಾಕಲಾಗುತ್ತದೆ. ಇದರಿಂದ ಇದು ಎಐ ನಿರ್ಮಿತ ವಿಡಿಯೋ ಎಂದು ತಿಳಿಯಲು ಸಾಧ್ಯ ಎಂದು ಹೇಳಿಕೊಂಡಿದೆ.

ಇತ್ತೀಚಿನ ಡೀಪ್ ಫೇಕ್ ತಂತ್ರಜ್ಞಾನದಿಂದ ಏನೆಲ್ಲ ಅನಾಹುತಗಳಾಗಿವೆ ಎಂಬುದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಇಂತಹ ತಂತ್ರಜ್ಞಾನವನ್ನು ಒಳ್ಳೆಯದಕ್ಕಿಂತ ಕೆಟ್ಟ ಕೆಲಸಗಳಿಗೆ ಬಳಸಿಕೊಳ್ಳುವವರೇ ಹೆಚ್ಚು. ಇದರಿಂದ ಭವಿಷ್ಯದಲ್ಲಿ ಸೃಷ್ಟಿಯಾಗಬಹುದಾದ ಸಂಭಾವ್ಯ ಅಪಾಯಗಳ ಬಗ್ಗೆಯೂ ಆತಂಕ ಹೆಚ್ಚಿಸುತ್ತದೆ. ಎಲ್ಲವುದಕ್ಕಿಂತಲೂ ಮುಖ್ಯವಾಗಿ ಈಗಾಗಲೇ ಹಲವಾರು ಜನರು ಪ್ರಸುತ್ತ ಬಳಕೆಯಲ್ಲಿರುವ ತಂತ್ರಜ್ಞಾನದ ಕಾರಣದಿಂದಾಗಿ ತಮ್ಮ ಉದ್ಯೋಗಗಳನ್ನು ಕಳೆದುಕೊಳ್ಳುತ್ತಿದ್ದಾರೆ, ಒಂದು ವೇಳೆ ಸೋರಾ ಬಳಕೆಗೆ ಬಂದರೆ ಜಾಗತಿಕ ಮಟ್ಟದಲ್ಲಿ ಕೋಟ್ಯಾಂತರ ಜನ ಉದ್ಯೋಗ ಕಳೆದುಕೊಳ್ಳುವುದು ನಿಶ್ಚಿತವಾಗಿದೆ. ಭಾರತದಂತಹ ವಿವಿಧತೆಯಲ್ಲಿ ಏಕತೆ ಹೊಂದಿರುವ ದೇಶದಲ್ಲಿ ಕೋಮು ಸೌಹಾರ್ದತೆಯನ್ನು ಭಂಗಗೊಳಿಸಲು ಇದರ ಬಳಕೆಯಾದರೆ ಆಡಳಿತ ಹದಗೆಡುವುದರಲ್ಲಿ ಎರಡು ಮಾತಿಲ್ಲ. ಅಲ್ಲದೇ ದೇಶದ ರಕ್ಷಣೆಯ ವಿಷಯದ ಮೇಲೂ ಋಣಾತ್ಮಕ ಪ್ರಭಾವ ಬೀರುವ ಸಂಭವ ಹೆಚ್ಚಾಗಿರುತ್ತದೆ.

ಪ್ರತಿಯೊಂದು ಆವಿಷ್ಕಾರವು ಮನುಕುಲದ ಏಳಿಗ್ಗಾಗಿಯೇ ಮಾಡಲಾಗುತ್ತದೆ ಎಂಬುದು ಸತ್ಯ. ಇಲ್ಲೂ ಸಹ ಓಪನ್ ಎಐ ಸೋರಾದಿಂದ ಉಪಯೋಗವು ಬಹಳಷ್ಟಿದೆ. ತಂತ್ರಜ್ಞಾನದ ವೇಗವಾಗಿ ಬೆಳೆಯುತ್ತಿರುವ ಸಂದರ್ಭದಲ್ಲಿ ನಾವೆಲ್ಲರೂ ಅದನ್ನು ಸ್ವೀಕರಿಸಿ ಅನುಸರಿಸುವುದರಲ್ಲೇ ಬುದ್ಧಿವಂತಿಕೆ ಇದೆ ಎನ್ನುತ್ತಾರೆ ವಿಶ್ಲೇಷಕರು. ಜಗತ್ತಿನಲ್ಲಿ ಕೆಲವು ರಾಷ್ಟ್ರಗಳು ಸೋರಾ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದು, ಅವುಗಳನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಸಿಂಗಾಪುರದಂತಹ ದೇಶವು ತನ್ನ 40 ವರ್ಷ ಮೇಲ್ಪಟ್ಟ ಪ್ರಜೆಗಳಿಗೆ ಡಿಪ್ಲೊಮಾ ಕೋರ್ಸ್ ಕಲಿಯಲು ಸಬ್ಸಿಡಿ ನೀಡಲು ನಿರ್ಧರಿಸಿದೆ. ಸೋರಾವನ್ನು ಮನರಂಜನೆ ಮತ್ತು ಚಲನಚಿತ್ರ ನಿರ್ಮಾಣ, ಜಾಹೀರಾತು ಮತ್ತು ಮಾರ್ಕೆಟಿಂಗ್, ವಿಡಿಯೋ ಗೇಮ್ಸ್‌ಗಳು ಮತ್ತು ವರ್ಚುವಲ್ ರಿಯಾಲಿಟಿ, ಶಿಕ್ಷಣ ಮತ್ತು ಕಲಿಕೆ ಮುಂತಾದ ಕ್ಷೇತ್ರದಲ್ಲಿ ಬಳಸಬಹುದು.

ಒಟ್ಟಿನಲ್ಲಿ ಈ ತಂತ್ರಜ್ಞಾನದ ಭರಾಟೆ ಯಲ್ಲಿ ನಾವೆಲ್ಲರೂ ಸಹ ನಮ್ಮ ಯೋಚನಾ ಶಕ್ತಿಯನ್ನು ಕಳೆದುಕೊಳ್ಳುವುದರೊಂದಿಗೆ , ಪಾರಂಪರಿಕ ಆಹಾರ ಕ್ರಮ, ಸಂಸ್ಕೃತಿ, ಭಾಷೆ, ಅಚರಣೆಗಳು, ಜೀವವೈವಿಧ್ಯತೆಯನ್ನು ದೂರ ಮಾಡುತ್ತಾ ಮಾಡುತ್ತಾ ಯಂತ್ರಗಳ ದಾಸರಾಗಿ ಉಳಿಯುತ್ತಿದ್ದೇವೆ. ಇದು ನಿಜವಾದ ಅಭಿವೃದ್ಧಿಯೇ ಅಥವಾ ಅವನತಿಯೇ ಎಂಬುದನ್ನು ನಾವೊಮ್ಮೆ ಅವಲೋಕಿಸುವ ಸಮಯ ಬಂದಿದೆ. ಕೆಲವೊಮ್ಮೆ ಯೋಚಿಸಿದಾಗ ನಾವು ತೊಡಿದ ಹಳ್ಳದಲ್ಲಿ ನಾವೇ ಬಿದ್ದೆವಾ ಎಂದೆನಿಸುತ್ತದೆ.

(ಲೇಖಕರು: ಶಿಕ್ಷಕರು, ಹವ್ಯಾಸಿ ಬರಹಗಾರರು)

ಎಚ್ಚರಿಕೆ

ಹೊಸೂರು ರತ್ನಾಕರ ಶೆಟ್ಟಿ

ಸೈಬರ್ ದಾಳಿಯನ್ನು ತಡೆಗಟ್ಟಬೇಕು

ಬೆಳೆಯುತ್ತಿರುವ ಭಾರತವು ಜಾಗತಿಕ ಮಟ್ಟದಲ್ಲಿ ವಿಶೇಷ ಛಾಪನ್ನು ಮೂಡಿಸುತ್ತಿದೆ; ಆರ್ಥಿಕ ಪ್ರಗತಿಯು ಮಾರ್ಚ್ 2024 ಕ್ಕೆ ಪ್ರತಿಶತ 8.2 ದಾಖಲಾಗಿದ್ದು ಇದೊಂದು ಜಾಗತಿಕ ದಾಖಲೆ. ಹಾಲಿ ಆರ್ಥಿಕ ವರ್ಷದಲ್ಲಿಯೂ ಪ್ರಗತಿಯ ಗತಿಯನ್ನು ಪ್ರತಿಶತ 8ರ ಆಸುಪಾಸಿನಲ್ಲಿ ಹಿಡಿದಿಟ್ಟುಕೊಳ್ಳುವ ಆಶಾಭಾವನೆ ಹೊಂದಿದೆ. ಜಗತ್ತಿನ ಮುಂಚೂಣಿ ದೇಶಗಳು ಹೆಣಗಾಡುತ್ತಿರುವಾಗ ನಮ್ಮ ಆರ್ಥಿಕ ಅಭಿವೃದ್ಧಿಯ ವೇಗ ನಮಗೆಲ್ಲರಿಗೂ ಹೆಮ್ಮೆಯ ವಿಚಾರವೇ ಸರಿ.

ಭಾರತವನ್ನು ಬಡ, ಅನಕ್ಷರಸ್ಥ ಹಾಗೂ ಹಾವಾಡಿಗರ ದೇಶವೆಂದೇ ಅವಮಾನಿಸುತ್ತಿದ್ದ ಪಾಶ್ಚಾತ್ಯ ರಾಷ್ಟ್ರಗಳು ಇಂದು ನಮ್ಮೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ಪಾಲುದಾರರಾಗಲು ಹಾತೊರೆಯುತ್ತಿರುವುದು ವಿಪರ್ಯಾಸ. ಇದಕ್ಕೆಲ್ಲ ಮುಖ್ಯ ಕಾರಣ ಕೌಶಲತೆಗಳನ್ನು ಮೈಗೂಡಿಸಿಕೊಂಡು ಮುನ್ನಡೆಯುತ್ತಿರುವ ನಮ್ಮ ಯುವಜನತೆ ಮತ್ತು ಇದಕ್ಕೆ ಪೂರಕ ವಾತಾವರಣ ನಿರ್ಮಿಸಲು ಹೆಣಗುತ್ತಿರುವ ಸರಕಾರದ ಅವಿರತ ಶ್ರಮ. ಇತ್ತೀಚಿನ ದಿನಗಳಲ್ಲಿ ಆರ್ಥಿಕ ಕ್ರಾಂತಿಗೆ ವೇಗ ನೀಡುತ್ತಿರುವುದು ಡಿಜಿಟಲ್ ಪಾವತಿ ವ್ಯವಸ್ಥೆ. ಜಾಗತಿಕ ಮಟ್ಟದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಡಿಜಿಟಲ್ ವ್ಯವಹಾರದಿಂದಾಗಿ ಕ್ಷಣಮಾತ್ರದಲ್ಲಿ ಆರ್ಥಿಕ ವಹಿವಾಟು ಸಂಪನ್ನಗೊಳ್ಳುವುದಲ್ಲದೆ ಕರೆನ್ಸಿ ನೋಟುಗಳ ಚಲಾವಣೆಗಾಗಿ ವ್ಯಯಿಸಬೇಕಾದ ಖರ್ಚು ಗಣನೀಯವಾಗಿ ಕಡಿಮೆಯಾಗಿ ಆರ್ಥಿಕ ವಲಯದಲ್ಲಿ ಹೊಸ ಹುರುಪು ಮೂಡಿರುವುದಂತು ನಿಜ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಅಮೋಘ ಸಾಧನೆ ಮಾಡುತ್ತಿರುವ ನಮ್ಮ ದೇಶ ಡಿಜಿಟಲ್ ಪಾವತಿ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ಕಳೆದ ಕ್ಯಾಲೆಂಡರ್ ವರ್ಷ 2023ರಲ್ಲಿ ಡಿಜಿಟಲ್ ಪಾವತಿ ಮೊತ್ತವೇ 200ಲಕ್ಷ ಕೋಟಿ ರುಪಾಯಿಗೂ ಮೀರಿದೆ. ಮುಂದಿನ ದಿನಗಳಲ್ಲಿ ಇದು ನಿರಂತರ ಹೆಚ್ಚುತ್ತಲೆ ಹೋಗುವುದರಲ್ಲಿ ಯಾವುದೇ ಅನುಮಾನವಿಲ್ಲ.

ಆದರೆ ಮಾಹಿತಿ ತಂತ್ರಜ್ಞಾನದ ಬೆಳವಣಿಗೆಗೂ ಮೀರಿ ಬೆಳೆಯುತ್ತಿರುವ ಸೈಬರ್ ಖದೀಮರ ಚಾಣಾಕ್ಷತೆ ಜಗತ್ತಿನೆಲ್ಲೆಡೆ ತಲ್ಲಣವನ್ನುಂಟುಮಾಡಿದೆ. ಇಂತಹ ಖದೀಮರು ಅಂಕೆಗೆ ಸಿಗದೇ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸುವುದು ಜಗತ್ತಿನ ಮುಂದಿರುವ ಅತೀ ದೊಡ್ಡ ಸವಾಲು. ಹಾಗೆಯೇ ಇಂತಹ ಖದೀಮರು ಸೆರೆ ಸಿಕ್ಕರೂ ಅವರಿಗೆ ಕಠಿಣ ಶಿಕ್ಷೆ ಕೊಡಿಸಲು ನಮ್ಮ ಹಾಲಿ ಕಾನೂನೂಗಳು ವಿಫಲವಾಗುತ್ತಿವೆ. 2021ರಲ್ಲಿ ನಮ್ಮ ದೇಶದಲ್ಲಿ ಸುಮಾರು 18000 ಸೈಬರ್ ಅಪರಾಧ ಕೇಸುಗಳು ದಾಖಲಾದರೂ ಕೇವಲ 490ಪ್ರಕರಣಗಳು ಸಣ್ಣಪುಟ್ಟ ಶಿಕ್ಷೆಯಲ್ಲಿ ಕೊನೆಗೊಂಡಿವೆ. ಇದನ್ನೆಲ್ಲ ಅರಿತುಕೊಂಡ ಈ ಖದೀಮರು ರಾಜಾರೋಷವಾಗಿ, ವ್ಯವಸ್ಥಿತ ರೀತಿಯಲ್ಲಿ, ಯಾರಿಗೂ ಹೆದರದೆ ಅಮಾಯಕರ ಜೀವ ಹಿಂಡುತ್ತಿದ್ದಾರೆ. ಯಾರಾದರೂ ಜಾಗೃತ ಗ್ರಾಹಕ ಇವರ ಕಳ್ಳಾಟವನ್ನು ಗುರುತಿಸಿ, ಪೋಲಿಸರಿಗೆ ಮಾಹಿತಿ ನೀಡುತ್ತೇನೆಂದರೆ ನೀನು ಎಲ್ಲಿಗಾದರೂ ದೂರು ನೀಡು. ನಿನ್ನ ಖಾತೆಯಲ್ಲಿರುವ ಹಣವನ್ನು ಖಾಲಿ ಮಾಡಿಯೇ ತೀರುತ್ತೇವೆ ಎಂದು ಧಮಕಿ ಹಾಕುತ್ತಾರೆ.

ಮೇಲ್ನೋಟಕ್ಕೆ ಸೈಬರ್ ಅಪರಾಧ ಮಾಡಿರುವುದು ಕಾಣಿಸಿದರೆ ಅಂತಹ ಅಪರಾಧವನ್ನು ಹಣಕಾಸು ಶುದ್ಧೀಕರಣ ತಡೆ ಕಾಯ್ದೆ 2002 (PMLA)ರ ಅಡಿಯಲ್ಲಿ ವಿಚಾರಣೆ ಮಾಡಿದಂತೆ ತಾನು ನಿರಪರಾಧಿ ಎಂದು ಸಾಧಿಸುವ ಹೊಣೆಯನ್ನು ಆಪಾದಿತನ ಮೇಲೆ ಹೊರಿಸಬೇಕು. ಹಾಲಿ ಚಾಲ್ತಿಯಲ್ಲಿರುವ ಸೈಬರ್ ಅಪರಾದ ತಡೆ ಕಾನೂನಿಗೆ ಸೂಕ್ತ ಬದಲಾವಣೆ ತರಬೇಕು. ಹೀಗೆ ಪೂರಕ ದಾಖಲೆ ಸಲ್ಲಿಸುವಲ್ಲಿ ವಿಫಲವಾದರೆ ಅವನು ಅಪರಾಧಿ ಎಂದು ಘೋಷಿಸಿ, ಕಠಿಣ ಶಿಕ್ಷೆಯನ್ನು ಜಾರಿಗೊಳಿಸಬೇಕು. ಉದಾಹರಣೆಗೆ ಒಬ್ಬ ಅಮಾಯಕ ವ್ಯಕ್ತಿಯ ಖಾತೆಯಿಂದ ಇನ್ನೊಂದು ಖಾತೆಗೆ ಹಣ ವರ್ಗಾಯಿಸಿಕೊಂಡು ಮೋಸ ಮಾಡಿದಾಗ ಖಾತೆಗಳ ವಿವರ ಹುಡುಕುವುದು ಕಷ್ಟದ ಕೆಲಸವೇನಲ್ಲ. ಅಲ್ಲಿಯೂ ಖದೀಮರು ಯಾವುದೋ ಅಮಾಯಕರ ಖಾತೆಯ ನಿರ್ವಹಣೆಯನ್ನು ಬೆದರಿಸಿಯೋ ಯಾ ಆಮಿಷ ಒಡ್ಡಿಯೋ ತಮ್ಮ ವಶಕ್ಕೆ ಪಡೆದುಕೊಂಡಿರಬಹುದು. ಆಗಲೂ ಕೂಡಾ ಅಂತಹ ನಿಜವಾದ ಖಾತೆದಾರರ ಮೂಲಕ ಸೈಬರ್ ಖದೀಮರನ್ನು ತಲುಪಿ ಕಾನೂನಿನ ಕೋಳವನ್ನು ಶೀಘ್ರವೇ ತೊಡಿಸಬೇಕು. ಈ ಸೈಬರ್ ಖದೀಮರನ್ನು ಸಕಾಲಕ್ಕೆ ನಿಯಂತ್ರಿಸದಿದ್ದಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆ ಜಾಗತಿಕ ಮಟ್ಟದಲ್ಲಿ ತೀವ್ರ ಆರ್ಥಿಕ ಸಂಕಷ್ಟಕ್ಕೆ ಗುರಿಯಾಗುವುದು ನಿಶ್ಚಿತ. ಜಾಗತಿಕ ರಾಷ್ಟ್ರಗಳು ಒಕ್ಕೊರಲಿನಿಂದ ಈ ಸೈಬರ್ ಖದೀಮರ ಸಮಸ್ಯೆಗೆ ಶೀಘ್ರವೇ ಪರಿಹಾರ ಕಂಡುಕೊಳ್ಳಬೇಕಾಗಿದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 327

ಸಮಾಚಾರ ಸಣ್ಣದಲ್ಲ

12 ಲಕ್ಷಜನ ಮತದಾನ ಪ್ರಕ್ರಿಯೆಯಿಂದ ವಂಚಿತ?

ಪುಣೆ: ನವೆಂಬರ್ 20 ರಂದು ನಡೆಯುವ ಮಹಾರಾಷ್ಟ್ರ ವಿಧಾನಸಭೆಯ ಚುನಾವಣೆಯಲ್ಲಿ ಮರಾಠವಾಡ, ಉತ್ತರ ಮಹಾರಾಷ್ಟ್ರ ಹಾಗೂ ವಿದರ್ಭ ಭಾಗದ ಸುಮಾರು 12 ಲಕ್ಷ ಮಂದಿ ಕಬ್ಬು ಕಟಾವು ಕಾರ್ಮಿಕರು ಮತದಾನದಿಂದ ವಂಚಿತರಾಗುವ ಸಾಧ್ಯತೆ ಇದೆ. ನವೆಂಬರ್ 15 ರಿಂದ ಕಬ್ಬು ಕಟಾವು ಋತು ಆರಂಭವಾಗಲಿದ್ದು, ವಿವಿಧ ಜಿಲ್ಲೆಗಳಿಂದ ಲಕ್ಷಾಂತರ ಮಂದಿ ಕಬ್ಬು ಕಟಾವು ಮಾಡುವ ಕಾರ್ಮಿಕರು ಪಶ್ಚಿಮ ಮಹಾರಾಷ್ಟ್ರ ಹಾಗೂ ಇತರ ರಾಜ್ಯಗಳಿಗೆ ವಲಸೆ ಹೋಗಿದ್ದಾರೆ ಎಂದು ಮಹಾರಾಷ್ಟ್ರ ಕಬ್ಬು ಕಟಾವುಗಾರರ ಹಾಗೂ ಸಾಗಣೆದಾರರ ಅಸೋಶಿಯೇಷನ್ ಹೇಳಿದೆ. ಕಬ್ಬು ಕಟಾವು ಕಾರ್ಮಿಕರು ಮತದಾನ ಮಾಡುವ ತಮ್ಮ ಹಕ್ಕಿನಿಂದ ವಂಚಿತರಾಗದಂತೆ, ಚುನಾವಣೆಯನ್ನು ಮುಂದೂಡಬೇಕು ಎಂದು ಕೋರಿ ಅಸೋಶಿಯೇಷನ್ ಬಾಂಬೆ ಹೈಕೋರ್ಟ್‌ನ ಔರಂಗಾಬಾದ್ ಪೀಠಕ್ಕೆ ಮನವಿ ಮಾಡಿದೆ. ಆದರೆ ಕಾರ್ಮಿಕರು ತಮ್ಮ ಹಕ್ಕು ಚಲಾಯಿಸಲು ಅವರ ಸ್ಥಳಕ್ಕೆ ಮರಳಿ ಕರೆತರುವ ವ್ಯವಸ್ಥೆ ಮಾಡಲಾಗುವುದು ಎಂದು ಪಶ್ಚಿಮ ಭಾರತ ಕಬ್ಬು ಮಿಲ್ ಅಸೋಶಿಯೇಷನ್ ತಿಳಿಸಿದೆ.

ಮೋದಿ ಸಮಾಜವನ್ನು ವಿಭಜಿಸುತ್ತಿದ್ದಾರೆ: ಪವಾರ್

ಪುಣೆ: ಪ್ರಧಾನಿ ನರೇಂದ್ರ ಮೋದಿಯವರು ಸಮಾಜವನ್ನು ವಿಭಜಿಸುತ್ತಿದ್ದಾರೆ ಎಂದು ಆರೋಪಿಸಿದ ಎನ್‌ಸಿಪಿ(ಎಸ್ಪಿ) ನಾಯಕ ಶರದ್ ಪವಾರ್, ಮೋದಿ ಮಾತುಗಳು ಮತ್ತು ಆಡಳಿತಾರೂಢ ಮೈತ್ರಿಕೂಟದ ಬಗ್ಗೆ ಜನರಿಗಿರುವ ಅಸಮಾಧಾನವು ಮಹಾ ವಿಕಾಸ್ ಅಘಾಡಿ(ಎಂವಿಎ) ಅಧಿಕಾರಕ್ಕೆ ಬರಲು ನೆರವಾಗುತ್ತದೆ ಎಂದಿದ್ದಾರೆ. ತಮ್ಮ ಸೋದರಳಿಯ ಅಜಿತ್ ಪವಾರ್ ಅವರೊಂದಿಗೆ ಚುನಾವಣೋತ್ತರ ಮೈತ್ರಿ ಕುರಿತಂತೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು, ಬಿಜೆಪಿ ಜೊತೆ ಮೈತ್ರಿ ಹೊಂದಿರುವ ಯಾವುದೇ ಪಕ್ಷದ ಸಹವಾಸ ಮಾಡಲ್ಲ ಎಂದಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಮುಖಭಂಗ ಅನುಭವಿಸಿರುವ ಮಹಾಯುತಿ ಮೈತ್ರಿಕೂಟವು, ನಗದು ವರ್ಗಾವಣೆ ಯೋಜನೆ ಸೇರಿದಂತೆ ಭಾರಿ ಪ್ರಮಾಣದ ಹಣದ ಬಲ ಬಳಸಿ ಮತದಾರರ ಮೇಲೆ ಪರಿಣಾಮ ಬೀರಲು ಯತ್ನಿಸುತ್ತಿದೆ. ಜನ ಅವರನ್ನು ತಿರಸ್ಕರಿಸಲಿದ್ದಾರೆ ಎಂದು ಪಿಟಿಐ ಸಂದರ್ಶನದಲ್ಲಿ ಹೇಳಿದ್ದಾರೆ.

ಕಾನ್ಪುರ ಮೃಗಾಲಯದ ಹುಲಿ ಸಾವು

ಕಾನ್ಪುರ: ವಯೋಸಹಜ ಕಾಯಿಲೆಗಳಿಂದ ಕಾನ್ಪುರ ಮೃಗಾಲಯದಲ್ಲಿ 19 ವರ್ಷದ ಹುಲಿ ಇತ್ತೀಚೆಗೆ ಸಾವನ್ನಪ್ಪಿದ್ದು, ಸಿಬ್ಬಂದಿ ಮತ್ತು ಪ್ರವಾಸಿಗರಲ್ಲಿ ಅಪಾರ ದುಃಖವನ್ನು ಉಂಟು ಮಾಡಿದೆ. 11 ವರ್ಷಗಳಿಂದ ಮೃಗಾಲಯದ ಎಲ್ಲ ಸಿಬ್ಬಂದಿಗೂ ಅತ್ಯಾಪ್ತವಾಗಿದ್ದ ಪ್ರಶಾಂತ ಹೆಸರಿನ ಈ ಹುಲಿ ಪ್ರವಾಸಿಗರ ಆಕರ್ಷಣೆಯಾಗಿತ್ತು. 2010ರ ಅಕ್ಟೋಬರ್ 14 ರಂದು ಟೈಗರ್ ಪ್ರಶಾಂತ್‌ಗೆ ಐದು ವರ್ಷವಾಗಿದ್ದಾಗ ಫರೂಕಾಬಾದ್ ಜಿಲ್ಲೆಯಲ್ಲಿ ಸೆರೆ ಹಿಡಿಯಲಾಗಿತ್ತು. ಆಗ ಈ ಹುಲಿ ಒಂಬತ್ತು ಜನರನ್ನು ಕೊಂದು ನರಹಂತಕನೆಂಬ ಕುಖ್ಯಾತಿಯನ್ನು ಪಡೆದಿತ್ತು. 2010ರಲ್ಲಿ ಗುಜರಾತ್‌ನ ಶಕ್ಕರ್‌ಬಾಗ್ ಮೃಗಾಲಯದಿಂದ ತಂದ ಹೆಣ್ಣು ಹುಲಿಯ ಜೋಡಿಯಾಗಿ ಪ್ರಶಾಂತ್, ಏಳು ಮರಿಗಳ ಜನನಕ್ಕೆ ಕಾರಣವಾಗಿದ್ದ ಎಂದು ಕಾನ್ಪುರ ಮೃಗಾಲಯದ ಪಶುವೈದ್ಯಾಧಿಕಾರಿ ಡಾ. ಅನುರಾಗ್ ಸಿಂಗ್ ತಿಳಿಸಿದ್ದಾರೆ.

ಮೋದಿ ಚುನಾವಣಾ ರ್‍ಯಾಲಿಗೆ ಅಜಿತ್ ಪವಾರ್ ಗೈರು, ಯೋಗಿ ಹೇಳಿಕೆಗೆ ಎನ್‌ಸಿಪಿ ಆಕ್ಷೇಪ

ಮಹಾಯುತಿ ಮೈತ್ರಿಕೂಟದಲ್ಲಿ ಬಿರುಕು

ಮುಂಬೈ: ಮಹಾರಾಷ್ಟ್ರದಲ್ಲಿ ನಡೆದ ಚುನಾವಣಾ ರ್‍ಯಾಲಿಯಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹಿಂದೂಗಳಲ್ಲಿ ಏಕತೆಗಾಗಿ 'ಕಟೆಂಗೆ ತೋ ಬಟೆಂಗೆ' ವಿಭಜನೆ ಎಂದರೆ ವಿನಾಶ) ಎಂದು ನೀಡಿರುವ ಘೋಷಣೆ ವಿಧಾನಸಭಾ ಚುನಾವಣೆಗೂ ಮುನ್ನವೇ ಮಹಾಯುತಿ ಮೈತ್ರಿಕೂಟದಲ್ಲಿ ಬಿರುಕು ಸೃಷ್ಟಿಸಿದೆ. ಉಪಮುಖ್ಯಮಂತ್ರಿ ಅಜಿತ್ ಪವಾರ್ ಮತ್ತು ಎನ್‌ಸಿಪಿಯ ಹಿರಿಯ ನಾಯಕರು ಗುರುವಾರ ಮುಂಬೈನ ಛತ್ರಪತಿ ಶಿವಾಜಿ ಪಾರ್ಕ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಚುನಾವಣಾ ರ್‍ಯಾಲಿಯಲ್ಲಿ ಭಾಗವಹಿಸದಿರುವುದು ಅನುಮಾನಕ್ಕೆ ಎಡೆಮಾಡಿದೆ.

ಅಜಿತ್ ಪವಾರ್ ಅವರ ಪಕ್ಷವು ಏಕನಾಥ್ ಶಿಂಧೆ ಅವರ ಶಿವಸೇನೆ ಮತ್ತು ಬಿಜೆಪಿಯೊಂದಿಗೆ ಆಡಳಿತ ಮೈತ್ರಿಕೂಟದಲ್ಲಿ ನಿರ್ಣಾಯಕ ಪಾಲುದಾರರಾಗಿದ್ದಾರೆ. ಎನ್‌ಸಿಪಿ ಅಭ್ಯರ್ಥಿಗಳಾದ ಸನಾ ಮಲಿಕ್ ಮತ್ತು ಜೀಶನ್ ಸಿದ್ದಿಕ್ ಅವರು ಶಿಂಧೆ ಶಿವಸೇನೆ ಮತ್ತು ರಾಮದಾಸ್ ಅಠವಾಲೆ ನೇತೃತ್ವದ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಆರ್‌ಪಿಐ) ಯ ನಾಯಕರು ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ಎನ್‌ಸಿಪಿ ನಾಯಕರ ಗೈರುಹಾಜರಿ ಕಾರ್ಯಕ್ರಮದಲ್ಲಿ ಎದ್ದುಕಾಣುತ್ತಿತ್ತು.

ಮೈತ್ರಿಕೂಟದ ಇತರ ಅಭ್ಯರ್ಥಿಗಳು ಪ್ರಧಾನ ಮಂತ್ರಿ ಮೋದಿಯವರೊಂದಿಗೆ ವೇದಿಕೆ ಹಂಚಿಕೊಂಡಿದ್ದು, ಮಹಾಯುತಿ ಮೈತ್ರಿಕೂಟದೊಳಗೆ ಏಕತೆಯನ್ನು ಪ್ರದರ್ಶಿಸುತ್ತಿದ್ದಾರೆ. ಈ ರ್‍ಯಾಲಿಯು ಮೈತ್ರಿಕೂಟದ ಒಗ್ಗಟ್ಟನ್ನು ಎತ್ತಿ ತೋರಿಸುವ ಉದ್ದೇಶವನ್ನು ಹೊಂದಿದ್ದರೂ, ಬಿಜೆಪಿಯ 'ಬಟೇಂಗೆ ತೋ ಕಟೆಂಗೆ' ಪ್ರಚಾರ ನಿರೂಪಣೆಯ ಬಗ್ಗೆ ಎನ್‌ಸಿಪಿ ನಾಯಕರು ಅಸಮಾಧಾನಗೊಂಡಿದ್ದಾರೆ.

ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗೆ ಮುನ್ನ ಬಿಜೆಪಿಯ ಆಕ್ರಮಣಕಾರಿ ಹಿಂದುತ್ವದ ಅಜೆಂಡಾದ ಬಗ್ಗೆ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಯೊಳಗೆ ಬೆಳೆಯುತ್ತಿರುವ ಅಸಮಾಧಾನದ ಲಕ್ಷಣಗಳು ಹೊರಹೊಮ್ಮುತ್ತಿದ್ದರೂ ಮಹಾಯುತಿ ನಾಯಕರು ಮೈತ್ರಿಕೂಟದಲ್ಲಿ ಬಿರುಕು ಮೂಡಿರುವ ಆರೋಪಗಳನ್ನು ತಳ್ಳಿಹಾಕಿದ್ದಾರೆ. ಮೈತ್ರಿಯು ಒಗ್ಗಟ್ಟಾಗಿದೆ ಎಂದು ಶಿವಸೇನಾ ಸಂಸದ ಮಿಲಿಂದ್ ದಿಯೋರಾ ಹೇಳಿದ್ದಾರೆ.

ಅಜಿತ್ ಪವಾರ್ ಅವರು ಈ ಹಿಂದೆ 'ಬಟೇಂಗೆ ತೋ ಕಟೆಂಗೆ' ಘೋಷಣೆಯನ್ನು ಟೀಕಿಸಿದ್ದರು. ಇದು ಹಿಂದೂ ಐಕ್ಯತೆಗೆ ಕರೆ ನೀಡುತ್ತದೆ. ಇದು ಮಹಾರಾಷ್ಟ್ರದಲ್ಲಿ ಕೆಲಸ ಮಾಡುವುದಿಲ್ಲ ಎಂದು ಅವರು ಸಿಎಂ ಯೋಗಿ ಆದಿತ್ಯನಾಥ್ ಚುನಾವಣಾ ರ್‍ಯಾಲಿಯಲ್ಲಿ ನೀಡಿದ್ದ ಘೋಷಣೆಯನ್ನು ಅಜಿತ್ ಪವಾರ್ ಸಾರ್ವಜನಿಕವಾಗಿಯೇ ಖಂಡಿಸಿದ್ದರು.

ಸಿಎಂ ಯಾರೆನ್ನುವುದು ಮುಖ್ಯವಲ್ಲ: ಶಿಂಧೆ

ಮುಂಬೈ: ಮಹಾರಾಷ್ಟ್ರದಲ್ಲಿ ಮತ್ತೊಮ್ಮೆ 'ಮಹಾಯುತಿ' ಮೈತ್ರಿ ಸರ್ಕಾರ ರಚನೆಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಏಕನಾಥ ಶಿಂದೆ, ಮುಂದಿನ ಸಿಎಂ ಯಾರಾಗಲಿದ್ದಾರೆ ಎಂಬುದು ಸದ್ಯ ಮುಖ್ಯವಲ್ಲ ಎಂದು ಹೇಳಿದ್ದಾರೆ.

''ಮಾಜಿ ಮುಖ್ಯಮಂತ್ರಿ ಉದ್ದವ್ ಠಾಕ್ರೆ ನೇತೃತ್ವದ ಶಿವಸೇನಾ, ಶರದ್ ಪವಾರ್ ಅವರ ಎನ್‌ಸಿಪಿ ಹಾಗೂ ಕಾಂಗ್ರೆಸ್ ಪಕ್ಷಗಳನ್ನೊಳಗೊಂಡ ಮಹಾ ವಿಕಾಸ ಆಘಾಡಿ ಮೈತ್ರಿಕೂಟವನ್ನು ಅಧಿಕಾರದಿಂದ ದೂರವಿಡುವುದು ನಮ್ಮ ಗುರಿ. ಅವರು ಅಧಿಕಾರಕ್ಕೇರಿದರೆ ರಾಜ್ಯವನ್ನು 25 ವರ್ಷಗಳಷ್ಟು ಹಿಂದಕ್ಕೆ ಕರೆದೊಯ್ಯಲಿದ್ದಾರೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಯೋಗ ಹೇಳಿಕೆಗೆ ಬಿಜೆಪಿ ಸಮರ್ಥನೆ

ಎನ್‌ಸಿಪಿ ಮುಖ್ಯಸ್ಥ ಹಾಗೂ ಉಪಮುಖ್ಯಮಂತ್ರಿ ಅಜಿತ್ ಪವಾರ್ ಈ ಘೋಷಣೆಯನ್ನು ಸಾರ್ವಜನಿಕವಾಗಿಯೇ ಖಂಡಿಸಿದ್ದಾರೆ. ಮತ್ತೊಂದೆಡೆ, ಡಿಸಿಎಂ ದೇವೇಂದ್ರ ಫಡ್ನವಿಸ್ ಸಿಎಂ ಯೋಗಿ ಘೋಷಣೆಯನ್ನು ಸಮರ್ಥಿಸಿಕೊಂಡಿದ್ದಾರೆ. ಸೆಕ್ಯುಲರಿಸ್ಟ್ ಎಂದು ಕರೆದುಕೊಳ್ಳುವವರಲ್ಲಿ ನಿಜವಾದ ಸೆಕ್ಯುಲರಿಸಂ ಇಲ್ಲ, ಅಜಿತ್ ಪವಾರ್ ಅವರಿಗೆ ದೀರ್ಘಕಾಲದಿಂದ ಇರುವ ಹಿಂದೂ ವಿರೋಧಿ ಸಿದ್ಧಾಂತ ಅರ್ಥಮಾಡಿಕೊಳ್ಳಲು ಸಮಯ ತೆಗೆದುಕೊಳ್ಳುತ್ತದೆ. ದಶಕಗಳ ಕಾಲ ಅಜಿತ್ ಪವಾರ್ ಜಾತ್ಯತೀತ ಮತ್ತು ಹಿಂದೂ ವಿರೋಧಿ ಸಿದ್ಧಾಂತದೊಂದಿಗೆ ಉಳಿದುಕೊಂಡಿದ್ದರು ಎಂದು ಡಿಸಿಎಂ ದೇವೇಂದ್ರ ಫಡ್ನವಿಸ್ ಅವರು ಅಜಿತ್ ಪವಾರ್ ಹೇಳಿಕೆಗೆ ತಿರುಗೇಟು ನೀಡಿದ್ದಾರೆ. ಯೋಗಿ ಆದಿತ್ಯನಾಥ್ ನೀಡಿದ ಘೋಷಣೆಯಲ್ಲಿ ಯಾವುದೇ ತಪ್ಪಿಲ್ಲ. ಯೋಗೀಜಿ ಅವರ ಘೋಷಣೆಗಳಲ್ಲಿ ನನಗೆ ಏನು ತಪ್ಪು ಕಂಡುಬಂದಿಲ್ಲ. ಈ ದೇಶವನ್ನು ಜಾತಿ, ರಾಜ್ಯಗಳಾಗಿ ಮತ್ತು ಸಮುದಾಯಗಳಾಗಿ ವಿಭಜಿಸಿದಾಗಲೆಲ್ಲಾ ನಾವು ಗುಲಾಮರಾಗಿದ್ದೇವೆ. ದೇಶವೂ ವಿಭಜನೆಯಾಯಿತು ಮತ್ತು ಅದರಂತೆ ಜನರು ಸಹ ವಿಭಜನೆಯಾದರು. ಅದಕ್ಕಾಗಿಯೇ ನಾವು ವಿಭಜನೆಯಾದರೆ, ನಮ್ಮನ್ನು ಕತ್ತರಿಸಲಾಗುತ್ತದೆ. ವಿಭಜನೆಯಾಗಬೇಡಿ ಎಂದು ಹೇಳಿರುವುದನ್ನು ಏಕೆ ಆಕ್ಷೇಪಿಸುತ್ತಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ ಎಂದು ಅವರು ಹೇಳಿದ್ದಾರೆ. ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ನಡೆದ ಚುನಾವಣಾ ರ್‍ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 'ಏಕ್ ಹೈ ತೋ ಸೇಫ್ ಹೈ' ಎಂಬ ಘೋಷಣೆ ಮಾಡಿದ್ದರು.

ಅಮಿತ್ ಶಾ ಹೆಲಿಕಾಪ್ಟರ್ ಶೋಧ

ಮುಂಬೈ: ಮಹಾರಾಷ್ಟ್ರ ಚುನಾವಣಾ ಪ್ರಚಾರಕ್ಕೆ ಆಗಮಿಸಿದ ಮಹಾ ವಿಕಾಸ್ ಅಘಾಡಿ ಕೇಂದ್ರ ನಾಯಕರು, ಮಾಜಿ ಸಿಎಂ ಉದ್ಧವ್ ಠಾಕ್ರೆ ಸೇರಿದಂತೆ ಹಲವರ ವಾಹನವನ್ನು ಚುನಾವಣಾ ಅಧಿಕಾರಿಗಳು ನಡೆಸಿದ ಪರಿಶೀಲನೆ ನಡೆಸಿದ್ದು ವಿವಾದಕ್ಕೆ ಕಾರಣವಾಗಿರುವ ನಡುವೆಯೇ

ಚುನಾವಣಾ ಆಯೋಗ, ಶುಕ್ರವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೆಲಿಕಾಪ್ಟರನ್ನು ಪರಿಶೋಧಿಸಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಗೃಹ ಸಚಿವ ಅಮಿತ್ ಶಾ, ಬಿಜೆಪಿ ನ್ಯಾಯಸಮ್ಮತ ಚುನಾವಣೆಯಲ್ಲಿ ನಂಬಿಕೆ ಇಟ್ಟಿದೆ. ನಿಯಮ ಎಲ್ಲರಿಗೂ ಒಂದೇ ಎಂದಿದ್ದಾರೆ.

ಹಿಂಗೋಲಿ ಜಿಲ್ಲೆಗೆ ಹೆಲಿಕಾಪ್ಟರ್ ಮೂಲಕ ಆಗಮಿಸಿದ ವೇಳೆ ಚುನಾವಣಾ ಅಧಿಕಾರಿಗಳು ಹೆಲಿಕಾಪ್ಟರ್ ಪರಿಶೋಧಿಸಿದ್ದಾರೆ. ಈ ಘಟನೆಯ ವಿಡಿಯೋವನ್ನು ಅಮಿತ್ ಶಾ ಸೋಶಿಯಲ್ ಮೀಡಿಯಾ ಮೂಲಕ ಹಂಚಿಕೊಂಡಿದ್ದಾರೆ. ಈ ಮೂಲಕ ವಿಪಕ್ಷಗಳ ನಾಯಕರಿಕೆ ತಿರುಗೇಟು ನೀಡಿದ್ದಾರೆ. ಹಿಂಗೋಲಿ ವಿಧಾನಸಭಾ ಕ್ಷೇತ್ರದ ಪ್ರಚಾರಕ್ಕೆ ತೆರಳಿದಾಗ ಚುನಾವಣಾ ಅಧಿಕಾರಿಗಳು ನಾನು ಪ್ರಯಾಣಿಸಿದ ಹೆಲಿಕಾಪ್ಟರ್‌ನ್ನು ಪರಿಶೋಧಿಸಿದ್ದಾರೆ. ಬಿಜೆಪಿ ನ್ಯಾಯಸಮ್ಮತ ಹಾಗೂ ಆರೋಗ್ಯಕರ ಚುನಾವಣೆ ಮೇಲೆ ನಂಬಿಕೆ ಇಟ್ಟಿದೆ. ಹೀಗಾಗಿ ಚನಾವಣಾ ಆಯೋಗ ರೂಪಿಸಿರುವ ಎಲ್ಲಾ ನಿಯಮಗಳನ್ನು ಪಾಲಿಸುತ್ತದೆ. ನಾವು ಚುನಾವಣಾ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಿಸಲು ಅನುವು ಮಾಡಿಕೊಡಬೇಕು. ಈ ಮೂಲಕ ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದ ಪ್ರಜಾಪ್ರಭುತ್ವವನ್ನು ಮತ್ತಷ್ಟು ಗಟ್ಟಿಗೊಳಿಸಬೇಕು ಎಂದು ಅಮಿತ್ ಶಾ ಟ್ವೀಟ್ ಮಾಡಿದ್ದಾರೆ. ಮಹಾರಾಷ್ಟ್ರ ಚುನಾವಣೆಯಲ್ಲಿ ಚುನಾವಣಾ ಅಧಿಕಾರಿಗಳ ವಾಹನ, ಬ್ಯಾಗ್ ಪರಿಶೋಧನೆ ಭಾರಿ ಕೋಲಾಹಲ ಸೃಷ್ಟಿಸಿದೆ. ಇತ್ತೀಚೆಗೆ ಉದ್ದವ್ ಠಾಕ್ರೆ ಈ ಬಗ್ಗೆ ಗರಂ ಆಗಿದ್ದರು. ಚುನಾವಣಾ ಆಯೋಗ ಅಧಿಕಾರಿಗಳು ಕೇಂದ್ರ ಬಿಜೆಪಿ ಸರಕಾರದ ಸೂಚನೆಯಂತೆ ನಮ್ಮ ವಾಹನ ಪರಿಶೋಧನೆ ಮಾಡುತ್ತಿದ್ದಾರೆ. ಒಂದೇ ದಿನ ಮೂರು ಬಾರಿ ವಾಹನ, ಬ್ಯಾಗ್ ಪರಿಶೀಲಿಸಿದ್ದಾರೆ. ಬಾತ್ ರೂಂಗೆ ಹೋದರೂ ಅಧಿಕಾರಿಗಳು ಪರಿಶೀಲನೆ ಮಾಡುತ್ತಾರೆ ಎಂದು ವ್ಯಂಗ್ಯವಾಡಿದ್ದರು.

ಮುಂಬೈ: ಮೆಟ್ರೊ ನಿಲ್ದಾಣದಲ್ಲಿ ಬೆಂಕಿ

ಮುಂಬೈ: ಮುಂಬೈಯ ಬಾಂದ್ರಾ-ಕುರ್ಲಾ ಕಾಂಪ್ಲೆಕ್ಸ್ (ಬಿಕೆಸಿ) ಮೆಟ್ರೊ ನಿಲ್ದಾಣದ ನೆಲ ಅಂತಸ್ತಿನಲ್ಲಿ ಇಂದು (ಶುಕ್ರವಾರ) ಮಧ್ಯಾಹ್ನ ಬೆಂಕಿ ಅವಘಡ ಸಂಭವಿಸಿದೆ. ಮುಂಜಾಗ್ರತಾ ಕ್ರಮವಾಗಿ ಎರಡು ತಾಸಿಗೂ ಹೆಚ್ಚು ಕಾಲ ರೈಲು ಸೇವೆಯನ್ನು ಸ್ಥಗಿತಗೊಳಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಿರ್ಮಾಣ ಹಂತದಲ್ಲಿರುವ ಎ4 ಪ್ರವೇಶ/ನಿರ್ಗಮನದಲ್ಲಿ ಮಧ್ಯಾಹ್ನ 1.1ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿತು. ಘಟನೆಯಲ್ಲಿ ಯಾವುದೇ ಸಾವು-ನೋವು ಸಂಭವಿಸಿಲ್ಲ ಎಂದು ಅವರು ತಿಳಿಸಿದ್ದಾರೆ. ಬೆಂಕಿ ಹೊತ್ತಿಕೊಂಡ ಪರಿಣಾಮ ಪ್ರದೇಶದಲ್ಲಿ ದಟ್ಟವಾದ ಹೊಗೆ ಆವರಿಸಿತು. ಎಂಟು ಅಗ್ನಿಶಾಮಕ ವಾಹನಗಳು ಸ್ಥಳಕ್ಕೆ ಧಾವಿಸಿತು. ಎರಡು ತಾಸಿನ ಪ್ರಯತ್ನದ ಬಳಿಕ ಬೆಂಕಿ ನಂದಿಸಲಾಯಿತು. ಬಿಕೆಸಿ ಮೆಟ್ರೊ ನಿಲ್ದಾಣವು, ಬಿಕೆಸಿ ಮತ್ತು arey JVLR ಅನ್ನು ಸಂಪರ್ಕಿಸುವ ಎಂಎಂಆರ್‌ಸಿ ಮುಂಬೈ ಮೆಟ್ರೊ ಲೈನ್-3 (ಅಕ್ವಾ ಲೈನ್) 12.69 ಕಿ.ಮೀ. ಉದ್ದದ ಮೊದಲ ಹಂತದ ಭಾಗವಾಗಿದೆ. ಪ್ರಧಾನಿ ನರೇಂದ್ರ ಮೋದಿ ಕಳೆದ ತಿಂಗಳು ಇದನ್ನು ಉದ್ಘಾಟಿಸಿದ್ದರು.

ಡೋಜ್‌ನಲ್ಲಿ ಉದ್ಯೋಗಿಗಳಿಗೆ ವಿದ್ಯಾರ್ಹತೆ ಬೇಕಾಗಿಲ್ಲ, ಆದರೆ ಎಕ್ಸ್‌ನ ಚಂದಾದಾರರಾಗಿರಬೇಕು: ಎಲಾನ್ ಮಸ್ಕ್

80 ತಾಸು ದುಡಿಯುವವರು ಬೇಕು

ವಾಷಿಂಗ್ಟನ್: ಅಮೆರಿಕ ಸರಕಾರದ ಕಾರ್ಯದಕ್ಷತಾ ಇಲಾಖೆಗೆ ಅಭ್ಯರ್ಥಿಗಳ ಅಗತ್ಯವಿದ್ದು, ಅಪಾರ ಬುದ್ಧಿಮತ್ತೆಯ, ಸರಕಾರಿ ಯಂತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತರಬಲ್ಲ ಹಾಗೂ ವಾರಕ್ಕೆ 80 ಗಂಟೆಗಳ ಕಾಲ ದುಡಿಯಲು ಮನಸ್ಸಿರುವವರಿಗೆ ಅವಕಾಶ ಎಂದು ಇಲಾಖೆಯ ಮುಖ್ಯಸ್ಥರೂ ಆಗಿರುವ

ಟೆಸ್ಲಾ ಕಂಪನಿಯ ಸಿಇಒ ಎಲಾನ್ ಮಸ್ಕ್ ಹಾಗೂ ವಿವೇಕ್ ರಾಮಸ್ವಾಮಿ ಸಾಮಾಜಿಕ ಮಾಧ್ಯಮದಲ್ಲಿ ಹೇಳಿದ್ದಾರೆ.

ನೇಮಕಾತಿಗೆ ಜಾಹೀರಾತು ಪ್ರಕಟಿಸುತ್ತಿದ್ದಂತೆ DOGEನ ಸಾಮಾಜಿಕ ಮಾಧ್ಯಮ ಅನುಸರಿಸುವವರ ಸಂಖ್ಯೆ 14 ಲಕ್ಷಕ್ಕೆ ಏರಿಕೆಯಾಗಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಮಸ್ಕ್, DOGEಗೆ ನೆರವಾಗಲು ನಮ್ಮ ಮೇಲೆ ನಂಬಿಕೆ ಇಟ್ಟ ಸಾವಿರಾರು ಅಮೆರಿಕನ್ನರು ಆಸಕ್ತಿ ತೋರಿಸಿದ್ದಾರೆ. ಹೊಸ ಆಲೋಚನೆಯುಳ್ಳ ತಾತ್ಕಾಲಿಕ ಆಸಕ್ತರು ನಮಗೆ ಬೇಡ. ವಾರಕ್ಕೆ 80 ಗಂಟೆಗೂ ಹೆಚ್ಚು ಕಾಲ ಕೆಲಸ ಮಾಡಬಲ್ಲ ಮತ್ತು ಸರಕಾರಿ ಯಂತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತರಬಲ್ಲ ಹಾಗೂ ವೆಚ್ಚಕ್ಕೆ ಕಡಿವಾಣ ಹಾಕಬಲ್ಲವರನ್ನು ಮಾತ್ರ ನೇಮಿಸಿಕೊಳ್ಳಲಾಗುವುದು. ಆಸಕ್ತರು ಎಕ್ಸ್‌ನ ತಮ್ಮ ಖಾತೆಗಳ ಮೂಲಕ ನೇರವಾಗಿ ಅರ್ಜಿ ಸಲ್ಲಿಸಬಹುದು ಎಂದು ಹೇಳಿದ್ದಾರೆ. ಈ ಉದ್ಯೋಗಕ್ಕೆ ನಿರ್ದಿಷ್ಟ ವಿದ್ಯಾರ್ಹತೆ ಹಾಗೂ ಅನುಭವವನ್ನು ಕೇಳಿಲ್ಲ. ಬದಲಿಗೆ ದೀರ್ಘ ಕಾಲ ದುಡಿಯಲು ಮನಸ್ಸಿರುವವರೆಗೆ ಮಾತ್ರ ಅವಕಾಶ ಎಂದೆನ್ನಲಾಗಿದೆ. ಅರ್ಜಿ ಸಲ್ಲಿಸುವವರು ಮಾಸಿಕ 8 ಅಮೆರಿಕನ್ ಡಾಲರ್ ನೀಡಿ ಚಂದಾದಾರರಾಗಿರುವ ಎಕ್ಸ್‌ನ ಅಧಿಕೃತ ಖಾತೆಗಳನ್ನು ಹೊಂದಿರಬೇಕು ಎಂದು ಹೇಳಲಾಗಿದೆ.

ಇದು ಅತ್ಯಂತ ಕಷ್ಟಕರ ಕೆಲಸ ಬೇಡುವ ಹುದ್ದೆಯಾಗಿದೆ. ಸಾಕಷ್ಟು ಶತ್ರುತ್ವ ಕಟ್ಟಿಕೊಳ್ಳಬೇಕಾಗುತ್ತದೆ. ಆದರೆ ಅದಕ್ಕೆ ಯಾವುದೇ ಪರಿಹಾರ ಸಿಗದು ಎಂದು ಮಸ್ಕ್ ವಿವರಿಸಿದ್ದಾರೆ. ಮತ್ತೊಂದೆಡೆ ವಿವೇಕ್ ರಾಮಸ್ವಾಮಿ ಅವರು ಟ್ವೀಟ್ ಮಾಡಿ, ಇದು ಸರಕಾರಿ ಹುದ್ದೆಗಳಿಗೆ ವ್ಯತಿರಿಕ್ತವಾದದ್ದು. ಎ) ಕಡಿಮೆ ಅಥವಾ ಯಾವುದೇ ಕೆಲಸ ವಿಲ್ಲ, ಬಿ) ಜನರು ಏನನ್ನು ಕೇಳಬಯಸುತ್ತಾರೋ ಅದಷ್ಟನ್ನೇ ಹೇಳಿ, ಸಿ) ಅವರು ಗಳಿಸುವ ಹಣಕ್ಕಿಂತ ಹೆಚ್ಚಿನ ಹಣವನ್ನು ಗಳಿಸಿ ಎಂದು ಬರೆದಿದ್ದಾರೆ.

1500 ಕೆಜಿ ತೂಗುವ ಅನ್ಮೋಲ್ ಹೆಸರಿನ ಕೋಣವನ್ನು ಸಾಕಲು ನಿತ್ಯ 1500 ರೂ ವೆಚ್ಚ

ಹರಿಯಾಣದ ಈ ಮಹಿಷನ ಬೆಲೆ 23 ಕೋಟಿ!

ಚಂಡೀಗಡ: ಇದು ಅಂತಿಂಥ ಕೋಣವಲ್ಲ. ಥಟ್ಟನೇ ನೋಡಿದರೆ ಕಾಡುಕೋಣವನ್ನೂ ಮೀರಿಸುವ ದೃಢಕಾಯದ ಕೋಣ. 'ಬಾಹುಬಲಿ' ಸಿನಿಮಾದಲ್ಲಿನ ಗ್ರಾಫಿಕ್ಸ್ ಕೋಣವನ್ನು ನೆನಪಿಗೆ ತರಬಹುದಾದ ಕೋಣದ ಮೈಕಟ್ಟು ಈಗ ದೇಶವ್ಯಾಪಿ ಸುದ್ದಿಯಾಗಿದೆ. ಅಂದ ಹಾಗೆ ಈ ಕೋಣದ ಬೆಲೆ ಬರೋಬ್ಬರಿ 23 ಕೋಟಿ ರು.

ಹರ್ಯಾಣದ ಈ ಕೋಣ ದೇಶಾದ್ಯಂತ ನಡೆಯುವ ಕೃಷಿ ಉತ್ಸವಗಳಲ್ಲಿ ಭಾಗಿಯಾಗುತ್ತಿದ್ದು, ಪ್ರಮುಖ ಆಕರ್ಷಣೆಯಾಗುತ್ತಿದೆ. 1500 ಕೆಜಿ ತೂಗುವ ಅನ್ಮೋಲ್ ಹೆಸರಿನ ಈ ಕೋಣ, ಪುಷ್ಕರ್ ಮೇಳ ಮತ್ತು ಮೀರತ್‌ನಲ್ಲಿ ನಡೆದ ಅಖಿಲ ಭಾರತ ರೈತರ ಉತ್ಸವದಂತಹ ಕಾರ್ಯಕ್ರಮಗಳಲ್ಲಿ ಗಮನ ಸೆಳೆದಿದೆ. ತನ್ನ ಗಾತ್ರ, ವಂಶಾವಳಿ ಮತ್ತು ತಳಿ ಅಭಿವೃದ್ಧಿ ಸಾಮರ್ಥ್ಯಗಳಿಂದ ಹೆಸರಾಗಿರುವ ಈ ಕೋಣ, ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಸಂಚಲನ ಸೃಷ್ಟಿಸಿದೆ. ಅಂದಹಾಗೆ, ಅನ್ಮೋಲ್‌ನ ಜೀವನಶೈಲಿ ಕೂಡ ಬಲು ದುಬಾರಿ. ಅನ್ಮೋಲ್‌ನ ಮಾಲೀಕ ಗಿಲ್, ತನ್ನ ಮುದ್ದಿನ ಕೋಣದ ಹೊಟ್ಟೆಗೆ ಹಾಕಲೆಂದೇ ನಿತ್ಯ ಸುಮಾರು ಸುಮಾರು 1500 ರು. ವ್ಯಯಿಸುತ್ತಿದ್ದಾರೆ. ಅನ್ಮೋಲ್‌ನ ಆರೋಗ್ಯ ಹಾಗೂ ಶಕ್ತಿ ಕಾಪಾಡಲು ಒಣ ಹಣ್ಣುಗಳು ಮತ್ತು ಅಧಿಕ ಕ್ಯಾಲರಿ ಆಹಾರಗಳ ಮಿಶ್ರಣ ನೀಡುತ್ತಿದ್ದಾರೆ.

ಸೆಲೆಬ್ರಿಟಿ ಕೋಣ

- ಕೃಷಿ ಉತ್ಸವ, ಪುಷ್ಕರ ಮೇಳದಲ್ಲಿ ಅನ್ಮೋಲ್ ಪ್ರಮುಖ ಆಕರ್ಷಣೆ
- ತಳಿ ಅಭಿವೃದ್ಧಿಗಾಗಿ ದೈತ್ಯ ಕೋಣದ ವೀರ್ಯಕ್ಕೆ ಭಾರಿ ಬೇಡಿಕೆ
- ಪ್ರತಿದಿನ 20 ಮೊಟ್ಟೆ, 4 ಕೆಜಿ ದಾಳಿಂಬೆ, 30 ಬಾಳೆ ಹಣ್ಣು, 5 ಕೆಜಿ ಹಾಲು

ದಿನಕ್ಕೆರಡು ಬಾರಿ ಸ್ನಾನ: ಈ ವಿಶಿಷ್ಟ ಮಹಿಷನಿಗೆ ದಿನಕ್ಕೆ ಎರಡು ಬಾರಿ ಸ್ನಾನ ಮಾಡಿಸಲಾಗುತ್ತದೆ. ಬಾದಾಮಿ ಹಾಗೂ ಸಾಸಿವೆ ಎಣ್ಣೆಯ ವಿಶೇಷ ಮಿಶ್ರಣವು ಆತನ ಹೊರಮೈ ಫಳ ಫಳ ಹೊಳೆಯುವಂತೆ ಹಾಗೂ ಆರೋಗ್ಯವಂತವಾಗಿರಲು ನೆರವಾಗುತ್ತಿದೆ. ಕೋಣ ಸಾಕುವುದು ಬಲು ದುಬಾರಿಯಾಗುತ್ತಿದ್ದರೂ ಅನ್ಮೋಲ್‌ಗೆ ಅತಿ ಹೆಚ್ಚಿನ ಆರೈಕೆ ಮಾಡಲು ಗಿಲ್ ಗಮನ ಹರಿಸಿದ್ದಾರೆ. ಆತನ ಸಾಕುವ ವೆಚ್ಚ ಭರಿಸುವುದಕ್ಕಾಗಿ ಪ್ರತಿ ದಿನ 25 ಲೀಟರ್ ಹಾಲು ನೀಡುತ್ತಿದ್ದ ಆತನ ತಾಯಿಯನ್ನು ಮತ್ತು ಸಹೋದರಿಯನ್ನು ಕೂಡ ಮಾರಾಟ ಮಾಡಿದ್ದರು.

ಭರ್ಜರಿ ಲಾಭ: ವಾರಕ್ಕೆ ಎರಡು ಬಾರಿ ಅನ್ಮೋಲ್‌ನ ವೀರ್ಯವನ್ನು ಸಂಗ್ರಹಿಸಲಾಗುತ್ತದೆ. ಇದಕ್ಕೆ ಭಾರಿ ಬೇಡಿಕೆ ಇದ್ದು ದುಬಾರಿ ಮೊತ್ತ ನಿಗದಿಪಡಿಸಲಾಗಿದೆ.

ಊಟ, ಆರೈಕೆಗೆ ಭಾರಿ ವೆಚ್ಚ

ಈ ಕೋಣಕ್ಕೆ ನಿತ್ಯ 200 ಗ್ರಾಮ್ ಬಾದಾಮಿ, 30 ಬಾಳೆ ಹಣ್ಣು, 4 ಕೆಜಿ ದಾಳಿಂಬೆ ಹಣ್ಣು, 5 ಕೆಜಿ ಹಾಲು ಮತ್ತು 20 ಮೊಟ್ಟೆಗಳನ್ನು ನೀಡುತ್ತಿದ್ದಾರೆ. ಜತೆಗೆ ಆಯಿಲ್ ಕೇಕ್, ಹಸಿರು ಹುಲ್ಲು, ತುಪ್ಪ, ಸೋಯಾಬೀನ್ಸ್ ಮತ್ತು ಜೋಳವನ್ನೂ ಕೊಡುತ್ತಿದ್ದಾರೆ. ಕೊಬ್ಬಿದ ಕೋಣನಿಗಾಗಿ ಈ ವಿಶಿಷ್ಟ ಆಹಾರ ಕ್ರಮವನ್ನು ರೂಪಿಸಲಾಗಿದೆ. ಪ್ರದರ್ಶನಗಳಿಗೆ ತೆರಳಲು ಅಗತ್ಯ ಬಿದ್ದಾಗ ತಳಿ ಅಭಿವೃದ್ಧಿಗೆ ಬಳಸಲು ಆತನನ್ನು ಸದಾ ಸನ್ನದ್ಧವಾಗಿ ಇರಿಸಲಾಗಿರುತ್ತದೆ.

ಡಿಜಿಟಲ್ ಅರೆಸ್ಟ್: 10 ಕೋಟಿ ರು.ವಂಚನೆ

ದೆಹಲಿ: ರಾಷ್ಟ್ರ ರಾಜಧಾನಿಯಲ್ಲಿ 72 ವರ್ಷದ ನಿವೃತ್ತ ಇಂಜಿನಿಯರ್‌ನ್ನು ಅವರ ಮನೆಯಲ್ಲಿ ಎಂಟು ಗಂಟೆಗಳ ಕಾಲ 'ಡಿಜಿಟಲ್ ಬಂಧನ'ದ ಹೆಸರಿನಲ್ಲಿ ಹೆದರಿಸಿ 10 ಕೋಟಿ ರು. ವಂಚಿಸಿದ ಪ್ರಕರಣದ ದೆಹಲಿಯ ರೋಹಿಣಿ ನಗರದಲ್ಲಿ ನಡೆದಿದೆ.

ನಿವೃತ್ತ ಇಂಜಿನಿಯರ್ ತನ್ನ ಪತ್ನಿ ಜೊತೆ ದೆಹಲಿಯ ರೋಹಿಣಿ ನಗರದಲ್ಲಿ ವಾಸವಿದ್ದು, ಮಾದಕ ವಸ್ತು ಸಾಗಾಟ ಕೇಸ್‌ನಲ್ಲಿ ನಿಮ್ಮ ಮೇಲೆ ಕ್ರಮ ಕೈಗೊಳ್ಳುತ್ತೇವೆ ಎಂದು ಸೈಬರ್ ಖದೀಮರು ಅವರನ್ನು ಬೆದರಿಸಿ ಹಣ ಪೀಕಿಸಿದ್ದಾರೆ.

ನಿವೃತ್ತ ಇಂಜಿನಿಯರ್ ಹೇಳಿದ ಪ್ರಕಾರ ಸೈಬರ್ ಖದೀಮರು, ''ತೈವಾನ್‌ನಿಂದ ನಿಮಗೆ ಪಾರ್ಸೆಲ್ ಬಂದಿದೆ ಅದನ್ನು ಮುಂಬೈ ವಿಮಾನ ನಿಲ್ದಾಣದಲ್ಲಿ ತಡೆ ಹಿಡಿಯಲಾಗಿದೆ ಎಂದು ಹೇಳಿದ್ದರು. ನಂತರ ಮಾತನ್ನು ಮುಂದುವರಿಸಿದ ವ್ಯಕ್ತಿ ನಿಮ್ಮ ಹೆಸರಲ್ಲಿರುವ ಪಾರ್ಸೆಲ್‌ನಲ್ಲಿ ನಿಷೇಧಿತ ಡ್ರಗ್ಸ್ ಇದ್ದು, ಅದನ್ನು ಮುಂಬೈ ಕ್ರೈಂ ಬ್ರಾಂಚ್ ಪೊಲೀಸರು ತಡೆ ಹಿಡಿದಿದ್ದಾರೆ. ನಿಮ್ಮ ಜತೆ ಕ್ರೈಂ ಬ್ರಾಂಚ್‌ನ ಸಿಬ್ಬಂದಿಯೊಬ್ಬರು ಮಾತನಾಡುತ್ತಾರೆ. ನೀವು ವಿಡಿಯೋ ಕಾಲ್ ಮೂಲಕ ಅವರ ಜತೆ ಮಾತನಾಡಿ'' ಎಂದು ಹೇಳಿದ್ದರು. ನಂತರ ವಿಡಿಯೋ ಕಾಲ್ ಮಾಡುವ ಆ್ಯಪ್ ಡೌನ್‌ಲೋಡ್ ಮಾಡಲು ಸೂಚನೆ ನೀಡಿದ್ದರು.

ನಂತರ ವಿಡಿಯೋ ಕಾಲ್‌ನಲ್ಲಿ ಮಾತನಾಡಿದ ಇಂಜಿನಿಯರ್ ಗಾಬರಿಯಾಗಿದ್ದಾರೆ. ಅವರನ್ನು ಎಂಟು ಗಂಟೆಗಳ ಕಾಲ ಫೋನ್‌ನಲ್ಲಿ ಮಾತನಾಡಿ ಹಣಕ್ಕಾಗಿ ಬೇಡಿಕೆ ಇಟ್ಟಿದ್ದಾರೆ. ಹಣ ಕೊಡದಿದ್ದರೆ ನಿಮ್ಮನ್ನು ಡ್ರಗ್ಸ್ ಕೇಸ್‌ನಲ್ಲಿ ಬಂಧಿಸುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ. ನಿಮ್ಮ ಮಕ್ಕಳು ವಿದೇಶದಲ್ಲಿದ್ದು ಹಣ ಕೊಡದಿದ್ದರೆ ಅವರ ಮೇಲೂ ಕೇಸ್ ಹಾಕುವುದಾಗಿ ಬೆದರಿಸಿದ್ದಾರೆ. ಇದರಿಂದ ಬೆದರಿದ ವೃದ್ಧ ದಂಪತಿ, ತಮ್ಮ ಬ್ಯಾಂಕ್ ಖಾತೆಯಲ್ಲಿದ್ದ ಅಷ್ಟೂ ಹಣವನ್ನು ಖದೀಮರು ಹೇಳಿದ ನಂಬರಿಗೆ ವರ್ಗಾಯಿಸಿದ್ದಾರೆ.

ಈ ಸಂಬಂಧ ದೂರು ಬಂದ ತಕ್ಷಣ ತನಿಖೆ ಪ್ರಾರಂಭಿಸಿದ ಪೊಲೀಸರು 60 ಲಕ್ಷ ರು. ಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಸೈಬರ್ ಖದೀಮರು ವಿದೇಶದಿಂದ ಕರೆ ಮಾಡಿ ವಂಚನೆ ನಡೆಸಿರಬಹುದು ಎಂದು ಊಹಿಸಲಾಗಿದೆ.

ದ್ವೀಪ ರಾಷ್ಟ್ರದ ಇತಿಹಾಸದಲ್ಲಿ ಮೊದಲ ಬಾರಿಗೆ ಎಡಪಂಥೀಯ ಒಕ್ಕೂಟಕ್ಕೆ ಭರ್ಜರಿ ಗೆಲುವು

ಲಂಕಾ ಸಂಸತ್ ಚುನಾವಣೆ: ಅಧ್ಯಕ್ಷರ ಪಕ್ಷಕ್ಕೆ ಬಹುಮತ

ಕೊಲಂಬೊ: ಶ್ರೀಲಂಕಾದ ಸಂಸತ್ತಿಗೆ ನಡೆದ ಚುನಾವಣೆಯಲ್ಲಿ ಶ್ರೀಲಂಕಾದ ಹೊಸ ಮಾರ್ಕ್ಸ್‌ವಾದಿ ಅಧ್ಯಕ್ಷ ಅನುರಾ ಕುಮಾರ ಡಿಸ್ಸಾನಾಯಕೆ ಅವರ ಪಕ್ಷವು ಬಹುಮತವನ್ನು ಗಳಿಸಿದೆ.

ಚುನಾವಣಾ ಆಯೋಗವು ಬಿಡುಗಡೆ ಮಾಡಿದ ಭಾಗಶಃ ಫಲಿತಾಂಶಗಳ ಪ್ರಕಾರ, ಸಂಸತ್ತಿನ 225 ಸ್ಥಾನಗಳಲ್ಲಿ ಡಿಸ್ಸಾನಾಯಕೆ ಅವರ ನ್ಯಾಷನಲ್ ಪೀಪಲ್ಸ್ ಪವರ್ ಪಕ್ಷವು ಕನಿಷ್ಠ 123 ಸ್ಥಾನಗಳನ್ನು ಗೆದ್ದಿದೆ. ವಿಪಕ್ಷ ನಾಯಕ ಸಜಿತ್ ಪ್ರೇಮದಾಸ ನೇತೃತ್ವದ ಸಮಗಿ ಜನ ಬಲವೇಗಯಾ ಅಥವಾ ಯುನೈಟೆಡ್ ಪೀಪಲ್ಸ್ ಪವರ್ ಪಾರ್ಟಿ ಕೇವಲ 31 ಸ್ಥಾನಗಳನ್ನು ಪಡೆದಿದೆ.

ತಮಿಳು ರಾಷ್ಟ್ರೀಯವಾದಿ ಪಕ್ಷಗಳಿಗೆ ಸೋಲು: ಇದೀಗ ತಮಿಳರು ಹೆಚ್ಚಿನ ಸಂಖ್ಯೆಯಲ್ಲಿರುವ ಜಾಫ್ನಾ ಜಿಲ್ಲೆ ಮತ್ತು ಇತರ ಅನೇಕ ಅಲ್ಪಸಂಖ್ಯಾತರ ಭದ್ರಕೋಟೆಗಳಲ್ಲೂ ಸಿಂಹಳೀಯ ಬಹುಸಂಖ್ಯಾತ ಪಕ್ಷವು ನ್ಯಾಷನಲ್ ಪೀಪಲ್ ಪವರ್ ಆರರಲ್ಲಿ ಮೂರು ಸ್ಥಾನಗಳನ್ನು ಗೆದ್ದುಕೊಂಡಿದೆ. ಇಲ್ಲಿ ಸಾಂಪ್ರದಾಯಿಕ ತಮಿಳು ರಾಷ್ಟ್ರೀಯವಾದಿ ಪಕ್ಷಗಳು ಆಘಾತಕಾರಿ ಸೋಲು ಕಂಡಿವೆ. ಹಿಂದೆ ಯಾವುದೇ ಸಿಂಹಳೀಯ ಬಹುಸಂಖ್ಯಾತ ಪಕ್ಷಗಳು ಜಾಫ್ನಾದಲ್ಲಿ ಗೆದ್ದಿರಲಿಲ್ಲ.

ಸೆಪ್ಟೆಂಬರ್ 21 ರಂದು ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಅಚ್ಚರಿ ಎಂಬಂತೆ ಎಡ ಪಕ್ಷದ ನಾಯಕ ಡಿಸ್ಸಾನಾಯಕೆ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ತಕ್ಷಣ ಡಿಸ್ಸಾನಾಯಕೆ ಸಂಸತ್ತನ್ನು ವಜಾಗೊಳಿಸಿದ್ದರಿಂದ ನಿಗದಿತ ಸಮಯಕ್ಕಿಂತ ಒಂದು ವರ್ಷ ಮುಂಚಿತವಾಗಿ ಚುನಾವಣೆ ಘೋಷಿಸಲಾಗಿತ್ತು. ಹೊಸ ಸಂಸತ್ತು ಮುಂದಿನ ವಾರ ಸಭೆ ಸೇರಲಿದೆ. ಸ್ವಯಂ-ಘೋಷಿತ ಮಾರ್ಕ್ಸ್‌ವಾದಿ, 55 ವರ್ಷ ವಯಸ್ಸಿನ ಡಿಸ್ಸಾನಾಯಕೆ ಆರ್ಥಿಕ ಸಂಕಷ್ಟದಿಂದ ದೇಶವನ್ನು ಪಾರು ಮಾಡುವ ಮಹತ್ತರ ಜವಾಬ್ದಾರಿಯನ್ನು ಹೊಂದಿದ್ದಾರೆ.

ಎನ್‌ಪಿಸಿಗೆ ಮೂರನೇ ಎರಡರಷ್ಟು ಬಹುಮತ

ಒಟ್ಟು 196 ಸ್ಥಾನಗಳ ಪೈಕಿ 25 ಸ್ಥಾನಗಳ ಫಲಿತಾಂಶ ಪ್ರಕಟವಾಗಬೇಕಿದೆ. ಸಂಚಿತ ರಾಷ್ಟ್ರೀಯ ಮತದಾನದ ಆಧಾರದ ಮೇಲೆ ಎಲ್ಲಾ ಪಕ್ಷಗಳಿಗೆ ಇನ್ನೂ 29 ಸ್ಥಾನಗಳನ್ನು ಹಂಚುವ ನಿರೀಕ್ಷೆಯಿದೆ. ತನ್ನ ಪ್ರತಿಸ್ಪರ್ಧಿಗಳಿಗಿಂತ ಭಾರೀ ಮುನ್ನಡೆ ಸಾಧಿಸಿದ ಎನ್‌ಪಿಪಿ, 225 ಸದಸ್ಯರ ವಿಧಾನಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತವನ್ನು ಪಡೆಯುವ ಹಾದಿಯಲ್ಲಿದೆ.

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಜೆಸ್ಕಾಂ ಗುಲಬರ್ಗಾ. CIN:U4010KA2002SGC030436
E-mail: **eeetpgescom@gmail.com** Website: **gescom.in**

ಸಂಖ್ಯೆ: ಜೆಸ್ಕಾಂ/ಮು.ಇಂ.(ಕಾ)/ಅ.ಇಂ(ತಾಂ)/ಕಾ.ನಿ.ಇಂ/ಸ.ಕಾ.ನಿ.ಇಂ-1(ತಾ)/ಸಇಂ-1(ತಾ)/2024-25/41203-21
ದಿನಾಂಕ: 14-11-2024

:: ಅಲ್ಪಾವದಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರಮೆಂಟ ಮುಖಾಂತರ) ::

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ವಿವರಿಸಿದಂತೆ **"ಕಾ ಮತ್ತು ಪಾ ವಿಭಾಗ ಕಲಬುರಗಿ ವಿಭಾಗ-1** (Bid Enq no:TP-080 /GK&WS /2024-25 /Kalaburagi Division-1 and Approximate amount put to tender: **Rs. 767.67 Lakhs), ಸೇಡಂ** (Bid Enq no:TP-081/GK&WS /2024-25 /Sedam Division and Approximate amount put to tender: **Rs. 446.72 Lakhs)**, **ಬಳ್ಳಾರಿ ಗ್ರಾಮೀಣ** (Bid Enq no:TP-082 /GK&WS /2024-25 /Ballari Rural Division and Approximate amount put to tender: **Rs. 675.62 Lakhs), ಹೊಸಪೇಟೆ ನಗರ** (Bid Enq no:TP-083/GK&WS /2024-25 /Hospet Urban Division and Approximate amount put to tender: **Rs. 223.36 Lakhs)** ಹಾಗೂ **ಕೊಪ್ಪಳ** (Bid Enq no: TP-084 /GK&WS /2024-25 /Koppal Division and Approximate amount put to tender: **Rs. 407.64 Lakhs)**, ಗ್ರಾಮೀಣ ಪ್ರದೇಶಗಳಲ್ಲಿನ ವಿವಿಧ ನಿಗಮಗಳ ಗಂಗಾ ಕಲ್ಯಾಣ ಮತ್ತು ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳ ಅಡಿಯಲ್ಲಿ ಬಾಕಿ ಇರುವ ಅರ್ಜಿಗಳಿಗೆ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲು ಮೂಲಸೌಕರ್ಯಗಳ ರಚನೆ ಪಿಟಿಕೆ ರೇಟ್ ಕಾಟ್ರಾಂಕ್ಟ್" ಅಡಿಯಲ್ಲಿ 01 ವರ್ಷದ ಅವಧಿಗೆ (extendable by one more Year at the discretion of GESCOM) ಅರ್ಹ ಬಿಡ್‌ದಾರರುಗಳಿಂದ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ.

ಆಸಕ್ತ ಬಿಡ್‌ದಾರರು ದಿನಾಂಕ: **15.11.2024** ರಂದು ಅಥವಾ ತದನಂತರ ಕರ್ನಾಟಕ ಸರ್ಕಾರದ ಈ ಕೆಳಕಂಡ ವೆಬ್ ಸೈಟ್‌ಗೆ ಲಾಗ್‌ಆನ್ ಮಾಡಲು ಕೋರಲಾಗಿದೆ.

www.kppp.karnataka.gov.in

ಸಹಿ/- ಮುಖ್ಯ ಇಂಜಿನಿಯರ್(ವಿ),
ಕಾರ್ಯಾಚರಣೆ, ನಿಗಮ ಕಛೇರಿ, ಗುವಿಸಕಂನಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/625/ಕೆ.ಎಸ್.ಎಂ.ಸಿ.&ಎ/2024-25

ಮೋದಿ ಪ್ರಯಾಣದ ವಿಮಾನದಲ್ಲಿ ದೋಷ

ರಾಂಚಿ: ಜಾರ್ಖಂಡ್‌ನ ದಿಯೋಘರ್ ವಿಮಾನ ನಿಲ್ದಾಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೊತ್ತೊಯ್ಯಬೇಕಿದ್ದ ವಿಮಾನದಲ್ಲಿ ತಾಂತ್ರಿಕ ದೋಷ ಕಂಡು ಬಂದ ಹಿನ್ನಲೆಯಲ್ಲಿ

ಅವರು ದೆಹಲಿಗೆ ಮರಳಲು ವಿಳಂಬವಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜಾರ್ಖಂಡ್‌ನಲ್ಲಿ ಚುನಾವಣಾ ಪ್ರಚಾರ ಭಾಷಣ ಮುಗಿಸಿ ದೆಹಲಿಗೆ ಮರಳಲು ವಿಮಾನ ನಿಲ್ದಾಣಕ್ಕೆ ಬಂದ ನಂತರ ಈ ಘಟನೆ ನಡೆದಿದೆ. ಸುರಕ್ಷತಾ ಕ್ರಮವಾಗಿ ತಾಂತ್ರಿಕ ತಂಡಗಳು ಸಮಸ್ಯೆಯನ್ನು ಗುರುತಿಸಿ, ಸರಿಪಡಿಸಿದ ನಂತರ ವಿಮಾನ ಟೇಕ್ ಆಫ್ ಆಗಿದೆ. ಇದಕ್ಕೂ ಮುನ್ನ ಅವರು ಬುಡಕಟ್ಟು ವೀರ ಬಿರ್ಸಾ ಮುಂಡಾ ಅವರನ್ನು ಗೌರವಿಸುವ ಜಂಜಾಟಿಯಾ ಗೌರವ್ ದಿವಸ್ ಆಚರಣೆಯ ಅಂಗವಾಗಿ ಜಾರ್ಖಂಡ್‌ನಲ್ಲಿ ಎರಡು ರ್‍ಯಾಲಿಗಳನ್ನುದ್ದೇಶಿಸಿ ಮಾತನಾಡಿದರು. ಬಿಜೆಪಿ ಅಭ್ಯರ್ಥಿಗಳ ಪರ ಮತ ಯಾಚಿಸಿದರು.

ರಾಹುಲ್ ಹೆಲಿಕಾಪ್ಟರ್‌ಗೆ ತಡೆ: ಪ್ರತ್ಯೇಕ ಬೆಳವಣಿಗೆಯಲ್ಲಿ ಚುನಾವಣಾ ಪ್ರಚಾರ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಜಾರ್ಖಂಡ್‌ಗೆ ಬಂದಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಹೆಲಿಕಾಪ್ಟರ್ ಹಾರಾಟವನ್ನು ಕೆಲ ಕಾಲ ಏರ್ ಟ್ರಾಫಿಕ್ ಕಂಟ್ರೋಲ್ ತಡೆ ಹಿಡಿಯಿತು. ಉದ್ದೇಶ ಪೂರ್ವಕವಾಗಿ ಇದನ್ನು ಮಾಡಲಾಗುತ್ತಿದೆ ಎಂದು ಕಾಂಗ್ರೆಸ್ ನಾಯಕರು ಆರೋಪಿಸಿದರು. ಆರೋಪದ ಒಂದು ಗಂಟೆಯ ಬಳಿಕ ಹಾರಾಟಕ್ಕೆ ಅನುಮತಿ ನೀಡಲಾಯಿತು.

ದೀಪಾವಳಿಯಲ್ಲಿ ಲಿಕ್ಕರ್ ಪಾರ್ಟಿ: ಬ್ರಿಟನ್ ಕ್ಷಮೆ

ಲಂಡನ್: ದೀಪಾವಳಿ ಪಾರ್ಟಿಯಲ್ಲಿ ಮದ್ಯ, ಮಾಂಸ ಉಣಬಡಿಸಿದ್ದರ ಸಂಬಂಧ ಬ್ರಿಟನ್‌ನ ಪ್ರಧಾನಿ ಕಾರ್ಯಾಲಯ ತಡವಾಗಿ ಕ್ಷಮೆಯಾಚನೆ ಮಾಡಿದೆ.

ಅ.29ರಂದು ಪ್ರಧಾನಿಗಳ ಅಧಿಕೃತ ನಿವಾಸದಲ್ಲಿ ದೀಪಾವಳಿ ಪಾರ್ಟಿ ಆಯೋಜಿಸಲಾಗಿತ್ತು. ಈ ಪಾರ್ಟಿಯಲ್ಲಿ ಪ್ರಾರ್ಥನೆ, ಹಣತೆಗಳ ಬೆಳಗುವಿಕೆ, ಪ್ರಧಾನಿಗಳ ಭಾಷಣ ಮತ್ತು ಸಾಂಪ್ರದಾಯಿಕ ಭಾರತೀಯ ನೃತ್ಯವನ್ನು ಏರ್ಪಡಿಸಲಾಗಿತ್ತು. ಜತೆಗೆ ಅತಿಥಿಗಳಿಗೆ ಮಟನ್ ಕಬಾಬ್, ಮೀನು ಭಕ್ಷ್ಯಗಳ ಜತೆ ಬಿಯರ್ ಮತ್ತು ವೈನ್ ನೀಡಲಾಗಿತ್ತು. ಧಾರ್ಮಿಕ ಆಚರಣೆಯಲ್ಲಿ ಮದ್ಯ ಮತ್ತು ಮಾಂಸ ಸರಬರಾಜು ಆಗಿರುವ ಬಗ್ಗೆ ಭಾರೀ ಆಕ್ರೋಶ ವ್ಯಕ್ತವಾಗಿತ್ತು. ಇದೀಗ ಸ್ಟಾರ್ಮರ್ ಕಚೇರಿಯ ವಕ್ತಾರ ಹಿಂದೂ ಸಮುದಾಯದ ಕಾಳಜಿಯನ್ನು ಒಪ್ಪಿಕೊಂಡು ಮುಂದಿನ ಆಚರಣೆಗಳಲ್ಲಿ ಈ ರೀತಿ ಮತ್ತೆ ಸಂಭವಿಸುವುದಿಲ್ಲ ಎಂದು ಭರವಸೆ ನೀಡಿದ್ದಾರೆ. ಈ ವೇಳೆ ಕೆಲ ಅತಿಥಿಗಳು ಸ್ಥಳದಲ್ಲಿಯೇ ತಮ್ಮ ಅಕ್ರೋಶವನ್ನು ತೋರಿಸಿದ್ದರು. ಆದರೆ ಅವರು ತನಗೆ ಆರ್ಡರ್ ಮಾಡಿರುವುದನ್ನು ಬಡಿಸಿರುವುದಾಗಿ ಹೇಳಿದ್ದರು. ದೀಪಾವಳಿ ಧಾರ್ಮಿಕ ಮಹತ್ವವನ್ನೂ ಹೊಂದಿದೆ. ಹೀಗಾಗಿ ಸಾತ್ವಿಕ ಆಹಾರ ಬಡಿಸಬೇಕಿತ್ತು. ಮುಂದೆ ಮಾಂಸಾಹಾರ, ಮದ್ಯ ಉಣಬಡಿಸುವುದಾದರೆ ದೀಪಾವಳಿ ಪಾರ್ಟಿಯನ್ನೇ ಆಯೋಜಿಸುವುದು ಬೇಡ ಎಂದು ಹಿಂದೂಗಳು ತೀವ್ರ ಆಕ್ರೋಶ ಹೊರ ಹಾಕಿದ್ದರು.

ಹವಾಮಾನ ಬದಲಾವಣೆ; ಭಾರತೀಯರಿಗೆ ಪರಿಣಾಮ

ಬಾಕು: ಭಾರತದಲ್ಲಿ ಬಹುತೇಕ ಎಲ್ಲರೂ ಈಗ ಹವಾಮಾನ ಬದಲಾವಣೆಯ ಪರಿಣಾಮಕ್ಕೆ ಗುರಿಯಾಗುತ್ತಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮಾಜಿ ಮುಖ್ಯ ವಿಜ್ಞಾನಿ ಡಾ. ಸೌಮ್ಯ

ಸ್ವಾಮಿನಾಥನ್ ಅವರು ಹೇಳಿದ್ದಾರೆ. ಅಜರ್ಬೈಜಾನ್‌ನಲ್ಲಿ ಸಿಒಪಿ29 ಪರಿಸರ ಸಮಾವೇಶದ ವೇಳೆ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಸೌಮ್ಯ ಅವರು ಈ ಹೇಳಿಕೆ ನೀಡಿದ್ದಾರೆ. ದೇಶದ ಆರ್ಥಿಕ ಸ್ಥಿರತೆ ಮತ್ತು ಜನರ ಆರೋಗ್ಯ ಸೇರಿದಂತೆ ಸೂಕ್ಷ್ಮ ವಿಷಯಗಳ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಪರಿಹರಿಸಲು ಅಂತಾರಾಷ್ಟ್ರೀಯ ಸಹಯೋಗದ ತುರ್ತು ಅಗತ್ಯವಿದೆ ಎಂದೂ ಒತ್ತಿ ಹೇಳಿದ್ದಾರೆ. ಭಾರತದಲ್ಲಿ ಪ್ರತಿಯೊಬ್ಬರೂ ಈಗ ಹವಾಮಾನ ಬದಲಾವಣೆಯ ಕಾರಣ ತೀವ್ರ ಉಷ್ಣಾಂಶದಿಂದ ಉಂಟಾಗುವ ರೋಗಗಳಿಗೆ ಗುರಿಯಾಗುತ್ತಾರೆ. ಮಹಿಳೆಯರು ಮತ್ತು ಮಕ್ಕಳು ಇದರಿಂದ ಹೆಚ್ಚಿನ ಆರೋಗ್ಯ ಸಮಸ್ಯೆಗಳನ್ನು ಅನುಭವಿಸುತ್ತಾರೆ. ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಅಡುಗೆಗಾಗಿ ಇಂಧನದ ಮೇಲೆ ನಿರಂತರವಾಗಿ ಅವಲಂಬಿತವಾಗಿರುವವರು ಅಪಾಯವನ್ನು ಎದುರಿಸುತ್ತಾರೆ. ಉಸಿರಾಟದ ಸಮಸ್ಯೆಯಿಂದ ಹಿಡಿದು, ಕೃಷಿ ಕ್ಷೇತ್ರದ ಮೇಲೆ ಅದರ ಪರಿಣಾಮದಿಂದ ಉಂಟಾಗುವ ಅಪೌಷ್ಟಿಕತೆಯಂತಹ ದೀರ್ಘ ಕಾಲೀನ ಸಮಸ್ಯೆಗಳವರೆಗೆ ಭಾರತದಲ್ಲಿ ಹವಾಮಾನ ಸಂಬಂಧಿತ ಆರೋಗ್ಯ ಸಮಸ್ಯೆಗಳು ವೈವಿಧ್ಯಮಯವಾಗಿವೆ. ದೇಶದ ಶೇ 80ರಷ್ಟು ಜನರು ಈ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದು ವಿವರಿಸಿದರು.

ಸಮಾಚಾರ ಸಣ್ಣದಲ್ಲ

ರಿಷಿಕಾ ಕುಂದೇಶ್ವರಗೆ ನಂದಗೋಕುಲ ಪುರಸ್ಕಾರ

ಮಂಗಳೂರು: ಜೀ ಕನ್ನಡ ಡ್ರಾಮಾ ಜೂನಿಯರ್ಸ್ ಸೀಸನ್ 5ರ ವಿಜೇತೆ, ರಿಷಿಕಾ ಕುಂದೇಶ್ವರ ಅರೆಹೊಳೆ ಪ್ರತಿಷ್ಠಾನದ ನಂದಗೋಕುಲ ಪ್ರತಿಭಾ ಪುರಸ್ಕಾರ ದ 2024ನೇ ಸಾಲಿನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಪುರಸ್ಕಾರವು ಪ್ರಶಸ್ತಿ ಪತ್ರದ ಜೊತೆಗೆ ಪ್ರಶಸ್ತಿ ಮೊತ್ತವನ್ನು ಒಳಗೊಂಡಿದ್ದು ನ.16 ರಂದು ನಡೆಯವ ನಂದಗೋಕುಲ ದೀಪಾವಳಿ ಸಂಭ್ರಮದ ವೇಳೆ ಗಣ್ಯರ ಉಪಸ್ಥಿತಿಯಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ಅರೆಹೊಳೆ ಪ್ರತಿಷ್ಠಾನದ ಗೌರವಾಧ್ಯಕ್ಷ ಡಾ. ಹರಿಕೃಷ್ಣ ಪುನರೂರು ಹೇಳಿದ್ದಾರೆ. ಇವರು ವಿಶ್ವವಾಣಿ ವರದಿಗಾರ ಜಿತೇಂದ್ರ ಕುಂದೇಶ್ವರ ಮತ್ತು ಸಂಧ್ಯಾ ದಂಪತಿಯ ಪುತ್ರಿ.

ಆಳ್ವಾಸ್‌ಗೆ ಅವಳಿ, ಯೆನೆಪೋಯ ಪ್ರಶಸ್ತಿ

ಮೂಡುಬಿದಿರೆ: ಆಳ್ವಾಸ್ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಕಾಲೇಜು ಮಿಜಾರು ಇವರ ಆಶ್ರಯದಲ್ಲಿ ವಿದ್ಯಾಗಿರಿಯಲ್ಲಿ ನಡೆದ ವಿಟಿಯು ರಾಜ್ಯ ಮಟ್ಟದ ವೇಯ್ಟ್ ಲಿಫ್ಟಿಂಗ್ ಮತ್ತು ದೇಹದಾಢ್ಯ ಸ್ಪರ್ಧೆಯಲ್ಲಿ ಬಾಲಕರ ವಿಭಾಗದಲ್ಲಿ ಆಳ್ವಾಸ್ ಅವಳಿ ಪ್ರಶಸ್ತಿಯನ್ನು ಪಡೆದುಕೊಂಡಿತು. ವೇಯ್ಟ್ ಲಿಫ್ಟಿಂಗ್ ನಲ್ಲಿ ದ್ವಿತೀಯ ಸ್ಥಾನವನ್ನು ಎನ್‌ಎಮ್‌ಎಮ್‌ಐಟಿ ನಿಟ್ಟೆ, ತೃತೀಯ ಸ್ಥಾನವನ್ನು ಯೆನಪೋಯ ಮೂಡುಬಿದಿರೆ ಇವರು ಪಡೆದುಕೊಂಡರು. ಬಾಲಕಿಯರ ವೇಯ್ಟ್ ಲಿಫ್ಟಿಂಗ್ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಯೆನೆಪೋಯ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಕಾಲೇಜು ಮೂಡುಬಿದಿರೆ, ದ್ವಿತೀಯ ಸ್ಥಾನವನ್ನು ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಬೆಂಗಳೂರು, ತೃತೀಯ ಸ್ಥಾನವನ್ನು ಎನ್‌ಐಇ ಮೈಸೂರು ಪ್ರಶಸ್ತಿಯನ್ನು ಪಡೆಯಿತು. ದೇಹದಾಢ್ಯ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು ಕೆಎಲ್‌ಎಸ್ ಗೋಗಟೆ ತಾಂತ್ರಿಕ ಕಾಲೇಜು ಬೆಳಗಾವಿ, ತೃತೀಯ ಸ್ಥಾನವನ್ನು ಜಿಎಮ್ ತಾಂತ್ರಿಕ ಕಾಲೇಜು, ದಾವಣಗೆರೆ ಪಡೆದುಕೊಂಡಿತು. ಬೆಸ್ಟ್ ಲಿಫ್ಟರ್ ಬಾಲಕರ ವಿಭಾಗದಲ್ಲಿ ಆಕಾಶ್ ಎಜೆಐಟಿ ಮಂಗಳೂರು, ಬೆಸ್ಟ್ ಲಿಫ್ಟರ್ ಬಾಲಕಿಯರ ವಿಭಾಗದಲ್ಲಿ ರಿಕ್ತಕಿರಣ್ ಶ್ರೀನಿವಾಸ ಕಾಲೇಜು ಮಂಗಳೂರು. ಮಿಸ್ಟರ್ ವಿಟಿಯು ಆಳ್ವಾಸಿನ ಭರತ್ ಪ್ರಶಸ್ತಿಯನ್ನು ಪಡೆದರು. ಬಹುಮಾನ ವಿತರಣಾ ಸಮಾರಂಭದಲ್ಲಿ ಆಳ್ವಾಸ್ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಕಾಲೇಜು ಮಿಜಾರಿನ ಪ್ರಾಂಶುಪಾಲರಾದ ಡಾ. ಪೀಟರ್ ಫೆರ್ನಾಂಡಿಸ್, ವಿಟಿಯು ವೀಕ್ಷಕರಾಗಿ ನಿಟ್ಟೆ ಕಾಲೇಜಿನ ಶ್ಯಾಮ್ ಸುಂದರ್ ಉಪಸ್ಥಿತರಿದ್ದರು.

ಆನೆಗುಂಡಿಯಲ್ಲಿ ಕಾಡಾನೆಗಳು

ಸುಳ್ಯ: ಕೃಷಿ ಬೆಳೆ ಹಾನಿ ಮಾಡಿ ಕೃಷಿಕರ ನಿದ್ದೆಗೆಡಿಸಿದ್ದ ಕಾಡಾನೆಗಳು ಮಂಗಳವಾರ ಬೆಳಿಗ್ಗೆ ಕನಕಮಜಲು ಗ್ರಾಮದ ಆನೆಗುಂಡಿಯಲ್ಲಿ ರಸ್ತೆ ಬದಿ ಸಂಚರಿಸಿ ಕಾಡು ಸೇರಿದೆ. ರಾಷ್ಟ್ರೀಯ ಹೆದ್ದಾರಿಯ ಆನೆಗುಂಡಿ ತಿರುವಿನಲ್ಲಿ ಎರಡು ಕಾಡಾನೆಗಳು ರಸ್ತೆ ಬದಿ ಸಂಚರಿಸಿದ್ದು, ಬಳಿಕ ರಸ್ತೆ ಪಕ್ಕದ ಕಾಡಿನೊಳಗೆ ಹೋಗಿವುದನ್ನು ಸ್ಥಳೀಯರು ತಮ್ಮ ಮೊಬೈಲ್ ಕ್ಯಾಮಾರಾದಲ್ಲಿ ಸೆರೆ ಹಿಡಿದಿದ್ದಾರೆ. ಕಳೆದ ಕೆಲವು ತಿಂಗಳುಗಳಿಂದ ಆನೆಗುಂಡಿ, ಕನಕಮಜಲು ಪ್ರದೇಶಗಳಲ್ಲಿ ನಿರಂತರವಾಗಿ ಕೃಷಿಕರ ತೋಟಗಳಿಗೆ ಕಾಡಾನೆಗಳು ಧಾಳಿ ನಡೆಸಿ ಕೃಷಿ ನಾಶ ಪಡಿಸುತ್ತಿದೆ.

ಹೋಟೆಲ್‌ಗೆ ಆಕಸ್ಮಿಕ ಬೆಂಕಿ: ಅಪಾರ ನಷ್ಟ

ಸುಳ್ಯ: ಹೋಟೆಲ್‌ಗೆ ಆಕಸ್ಮಿಕ ಬೆಂಕಿ ತಗುಲಿದ ಪರಿಣಾಮ ಅಪಾರ ನಷ್ಟ ಉಂಟಾದ ಘಟನೆ ಬೆಳ್ಳಾರೆಯಲ್ಲಿ ನಡೆದಿದೆ. ಬೆಳ್ಳಾರೆ ಮುಖ್ಯರಸ್ತೆ ಸಮೀಪವಿರುವ ತೃಪ್ತಿ ಹೋಟೆಲ್‌ನಲ್ಲಿ ಈ ಘಟನೆ ನಡೆದಿದ್ದು, ಗ್ಯಾಸ್ ಸ್ಟವ್ ನಿಂದ ಆಕಸ್ಮಿಕ ಬೆಂಕಿ ಹತ್ತಿಕೊಂಡು ಹತ್ತಿರವಿದ್ದ ಫ್ರಿಡ್ಜ್ ಸಂಪೂರ್ಣ ಸುಟ್ಟುಹೋಗಿದೆ. ಫ್ರಿಡ್ಜ್ ಮೇಲಿದ್ದ ಎರಡು ಮೊಬೈಲ್ ಹಾಗೂ ಇನ್ನಿತರ ಹಲವು ವಸ್ತುಗಳು ಸುಟ್ಟುಹೋಗಿವೆ. ಸ್ಥಳೀಯ ಅಂಗಡಿಯವರು ಹಾಗೂ ರಿಕ್ಷಾ ಚಾಲಕರು ಮತ್ತಿತರರು ಬೆಂಕಿ ನಂದಿಸಲು ಸಹಕರಿಸಿದ್ದು ಹೆಚ್ಚಿನ ಅನಾಹುತವನ್ನು ತಪ್ಪಿಸಿದಂತಾಗಿದೆ.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆ್ಯಪ್

{ಬಸನಗೌಡ ಪಾಟೀಲ್ ಯತ್ನಾಳ್} ಶಾಸಕ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನನ್ನನ್ನು ಮುಟ್ಟಿದರೆ ಸಮ್ಮನೆ ಇರಲ್ಲ ಎಂದು ಮುಖ್ಯಮಂತ್ರಿ ಆಗಲು ಬಯಸುತ್ತಿರುವ ಡಿ.ಕೆ.ಶಿವಕುಮಾರ್ ಅವರಿಗೆ ಸಂದೇಶ ನೀಡಿದ್ದಾರೆ, ಆದು ಬಿಟ್ಟರೆ ಬೇರಯವರಿಗೆ ಅಲ್ಲ. ಕಾಂಗ್ರೆಸ್ ಶಾಸಕರಿಗೆ 50 ಕೋಟಿ ಆಫರ್ ವಿಚಾರದಲ್ಲಿ ಮುಖ್ಯಮಂತ್ರಿ ದಾಖಲೆ ಇಟ್ಟುಕೊಂಡು ಜವಾಬ್ದಾರಿಯುತವಾಗಿ ಮಾತನಾಡಬೇಕು.

ಕಡಲನಗರಿಯಲ್ಲಿ ಸಹಕಾರಿ ಸಪ್ತಾಹ ಇಂದು

15 ಸಾವಿರಕ್ಕೂ ಅಧಿಕ ಮಂದಿ ನಿರೀಕ್ಷೆ | ಸಹಕಾರ ಜಾಥಾದಲ್ಲಿ 32 ಕಲಾ ತಂಡಗಳು

ಮಂಗಳೂರು: ಸ್ಮಾರ್ಟ್ ಸಿಟಿ, ಕಡಲನಗರಿ ಮಂಗಳೂರಿನ ರಾಜಬೀದಿಯುದ್ದಕ್ಕೂ ಸಹಕಾರಿ ತೋರಣ. ಕರಾವಳಿ ಉತ್ಸವ ಮೈದಾನದಲ್ಲಿ ಮೈದಳೆದು ನಿಂತ ವಿಶಾಲವಾದ ಚಪ್ಪರ, ಆಕರ್ಷಕವಾಗಿ ಅಲಂಕೃತಗೊಂಡ ವೇದಿಕೆ.

ಇದು ನ.16ರಂದು ನಡೆಯಲಿರುವ 71ನೇ ಅಖಿಲ ಭಾರತ ಸಹಕಾರಿ ಸಪ್ತಾಹಕ್ಕೆ ಬಂದರು ನಗರಿ ಮಂಗಳೂರು ಸಿದ್ಧಗೊಂಡ ಝಲಕ್.

ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್.ರಾಜೇಂದ್ರ ಕುಮಾರ್ ಅವರ ನೇತೃತ್ವದಲ್ಲಿ ಈ ಮಹಾಉತ್ಸವ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ 15 ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆಯಿದ್ದು, ಸಪ್ತಾಹಕ್ಕೆ ವಸ್ತು ಪ್ರದರ್ಶನ, ಬೃಹತ್ ಸಹಕಾರ ಜಾಥಾ ಮೆರುಗು ನೀಡಲಿದೆ. ಬೃಹತ್ ವೇದಿಕೆಯ ಮುಂಭಾಗ 4 ಹಂತದಲ್ಲಿ ಸಹಕಾರಿ ಬಂಧುಗಳು ಕುಳಿತುಕೊಳ್ಳಲು ವಿಶಾಲವಾದ ಚಪ್ಪರ ಹಾಕಲಾಗಿದೆ. ಪ್ರಥಮ ಹಂತದಲ್ಲಿ ವಿವಿಐಪಿ, ವಿಐಪಿಗಳು, ಮಾಧ್ಯಮ ಬಂಧುಗಳಿಗೆ ಕುಳಿತುಕೊಳ್ಳುವ ವ್ಯವಸ್ಥೆ ಮಾಡಲಾಗಿದೆ. ಭದ್ರತೆಯ ದೃಷ್ಟಿಯಿಂದ ಬ್ಯಾರಿಕೇಡ್ ಹಾಕಿ ನಾನಾ ಹಂತಗಳನ್ನು ವಿಭಜಿಸಲಾಗಿದೆ. ಸಭಾಂಗಣವಿಡೀ ತಂಪನ್ನಾಗಿಸಲು ಬೃಹತ್ ಗಾತ್ರ ಫ್ಯಾನ್‌ಗಳನ್ನು ಜೋಡಿಸಲಾಗಿದೆ.

ಸಹಕಾರ ಮಾಣಿಕ್ಯ ಪ್ರಶಸ್ತಿ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉತ್ತಮ ಸಹಕಾರಿ ಸಂಘಗಳನ್ನು ಗುರುತಿಸಿ 2024ನೇ ಸಾಲಿನಿಂದ ಸಹಕಾರ ಮಾಣಿಕ್ಯ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದ್ದು, ಪ್ರಶಸ್ತಿ ಜತೆಗೆ 5 ಗ್ರಾಂ ಚಿನ್ನದ ಪದಕ, 10 ಸಾವಿರ ರೂ. ನಗದು ಹಾಗೂ ಪಾರಿತೋಷಕ ನೀಡಲಾಗುವುದು. ಸಾಮಾನ್ಯ ವಿಭಾಗದಲ್ಲಿ ಕೃಷಿ ಪತ್ತಿನ ಸಹಕಾರಿ ಸಂಘಗಳ ಪೈಕಿ ಉಭಯ ಜಿಲ್ಲೆಗಳಲ್ಲಿ ಒಂದರಂತೆ ಹಾಗೂ ಹೈನುಗಾರಿಕೆ, ಕ್ರೆಡಿಟ್ ಸೊಸೈಟಿ, ಮೀನುಗಾರ ಸಹಕಾರ ಸಂಘ, ಸೌಹಾರ್ದ ಸಹಕಾರಿ ಸಂಘ ಹಾಗೂ ಮಹಿಳಾ ಸಹಕಾರಿ ಸಂಘಕ್ಕೆ ಉಭಯ ಜಿಲ್ಲೆಗಳಿಂದ ಒಂದು ಹಾಗೂ 2013-24ನೇ ಸಾಲಿನಲ್ಲಿ ಶತಮಾನೋತ್ಸವ ಪೂರೈಸಿದ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಗೌರವಿಸಲಾಗುವುದು.

ಮಂಗಳೂರಿನಲ್ಲಿ ಆಕರ್ಷಕವಾಗಿ ಅಲಂಕೃತಗೊಂಡ ವೇದಿಕೆ.

ಮಂಗಳೂರಿನಲ್ಲಿ ಶನಿವಾರ ನಡೆಯುವ 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಿದ್ಧತೆಗಳು ಬಹುತೇಕ ಪೂರ್ಣಗೊಂಡಿದೆ. ಕರುನಾಡಿನ ವೈವಿಧ್ಯತೆಯನ್ನೊಳಗೊಂಡ ಸಹಕಾರಾ ಜಾಥಾ ಗಮನಸೆಳೆಯಲಿದೆ. 15ಸಾವಿರಕ್ಕೂ ಅಧಿಕ ಮಂದಿ ಸಹಕಾರಿ ಬಂಧುಗಳು ಭಾಗವಹಿಸಲಿದ್ದು, ಇದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಲಾಗಿದೆ.

ಡಾ.ಎಂ.ಎನ್.ರಾಜೇಂದ್ರ ಕುಮಾರ್,
ಅಧ್ಯಕ್ಷರು, ದಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್

ಜಾಥಾದಲ್ಲಿ ತಂಡಗಳ ಆಕರ್ಷಣೆ

ಸಹಕಾರ ಜಾಥಾ ನ.16ರಂದು ಬೆಳಗ್ಗೆ 9 ಗಂಟೆಗೆ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಆವರಣದಿಂದ ಕರಾವಳಿ ಉತ್ಸವ ಮೈದಾನದವರೆಗೆ ಸಹಕಾರ ಜಾಥಾ ಮೆರವಣಿಗೆ ನಡೆಯಲಿದೆ. ಈ ಜಾಥಾದಲ್ಲಿ ಸಹಕಾರಿ ರಥ, ಚೆಂಡೆ, ಕೊಂಬು, ಸಹಕಾರಿ ಬಣ್ಣದ ಕೊಡೆ, ಮೊಳಹಳ್ಳಿ ಶಿವರಾವ್ ಟ್ಯಾಬ್ಲೋ, ಬ್ಯಾಂಕಿಂಗ್ ವ್ಯವಹಾರದ ಸ್ತಬ್ಧಚಿತ್ರ, ಹೈನುಗಾರಿಕೆಯ ಸ್ತಬ್ಧಚಿತ್ರ, ಮೀನುಗಾರಿಕೆಯ ಸ್ತಬ್ಧಚಿತ್ರ, ಕೃಷಿ ಉಪಕರಣಗಳ ಮಾರಾಟದ ಸ್ತಬ್ಧಚಿತ್ರ, ನಂದಿನಿ ಅನ್ ವಿಲ್ ಸ್ತಬ್ಧಚಿತ್ರ, ಹೊನ್ನಾವರ ಬ್ಯಾಂಡ್, ರಾಣಿ ಅಬ್ಬಕ್ಕನ ಸ್ತಬ್ಧಚಿತ್ರ, ರಬ್ಬರ್ ಟ್ಯಾಪಿಂಗ್‌ನ ಸ್ತಬ್ಧಚಿತ್ರ, ನವೋದರ ಗುಂಪಿನ ಸ್ತಬ್ಧಚಿತ್ರ, ಪತ್ತಿನ ಸಂಘಗಳ ಹಣಕಾಸಿನ ವ್ಯವಹಾರದ ಸ್ತಬ್ಧಚಿತ್ರ, ಚೆಂಡೆ, ಗ್ರಾಮೀಣ ಬ್ಯಾಂಕಿಂಗ್ ಚಟುವಟಿಕೆಯ ಸ್ತಬ್ಧಚಿತ್ರ, ಭುವನೇಶ್ವರಿ ದೇವಿಯ ಸ್ತಬ್ಧಚಿತ್ರ, ನೇತ್ರಾವತಿ ಮತ್ತು ಕುಮಾರಧಾರ ನದಿಯ ಸಂಗಮದ ಸ್ತಬ್ಧಚಿತ್ರ, ಪ್ರಾಥಮಿಕ ಪತ್ತಿನ ಸಂಘದ ಸ್ತಬ್ಧಚಿತ್ರ, ಅಕ್ಕಿ ಮಿಲ್ಲಿನ ಸ್ತಬ್ಧಚಿತ್ರ, ರಸಗೊಬ್ಬರ ಮಾರಾಟ ಮತ್ತು ಬ್ಯಾಂಕಿಂಗ್ ವ್ಯವಹಾರದ ಸ್ತಬ್ಧಚಿತ್ರ, ಕೃಷಿ ಚಟುವಟಿಕೆಯ ಸ್ತಬ್ಧಚಿತ್ರ, ತುಳುನಾಡ ವೈಭವದ ಸ್ತಬ್ಧಚಿತ್ರ, ಕಂಬಳದ ಸ್ತಬ್ಧಚಿತ್ರ, ಹಳ್ಳಿ ಮನೆಯ ಸ್ತಬ್ಧಚಿತ್ರ ಸೇರಿದಂತೆ ಎಸ್‌ಸಿಡಿಸಿಸಿ ಬ್ಯಾಂಕ್‌ನ ಮೊಬೈಲ್ ಬ್ಯಾಂಕ್ ವಾಹನ ಸೇರಿದಂತೆ 32ಕ್ಕೂ ಅಧಿಕ ಸ್ತಬ್ಧಚಿತ್ರಗಳು ಜಾಥದಲ್ಲಿ ಭಾಗವಹಿಸಲಿದೆ.

ಮನೆ ಕೆಡವಿ, ವೃದ್ಧ ದಂಪತಿ ಬೀದಿಪಾಲು

ಕಡಬ: ಸರಕಾರಿ ಜಾಗದಲ್ಲಿ ನಿರ್ಮಿಸಿದ ಕಾರಣಕ್ಕೆ ವೃದ್ಧ ದಂಪತಿ ಆರು ವರ್ಷಗಳಿಂದ ವಾಸವಿದ್ದ ಮನೆಯನ್ನು ತಾಲೂಕು ಕಂದಾಯ ಅಧಿಕಾರಿಗಳು ನೆಲಸಮಗೊಳಿಸಿದ ಘಟನೆ ತಾಲೂಕಿನ ಕೌಕ್ರಾಡಿ ಎಂಬಲ್ಲಿ ನಡೆದಿದೆ.

ರಾಧಮ್ಮ ಮತ್ತು ಮುತ್ತುಸ್ವಾಮಿ ದಂಪತಿ ವಾಸವಿದ್ದ ಮನೆಯನ್ನು ಬುಧವಾರ ಏಕಾಏಕಿ ಧ್ವಂಸಗೊಳಿಸಲಾಗಿದೆ.

ಮೂಲತಃ ಚಿತ್ರದುರ್ಗ ಜಿಲ್ಲೆಯ ಹಟ್ಟಿ ನಿವಾಸಿಗಳಾಗಿದ್ದ ಈ ದಂಪತಿ ಕೂಲಿ ಕೆಲಸಕ್ಕಾಗಿ ಕರಾವಳಿಗೆ ಆಗಮಿಸಿದವರು ಕಡಬ ತಾಲೂಕಿನ ಉಪ್ಪಿನಂಗಡಿ ಹೋಬಳಿಯ ಕೌಕ್ರಾಡಿ ಗ್ರಾಮದ ಕಾಪಿನಬಾಗಿಲು ಎಂಬಲ್ಲಿ ಸರ್ಕಾರಿ ಜಾಗದಲ್ಲಿ ಕಳೆದ 6 ವರ್ಷಗಳಿಂದ ವಾಸಿಸುತ್ತಿದ್ದರು.

ದಂಪತಿಗೆ ಯಾವುದೇ ಪಿತ್ರಾರ್ಜಿತ ಆಸ್ತಿ ಇರಲಿಲ್ಲ. ಹೀಗಾಗಿ ಕಾಪಿನಬಾಗಿಲು ಎಂಬಲ್ಲಿನ ಸರಕಾರಿ ಜಾಗದಲ್ಲಿ ಸಣ್ಣ ಮನೆ ಕಟ್ಟಿಕೊಂಡಿದ್ದರು. ದಂಪತಿ ನಿತ್ಯ ಕೂಲಿ ಕೆಲಸ ಮಾಡುತ್ತಾ ಜೀವನ ಸಾಗಿಸುತ್ತಿದ್ದರು.

ಈ ದಂಪತಿ ಸರಕಾರಿ ಜಾಗದಲ್ಲಿ ಮನೆ ನಿರ್ಮಿಸಿರುವ ಕಾರಣ ಇದರ ವಿರುದ್ಧ ಬೆಳ್ತಂಗಡಿ ತಾಲೂಕಿನ ಅಶೋಕ್ ಆಚಾರ್ಯ ಎಂಬವರು ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ಈ ಹಿನ್ನೆಲೆಯಲ್ಲಿ ಸರಕಾರಿ ಜಾಗ ತೆರವುಗೊಳಿಸಲು ಹೈಕೋರ್ಟ್ ಸೂಚನೆ ನೀಡಿದ್ದರಿಂದ ಕಳೆದ ಫೆಬ್ರವರಿಯಲ್ಲೇ ಮನೆ ತೆರವಿಗೆ ಅಧಿಕಾರಿಗಳು ಮುಂದಾಗಿದ್ದರು. ಆದರೆ ಸಾರ್ವಜನಿಕರಿಂದ ತೀವ್ರ ಆಕ್ರೋಶ ವ್ಯಕ್ತವಾದ ಹಿನ್ನೆಲೆಯಲ್ಲಿ ಮನೆ ಕೆಡವದೆ ವಾಪಸ್ಸಾಗಿದ್ದರು. ಇಂದು ದಿಢೀರ್ ಆಗಮಿಸಿದ ಅಧಿಕಾರಿಗಳು ಜೇಸಿಬಿ ಯಂತ್ರದ ಬಳಸಿ ಮನೆಯ ಸಾಮಗ್ರಿಗಳನ್ನೆಲ್ಲ ಹೊರಗಿಟ್ಟು ಮನೆಯನ್ನು ಕೆಡವಿ ಹಾಕಿದ್ದಾರೆ.

ಕಡಬ ತಹಶೀಲ್ದಾರ್ ಪ್ರಭಾಕರ ಖಜೂರೆ, ಪೃಥ್ವಿರಾಜ್, ಉಪ್ಪಿನಂಗಡಿ ಪೊಲೀಸರ ನೇತೃತ್ವದಲ್ಲಿ ಮನೆ ತೆರವು ಮಾಡಲಾಗಿದೆ.

ಮಕ್ಕಳಿಗೆ ಕನ್ನಡ ತಂತ್ರಾಂಶ ಬಳಕೆ ಜ್ಞಾನ ಅಗತ್ಯ

ಚಿಕ್ಕಮಗಳೂರು: ಇಂದಿನ ತಂತ್ರಜ್ಞಾನ ಯುಗದಲ್ಲಿ ಮಕ್ಕಳು ಕಂಪ್ಯೂಟರ್‌ನಲ್ಲಿ ಕನ್ನಡ ತಂತ್ರಾಂಶವನ್ನು ಬಳಸುವುದು ಅಗತ್ಯ. ಇಲ್ಲದಿದ್ದಲ್ಲಿ ಕನ್ನಡಕ್ಕೆ ಹಿನ್ನಡೆಯಾಗುತ್ತದೆ ಎಂದು ಬಸವನಹಳ್ಳಿ ಸರಕಾರಿ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಡಾ.ಎಚ್.ಎಸ್.ಸತ್ಯನಾರಾಯಣ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಜ್ಯೋತಿ ನಗರದ ಸಂಜೀವಿನಿ ವಿದ್ಯಾಸಂಸ್ಥೆಯಲ್ಲಿ ಗುರುವಾರ ನಡೆದ ಕನ್ನಡರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಿರಿಗನ್ನಡಂ ಗೆಲ್ಗೆ ಎನ್ನುವುದು ಇಂದು ಸರಿಗನ್ನಡಂ ಗೆಲ್ಗೆ ಎಂದಾಗಬೇಕಾಗಿದೆ. ವಿದ್ಯಾರ್ಥಿ ದಿಸೆಯಲ್ಲಿ ಕನ್ನಡವನ್ನು ಸಮರ್ಪಕವಾಗಿ ಕಲಿಯುವುದೇ ಅವರು ಕನ್ನಡಕ್ಕೆ ಮಾಡುವ ಸೇವೆ. ಮಕ್ಕಳು ಕನ್ನಡವನ್ನು ಬಳಸುವಾಗ ಹಿರಿಯರು ಗಮನಿಸಬೇಕಾಗುತ್ತದೆ ಎಂದು ಸಲಹೆ ನೀಡಿದರು.

ಮಕ್ಕಳು ಮುಂದೆತಾವು ಏನಾಗಿ ರೂಪುಗೊಳ್ಳಬೇಕು ಎಂಬುದಕ್ಕೆ ಈಗಲೇ ಸಂಕಲ್ಪ ಮಾಡಬೇಕು ಎನ್ನುವುದನ್ನು ರಾಷ್ಟ್ರಕವಿ ಕುವೆಂಪುರವರು ಅವರ ಮಕ್ಕಳಿಗೆ ಕಥೆಯ ಮುಖಾಂತರ ನೀಡಿದ ಪಾಠಗಳೇ ಮುಂದೆ ತೇಜಸ್ವಿಯವರು ಕಾಡು, ಕಾಡು ಪ್ರಾಣಿಗಳು, ಪ್ರಕೃತಿ ಈ ಬಗ್ಗೆಯೇ ತಿಳಿದುಕೊಳ್ಳಬೇಕು ಹಾಗೂ ಬೆಳೆಯಬೇಕು ಎಂದು ಸಂಕಲ್ಪ ಮಾಡಲು ಕಾರಣವಾಯಿತು ಎಂದು ಹೇಳಿದರಲ್ಲದೆ, ಕರ್ನಾಟಕಕ್ಕೆ 50 ವರ್ಷಗಳು ತುಂಬಿ ಸುವರ್ಣ ಸಂಭ್ರಮದಲ್ಲಿರುವ ಜೊತೆಯಲ್ಲೇ ದ.ರಾ.ಬೇಂದ್ರೆಯವರ 'ನಾಕು ತಂತಿಗಳು ಗೆ ಜ್ಞಾನಪೀಠ ಪ್ರಶಸ್ತಿ ಪಡೆದು ಐವತ್ತು ವರ್ಷಗಳಾಗಿವೆ. ಅಂತೆಯೇ ಕುವೆಂಪುರವರು ರಾಷ್ಟ್ರಕವಿ ಪ್ರಶಸ್ತಿ ಪಡೆದು ಐವತ್ತು ವರ್ಷಗಳು ಸಂದಿವೆ. ಹೀಗೆ ಸುವರ್ಣ ಸಂಭ್ರಮದೊಂದಿಗೆ ಅನೇಕ ಸಂಭ್ರಮಗಳು ಸೇರಿವೆ ಎಂದು ತಿಳಿಸಿದರು. ಮಹಾತ್ಮಾ ಗಾಂಧೀಜಿಯವರು ಬೆಂಗಳೂರಿನ ನಂದಿ ಬೆಟ್ಟದಲ್ಲಿ ತಂಗಿದ್ದಾಗ 8ನೇ ತರಗತಿ ವಿದ್ಯಾರ್ಥಿ ವಸುದೇವ ಭೂಪಾಳಂ ಕನ್ನಡದಲ್ಲಿಯೇ ಅವರಿಂದ ಆಟೋಗ್ರಾಫ್ ಪಡೆದಾಗ ಮಹಾತ್ಮಾ ಗಾಂಧೀಜಿಯವರು ಕನ್ನಡದ ಅತ್ಯಂತ ಅಭಿಮಾನ ವ್ಯಕ್ತಪಡಿಸಿದ್ದರು ಎಂದು ಹೇಳಿದರು. ನಗರಸಭೆ ಸದಸ್ಯೆ ಕವಿತಾ ಶೇಖರ್ ಮಾತನಾಡಿ ಕನ್ನಡ ನಾಡಿನ ವೈಭವ ಹಾಗೂ ಮಕ್ಕಳ ದಿನಾಚರಣೆಯ ಮಹತ್ವವನ್ನು ತಿಳಿಸಿದರು.

ಶಾಲಾ ಆಡಳಿತ ಮಂಡಳಿ ಅಧ್ಯಕ್ಷೆ ಎಸ್.ಶಾಂತಕುಮಾರಿ ಅವರು ದಿನದ ಮಹತ್ವದ ಬಗ್ಗೆ ಮಕ್ಕಳಿಗೆ ತಿಳಿ ಹೇಳಿದರು. ಆಡಳಿತ ಮಂಡಳಿ ಖಜಾಂಚಿ ಎಂ.ಪುಂಡರೀಕಾಕ್ಷ ಉಡುಪ, ಡಾ.ಡಿ.ಪಿ.ಮೋಹನ್ ಹಾಗೂ ಶಾಲೆಯ ಪ್ರಾಚಾರ್ಯರಾದ ಹೇಮ ಎಸ್.ಆರ್. ಉಪಸ್ಥಿತರಿದ್ದರು. ದಿವ್ಯಡಿ.ಎನ್. ಸ್ವಾಗತ, ನಿಶ್ಚಿತ ಮತ್ತು ಪೃಥ್ವಿಗೌಡ ನಿರೂಪಣೆ, ಧನ್ಯಶ್ರೀ ವಂದನಾರ್ಪಣೆ ನೆರವೇರಿಸಿದರು.

ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ಕನ್ನಡ ಉಪನ್ಯಾಸಕ ಡಾ.ಎಚ್.ಎಸ್.ಸತ್ಯನಾರಾಯಣ ಅವರು ಉದ್ಘಾಟಿಸಿದರು.

ಪಂಪ, ರನ್ನರಂತಹ ಕವಿಗಳ ಭವ್ಯ ಪರಂಪರೆಯ ವಾರಸುದಾರರು ಇಂದಿನ ಮಕ್ಕಳು. ಈ ಕಾರಣಕ್ಕಾಗಿಯೇ ಕನ್ನಡವನ್ನು ಪ್ರೀತಿಸಬೇಕು. ಭಾವನೆಗಳನ್ನು ವ್ಯಕ್ತಪಡಿಸಲು ಮಾತೃಭಾಷೆ ಬಹಳ ಪರಿಣಾಮಕಾರಿ. ಓದು, ವಿದ್ಯೆ ಮಕ್ಕಳಲ್ಲಿ ವಿವೇಕ ಮತ್ತು ಆತ್ಮಗೌರವವನ್ನು ಜಾಗೃತಿಗೊಳಿಸುತ್ತದೆ. ವಿದ್ಯಾರ್ಥಿ ದೆಸೆಯಲ್ಲಿ ಓದುವುದೇ ಅವರು ಮಾಡುವ ದೇಶ ಸೇವೆ ಎಂದು ಮಹಾತ್ಮಾ ಗಾಂಧೀಜಿಯವರು ಹೇಳಿದ್ದರು.

-ಡಾ.ಎಚ್.ಎಸ್.ಸತ್ಯನಾರಾಯಣ,
ಕನ್ನಡ ಉಪನ್ಯಾಸಕ

ಮಕ್ಕಳ ಸಾಧನೆಗೆ ಶಿಕ್ಷಕರ ಶ್ರಮ

ಮಂಗಳೂರು: ಎಳೆಯ ಮಕ್ಕಳಿಗೆ ಶಿಕ್ಷಣದ ಜತೆ ಸಂಸ್ಕಾರ ನೀಡುತ್ತಿರುವ ಅಂಗನವಾಡಿ ಶಿಕ್ಷಕಿಯರ ಸೇವೆ ಮಕ್ಕಳ ಅಭ್ಯುದಯಕ್ಕೆ ಕಾರಣವಾಗಿದೆ. ಇಂತಹ ಅಂಗನವಾಡಿಗಳ ಅಭಿವೃದ್ಧಿಗೆ ಸಾರ್ವಜನಿಕ ಸಹಭಾಗಿತ್ವವೂ ಅಗತ್ಯ ಎಂದು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತೆ ರಶ್ಮಿ ಎಸ್.ಆರ್. ಹೇಳಿದರು.

ನಗರದ ಬಿಜೈ ಕಾಪಿಕಾಡ್ ಅಂಗನವಾಡಿ ಕೇಂದ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಆಯೋಜಿಸಲಾದ ಮಕ್ಕಳ ದಿನಾಚರಣೆ ಹಾಗೂ ಪುಟಾಣಿ ಮಕ್ಕಳ ಪ್ರತಿಭಾ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳಲ್ಲಿ ದೇವರನ್ನು ಕಾಣುವ ಸಂಸ್ಕಾರ ನಮ್ಮದು. ಮಕ್ಕಳ ಕಲಿಕೆಗೆ ಪೂರಕವಾದ ವಾತಾವರಣ ನಿರ್ಮಿಸಿರುವ ಬಿಜೈ ಕಾಪಿಕಾಡ್ ಅಂಗನವಾಡಿ ಕೇಂದ್ರದ ಚಟುವಟಿಕೆ ಉತ್ತಮವಾಗಿದೆ.

ಪ್ರದೀಪ್ ಕುಮಾರ್ ಕಲ್ಕೂರ,
ಕಸಾಪ ಮಾಜಿ ಅಧ್ಯಕ್ಷ

ದಕ್ಷಿಣ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶ್ರೀನಿವಾಸ ನಾಯಕ್ ಇಂದಾಜೆ ಅಧ್ಯಕ್ಷತೆ ವಹಿಸಿದ್ದರು. ಕಾಮತ್ ಕ್ಯಾಟರರ್ಸ್ ಮಾಲೀಕ ಸುಧಾಕರ ಕಾಮತ್, ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ ಮುಖ್ಯ ಅತಿಥಿಗಳಾಗಿದ್ದರು.

ಯಕ್ಷಗಾನ ಪ್ರಶಸ್ತಿ ಪ್ರದಾನ ನಾಳೆ

ಉಡುಪಿ: ಯಕ್ಷಗಾನ ಕಲಾರಂಗ ಉಡುಪಿ ಇದರ ಆಶ್ರಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ 2024ನೇ ಸಾಲಿನ ಯಕ್ಷಗಾನ ಕಲಾರಂಗ ಪ್ರಶಸ್ತಿ ಪ್ರದಾನ ಸಮಾರಂಭ ನ. 17ರಂದು ಮಧ್ಯಾಹ್ನ 3 ಗಂಟೆಗೆ ಉಡುಪಿಯ ಶಾರದಾ ಮಂಟಪ ರಸ್ತೆಯಲ್ಲಿರುವ ಯಕ್ಷಗಾನ ಕಲಾರಂಗದ ಇನ್ಫೋಸಿಸ್ ಫೌಂಡೇಶನ್ ಯಕ್ಷಗಾನ ಡೆವಲಪ್‌ಮೆಂಟ್, ಟ್ರೈನಿಂಗ್ ಆ್ಯಂಡ್ ರಿಸರ್ಚ್ ಸೆಂಟರ್‌ನಲ್ಲಿ ನಡೆಯಲಿದೆ ಎಂದು ಯಕ್ಷಗಾನ ಕಲಾರಂಗದ ಅಧ್ಯಕ್ಷ ಎಂ.ಗಂಗಾಧರರಾವ್ ಮತ್ತು ಕಾರ್ಯದರ್ಶಿ ಮುರಲಿ ಕಡೆಕಾರ್ ತಿಳಿಸಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಪೇಜಾವರ ಮಠಾಧೀಶರಾದ ವಿಶ್ವಪ್ರಸನ್ನತೀರ್ಥರು ಪ್ರಶಸ್ತಿ ಪ್ರದಾನ ಮಾಡಿ ಅನುಗ್ರಹ ಸಂದೇಶ ನೀಡಲಿದ್ದಾರೆ. ಆರ್. ಎಲ್. ಭಟ್ ವಾರಿಜಾಕ್ಷಿ ಆರ್. ಭಟ್ ಗೌರವಾರ್ಥ ವ್ಯವಸ್ಥೆಗೊಳಿಸಿದ ಪ್ರಸಾಧನ ಕೊಠಡಿಯನ್ನು ಶ್ರೀಕ್ಷೇತ್ರ ಧರ್ಮಸ್ಥಳದ ಡಿ. ಹರ್ಷೇಂದ್ರ ಕುಮಾರ್ ಉದ್ಘಾಟಿಸಲಿದ್ದಾರೆ. ಉಡುಪಿ ಶಾಸಕ ಯಶ್ಪಾಲ್ ಸುವರ್ಣ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಡಾ. ತಲ್ಲೂರು ಶಿವರಾಮ ಶೆಟ್ಟಿ ಅವರು ಯಕ್ಷ ವಿದ್ಯಾಪೋಷಕ್‌ನ 75 ವಿದ್ಯಾರ್ಥಿಗಳಿಗೆ 6.42 ಲಕ್ಷ ರೂ. ಮೊತ್ತದ ಸಹಾಯಧನವನ್ನು ವಿತರಿಸಲಿದ್ದಾರೆ. ಈ ಸಂದರ್ಭದಲ್ಲಿ 23 ಮಂದಿ ಹಿರಿಯ ಕಲಾವಿದರಿಗೆ ತಲಾ 20 ಸಾವಿರ ನಗದು ಪುರಸ್ಕಾರ ಪ್ರಶಸ್ತಿ, ತೆಕ್ಕಟ್ಟೆಯ ಕೊಮೆ ಯಶಸ್ವಿ ಕಲಾವೃಂದ ಸಂಸ್ಥೆಗೆ 1 ಲಕ್ಷ ರೂ. ಮೊತ್ತದ ಶ್ರೀ ವಿಶ್ವೇಶತೀರ್ಥ ಪ್ರಶಸ್ತಿ ಹಾಗೂ ಯಕ್ಷಚೇತನ ಪ್ರಶಸ್ತಿಯನ್ನು ಸಂಸ್ಥೆಯ ನಿಕಟಪೂರ್ವ ಅಧ್ಯಕ್ಷ ಕೆ. ಗಣೇಶ್ ರಾವ್ ಅವರಿಗೆ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕಲಾರಂಗದ ಉಪಾಧ್ಯಕ್ಷ ಎಸ್.ವಿ. ಭಟ್, ಜೊತೆ ಕಾರ್ಯದರ್ಶಿ ನಾರಾಯಣ ಎಂ. ಹೆಗಡೆ, ಕೋಶಾಧಿಕಾರಿ ಪ್ರೊ. ಸದಾಶಿವ ರಾವ್, ಸದಸ್ಯರಾದ ಭುವನಪ್ರಸಾದ್ ಹೆಗ್ಡೆ, ನಿರಂಜನ್ ಭಟ್ ಇದ್ದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಎಂ. ಗಂಗಾಧರರಾವ್ ಅವರು ಮಾತನಾಡಿದರು.

ಯಕ್ಷ ರಸಾಯನ ಪುಸ್ತಕ ಬಿಡುಗಡೆ

ವಾಸುದೇವ ಸಾಮಗರ 30 ಪ್ರಸಂಗಗಳ 'ಯಕ್ಷ ರಸಾಯನ' ಪುಸ್ತಕವನ್ನು ಬಿಡುಗಡೆ ಮಾಡಲಾಗುವುದು. ಇತ್ತೀಚೆಗೆ ನಿಧನ ಹೊಂದಿದ ಮೂರು ಮಂದಿ ಕಲಾವಿದರ ಕುಟುಂಬಿಕರಿಗೆ ಸಾಂತ್ವನ ನಿಧಿಯನ್ನು ನೀಡಲಾಗುವುದು. ಸಭಾ ಕಾರ್ಯಕ್ರಮದ ಮೊದಲು ಮಧ್ಯಾಹ್ನ 1.45 ರಿಂದ ನವರಸಾಯನೆ: ಯಕ್ಷಗಾಯನ ಹಾಗೂ ಸಮಾರಂಭದ ಬಳಿಕ ಸಂಜೆ 5 ರಿಂದ ಬಡಗುತಿಟ್ಟಿನ ಕಲಾವಿದರಿಂದ ಯಕ್ಷಗಾನ ಬಭ್ರುವಾಹನ ಕಾಳಗ ಪ್ರದರ್ಶನಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ನೆಹರೂ ಆಧುನಿಕ ಭಾರತ ದೇಶದ ಶಿಲ್ಪಿ

ಚಿಕ್ಕಮಗಳೂರು: ಆಧುನಿಕ ಶಿಲ್ಪಿ ಭಾರತದ ಮೊದಲ ಪ್ರಧಾನಮಂತ್ರಿ, ಪಂಡಿತ್ ಜವಹಾರ ಲಾಲ್ ನೆಹರುರವರ ಆದರ್ಶ ಮೌಲ್ಯಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಕೊಳ್ಳುವಂತೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಎಲ್.ಮೂರ್ತಿ ಸಲಹೆ ನೀಡಿದರು.

ಅವರು ಗುರುವಾರ ನಗರದ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಚಿಕ್ಕಮಗಳೂರು ಜಿಲ್ಲಾ ಮತ್ತು ಬ್ಲಾಕ್ ಕಾಂಗ್ರೆಸ್ ಸಮಿತಿ, ಎನ್‌ಎಸ್‌ಯುಐ ವತಿಯಿಂದ ಆಯೋಜಿಸಿದ್ದ ಮಾಜಿ ಪ್ರಧಾನಮಂತ್ರಿ ಪಂಡಿತ್‌ಜವಹಾರಲಾಲ್ ನೆಹರು ಅವರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ನೆಹರುರವರು ನವಭಾರತದ ಸಂಕಲ್ಪವನ್ನು ಹೊತ್ತು ಪ್ರಧಾನಮಂತ್ರಿಯಾಗಿ ಭಾರತವನ್ನು ಸದೃಢವಾಗಿ ಮುನ್ನಡೆಸಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ, ಭಾರತದ ವಿದೇಶಾಂಗ ನೀತಿಯನ್ನು ಉತ್ತಮವಾಗಿ ನಿಭಾಯಿಸಿದ್ದಾರೆ ಎಂದು ಹೇಳಿದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸಿದ್ಧಾಂತವೇ ಸಂವಿಧಾನವಾಗಿದೆ. ಜಾತ್ಯಾತೀತ ನೆಲೆಗಟ್ಟಿನಲ್ಲಿ ಸಂವಿಧಾನಕ್ಕೆ ಗೌರವವನ್ನು ಕೊಡಲಾಗುತ್ತಿದ್ದು, ದೇಶವು ಪ್ರಗತಿ ಕಾಣಲು ನೆಹರು ಕಾರಣವಾಗಿದ್ದಾರೆ. ದೇಶ ಮತ್ತು ಹೊರದೇಶಗಳ ಸಂಬಂಧಗಳನ್ನು ಸುಧಾರಿಸುವಲ್ಲಿ ಯಶಸ್ಸು ಕಂಡ ಧೀಮಂತ ನಾಯಕ ನೆಹರು ಎಂದು ಬಣ್ಣಿಸಿದರು.

ನೆಹರು ಅವರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಎಂ.ಎಲ್.ಮೂರ್ತಿ ಅವರು ಮಾತನಾಡಿದರು.

ನೆಹರುರವರು ಹಾಕಿಕೊಟ್ಟಿರುವ ಹಾದಿಯಲ್ಲಿಯುವ ಜನಾಂಗ ಸಾಗಬೇಕು. ಅವರ ಅಧಿಕಾರವಧಿಯಲ್ಲಿ ರೈತರಿಗೆ, ಯುವ ಜನಾಂಗಕ್ಕೆ ಉತ್ತಮವಾದ ಕಾರ್ಯಗಳನ್ನು ರೂಪಿಸಿದ್ದು, ಅವುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಭಾರತ ದೇಶದ ಮೊದಲ ಪ್ರಧಾನಮಂತ್ರಿಯಾಗಿ ಆಡಳಿತ ನಡೆಸಿದ ನೆಹರುರವರು ಉತ್ತಮವಾದ ಕೊಡುಗೆಗಳನ್ನು ನೀಡಿದ್ದಾರೆ. ಅವರ ಜನ್ಮದಿನಾಚರಣೆಯನ್ನು ಪ್ರತಿದಿನ ನೆನೆಸುವಂತಾಗಬೇಕು.

ಬಿ.ಟಿ.ಸುಮಂತ್,
ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷ

ನೆಹರುರವರಿಗೆ ಮಕ್ಕಳೆಂದರೆ ತುಂಬಾ ಪ್ರೀತಿ. ಅಧಿಕಾರವಧಿಯಲ್ಲೂ ಮಕ್ಕಳ ಜೊತೆ ಬೆರೆತು ಅವರೊಂದಿಗೆ ಅನ್ಯೋನತೆಯಿಂದ ಕಾಲ ಕಳೆಯುತ್ತಿದ್ದರು.

ಅವರ ಆದರ್ಶ ಮೌಲ್ಯ ಗಳನ್ನು ನಾವುಗಳು ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು. ಜವಹಾರಲಾಲ್ ನೆಹರುರ'ವರ ಭಾವಚಿತ್ರಕ್ಕೆ ಕಾಂಗ್ರೆಸ್ ಮುಖಂಡರು ಸಾಮೂಹಿಕವಾಗಿ ಪುಷ್ಪಾರ್ಚನೆ ಮಾಡಿದರು. ಕಾರ್ಯಕ್ರಮದಲ್ಲಿ ನಗರಸಭಾ ಸದಸ್ಯ ಪರಮೇಶ್‌ರಾಜ್ ಅರಸ್, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಹಿರೇಮಗಳೂರು ರಾಮ ಚಂದ್ರ, ಆಶ್ರಯ ಸಮಿತಿ ಸದಸ್ಯ ಪ್ರಸಾದ್ ಅಮಿನ್, ಮುಖಂಡರಾದ ಉಪ್ಪಳ್ಳಿ ಕೆ.ಭರತ್, ಕುಸುಮಾ ಭರತ್, ಕೆಪಿಸಿಸಿ ಎಸ್.ಸಿ ಘಟಕರಾಜ್ಯ ಸಂಚಾಲಕಿ ನೇತ್ರಾವತಿ, ಸುನೀಲ್, ಉಮೇಶ್ ಶೆಟ್ಟಿ, ಎನ್‌ಎಸ್‌ಯುಐ ಮುಖಂಡರುಇದ್ದರು.

ಸೂರಿಂಜೆಗೆ ಸಹಕಾರ ರತ್ನ ಪುರಸ್ಕಾರ

ಮಂಗಳೂರು: ಸಹಕಾರ ಕ್ಷೇತ್ರದ ಸಾಧನೆಗಾಗಿ ನೀಡಲಾಗುವ ಸಹಕಾರ ರತ್ನ ಪುರಸ್ಕಾರಕ್ಕೆ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಉಪಾಧ್ಯಕ್ಷರಾದ, ಹಿರಿಯ ಸಹಕಾರಿ ವಿನಯಕುಮಾರ್ ಸೂರಿಂಜೆ ಮತ್ತು ವಿಶ್ವಕರ್ಮ ಸಹಕಾರ ಬ್ಯಾಂಕ್ ಹಾಗೂ ಸಹಕಾರ ಅಧ್ಯಯನ ಮತ್ತು ಅಭಿವೃದ್ಧಿ ಸಂಸ್ಥೆಯ ಅಧ್ಯಕ್ಷರಾದ ಡಾ. ಎಸ್ ಆರ್ ಹರೀಶ್ ಆಚಾರ್ಯ ಇವರು ಆಯ್ಕೆಯಾಗಿದ್ದಾರೆ.

ರಾಜ್ಯದ ಸಹಕಾರ ಸಚಿವ ಕೆ.ಎನ್.ರಾಜಣ್ಣ ಸಹಕಾರ ರತ್ನ ಪ್ರಶಸ್ತಿ ವಿಜೇತರ ಪಟ್ಟಿ ಪ್ರಕಟಿಸಿದ್ದು, ರಾಜ್ಯಾದ್ಯಂತ ಒಟ್ಟು 72 ಮಂದಿಗೆ ಪುರಸ್ಕಾರ ಘೋಷಿಸಲಾಗಿದೆ.

ಕರಾವಳಿಯ ಉಭಯ ಜಿಲ್ಲೆಗಳಿಂದ ವಿನಯಕುಮಾರ್ ಸೂರಿಂಜೆ ಮತ್ತು ಡಾ. ಎಸ್ ಆರ್ ಹರೀಶ್ ಆಚಾರ್ಯ, ಕಂಬದಕೋಣೆ ರೈತರ ಸೇವಾ ಸಹಕಾರ ಸಂಘ ನಿ. ಉಪ್ಪುಂದ ಇದರ ಅಧ್ಯಕ್ಷ ಎಸ್.ಪ್ರಕಾಶ್ಚಂದ್ರ ಶೆಟ್ಟಿ ಮೇಕೋಡು, ಇತರೇ ಸಹಕಾರ ಸಂಘಗಳ ನೌಕರರ ಒಕ್ಕೂಟ ನಿ. ಉಡುಪಿ ಇದರ ಅಧ್ಯಕ್ಷ ಉದಯಕುಮಾರ್ ಹಟ್ಟಿಯಂಗಡಿ, ವಿಜಯಾ ಬ್ಯಾಂಕ್ ನೌಕರರ ಹೌಸಿಂಗ್ ಕೋಆಪರೇಟಿವ್ ಸೊಸೈಟಿ ಲಿ. ಇದರ ಮಾಜಿ ಅಧ್ಯಕ್ಷರಾದ ಎ.ನವೀನ್ ಭಂಡಾರಿ ಪುತ್ತೂರು ಇವರುಗಳು ಆಯ್ಕೆಯಾಗಿದ್ದಾರೆ. ಸಹಕಾರ ರತ್ನ ಪ್ರಶಸ್ತಿಗೆ ಆಯ್ಕೆಯಾಗಿರುವ ಹಿರಿಯ ಸಹಕಾರಿಗಳಾದ ಶ್ರೀವಿನಯಕುಮಾರ್ ಸೂರಿಂಜೆಯವರು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಉಪಾಧ್ಯಕ್ಷರಾಗಿದ್ದಾರೆ.

ವಿರೂಪಾಕ್ಷಪುರ ಟೆಲಿಕಾಂ ನಗರದ ಶ್ರೀರಾಮ್ ಶ್ರೇಯಸ್ ಅಪಾರ್ಟ್ಮೆಂಟ್‌ನಲ್ಲಿ ರಾಜ್ಯೋತ್ಸವ ಪ್ರಯುಕ್ತ ನಾನಾ ಪ್ರಾಕಾರಗಳ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು. ಈ ಸಂದರ್ಭದಲ್ಲಿ ಪ್ರಸಿದ್ಧ ಯಕ್ಷಗಾನ ಭಾಗವತ ರಾಘವೇಂದ್ರ ಮಯ್ಯ ಹಾಲಾಡಿ ಅವರನ್ನು ಸನ್ಮಾನಿಸಲಾಯಿತು. ಶ್ರೀರಾಮ್ ಶ್ರೇಯಸ್ ಕನ್ನಡ ರಾಜ್ಯೋತ್ಸವ ಸಮಿತಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಯಕ್ಷಗಾನ, ಕೋಲಾಟ, ಡೋಲು ಕುಣಿತ, ಹುಲಿ ವೇಷ ಹೀಗೆ ಕರಾವಳಿ, ಕೊಡವ, ಉತ್ತರ ಕರ್ನಾಟಕ ನೃತ್ಯ ಪ್ರಕಾರಗಳು ವರ್ಣರಂಜಿತ ಕಾರ್ಯಕ್ರಮದಲ್ಲಿ ಮೇಳೈಸಿದವು. ಕರ್ನಾಟಕದ ವಿವಿಧ ಭಾಗಗಳ ಖಾದ್ಯಗಳ ಆಹಾರ ಮಳಿಗೆಗಳು ಮನಸೂರೆಗೊಂಡವು.

ಸುವರ್ಣ ಸಂಭ್ರಮ ಭಾಷೆಯ ಪ್ರತೀಕ

ಮಂಗಳೂರು: ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ ಎಂಬ ಆಶಯದೊಂದಿಗೆ ನಡೆಯುತ್ತಿರುವ ಸುವರ್ಣ ಕರ್ನಾಟಕ ಸಂಭ್ರಮ ಕಾರ್ಯಕ್ರಮವು ನಮ್ಮ ರಾಜ್ಯ ಹಾಗೂ ಭಾಷೆಯ ಅಭಿಮಾನದ ಪ್ರತೀಕವಾಗಿದೆ ಎಂದು ದ.ಕ. ಜಿಲ್ಲಾ ಅಪರ ಜಿಲ್ಲಾಧಿಕಾರಿ ಡಾ. ಸಂತೋಷ್ ಕುಮಾರ್ ಹೇಳಿದರು. ಅವರು ಬುಧವಾರ ಮಂಗಳೂರು ತುಳು ಭವನದಲ್ಲಿ ಕರ್ನಾಟಕ ಸುವರ್ಣ ಸಂಭ್ರಮದ ಪ್ರಯುಕ್ತ ನಡೆಯುವ ಬಹುಸಂಸ್ಕೃತಿ ಉತ್ಸವದ ಅಂಗವಾಗಿ ಆಯೋಜಿಸಲಾದ ಪ್ರೌಢಶಾಲಾ ಮಕ್ಕಳ ಚಿತ್ರಕಲಾ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದರು. ನಿತ್ಯೋತ್ಸವ ಮೂಲಕ ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ ಅನ್ನುವುದನ್ನು ಸಂಭ್ರಮಿಸಿದವರು ನಾವು, ಮುಂದಿನ ಪ್ರಜೆಗಳಾದ ವಿದ್ಯಾರ್ಥಿಗಳಿಗೆ ಚಿತ್ರದ ಮೂಲಕ ಈ ಅರಿವು ಹಾಗೂ ಅಭಿಮಾನವನ್ನು ಬಿತ್ತೋಣ, ಆ ಮೂಲಕ ಬಹುಸಂಸ್ಕೃತಿಯ ಆಶಯವನ್ನು ಸಾರ್ಥಕಗೊಳಿಸೋಣ ಎಂದು ಡಾ. ಸಂತೋಷ್ ಕುಮಾರ್ ಅವರು ಆಶಯ ವ್ಯಕ್ತ ಪಡಿಸಿದರು. ಈ ಸಂದರ್ಭದಲ್ಲಿ ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಉಮರ್ ಯು.ಎಚ್, ರಾಜೇಶ್, ಪ್ರಸಾದ್ ಆಳ್ವಾ, ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಮಹಾಲಸಾ ಚಿತ್ರಕಲಾ ಶಾಲೆಯ ವಿಭಾಗ ಮುಖ್ಯಸ್ಥ ಎನ್. ಎಸ್.ಪತ್ತಾರ್ , ಆರ್ಟ್ ಕೆನರಾ ಟ್ರಸ್ಟ್ ಸದಸ್ಯ ಹರೀಶ್ ಕೊಡಿಯಾಲ್ ಬೈಲ್ ಉಪಸ್ಥಿತರಿದ್ದರು. ಕೊಂಕಣಿ ಅಕಾಡೆಮಿ ಅಧ್ಯಕ್ಷ ಸ್ಟ್ಯಾನಿ ಆಳ್ವಾರಿಸ್ ವಂದಿಸಿದರು.

@vishwavaninews
ವಿಶ್ವವಾಣಿ ಆರಾಮ
ಬೆಂಗಳೂರು ಶನಿವಾರ 16|11|2024
ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತ ವಿಹಾರ

ಗುಮಾನಿ ಬೇಡ ಸಮಚಿತ್ತ ಇರಲಿ

ಅನೇಕ ಬಾರಿ ನಮ್ಮ ಸ್ನೇಹಿತರ, ಬಂಧುಬಳಗ, ಹಿತೈಷಿಗಳ ಮೇಲೆಯೇ ಅವರು ನಮ್ಮನ್ನು ಇಕ್ಕಟ್ಟಿಗೆ ಸಿಲುಕಿಸುವ ಸನ್ನಿವೇಶಗಳನ್ನು ಸೃಜಿಸುತ್ತಿದ್ದಾರೆ ಎಂಬ ಗುಮಾನಿ ಕಾಡತೊಡಗುತ್ತದೆ. ಕೆಲವು ಬಾರಿ ನೇರವಾಗಿಯೂ ಇಂತಹ ಸಂದರ್ಭಗಳು ಬಂದೊಂದಗುವುದನ್ನು ಕೂಡ ಅಲ್ಲಗಳೆಯಲಾಗುವುದಿಲ್ಲ. ನಾನು ಅದೇಷ್ಟು ಉಪಕಾರ ಮಾಡಿದರೂ, ಸದಾ ಒಳ್ಳೆಯದನ್ನೇ ಬಯಸಿದರೂ ಅದನ್ನೆಲ್ಲ ಮರೆತು ಹೀಗೆ ಕಾಡುವುದು ಸರಿಯೇ? ಎಂದೆಲ್ಲ ನಮ್ಮನ್ನೆ ನಾವು ಪ್ರಶ್ನಿಸಿಕೊಳ್ಳುತ್ತೇವೆ. ಇದು ಕೆಲವು ಬಾರಿ ಸತ್ಯವಾಗಿರದಿದ್ದರೂ ನಮ್ಮನ್ನು ತುಂಬ ಹೈರಾಣಾಗಿಸಿ ಬಿಡುತ್ತದೆ. ಮಾನಸಿಕ ನೆಮ್ಮದಿಯನ್ನು ಹಾಳು ಮಾಡುತ್ತದೆ. ಬುದ್ಧನ ಆಶ್ರಮಕ್ಕೆ ಬಂದ ವ್ಯಕ್ತಿಯೊಬ್ಬ ಬುದ್ಧನನ್ನು ಹೀಯಾಳಿಸತೊಡಗಿದ. ಅವನ ಅನುಚಿತ ವರ್ತನೆಯನ್ನು ಸಹಿಸದ ಬುದ್ಧನ ಶಿಷ್ಯರು ಆ ವ್ಯಕ್ತಿಯನ್ನು ಆಶ್ರಮದಿಂದ ಹೊರಹಾಕಲು ಮುಂದಾದರು. ಬುದ್ಧ ಅವರನ್ನು ತಡೆದು ಸುಮ್ಮನಿದ್ದು ಬಿಡಿ. ಅವನಿಗೆ ತೋಚಿದಂತೆ ಅವನು ಮಾತನಾಡಲಿ. ಅದು ಅವನ ತಿಳಿವಳಿಕೆಗೆ ಮಾತ್ರ ಸೀಮಿತ. ಅವನನ್ನು ಮತ್ತು ಅವನ ಮಾತುಗಳನ್ನು ಸದ್ಯಕ್ಕೆ ನಿರ್ಲಕ್ಷಿಸುವುದೇ ಸರಿಯಾದ ಕ್ರಮ ಎಂದು ಹೇಳಿದ. ಬುದ್ಧನ ಶಿಷ್ಯರಿಗೆ ಇದು ಸರಿ ಎನಿಸಿತು. ಏನೊಂದು ಪ್ರತಿಕ್ರಿಯೆ ನೀಡದ ಬುದ್ಧನನ್ನು ನೋಡಿ ವ್ಯಕ್ತಿ ಅಲ್ಲಿಂದ ತಾನಾಗಿಯೇ ಹೊರಟು ಹೋಗಿದ್ದ. ನಮ್ಮವರಿಂದಲೇ ಪ್ರತಿಕೂಲ ಪರಿಸ್ಥಿತಿ ಉಂಟಾಗುತ್ತದೆ ಎಂದೆನಿಸತೊಡಗಿದರೆ ಖಂಡಿತವಾಗಿಯೂ ನಿರಾಸೆಗೊಳಗಾಗುವದರಲ್ಲಿ ಅರ್ಥವಿಲ್ಲ. ಆತಂಕಕ್ಕೆ ಒಳಗಾಗುವುದು ಕೂಡ ಸಲ್ಲದ ಸಂಗತಿ. ಪರಿಸ್ಥಿತಿಯನ್ನು ಒಂದಷ್ಟು ತಾಳ್ಮೆಯಿಂದ ಎದುರುಗೊಳ್ಳುವ, ಸಾಧ್ಯವಾದಷ್ಟು ಎಲ್ಲ ದೃಷ್ಟಿಕೋನಗಳಿಂದಲೂ ವಿಶ್ಲೇಷಣೆಗೆ ಒಳಗು ಮಾಡುವ ಬುದ್ಧಿವಂತಿಕೆಯನ್ನು ತೋರಬೇಕು. ನಮ್ಮೊಳಗಣ ಸಾಮರ್ಥ್ಯವನ್ನು ಅನಾವರಣಗೊಳಿಸುವ ಸದಾವಕಾಶವನ್ನಾಗಿ ಇಂತಹ ಸಂದರ್ಭಗಳನ್ನು ಬಳಸಿಕೊಳ್ಳಬೇಕು. ನಮ್ಮನ್ನೇ ಗುರಿಯಾಗಿಸುವ ಅಂತಹ ಸಂದರ್ಭಗಳನ್ನು ನಿರ್ಲಕ್ಷಿಸಿ, ಇಲ್ಲವೇ ಅದಷ್ಟೇ ಸನ್ನಿವೇಶಕ್ಕೊಂದು ಕಡಿವಾಣ ಹಾಕಿಬಿಡಬೇಕು. ಇದು ನಮ್ಮ ಮಾನಸಿಕ ಒತ್ತಡವನ್ನು ಒಂದಷ್ಟು ಕಡಿಮೆ ಮಾಡುವುದರ ಜೊತೆಗೆ ನಮ್ಮನ್ನು ಗುರಿಯಾಗಿಸಿ ತೊಂದರೆ ಕೊಡಬೇಕೆಂದು ಬಯಸಿದವರ ಉದ್ದೇಶವನ್ನು ದುರ್ಬಲಗೊಳಿಸಿ ಬಿಡುತ್ತದೆ. ಇದು ನಮ್ಮ ಒಟ್ಟಾರೆ ಪ್ರಗತಿಗೆ ಸಹಕಾರಿ, ಅವಶ್ಯ.

● ಮಹಾದೇವ ಬಸರಕೋಡ

ಟ್ರಾಫಿಕ್‌ನಲ್ಲೂ ಎಐ!

ಬೆಂಗಳೂರಿನ ಟ್ರಾಫಿಕ್ ಸಿಗ್ನಲ್‌ಅನ್ನು ನೀವು ಇತ್ತೀಚೆಗೆ ಗಮನಿಸಿದ್ದರೆ ಅಲ್ಲಿ ಕೆಲವಾರು ಬದಲಾವಣೆ ಕಾಣಸಿಗುತ್ತದೆ. ಅಲ್ಲಲ್ಲಿ ಟ್ರಾಫಿಕ್ಕಿನ ದೀಪಗಳಲ್ಲಿ ವಿಎಸಿ ಎಂದು ಕಾಣಿಸುತ್ತದೆ. ಇದು ಕೃತಕ ಬುದ್ಧಿಮತ್ತೆ ಅಂದರೆ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಬಳಕೆ ಮಾಡಿರುವುದರ ಸಂಕೇತ. ಇದನ್ನು ಈಗಾಗಲೇ ಸುಮಾರು 50ಕ್ಕೂ ಹೆಚ್ಚಿನ ವೃತ್ತಗಳಲ್ಲಿ ಅಳವಡಿಸಲಾಗಿದೆ. ತಂತ್ರಜ್ಞಾನ



ಬಳಸಿಕೊಂಡೇ ಟ್ರಾಫಿಕ್ ನಿಯಂತ್ರಿಸುವುದರ ಜೊತೆಗೆ ಟ್ರಾಫಿಕ್ ಇನ್ಸ್‌ಪೆಕ್ಟರ್‌ಗಳ ಪೀಕಲಾಟವನ್ನೂ ತಕ್ಕಮಟ್ಟಿಗೆ ಕಡಿಮೆ ಮಾಡುವುದು ಇದರ ಉದ್ದೇಶ. ದಿನಂಪ್ರತಿ ಹೆಚ್ಚುತ್ತಿರುವ ಟ್ರಾಫಿಕ್ ಸಮಸ್ಯೆಗೆ ಇದೊಂದು ಉತ್ತಮ ಪರಿಹಾರ ಎನ್ನಲಾಗಿದೆ. ಎಟಿಸಿಎಸ್ ಎಂಬುದು ಈ ವ್ಯವಸ್ಥೆಯ ಹೆಸರು. ಎಟಿಸಿಎಸ್ ಎಂದರೆ ಎಐ ಎನಾಬಲ್ಡ್ ಅಡಾಪ್ಟಿವ್ ಕಂಟ್ರೋಲ್ ಸಿಸ್ಟಂ ಎಂದರ್ಥ. ಮೇಲ್ನೋಟಕ್ಕೆ ಇದು ಹಸಿರು ದೀಪ ಮತ್ತು ಸಮಯವನ್ನು, ಆ ನಿರ್ದಿಷ್ಟ ಸಂದರ್ಭಕ್ಕನುಗುಣವಾಗಿ ಕಾರ್ಯ ನಿರ್ವಹಿಸುವ ಹಾಗೆ ನೋಡಿಕೊಳ್ಳುತ್ತದೆ. ಆ ಮೂಲಕ ಸಂಚಾರ ದಟ್ಟಣೆ, ಗೊಂದಲ, ಅಫಘಾತದ ಸಾಧ್ಯತೆಯನ್ನು ಕಡಿಮೆಗೊಳಿಸಲು ಪ್ರಯತ್ನಿಸುತ್ತದೆ.ಇದರಲ್ಲಿ ಮೂರು ವಿಧಾನಗಳಿವೆ. ಒಂದು, ಈಗಾಗಲೇ ಇದ್ದ ಹಳೆಯ ವ್ಯವಸ್ಥೆ. ಅಂದರೆ ಟ್ರಾಫಿಕ್ ಇನ್ಸ್‌ಪೆಕ್ಟರ್ ತಾವಾಗಿಯೇ ಟ್ರಾಫಿಕ್ಕನ್ನು ನಿಯಂತ್ರಿಸುವುದು. ಈ ವಿಧಾನ ಅಂಬುಲೆನ್ಸ್ ಅಥವಾ ವಿಐಪಿಗಳ ಆಗಮನದ ಸಮಯದಲ್ಲಿ ಬಳಕೆ ಮಾಡಬಹುದು. ಎರಡನೆಯದು, ವಿಎಸಿ ವಿಧಾನ. ವಿಎಸಿ ಎಂದರೆ ವೆಹಿಕಲ್ ಆಕ್ಚುವೇಟೆಡ್ ಕಂಟ್ರೋಲ್ ಎಂದರ್ಥ. ಇದು ತನ್ನ ಕ್ಯಾಮರಾದಲ್ಲಿ ವಾಹನಗಳ ಸಂಖ್ಯೆಯನ್ನು ದಟ್ಟಣೆಯನ್ನು ಗಮನಿಸಿ ತಂತಾನೇ ಸಮಯವನ್ನು ಬದಲಾಯಿಸಿ ದಟ್ಟಣೆ ಇರುವಲ್ಲಿ ಟ್ರಾಫಿಕ್ಕನ್ನು ತೆರವುಗೊಳಿಸುತ್ತದೆ. ಮೂರನೆಯದು ಎಟಿಸಿಎಸ್ ಮೋಡ್. ಬೇರೆ ಬೇರೆ ದಿಕ್ಕಿಗೆ ಸರಿಸಮನಾಗಿ ಸಮಯ ಹಂಚಿಕೆ ಮಾಡಿ ಟ್ರಾಫಿಕ್ಕನ್ನು ನಿಯಂತ್ರಿಸುವಲ್ಲಿ ಸಹಾಯ ಮಾಡುತ್ತದೆ. ಬೆಂಗಳೂರಿನ ಅಗಾಧ ಮತ್ತು ಅವ್ಯವಸ್ಥಿತ ಎನ್ನಬಹುದಾದ ಟ್ರಾಫಿಕ್‌ನ್ನು ನಿಯಂತ್ರಿಸಲು ಎಐ ಸಹಾಯ ಮಾಡೀತೆ? ಕೆಲವರು ಎಲ್ಲೆಂದರಲ್ಲಿ ವಾಹನ ನುಗ್ಗಿಸಿ, ಅವಾಂತರ ಸೃಷ್ಟಿಸುವುದನ್ನು ಇದು ತಡೆದೀತೆ? ಕಾದು ನೋಡೋಣ.

● ಅರ್ಜುನ್ ಶೆಣೈ, ಗಾವಳಿ

ಚುಟುಕು

ಸಂಬಳ

ತಿಂಗಳ ಮೊದಲ ದಿನ
ಸಂಬಳ ಬಂತು
ನನಗಿಂತ ಹೆಚ್ಚು
ಖುಷಿ ಪಟ್ಟದ್ದು ಮಾತ್ರ
ಸಾಲದ ಕಂತು!

● ಮಹಾಂತೇಶ ಮಾಗನೂರ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಇವುಗಳನ್ನೆಲ್ಲಾ ನೀವು ಕಾಕತಾಳೀಯ, ಆಕಸ್ಮಿಕ ಎನ್ನುತ್ತೀರೋ ಅಥವಾ 'ನಿನ್ನದು ಕತೆ ನಮ್ಮದು ಕಾದಂಬರಿಯೇ ಇದೆ' ಎನ್ನುತ್ತೀರೋ ನನಗೆ ಗೊತ್ತಿಲ್ಲ.

ಇವೆಲ್ಲವೂ ಕಾಕತಾಳೀಯವೆ?

● ಶ್ರೀರಂಜನಿ ಅಡಿಗ

ಅನೇಕ ಬಾರಿ ನಾನಂದುಕೊಳ್ಳುವುದು ಇಂಥ ಘಟನೆಗಳು ನನ್ನೊಂದಿಗೆ ಮಾತ್ರ ನಡೆಯುವುದಾ ಅಥವಾ ನಿಮಗೂ ಹೀಗೇ ಆಗುತ್ತಾ ಅಂತಾ. ಉದಾಹರಣೆಗೆ- ಮನೆಕೆಲಸ ಎಲ್ಲಾ ಮುಗಿಸಿ ಸ್ವಲ್ಪಹೊತ್ತು ಟಿವಿ ನೋಡೋಣ ಅಂತ ಆನ್ ಮಾಡುತ್ತೇನೆ, ಹಾಗೆ ನೋಡಲೇಬೇಕಾದ ಜರೂರು ಈಗಿನ ಚ್ಯಾನೆಲ್ಲುಗಳಲ್ಲಿ ಇರುವುದಿಲ್ಲ ಬಿಡಿ. ಕಾರಣ ಟಿವಿಯಲ್ಲಿ ಬರುವುದು ಮೊಬೈಲಿನಲ್ಲಿ ನೋಡಿಯಾಗಿರುತ್ತದೆ. ಅಥವಾ ಇದರಲ್ಲಿ ಬರುವುದು ಅದರಲ್ಲಿ ನಿನ್ನೆಯೇ ಬಂದಿರುತ್ತದೆ. ಅದ್ದರಿಂದ ನೋಡದೇ ಇರುವುದರಿಂದ ನಷ್ಟವೇನೂ ಇಲ್ಲ. ಆದರೂ ಒಮ್ಮೊಮ್ಮೆ ಆನ್ ಮಾಡುತ್ತೇನೆ. ನಿಜಹೇಳಬೇಕೆಂದರೆ ನನಗೆ ಟಿವಿ ಸರಿಯಾಗಿ ಆನ್ ಮಾಡಲೂ ಬರುವುದಿಲ್ಲ. 'ಯಾವ ಕಾಲದವಳು?' ಅಂದುಕೊಳ್ಳಬೇಡಿ. ಈಗಂತೂ ಟಿವಿಯೆನ್ನುವುದು ಸ್ಮಾರ್ಟ್ ಆದ ಮೇಲೆ ಎರಡೆರಡು ರಿಮೋಟ್ ಕಂಟ್ರೋಲ್. ಮುಂಚಿನಂತೆ ಆನ್ ಮಾಡಿದ ಕೂಡಲೇ ಡಿಡಿ ಚಾನೆಲುಗಳು ಮಾತ್ರ ಬರುವುದಲ್ಲವಲ್ಲ! 'ನನಗೆ ಆ ಚ್ಯಾನೆಲ್ಲು, ನಿನಗೆ ಇದು' ಎಂದು ರಿಮೋಟಿಗಾಗಿ ಕಾದಾಟವಿಲ್ಲದೆ ಒಗ್ಗಟ್ಟಿನಿಂದ ಒಮ್ಮನಸ್ಸಿನಿಂದ ನೋಡುತ್ತಿದ್ದ ಕಾಲವದು. ಈಗ ಯೂ ಟ್ಯೂಬ್, ನೆಟ್ ಫ್ಲಿಕ್ಸ್‌ಗಳೆಂದು ಬೇರೆ ಬೇರೆ ಮಾಧ್ಯಮಗಳು ಬಂದ ಮೇಲೆ ಟಿವಿ ಆಪರೇಶನ್ ಕಡುಕಷ್ಟವಾಗಿಬಿಟ್ಟಿದೆ. ಇರಲಿ ಬಿಡಿ.

ಎಲ್ಲಾ ಕಡೆ 'ನಮ್ಮಲ್ಲೇ ಮೊದಲು'

ಅಂತೂ ಸಾಹಸ ಮಾಡಿ ಯಾವುದೋ ಚ್ಯಾನೆಲ್ ಆನ್ ಮಾಡಿ ಸ್ವಲ್ಪ ಹೊತ್ತು ನೋಡಿದೆನೋ ಇಲ್ಲವೋ ಜಾಹೀರಾತು ಆರಂಭವಾಗಿಬಿಡಬೇಕೇ? 'ಹೇಗೋ ರಿಮೋಟಿನ ಯಜಮಾನಿ ನಾನೇ ತಾನೇ' ಎಂದು ಬದಲಾಯಿಸಿದರೆ ಮುಂದಿನ ಚ್ಯಾನೆಲ್ಲಿನಲ್ಲೂ ಜಾಹೀರಾತು, ಮತ್ತೂ ಮುಂದುವರಿಸಿದಂತೆಯೇ ಎಲ್ಲಾ ಚ್ಯಾನೆಲ್ಲುಗಳಲ್ಲಿ ಜಾಹೀರಾತುಗಳೇ! ಎಷ್ಟು ಹಿಂದೆಮುಂದೆ ಒತ್ತಿದರೂ ಎಲ್ಲಾ ಚ್ಯಾನೆಲ್ಲುಗಳಲ್ಲೂ ಬರೀ ಜಾಹೀರಾತೇ. ಇದೇ ಗತಿ ನ್ಯೂಸ್ ಚ್ಯಾನೆಲ್ಲುಗಳಲ್ಲಿ- ಒಂದು ಬ್ರೇಕಿಂಗ್ ನ್ಯೂಸ್ ನೋಡಿ ಸಾಕಾಯಿತೆಂದು ಬೇರೆ ಚ್ಯಾನೆಲ್ಲು ಹಾಕಿದರೂ 'ನಮ್ಮಲ್ಲೇ ಮೊದಲು' ಎಂದು ಅಲ್ಲಿಯೂ ಅದೇ ಸುದ್ದಿ ಪ್ರಸಾರಮಾಡುತ್ತಿರುತ್ತಾರೆ. ಒಂದೆರಡು ಸಲದ ಕತೆಯಲ್ಲ, ಟಿವಿ ಹಾಕಿದಾಗಲೆಲ್ಲ ಇದೇ ಕತೆ.

ಟಿವಿ ಕತೆ ಬಿಡಿ. ದಿನಸಿ ತರಲೆಂದು ಅಂಗಡಿಗೆ ಹೋದಾಗ ಖಾಲಿಯೇ ಇರುತ್ತದೆ. ಆದರೆ ಹೋದ ಎರಡು ನಿಮಿಷಗಳಲ್ಲಿ ಇದ್ದಕ್ಕಿದ್ದಂತೆ ಗಿಜಿಗಿಜಿಗುಡುತ್ತದೆ. ನನಗಿಂತ ನಂತರ ಬಂದವರು 'ಬೇಗ ಬೇಗ' ಎಂದು ಅವಸರಿಸಿ ಹುಡುಗರ ಬಳಿ ಸಾಮಾನು ತರಿಸಿಕೊಂಡು ದುಡ್ಡುಕೊಟ್ಟು ಹೋಗಿಯೇಬಿಡುತ್ತಾರೆ. ಹೋಟೆಲ್ಲಿಗೆ ಹೋದರೂ ಇದೇ ಕತೆ. ನಮ್ಮ ನಂತರ ಬಂದವರು ತಿಂದುಕೊಂಡು ಹೋದರೂ ನಮ್ಮ ಆರ್ಡರ್‌ನ್ನು ಯಾರೂ ತೆಗೆದುಕೊಂಡಿರುವುದಿಲ್ಲ. ವ್ಯಾಪಾರದ ಕತೆ ಬಿಡಿ, ರಸ್ತೆಬದಿಯಲ್ಲಿ ಯಾರಾದರೂ ಪರಿಚಿತರು ಸಿಕ್ಕಿ ಮಾತನಾಡುತ್ತಾ ನಿಂತಿರುತ್ತೇನೆ, ಆಗ ಆಟೋದವರು ಬಂದು ಬಂದು ಮುಖ ಹೊರಹಾಕಿ ನಾನು ಕರೆದಲ್ಲಿಗೆ ಬರಲು ತಯಾರಿರುವಂತೆ ಸ್ಲೋ ಮಾಡಿಕೊಂಡು ಹೋಗುವುದನ್ನು ನೋಡಬೇಕು, ಬೇಡ ಅನ್ನದ ಹೊರತು ವೇಗ ಪಡೆದುಕೊಳ್ಳುವುದಿಲ್ಲ. ಅದೇ ನನಗೆ ಆಟೋ ಬೇಕಿದ್ದಾಗ ಡ್ರೈವರುಗಳು ನೋಡಿಯೂ ನೋಡದಂತೆ ಅಥವಾ 'ಬುಕ್ ಆಗಿದೆ' ಎನ್ನುತ್ತಾ ಮೊಬೈಲಿನ ಮೇಲೆ ಕಣ್ಣಿಟ್ಟುಕೊಂಡೇ ಹೋಗುತ್ತಾರೆ. ಒಟ್ಟಾರೆ ನಮ್ಮ ಕಷ್ಟಕಾಲಕ್ಕೆ ಆಗುವವರು ಯಾರೂ ಇಲ್ಲ. ಬಸ್ಸುಗಳದ್ದೂ ಇದೇ ಕತೆ. ನನಗೆ ಬೇಕಾದ ಲೈನಿನ ಬಸ್ಸುಗಳು ವಿರುದ್ಧದಿಕ್ಕಿನಿಂದ ನಿಮಿಷಕ್ಕೊಂದು ಬರುತ್ತವೆ ಹೊರತು ನಾನು ಹೋಗುವ ಬಸ್ಸು ಗಂಟೆಗಟ್ಟಲೆ ಕಾದರೂ ಬರುವುದಿಲ್ಲ. ಆಟೋದಲ್ಲಿ ಹೋಗೋಣವೆಂದರೆ ಮೇಲೆ ಹೇಳಿದಂತೆ ಆಟೋವೂ ಸಿಗುವುದಿಲ್ಲ.

ಟೋಲ್‌ನಲ್ಲಿ ನಿಂತ ಕಾರು

ಟೋಲುಗಳಲ್ಲಿ ಹನುಮಂತನ ಬಾಲದಂತೆ ಉದ್ದವಿರುವ ಸಾಲನ್ನು ಬಿಟ್ಟು ಎರಡೇ ಗಾಡಿಯಿರುವ ಪುಟಾಣಿ ಕ್ಯೂವನ್ನು ಸೇರಿಕೊಂಡರೆ ನಮ್ಮ ಗ್ರಾಚಾರಕ್ಕೆ ಮುಂದಿರುವ ಗಾಡಿಯವ ಜಪ್ಪಯ್ಯ ಅಂದರೂ ಮುಂದೆ ಹೋಗನು. ಫಾಸ್ಟ್‌ಟ್ಯಾಗ್ ಕೆಲಸ ಮಾಡುತ್ತಿಲ್ಲವೆಂದೋ ಅಥವಾ ಬೇಕಾದಷ್ಟು ದುಡ್ಡಿಲ್ಲವೆಂದೋ ಟೋಲ್ ಹುಡುಗರು ಗಲಾಟೆ ಮಾಡುತ್ತಿರುತ್ತಾರೆ. ಅದೇ ಸಮಯಕ್ಕೆ ಉದ್ದದ ಸಾಲೆಂದು ಬಿಟ್ಟಬಂದಿರುವ ಲೈನಿನಿಂದ ಗಾಡಿಗಳು ರೊಂಯ್ ರೊಂಯ್ ಅಂತ

ಕಾರ್ ರೇಸಿನಂತೆ ಒಂದರ ಹಿಂದೆ ಒಂದುಹೋಗಲಾರಂಭಿಸಿದರೆ ಯಾವ ಮಗ್ಗಲಲ್ಲಿ ಎದ್ದೆನಪ್ಪಾ ಎಂದು ಕೈಕೈಹಿಚುಕಿಕೊಳ್ಳುವುದೊಂದೇ ಉಳಿದಿರುತ್ತದೆ. ಜಾಸ್ತಿಯೆಂದರೆ ನಾಲ್ಕುಬಾರಿ ಹಾರ್ನ್ ಮಾಡಬಹುದು ಬಿಟ್ಟರೆ ಮತ್ತೇನು ಮಾಡಲಾಗದು. 'ಛೇ. ಉದ್ದ ಕ್ಯೂ ಇದ್ದರೂ ಅದೇ ಸಾಲಲ್ಲಿ ಹೋಗಬೇಕಿತ್ತು, ನಿನ್ನ ಮಾತು ಕೇಳಿ ಹೀಗಾಯಿತು' ಎಂದು ಡ್ರೈವರ್ ಸೀಟಿನಿಂದ ಕೇಳಿಬರದಿದ್ದರೆ ನೋಡಿ. ಇನ್ನು ಯಾವುದಾದರೂ ಸಮಾರಂಭದ ಊಟದ ಪಂಕ್ತಿಯಲ್ಲಿ ಇಬ್ಬರಿಬ್ಬರು ಬಡಿಸುತ್ತ ಬರುತ್ತಿದ್ದರೆ- ಅವರು ಹಾಕುತ್ತಾರೆಂದು ಇವರು, ಇವರು ಹಾಕುತ್ತಾರೆಂದು ನನ್ನ ಎಲೆಗೆ ಬಡಿಸದೇ ಹೋಗಿಬಿಡುವುದುಂಟು, ಬುಫೆ ಊಟದಲ್ಲಿ ಉದ್ದದ ಸಾಲಿನಲ್ಲಿ ಖೈದಿಗಳಂತೆ ನಿಂತಿದ್ದಾಗ, ನನ್ನ ಸರತಿ ಬಂದ ಕೂಡಲೇ ಮಸಾಲೆ ದೋಸೆ ಖಾಲಿಯಾಗುವುದೂ ಉಂಟು! ನನ್ನ ಚಪ್ಪಲಿ ಇಟ್ಟಲ್ಲಿ ಇರದೇ ಇನ್ನೆಲ್ಲೋ ಸಿಕ್ಕಿದ್ದು ಅದೆಷ್ಟೋ ಸಲ. ಯಾವುದಾದರೂ ಬ್ಯಾಂಕಿನಲ್ಲಿಯೋ, ಪೋಸ್ಟ್ ಆಫೀಸಿನಲ್ಲಿಯೋ ಗಂಟೆಗಟ್ಟಲೆ ಕಾಯತ್ತು ನಿಂತಿದ್ದರೆ ನನ್ನ ಸರತಿ ಬಂದ ಕೂಡಲೇ ಆಫೀಸರುಗಳು ಕಾಫಿಬ್ರೇಕ್ ಎಂದು ಎದ್ದುಹೋಗುವರು ಅಥವಾ 'ಸಮಯವಾಯಿತು, ನಾಳೆ ಬನ್ನಿ' ಎಂದು ಕ್ಲೋಸ್ ಮಾಡುತ್ತಾರೆ.

● ವೀರೇಶ್.ಕೆ.ಟಿ ಮಾಡ್ಲಾಕನಹಳ್ಳಿ

ಇವೊತ್ತು ಅಮವಾಸೆ ಇದೆ ನೀರು ಹಾಯಿಸಲಿಕ್ಕೆ ಹೋಗಬ್ಯಾಡ್ರಿ, ಅಲ್ಲಿ ಜಾಗ ಸರಿ ಇಲ್ಲ ಅಂತ ನಮ್ಮಮ್ಮ ಎಷ್ಟು ಬಾರಿ ಹೇಳಿದರೂ ನಮ್ಮಪ್ಪ ಕೇಳಲಿಲ್ಲ. 'ಇವೊತ್ತು ಬಿಟ್ಟರೆ, ನಮ್ಮ ಸರ್ತಿ ಬರಬೇಕು ಅಂದರೆ ಹದಿನೈದು ದಿನ ಕಾಯಬೇಕು, ಜೋಳ ಒಣಗಿ ಹೋಗಿದೆ' ಎಂದು ಹೇಳಿ ಕೈಯಲ್ಲೊಂದು ಕೋಲನ್ನು ಹಿಡಿದು ಹೊರಟೇ ಬಿಟ್ಟರು. ನನ್ನ ಕಡೆ ನೋಡಿ ನೀನು ನನ್ನ ಜೊತೆ ಬಾ ಹೋಗೋಣ ಅಂದರು.

ನನಗೆ ಕತ್ತಲೆಂದರೆ ಎಲ್ಲಿಲ್ಲದ ಭಯ! ಒಲ್ಲದ ಮನಸ್ಸಿನಿಂದ ಅಪ್ಪನ ಹಿಂದೆ ಹೆಜ್ಜೆ ಹಾಕಿದೆ. ಪೂರ್ತಿ ಕತ್ತಲು. ಭಯದಿಂದಾಗಿ ಕಾಲು ಕಿತ್ತಿಡಲಾಗುತ್ತಿಲ್ಲ. ಯಾವುದೋ ಪಕ್ಷಿಯೊಂದರ ಕೂಗು ಅಪಾಯದ ಕೆಟ್ಟದಾಗಿ ಕೇಳಿಸಿತು. ಮಾತಿಲ್ಲ, ಖುಷಿಯಿಲ್ಲ, ಕೇವಲ ಹೆಜ್ಜೆಗಳ ಸದ್ದು. ಹೊಲ ತಲುಪಿದ್ದಾಯಿತು. ಮೋಟಾರ್ ಸ್ಟಾರ್ಟ್ ಮಾಡಿ ನೀರು ಹಾಯಿಸುವ ಕಡೆ ಹೊರಟೆವು. ಜೋಳ ಬೆಳೆದು ನಿಂತಿತ್ತು. ದೂರದಲ್ಲಿ ಯಾರೋ ಮಾತನಾಡುತ್ತ ನಮ್ಮ ಕಡೆ ಬರುತ್ತಿದ್ದರು, ಹತ್ತಿರ ಬಂದಾಗ ಗೊತ್ತಾಯಿತು ಪಕ್ಕದ ಹೊಲದ ಸಿದ್ದಣ್ಣ ಮತ್ತು ನಾಗಣ್ಣ ಎಂದು. 'ನಮ್ಮ ಪಂಪ್ ಸೆಟ್ ಆನ್ ಆಗ್ತಾ ಇಲ್ಲ. ಮನೆಗೆ ಹೋಗೋದು ಬೇಡ, ಇವೊತ್ತು ಇಲ್ಲೇ ಇರ್ತೀ' ಅಂದ ಸಿದ್ದಣ್ಣ. 'ನನಗೂ ಅದೇ ಬೇಕಾಗಿತ್ತು. ನೀನು ಬದುವಿನ ಮೇಲೆ ಮಲಗಿಕೋ, ನಾವು ಮೂವರು ನೀರು ಕಟ್ತೀವಿ' ಎಂದರು ನಮ್ಮಪ್ಪ.

'ನಾನು ನಿನ್ನ ಜೊತೆ ಇರ್ತಿ' ಎಂದು ನಾಗಣ್ಣ ಬಂದ. ಇಬ್ಬರೂ ಹೊಲದಲ್ಲೇ ಮಲಗಿದೆವು. ನಿದ್ರೆ ಮೈಯೆನ್ನೆಲ್ಲಾ ಆವರಿಸೋ ಮೊದಲು ನಮ್ಮಿಂದ ಸ್ವಲ್ಪ ದೂರಲ್ಲಿದಲ್ಲಿ ಏನೋ ದೊಪ್ಪನೆ ಬಿದ್ದಂತಹ ಶಬ್ದ! ಆ ಶಬ್ದಕ್ಕೆ ತಕ್ಷಣವೇ ಎಚ್ಚರವಾಯಿತು! ಭಯ ಬಿದ್ದ ನಮಗೆ ಮಾತೆ ಹೊರಡಲಿಲ್ಲ. ಯಾರಾದರೂ ಆತ್ಮಹತ್ಯೆ ಮಾಡಿಕೊಳ್ಳಲು ಅಲ್ಲಿಯೇ ಇದ್ದ ಬಾವಿಗೆ ಹಾರಿರಬಹುದಾ? ಎಂದು ಯೋಚಿಸುವಷ್ಟರಲ್ಲೇ ಮತ್ತೊಂದು ಬಾರಿ ಅದೇ ಶಬ್ದ! 'ಕರಡಿ ಬಾವಿಯಲ್ಲಿ ಬಿದ್ದಿದೆ ಎಲ್ಲರು ಬರ್ರಿ' ಎಂದು ಜೋರಾಗಿ ಕೂಗಿದ ಸಿದ್ದಣ್ಣ. ಕೆಲವೇ ನಿಮಿಷಗಳಲ್ಲಿ ಅಕ್ಕ-ಪಕ್ಕದ ಹೊಲದವರು ಬಂದು ಸೇರಿದರು.

ಅಲ್ಲಿಯೇ ಇದ್ದ ತೆಂಗಿನ ಗರಿಗಳಿಗೆ ಬೆಂಕಿ ಹಚ್ಚಿಕೊಂಡು ಬಾವಿ ಸುತ್ತ ನಿಂತೆವು. ಬೆಂಕಿಯ ಬೆಳಕಿಗೆ ಯಾವೊಂದು ವಸ್ತು ಸಹ ಅಡಗಿಕೊಂಡಿರಲು ಸಾಧ್ಯವಿರಲಿಲ್ಲ. ಆತ್ಮಹತ್ಯೆ ಮಾಡಿಕೊಳ್ಳಲು ಬಂದ ವ್ಯಕ್ತಿಯಾಗಲಿ, ಕರಡಿಯಾಗಲಿ ಕಾಣಿಸಲಿಲ್ಲ. ಹಾಗಾದರೆ ಬಾವಿಗೆ ಬಿದ್ದಿದ್ದು ಏನು ಅಂತಾ? ಅಮಾವಾಸ್ಯೆ ರಾತ್ರಿ ಇಲ್ಲೆಲ್ಲಾ ದೆವ್ವಗಳು ಸಂಚರಿಸಬಹುದು ಎಂದು ಹಿಂದಿನವರು ಹೇಳುತ್ತಿದ್ದರು. ಕೆಲವು ಹಳೆಯ ತಲೆಗಳು, 'ಅಮಾಸಿ ರಾತ್ರಿ ದೆವ್ವ ಓಡಾಡೋದನ್ನ ನಾನೇ ಕಂಡಿದೀನಿ' ಎಂದು ಬುರುಡೆ ಬಿಡುತ್ತಲೂ ಇದ್ದರು! ನಾವು ಮಕ್ಕಳು ಅದನ್ನು ನಂಬಿ, ಕತ್ತಲು ಎಂದರೆ ವಿಪರೀತ ಹೆದರಿಕೊಂಡಿದ್ದೆವು. ಈಗ, ಈ ಕತ್ತಲ ರಾತ್ರಿಯಲ್ಲಿ ಬಾವಿಯಲ್ಲಿ ಆದ ಶಬ್ದವು ಒಂದು ದೆವ್ವದ ಕಿತಾಪತಿ ಎಂದು ನಾನೂ, ನನ್ನ ಗೆಳೆಯನೂ ಅಂದುಕೊಂಡು, ಇನ್ನಷ್ಟು ಹೆದರಿಹೋದೆವು.

ಒಬ್ಬರಿಗೊಬ್ಬರು ಮಾತನಾಡುತ್ತಿರುವಾಗ ಮತ್ತದೇ ಶಬ್ದ! ಏನಿರಬಹುದು ಎಂದು ಯೋಚಿಸುವಷ್ಟರಲ್ಲೇ 'ಹೇ, ಎಲ್ಲರೂ ಇಲ್ಲಿ ಬರ್ರಿ' ಎಂದು ನಮ್ಮಪ್ಪ ಜೋರಾಗಿ ಕೂಗಿದರು. ಎಲ್ಲರು ಬೆಂಕಿ ಹಚ್ಚಿದ ಗರಿಯನ್ನು ಹಿಡಿದುಕೊಂಡು ಅಲ್ಲಿಗೆ ಓಡಿದೆವು.

ಹೋಗಿ ನೋಡಿದರೆ –ಬಾವಿಯ ಪಕ್ಕದಲ್ಲೆ ಇದ್ದ ಕಾಲುವೆ ಸ್ವಲ್ಪ ಹೊಡೆದು ಹೋಗಿತ್ತು, ನೀರು ಬಾವಿಗೆ ಸುರಿದ ಪರಿಣಾಮ, ಬಾವಿಯ ಗಡ್ಡೆ ಕುಸಿದು ಬಿದ್ದಿದ್ದರಿಂದ ಈ ರೀತಿ ಶಬ್ದವಾಗಿತ್ತು. ಬೆಂಕಿ ಹಚ್ಚಿದ ಗರಿಗಳನ್ನು ಬಾವಿಗೆ ಎಸೆದು ಎಲ್ಲರೂ ನಗುತ್ತಾ ಮನೆಯ ಹಾದಿ ಹಿಡಿದೆವು.

● ಎಸ್.ಪಿ.ವಿಜಯಲಕ್ಷ್ಮಿ

ಸದ್ದಿಲ್ಲದ ಸಾಹಿತ್ಯಸೇವೆ

ಫೇಸ್‌ಬುಕ್ ಎಂಬ ಆಲದಡಿ ವಿಶ್ವವೇ 'ಗುಂಪು'ಗೂಡಿ ಕ್ರಿಯಾಶೀಲವಾಗಿದೆ ಇಂದು. ಇಂತಹ ಗುಂಪೊಂದರ ಯಶೋಗಾಥೆ, ಮತ್ತದನ್ನು ಯಶಸ್ವಿಯಾಗಿ ನಡೆಸುತ್ತಾ, ಸಾಹಿತ್ಯ ಸೇವೆ ಮಾಡುತ್ತಿರುವವರ ವಿಚಾರ ನಿಮಗೆ ಗೊತ್ತೆ?

ಪುಸ್ತಕ ಅವಲೋಕನ, ಓದು ಬರಹಗಳ ಸುತ್ತಮುತ್ತ'ಎಂಬ ಗುಂಪಿನ ಸಂಸ್ಥಾಪಕರು ಸಾಹಿತ್ಯಪ್ರೇಮಿ ದಂಪತಿಗಳಾದ ದೇವಿಶ್ರೀ ಮತ್ತು ಉಮಾಶಂಕರ್. ಇವರೊಂದಿಗೆ ನಿರ್ವಾಹಕರು, ಅವರಲ್ಲಿ ಮುಂಚೂಣಿಯಲ್ಲಿದ್ದಾರೆ, 'ವೀಣಾ ನಾಯಕ್' ಎಂಬ 'ಅಕ್ಷರ ದಾಸೋಹಿ'. ಬ್ಯಾಂಕೊಂದರ ಉದ್ಯೋಗಿಯಾಗಿ ನಿವೃತ್ತವಾಗಿರುವ ವೀಣಾ ಅವರಿಗೆ ಸಹೃದಯ ಪತಿ, ಮಕ್ಕಳು-ಸೊಸೆ-ಅಳಿಯ-ಮೊಮ್ಮಕ್ಕಳು ಎಲ್ಲರೂ ಇರುವ ಸಂತೃಪ್ತ ಕುಟುಂಬವಿದೆ. ಉದ್ಯೋಗ- ಸಂಸಾರದ ನಡುವೆಯೂ ಇಂಗ್ಲೀಷ್ ಎಂ.ಎ. ಕನ್ನಡ 'ರತ್ನ'ಪರೀಕ್ಷೆ, ಹಿಂದಿಯ 'ಪ್ರವೀಣ್'ಪರೀಕ್ಷೆ ಕಟ್ಟಿ ಉತ್ತಮವಾಗಿ ತೇರ್ಗಡೆಯಾದವರು. ಸಾಹಿತ್ಯವೆಂದರೆ ಅಪಾರ ಪ್ರೀತಿ; ಪುಸ್ತಕಗಳನ್ನು ಕೊಂಡು ಓದುತ್ತಾ, ಸಂಗ್ರಹಿಸಿರುವ ಪುಸ್ತಕಗಳು 5000ವನ್ನೂ ದಾಟಿದೆ. ನಿವೃತ್ತರಾದ ಮೇಲೆ ಫೇಸ್ ಬುಕ್ ಗುಂಪೊಂದರಲ್ಲಿ ಓದಿದ ಪುಸ್ತಕಗಳ ಪರಿಚಯವನ್ನು ಮಾಡುತ್ತಾ ಬಂದವರು ವೀಣಾ. ಅವರ ಭಾಷೆಯ ಮೇಲಿನ ಹಿಡಿತ, ಶೈಲಿ, ತಪ್ಪಿರದ ಬರವಣಿಗೆ, ಪುಸ್ತಕಗಳ ವಿಶ್ಲೇಷಿಸುವ ಜಾಣ್ಮೆ ಎಲ್ಲವನ್ನೂ ನೋಡುತ್ತಿದ್ದರೆ ಸ್ವಂತ ಬರವಣಿಗೆ ಕ್ಷೇತ್ರಕ್ಕೆ ಇಳಿದಿದ್ದಿದ್ದರೆ, ಖಂಡಿತಾ ಉತ್ತಮ ಲೇಖಕಿಯಾಗುತ್ತಿದ್ದರು. ಆದರೆ, ಸ್ವಾರ್ಥಕ್ಕಿಂತ ಪರರುದ್ಧಾರವೇ ಗುರಿಯಾಗಿ 'ಪುಸ್ತಕ ಅವಲೋಕನ' ಗುಂಪಿನ ನಿರ್ವಾಹಕರಲ್ಲೊಬ್ಬರಾದರು. ಕನ್ನಡ-ಸಾಹಿತ್ಯಸೇವೆಯ ಪ್ರೇಮದಿಂದ, ಇತರರನ್ನು ಓದು-ಬರಹದಲ್ಲಿ ಹುರಿದುಂಬಿಸುವ ಕಾಯಕಕ್ಕೆ ಟೊಂಕಕಟ್ಟಿದರು. ಸಾಹಿತ್ಯ ಸೇವೆ ಎಂದರೆ ಪುಸ್ತಕ ಬರೆಯುವುದು ಮಾತ್ರ ಅಲ್ಲ ಎನ್ನುವುದು ಈ ಗುಂಪಿಗೆ ಬಂದರೆ ಅರ್ಥವಾಗುತ್ತದೆ. ಲೇಖಕರು ಬರೆದು ಪ್ರಕಟಿಸಿದರೂ, ಇವುಗಳ ಸಾರ್ಥಕ್ಯವಿರುವುದು ಕೊಂಡು ಓದಿ, ಮೌಲ್ಯಗಳರಿತು, ಬದುಕಿಗೆ ಒರೆಹಚ್ಚಿಕೊಂಡಾಗ, ಮನರಂಜನೆ ಕಂಡಾಗ ಹಾಗಾಗಿ ಪುಸ್ತಕ ಓದಿಸುವ-ಬರೆಸುವ ದೀಕ್ಷೆ ತೊಟ್ಟು, ಪ್ರೋತ್ಸಾಹ ಕೊಟ್ಟು 'ಅಕ್ಷರ ದಾಸೋಹಿ'ಯಾದರು ವೀಣಾ. ಈ ಗುಂಪಿನಲ್ಲಿ ಪುಸ್ತಕ ಓದಿ ಪರಿಚಯಿಸುವ ಸ್ಪರ್ಧೆಗಳಿರುತ್ತವೆ. ಅವರು ಕೊಡುವ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನಾಯ್ದು ಓದಿ, ಅದರ ಪರಿಚಯವನ್ನು, ತಮ್ಮ ಅನಿಸಿಕೆಯನ್ನು ಬರೆದ ಲೇಖನವನ್ನು ಈ ಗುಂಪಿನಲ್ಲಿ ಹಂಚಿದರಾಯ್ತು. ಒಂದೊಂದು ಸ್ಪರ್ಧೆಯಲ್ಲೂ ಪುಸ್ತಕಗಳ ಬಹುಮಾನವಿರುತ್ತದೆ. ಬಳಗದ ನಿರ್ವಾಹಕರೊಂದಿಗೆ ಸಿಂಹಪಾಲು ಶ್ರಮ ವೀಣಾರದೇ.

ಪ್ರತಿ ತಿಂಗಳೂ ನಡೆಯುವ 2-3 ಸ್ಪರ್ಧೆಗಳು, ಒಂದೊಂದರಲ್ಲೂ 40-50 ಬಹುಮಾನಗಳೆಂದು ಎರಡೂವರೆ ವರ್ಷಗಳಿಂದ ನಡೆಯುತ್ತಾ ಬಂದಿರುವ ಈ ಸಾಹಿತ್ಯ ದಾಸೋಹ ದಿನದಿನಕ್ಕೂ ಹೆಚ್ಚುತ್ತಿದೆ. ಹಳೆಯ-ಹೊಸ ಸಾಹಿತಿಗಳ ಹೆಸರಿನಲ್ಲಿ ಅಭಿಯಾನಗಳು ನಡೆಯುತ್ತಲೇ ಹೋಗಿ, ಮರೆತಿದ್ದ ಸಾಹಿತಿಗಳೂ ಮುನ್ನೆಲೆಗೆ ಬಂದಿದ್ದಾರೆ. ವೀಣಾರ ನಿರಂತರ ಆಲೋಚನೆಗಳ ಫಲವಾಗಿ ಇಂದು ಈ ಬಳಗದ ಓದುಗ ಸದಸ್ಯರ ಸಂಖ್ಯೆ 18000, ಬರೆಯುವವರು ನೂರಾರು ಎನ್ನುವಲ್ಲಿ ವೀಣಾರ ಪಾತ್ರ ಬಹುಮುಖ್ಯವಾಗಿದೆ.

ಅಕ್ಷರ ದಾಸೋಹಕ್ಕೆ ಕೊಡುಗೆ

ವೀಣಾ ಅವರು ತಮ್ಮ ಪಿಂಚಣಿಯ ಒಂದು ಪಾಲನ್ನು ಈ ಅಕ್ಷರ ದಾಸೋಹಕ್ಕೇ ಮುಡಿಪಿಟ್ಟಿದ್ದಾರೆ. ಮೇಲಿನೆಲ್ಲ ಅಭಿಯಾನಗಳಲ್ಲಿ ಧಾರಾಳ ಸಂಖ್ಯೆಯ ಪುಸ್ತಕಗಳನ್ನು ತಾವೇ ಕೈಯ್ಯಾರೆ ಕೊಂಡುಕೊಡುವುದಲ್ಲದೆ, ಕುಟುಂಬದ ವೈಯ್ಯಕ್ತಿಕ ಸಂತೋಷ ಸಮಾರಂಭಗಳಿಗೂ ಸ್ಪರ್ಧೆ, ಬಹುಮಾನವೆಂದು ನೂರಾರು ಪುಸ್ತಕಗಳನ್ನು ಕೊಂಡು, ವರ್ಷದೆಲ್ಲ ಸ್ಪರ್ಧೆಯ ಬಹುಮಾನಿತರಿಗೂ ಅಂಚೆಯ ಮೂಲಕ ಪುಸ್ತಕ ರವಾನಿಸುವುದು ವೀಣಾರೇ. ವೀಣಾರ ಈ ಸಮಾಜಮುಖಿ ದಾಸೋಹವನ್ನು ಕಾಣುತ್ತಿದ್ದ ಗುಂಪಿನ ಅನೇಕರೀಗ ಸ್ವಯಂಪ್ರೇರಿತರಾಗಿ ಪುಸ್ತಕ ಕೊಡುವ ಪ್ರಾಯೋಜಕರಾಗಿದ್ದಾರೆ. ವೀಣಾರ ನಿವೃತ್ತ ಬ್ಯಾಂಕ್ ಮ್ಯಾನೇಜರ್ ಪತಿ ಸಹೃದಯತೆಯಿಂದ ಪತ್ನಿಯ ಈ ಅಕ್ಷರ ದಾಸೋಹದಲ್ಲಿ ಕೈಜೋಡಿಸಿದ್ದಾರೆ.

ಸಾಹಿತ್ಯ ಸ್ಪರ್ಧೆ ನಡೆಸಿ, ಬಹುಮಾನ ರೂಪದಲ್ಲಿ ಪುಸ್ತಕ ಕೊಡಲು ತುದಿಗಾಲಲ್ಲಿ ನಿಲ್ಲುವ ವೀಣಾ ನಾಯಕ್ ಅವರು ಅಕ್ಷರಕ್ಷೇತ್ರದ ಅಚ್ಚರಿಯೇ ಹೌದು. ಈಗ, ತಾವೇ 'ಕನ್ನಡ ನಿತ್ಯೋತ್ಸವ' ಎನ್ನುವ ಹೊಸ ಸ್ಪರ್ಧೆಯಿಟ್ಟು, ವರ್ಷದ ಮುನ್ನೂರೈವತ್ತು ದಿನವೂ ಪುಸ್ತಕ ಓದಿ, ಪರಿಚಯಿಸಿ, ಪುಸ್ತಕಬಹುಮಾನ ಪಡೆಯಿರೆನ್ನುವ ಅಕ್ಷರ ದಾಸೋಹ ಮಾಡುತ್ತಾ, ಗುಂಪಿನ ತುಂಬಾ ಪುಸ್ತಕಗಳು ಹರಿದಾಡುವಂಥ ಚಮತ್ಕಾರವೆಸಗಿದ್ದಾರೆ. ಸಾಹಿತ್ಯ ರಚನೆ, ಅಭಿರುಚಿ ಹೆಚ್ಚಿಸುವ ಗುಂಪನ್ನು ಸೊರಗಲುಬಿಡದೆ ಬಲಶಾಲಿಯಾಗಿಸುತ್ತ, ಪ್ರಚಾರ ಬಯಸದೆ ಶ್ರಮಿಸುತ್ತಿರುವ ವೀಣಾ ಅವರ 'ತನು-ಮನ-ಧನ' ಸೇವೆಯಿಂದ ಅವರು ಈ ಗುಂಪಿನ 'ಪುಸ್ತಕ ತಾಯಿ'ಯಾಗಿದ್ದಾರೆ!

ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ ● ಕೆ.ಶಿವಪ್ರಸಾದ್

ಇದು ಇಲ್ಲಿ ಮತ್ತು ಈಗ

ಗೀತೆಯು ನಾವು ಏನು ಇದ್ದೇವೆ ಎಂಬುದರ ಬಗ್ಗೆ ಇದೆ. ಸತ್ಯವನ್ನು ತಿಳಿಯುವದರೊಂದಿಗೆ ನಾವು ಸತ್ಯವಂತರೂ ಆಗಿರಬೇಕೆಂದಂತಿದೆ. ಸದ್ಯದ ಸಮಯದಲ್ಲಿ ನಾವು ಇದರಲ್ಲಿ ಕೇಂದ್ರೀಕೃತವಾದಾಗ ಇದು ಸಂಭವಿಸುತ್ತದೆ. ರಾಜ್ಯದ ಆಸೆಯಿಂದ ತಾನು ಮಿತ್ರರನ್ನು, ಸಂಬಂಧಿಗಳನ್ನು ಹಿರಿಯರನ್ನು ಹಾಗೂ ಗುರುಗಳನ್ನು ಕೊಂದರೆ ಜಗತ್ತಿನ ದೃಷ್ಟಿಯಲ್ಲಿ ನನ್ನ ವ್ಯಕ್ತಿತ್ವ ಏನಾಗಬಹುದು ಎಂಬುದೇ ಅರ್ಜುನನ ದ್ವಂದ್ವಕ್ಕೆ ಮೂಲಭೂತ ಕಾರಣವಾಗಿದೆ. ತಾರ್ಕಿಕವಾಗಿ ಇದ್ದು ನಿಜವೆಂದು ತೋರುತ್ತದೆ ಹಾಗೂ ನಾವು ಗೀತೆಯಲ್ಲಿ ಹೇಳಿದ ಹಾಗೆ ಜೀವಿಸಬೇಕಾದರೆ ಈ ತೊಡಕನ್ನು ನಿವಾರಿಸಿಕೊಳ್ಳಬೇಕಿದೆ. ಅರ್ಜುನನ ನಿಜವಾದ ದ್ವಂದ್ವ ಇರುವದು ಅವನ ಭವಿಷ್ಯದ ಬಗ್ಗೆ. ಆದರೆ ನಮ್ಮ ಕರ್ಮ ಮಾಡುವ ಹಕ್ಕು ನಮಗಿದೆಯೇ ಹೊರತು ಕರ್ಮಫಲದ ಬಗ್ಗೆ ಇಲ್ಲ ಯಾಕೆ ? ಕರ್ಮವನ್ನು ಈಗ ಮಾಡಿದರೆ ಅದರ ಫಲವು ಮುಂದೆ ಸಿಗುತ್ತದೆ. ಅರ್ಜುನನ ಹಾಗೆ ನಾವು ಪರಿಣಾಮಪರ ಕ್ರಿಯೆಗಳನ್ನು ಮಾಡುವ ಪ್ರಯತ್ನ ಮಾಡಬೆಕು. ಕೆಲವೊಮ್ಮೆ ಆಧುನಿಕ ಜೀವನವು ಭವಿಷ್ಯದಲ್ಲಿಯ ಪರಿಣಾಮವನ್ನು ನಾವು ನಿಯಂತ್ರಿಸಬಹುದು ಎಂಬ ಭಾವನೆಯನ್ನುಂಟು ಮಾಡುತ್ತದೆ. ಆದರೆ ವಾಸ್ತವವಾಗಿ ಭವಿಷ್ಯವು ನಮ್ಮ ನಿಯಂತ್ರಣಕ್ಕೊಳಪಡದ ಎಷ್ಟೋ ಸಾಧ್ಯತೆಗಳ ಸಂಯೋಜನೆಯಾಗಿದೆ. ವರ್ತಮಾನದಲ್ಲಿ ಭೂತಕಾಲದ ಬಗ್ಗೆ ಚಿಂತಿಸುತ್ತ, ಭವಿಷ್ಯದ ಬಗ್ಗೆ ಯೋಚನೆಮಾಡುತ್ತ ಇರುವ ನಮ್ಮ ಅಹಂಕಾರವೇ ಎಲ್ಲ ದ್ವಂದ್ವಗಳನ್ನು ಸೃಷ್ಟಿಸುತ್ತದೆ. ಸಮಯದ ವಿಷಯಕ್ಕೆ ಬರುವದಾದರೆ ತಾರಾಪುಂಜ, ನಕ್ಷತ್ರಗಳು ಮತ್ತು ಗ್ರಹಗಳನ್ನೊಳಗೊಂಡ ಇಡೀ ವಿಶ್ವವೇ ಪರಿಭ್ರಮಣಕ್ಕೊಳಪಟ್ಟಿದೆ. ಮೂಲಭೂತವಾಗಿ ಅದು ಸ್ಥಿರಕಕ್ಷೆ ಕೇಂದ್ರಬಿಂದು ಆಗಿದೆ ಮತ್ತು ಪರಿ ಭ್ರಮಣ ರಚನೆಯನ್ನು ಹೊಂದಿದೆ.

ಕೇಂದ್ರ ಬಿಂದು ಎಂದೂ ಚಲಿಸುವದಿಲ್ಲ ಮತ್ತು ಈ ಕೇಂದ್ರಬಿಂದು ಇಲ್ಲದೇ ಗಾಲಿಯು ತಿರುಗುವದಿಲ್ಲ. ಪ್ರತಿ ಚಂಡಮಾರುತಕ್ಕೂ ನಿಶ್ಯಬ್ದ ಕೇಂದ್ರಬಿಂದು ಇರುತ್ತದೆ. ಅದಿಲ್ಲದಿದ್ದರೆ ಚಂಡಮಾರುತವು ವೇಗವನ್ನು ಪಡೆದುಕೊಳ್ಳುವದಿಲ್ಲ. ಕೇಂದ್ರದಿಂದ ಅದು ಹೆಚ್ಚು ದೂರವಿದ್ದಷ್ಟು ಅದರ ತೀವ್ರತೆ ಹೆಚ್ಚಾಗುತ್ತದೆ. ಹಾಗೆಯೇ ನಮಗೂ ಕೂಡ ಒಂದು ಶಾಂತವಾದ ಕೇಂದ್ರಬಿಂದು ಇದೆ. ಅದೇ ಅಂತರಾತ್ಮ ಮತ್ತು ಪ್ರಕ್ಷುಬ್ದ ಜೀವನವಾಗಿದೆ. ಅದಕ್ಕೆ ಅನೇಕ ಗುಣಲಕ್ಷಣಗಳಿವೆ ಮತ್ತು ಅದು ಸುತ್ತಲೂ ತಿರುಗುತ್ತದೆ. ಅರ್ಜುನನ ದ್ವಂದ್ವ ಇರುವದು ಅಂಥ ಒಂದು ಗುಣಲಕ್ಷಣದ ಬಗ್ಗೆ ತನ್ನ ವ್ಯಕ್ತಿತ್ವದ ಬಗ್ಗೆ ಅವನಂತೆಯೇ ನಾವು ಕೂಡ ನಮ್ಮ ಅಂತರಾತ್ಮದ ಬಗ್ಗೆ ಗಮನ ಕೊಡದೇ ಇತರರ ದೃಷ್ಟಿಯಿಂದ ನಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತೇವೆ. ಗೀತೆಯ ಪ್ರಕಾರ ಇರುವ ಕಾಲ ವರ್ತಮಾನ ಮತ್ತು ಇರುವ ಸ್ಥಳ ಅಂತರಾತ್ಮ.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
16.11.2024 ಶನಿವಾರ
vishwavani.news

ದಿನ ದರ್ಶಿಕೆ

ಕಾರ್ತಿಕ ಮಾಸ, ಕೃಷ್ಣ ಪಕ್ಷ, ಪ್ರತಿಪದ ತಿಥಿ, ಕೃತಿಕಾ ನಕ್ಷತ್ರ, ಪರಿಘ ಯೋಗ, ಬಾಲವ ಕರಣ, ವೃಷಭ ಲಗ್ನ, ತುಲಾ ರಾಶಿ, ಹೇಮಂತ ಋತು, ದಕ್ಷಿಣಾಯನ, ಕ್ರೋಧಿನಾಮ ಸಂವತ್ಸರ, ವಿಕ್ರಮಶಕ ಸಂವತ್ಸರ

ಮನೆಮದ್ದು

ಪ್ರತಿನಿತ್ಯ ಸ್ವಲ್ಪ ಸಾಸಿವೆಕಾಳುಗಳನ್ನು ತೆಗೆದುಕೊಂಡು ಚೆನ್ನಾಗಿ ಜಗಿದು ತಿನ್ನಿರಿ. ಹೀಗೆ ಮಾಡುವುದರಿಂದ ಜೀರ್ಣಕ್ರಿಯೆ ಮತ್ತು ಅದಕ್ಕೆ ಸಂಬಂಧಿಸಿದ ಸಮಸ್ಯೆಗಳು ನಿವಾರಣೆಯಾಗುವುದು.

ಸೌಂದರ್ಯ ಸೂತ್ರ

ಎರಡು ಚಮಚ ತುಪ್ಪವನ್ನು ಒಂದು ಚಮಚ ಆಲಿವ್ ಎಣ್ಣೆಯೊಂದಿಗೆ ಬೆರೆಸಿ, ಕೂದಲಿಗೆ ಹಚ್ಚಿ, ರಾತ್ರಿಯಿಡೀ ಬಿಡಿ. ಇದು ಕೂದಲಿಗೆ ಕಂಡೀಶನರ್‌ನಂತೆ ಕೆಲಸ ಮಾಡುತ್ತದೆ. ಇದರಲ್ಲಿರುವ ಅತ್ಯಧಿಕ ವಿಟಮಿನ್ ಇ ಕೂದಲನ್ನು ಮೃದುವಾಗಿಸುತ್ತದೆ.

ದಿನ ಭವಿಷ್ಯ

ಮೇಷ: ಹಣಕಾಸಿನ ಹರಿವಿಗೆ ಇದ್ದ ಅಡೆತಡೆಗಳು ನಿವಾರಣೆ, ವಾಕ್ ಚಾತುರ್ಯದಿಂದ ಉನ್ನತ ಅಧಿಕಾರಿಗಳ ಮನಸ್ಸು ಗೆಲ್ಲುವಿರಿ.

ವೃಷಭ: ಬುದ್ಧಿ ಚಾತುರ್ಯಕ್ಕೆ ಎಂತಹವರೂ ತಲೆ ಬಾಗುವರು. ಜೀವನದಲ್ಲಿನ ಕಷ್ಟಗಳ ಮೇಲೆ ಜಯ. ಹಣಕಾಸಿನ ಸ್ಥಿತಿ ಉತ್ತಮ.

ಮಿಥುನ: ನಂಬಿದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದರೆ ಕ್ರಮೇಣ ತೊಂದರೆಗೆ ದಾರಿ ಆಗುವುದು. ಕೆಲವು ಅಡೆತಡೆಗಳು ಉಂಟಾಗುವ ಸಾಧ್ಯತೆ.

ಕಟಕ: ಉತ್ತಮ ಸ್ನೇಹಿತರ ಬೆಂಬಲ ನಿಮಗೆ ದೊರೆಯುವುದು. ಬಾಳಸಂಗಾತಿಯೊಡನೆ ಚರ್ಚಿಸಿ ಸಲಹೆ ಪಡೆಯಲು ಸಕಾಲವಾಗಿದೆ

ಸಿಂಹ: ಸಣ್ಣಪುಟ್ಟ ವಿಷಯಗಳಿಗೆ ಆಪ್ತರ ದೂರ ಮಾಡುವುದು ಸರಿಯಲ್ಲ. ಆಡುವ ಮಾತುಗಳು ಇತರರ ಮನ ನೋಯಿಸುವುದು ಎನ್ನುವ ಅರಿವಿರಲಿ.

ಕನ್ಯಾ: ಸಂಗಾತಿಯ ಅಸಹಕಾರ ಮನೋಚಿಂತನೆಯನ್ನು ಹೆಚ್ಚಿಸುವುದು. ಹಣಕಾಸಿನ ತೊಂದರೆ ಇರುವುದಿಲ್ಲ. ಗಣಪತಿಯನ್ನು ಪ್ರಾರ್ಥಿಸಿ.

ತುಲಾ: ಬಂಧುಗಳೇ ನಿಮ್ಮ ಕಾರ್ಯವೈಖರಿಯನ್ನು ಟೀಕಿಸುವರು. ನಿಮಗಿರುವ ಆದರಗಳನ್ನು ಕಂಡು ಇತರರು ಹೊಟ್ಟೆಕಿಚ್ಚು ಪಡುವರು.

ವೃಶ್ಚಿಕ: ನಿಮ್ಮ ಮಕ್ಕಳ ಮೇಲೆ ಇಟ್ಟಿರುವ ಭರವಸೆ ಕಾರ್ಯರೂಪಕ್ಕೆ ಬರುವುದು. ಸಾಲದ ತೀರುವಳಿ ಅನುಕೂಲಕರ.

ಧನು: ಭಗವಂತನ ಕೃಪೆ ಇದ್ದಲ್ಲಿ ನಿಮ್ಮನ್ನು ಜನರು ಹಾಡಿ ಕೊಂಡಾಡುವರು. ವ್ಯಾಪಾರ, ವ್ಯವಹಾರ ಎಂದರೆ ಲಾಭ ನಷ್ಟ ಇದ್ದದ್ದೆ.

ಮಕರ: ಆದಾಯ ಹೆಚ್ಚಾದರೂ ವ್ಯಯವೂ ಜಾಸ್ತಿ. ಆದರೂ ಮುಂದೆ ಒಳಿತಾಗುವುದು. ಯಾರಾದರೂ ದೂರು ಹೇಳಿದರೆ ನಕ್ಕು ಸುಮ್ಮನಾಗಿ.

ಕುಂಭ: ಮಾತು ಬಲ್ಲವನಿಗೆ ಜಗಳವಿಲ್ಲ ಎಂದರು ಹಿರಿಯರು. ನೀವಾಡುವ ಮಾತುಗಳು ಮತ್ತೊಬ್ಬರಿಗೆ ನೋವನ್ನುಂಟು ಮಾಡುವುದು.

ಮೀನ: ನಿಮ್ಮ ಬುದ್ಧಿ ಬಲದಿಂದ ಪದೋನ್ನತಿ ಸಿಗುವುದು. ಓದು ಮುಂದುವರಿಕೆಯ ಬಗ್ಗೆ ಚಿಂತನೆ ನಡೆಸುವಿರಿ. ಆರೋಗ್ಯದ ಕಡೆ ಗಮನ ಇರಲಿ.

● ಕೆ.ಬಿ.ಸಂತೋಷ್ ಗುರೂಜಿ

ಇದೇ ರೀತಿಯಲ್ಲೇ ಸರ್ಫ್ ಮಾಡಲಾಗುತ್ತದೆ

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಯಾವ ನದಿಯ ದಡದಲ್ಲಿ, ಪಶ್ಚಿಮ ಬಂಗಾಳ ಸರಕಾರವು ಚಹಾ ಪಾರ್ಕ್ ಅನ್ನು ಅಭಿವೃದ್ಧಿಪಡಿಸಲು ಯೋಜಿಸಿದೆ?

- ಎ. ಹೂಗ್ಲಿ
- ಬಿ. ಬೃಹ್ಮಪುತ್ರಾ
- ಸಿ. ಪಿನಾಕಿನಿ
- ಡಿ. ಗಂಗಾ

ಉತ್ತರ: ಎ. ಹೂಗ್ಲಿ

ಮಾಹಿತಿ

ಪಶ್ಚಿಮ ಬಂಗಾಳ ಸರಕಾರವು ಕೋಲ್ಕತ್ತಾ ಬಳಿಯ ಹೂಗ್ಲಿ ನದಿಯ ದಡದಲ್ಲಿ 10-12 ಎಕರೆ ಪ್ರದೇಶದಲ್ಲಿ ಟೀ ಪಾರ್ಕ್ ಅನ್ನು ಅಭಿವೃದ್ಧಿಪಡಿಸಲು ಯೋಜಿಸಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತಮ್ಮ ಮಧ್ಯಪ್ರಾಚ್ಯ ಭೇಟಿಯ ಸಂದರ್ಭದಲ್ಲಿ ಗಮನಿಸಿದ ದುಬೈನ ಮಾದರಿಗಳಿಂದ ಪ್ರೇರಿತವಾದ ರಫ್ತು-ಆಧಾರಿತ ಚಹಾ ಸಂಸ್ಕರಣೆ ಮತ್ತು ಪ್ಯಾಕೆಜಿಂಗ್ ಸೌಲಭ್ಯವನ್ನು ಸ್ಥಾಪಿಸುವ ಗುರಿಯನ್ನು ಇದು ಹೊಂದಿದೆ. ಕೋಲ್ಕತ್ತಾ ಬಂದರಿನ ಸಂಪರ್ಕವನ್ನು ಮೌಲ್ಯವರ್ಧನೆ ಮಾಡುವ ಮೂಲಕ ಡಾರ್ಜಿಲಿಂಗ್ ಚಹಾ ರಫ್ತುಗಳನ್ನು ಹೆಚ್ಚಿಸಲು ಈ ಉಪಕ್ರಮವು ಪ್ರಯತ್ನಿಸುತ್ತದೆ. ಟೆರೇಸ್ ಚಹಾ ತೋಟಗಳಿಗೆ ತಂತ್ರಜ್ಞಾನವನ್ನು ನವೀಕರಿಸುವಲ್ಲಿ ದೊಡ್ಡ ಪ್ರಮಾಣದ ಹೂಡಿಕೆಯನ್ನು ಸಕ್ರಿಯಗೊಳಿಸುವ ಪ್ರಸ್ತಾಪವನ್ನು ಚಹಾ ಉದ್ಯಮದ ಮಧ್ಯಸ್ಥಗಾರರು ಸ್ವಾಗತಿಸಿದ್ದಾರೆ.

ಕೃಷ್ಣನ ನೆನೆದರೆ ಕಷ್ಟ ಹತ್ತಿರವೂ ಸುಳಿಯಲ್ಲ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದು ಊರಿನಲ್ಲಿ ಒಬ್ಬ ಬಡ ಗುರುಗಳು ಇದ್ದರು. ಬಡತನದಲ್ಲೇ ತಮ್ಮ ಶಿಷ್ಯರನ್ನು ಸಹ ಸಾಕುತ್ತಿದ್ದರು. ಕಷ್ಟದ ಸಮಯ ಮನೆಯಲ್ಲಿ ಶಿಷ್ಯರಿಗೆ ಒಂದು ಹೊತ್ತಿನ ಊಟಕ್ಕೂ ದುಸ್ತರವಾಗಿತ್ತು, ಒಂದಿಷ್ಟೂ ಅಡುಗೆಗೆ ಬಳಸಲಾಗುವ ಪದಾರ್ಥಗಳಿರಲಿಲ್ಲ.

ಗುರುಗಳು ಬಹಳ ನೋವಿನಿಂದ ದೇವರ ಮುಂದೆ ಕುಳಿತು ಭಗವದ್ಗೀತೆಯ. 'ಅನನ್ಯಾಶ್ಚಿಂತಯಂತೋ ಮಾಮ್ ಯೇ ಜನಾಹ ಪರ್ಯುಪಾಸತೇ' ಈ ಶ್ಲೋಕವನ್ನು ಭಾರವಾದ ಹೃದಯದಿಂದ ಓದುತ್ತಿದ್ದರು. ಅದೇ ಸಮಯಕ್ಕೆ ಅವರ ಪತ್ನಿ ಬಂದು, ನೋಡಿ ಮನೆಯಲ್ಲಿ ಒಂದು ಕಾಳು ಅಕ್ಕಿ ಇಲ್ಲ. ದವಸಧಾನ್ಯಗಳೆಲ್ಲ ಖಾಲಿಯಾಗಿದೆ. ಹೇಗಾದರೂ ಇಂದು ನೀವು ಆಹಾರ ಸಾಮಗ್ರಿಗಳನ್ನು ತರಲೇಬೇಕು ಎಂದು ಅವರನ್ನು ಅಂಗಡಿಗೆ ಹೊರಡಿಸಿದರು. ಗುರುಗಳಿಗೋ ಕೆಟ್ಟ ಮುಜುಗರ ಯಾರನ್ನು ಎಂದು ಕೈ ನೀಡಿ ಬೇಡಿದವರಲ್ಲ ಬಾಯಿ ಬಿಟ್ಟು ಕೇಳಿದವರಲ್ಲ. ಈಗ ನಾನು ಕೈಚಾಚಿ ಕೇಳುವಂಥ ಪರಿಸ್ಥಿತಿಯನ್ನು ತಂದುಬಿಟ್ಟೆಯಲ್ಲ ಎಂದು, ಓದುತ್ತಿದ್ದ ಭಗವದ್ಗೀತೆಯ ಶ್ಲೋಕದ ಮೇಲೆ ಕೆಂಪು ಇಂಕಿನ ಲೇಖನಿಯಿಂದ ಗೀಚಿದಂತೆ ಕಾಟು ಹೊಡೆದು, ಎದ್ದು ಪೇಟೆ ಕಡೆಗೆ ಹೊರಟರು.

ಅಂಗಡಿ ಬೀದಿಗೆ ಹೋದಾಗ ಅಂಗಡಿಯವನು ಗೌರವದಿಂದ ಕೂಡಿಸಿ ಮಾತನಾಡಿಸಿದನು. ಆದರೆ ಇವರು ಏನನ್ನು ಕೇಳದೆ ದುಃಖದಿಂದ ಅಲ್ಲಿಂದ ಎದ್ದು ಹೊರಟುಬಿಟ್ಟರು. ಊರೆಲ್ಲ ಅಲೆದು ಮಧ್ಯಾಹ್ನ ತೀರಿದ ಮೇಲೆ ಅದೇ ದುಃಖದಲ್ಲಿ ಮನೆಯ ಕಡೆಗೆ ಹೊರಟಾಗ ಮನೆಯ ಗತಿ ಏನಾಗಿದೆಯೋ ಎಂದು ಚಿಂತೆಯಾಯಿತು. ಮನೆ ಹತ್ತಿರ ಬರುತ್ತಿದ್ದಂತೆ, ಘಮ ಘಮ ಅಡುಗೆಯ ವಾಸನೆ ಬರುತ್ತಿತ್ತು. ನಮ್ಮ ಮನೆಯಿಂದ ಅಡುಗೆಯ ವಾಸನೆ, ಅವರಿಗೆ ಅನುಮಾನ ಬಂತು.

ಮನೆಯ ಹೊಸಿಲು ದಾಟಬೇಕು,ಅದೇ ವೇಳೆಗೆ ಅವರ ಹೆಂಡತಿ ಹೊರಗಡೆ ಬಂದು, 'ಏನ್ರಿ ಇಷ್ಟು ಹೊತ್ತು ಎಲ್ಲಿ ಹೋಗಿದ್ದೀರಿ, ಆಗಲೇ ಮಕ್ಕಳಿಗೆ ಊಟ ಮುಗಿಯಿತು. ನೀವು ಆ ಹುಡುಗನ ಕೈಯಲ್ಲಿ ಸಾಮಾನನ್ನು ಕಳುಹಿಸಿದ್ದೀರಲ್ಲ ತಕ್ಷಣ ಅಡಿಗೆ ಮಾಡಿದೆ ಎಂದರು. ಅಲ್ಲ ಅದೇನ ಆರು ತಿಂಗಳಿಗೆ ಆಗುವಷ್ಟು ಕಳುಹಿಸಿದ್ದೀರಲ್ಲ.' ಎಂದಾಗ, 'ಯಾರು? ಯಾವ ಹುಡುಗ? ಯಾವ ಸಾಮಾನು' ಎಂದು ಕೇಳುತ್ತಿದ್ದರೆ, ಅವ್ಯಾವುದನ್ನೂ ಕಿವಿ ಮೇಲೆ ಹಾಕಿಕೊಳ್ಳದೇ, 'ನಿಮ್ಮನ್ನು ಎಷ್ಟು ಮೃದು ಸ್ವಭಾವದವರು, ಯಾರನ್ನು ನೋಯಿಸುವುದಿಲ್ಲ ಎಂದುಕೊಂಡಿದ್ದೆ. ಆದರೆ ಪಾಪ, ಆ ಸಣ್ಣ ಹುಡುಗನಿಗೆ ಎಷ್ಟು ಕಠಿಣವಾದ ಶಿಕ್ಷೆ ಕೊಟ್ಟಿದ್ದೀರಿ? ಹುಡುಗನ ಬಾಯಿಂದ ರಕ್ತ ಬರುತ್ತಿತ್ತು, ಅವನ ನಾಲಗೆ ಮೇಲೆ ಗೀರಿದ ಗಾಯವಾಗಿತ್ತು. ಏನಾಯಿತು ಎಂದು ಕೇಳಿದ್ದಕ್ಕೆ, ಅಮ್ಮ, ನಿಮ್ಮ ಯಜಮಾನರಿಗೆ ನನ್ನ ಮೇಲೆ ತುಂಬಾ ಕೋಪ ಬಂದುಬಿಟ್ಟಿದೆ ನಾನು ಯಾವತ್ತೋ, ಸಾಮಾನು ತಂದುಕೊಡುತ್ತೇನೆ ಎಂದಿದ್ದೆ. ಆದರೆ ಮರೆತುಬಿಟ್ಟಿದ್ದೆ ಅದಕ್ಕಾಗಿ ನಿಮ್ಮ ಯಜಮಾನರು ನನ್ನ ನಾಲಿಗೆಗೆ ಗಾಯಮಾಡಿದರು ಅಂದ. ಆ ಸಣ್ಣ ಹುಡುಗನಿಗೆ ನೀವು ಅಷ್ಟೊಂದು ಶಿಕ್ಷೆ ಕೊಡುವುದಾ?' ಎಂದು ಕೇಳಿದರು. ತಕ್ಷಣ ಗುರುಗಳಿಗೆ ಗೊತ್ತಾಯಿತು ಕೂಡಲೇ ದೇವರ ಕೋಣೆಗೆ ಹೋಗಿ ನಮಸ್ಕಾರ ಮಾಡಿ ದರು. 'ಏ ಕೃಷ್ಣಾ ಯಾಕೋ ಹೀಗೆ ಮಾಡಿಕೊಂಡೆ?'

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾ ಪರ್ಯುಪಾಸತೇ।
ತೇಷಾಂ ನಿತ್ಯಾಭೀಯುಕ್ತಾನಾಂ,
ಯೋಗಕ್ಷೇಮಂ ವಹಾಮ್ಯಹಮ್।

(ಅನನ್ಯವಾದ ಮನಸ್ಸಿನಿಂದ ನನ್ನನ್ನು ಯಾರು ಚಿಂತನೆ ಮಾಡುತ್ತಾರೋ ಅಂತಹವರ ಯೋಗಕ್ಷೇಮಗಳನ್ನು ನಾನೇ ವಹಿಸಿಕೊಳ್ಳುತ್ತೇನೆ- ಭಗವದ್ಗೀತೆಯ 9ನೇ ದಲ್ಲಿ ಬರುವ ಶ್ಲೋಕ.)

ಅಂತ ನೀನು ಹೇಳಿದ್ದು ನಿಜ. ನಿನ್ನ ಮೇಲೆ ನಂಬಿಕೆ ಇದ್ದರೆ ಸಾಕು. ಎಲ್ಲವನ್ನೂ, ಎಲ್ಲರನ್ನೂ ನೀನೇ ಸಲಹುವೆ. 'ಶ್ರೀಹರಿಯ ನಂಬಿ ಕೆಟ್ಟವರಿಲ್ಲ' ನಮ್ಮ ನಂಬಿಕೆ ಗಟ್ಟಿಯಾಗಿರಬೇಕು. ಮನದ ತುಂಬ ಕೃಷ್ಣನನ್ನೇ ತುಂಬಿಕೊಂಡು ಕಣ್ತುಂಬಿಕೊಂಡು ಅದೆಷ್ಟು ಹೊತ್ತು ಕುಳಿತಿದ್ದರೊ ಅವರಿಗೆ ಗೊತ್ತಿಲ್ಲ.

ಕೃಷ್ಣನ ನೆನೆದರೆ ಕಷ್ಟ ಒಂದಿಷ್ಟಿಲ್ಲ ಕೃಷ್ಣ ಎನ್ನಬಾರದೆ ಶ್ರೀಕೃಷ್ಣ ಎನಬಾರದೆ.

ಅಪ್ರತಿಮ ಹೋರಾಟಗಾರ ಬಿರ್ಸಾಮುಂಡಾ

● ಸಿಹಿಜೀವಿ ವೆಂಕಟೇಶ್ವರ

ಅಬುವಾ ರಾಜ್ ಅತೆ ಜನ, ಮಹಾರಾಣಿ ರಾಜ್ ತುಂಡು ಜನ ಇದು ಬಿರ್ಸಾ ಬುಡಕಟ್ಟು ಭಾಷೆಯ ವಾಕ್ಯ. ರಾಣಿಯ ಆಡಳಿತವನ್ನು ರದ್ದುಗೊಳಿಸಿ ನಮ್ಮ ಆಡಳಿತವನ್ನು ಸ್ಥಾಪಿಸಿ ಎಂಬ ಅರ್ಥದ ಘೋಷವಾಕ್ಯ ನೀಡಿದ, ನಮ್ಮ ರಾಜ್ಯ, ನಮ್ಮ ಆಡಳಿತ ಎಂದು ಗುಡುಗಿದ, ಜಾರ್ಖಂಡ್ ಭೂಮಿಯಿಂದ ಬಂದ ಭಾರತೀಯ ಸ್ವಾತಂತ್ರ್ಯ ಹೋರಾಟದ ಭಾಗವಾಗಿದ್ದ ಲಕ್ಷಾಂತರ ಬುಡಕಟ್ಟು ಜನರಿಗೆ ಸ್ಫೂರ್ತಿಯ ಚೇತನವೇ ಬಿರ್ಸಾ ಮುಂಡ!

ಈ ವರ್ಷ ಬಿರ್ಸಾ ಮುಂಡಾರವರ 150 ನೇ ಜಯಂತಿ. ಪ್ರಕೃತಿ ಪ್ರೇಮಕ್ಕೆ ಈ ವ್ಯಕ್ತಿ ನಿದರ್ಶನವಾಗಿದ್ದು, ನೀರು, ಕಾಡು, ಭೂಮಿ ಎಂದಾಗ ಇಂದಿಗೂ ಜನ ಇವರನ್ನು ನೆನಪಿಸಿಕೊಳ್ಳುತ್ತಾರೆ. ಬಿರ್ಸಾ ಮುಂಡಾ ಯುವ ಸ್ವಾತಂತ್ರ್ಯ ಹೋರಾಟಗಾರ ಮತ್ತು ಬುಡಕಟ್ಟು ಸಮುದಾಯದ ನಾಯಕ. ಬಿರ್ಸಾ ಮುಂಡಾ ಮುಂಡಾ ಬುಡಕಟ್ಟಿಗೆ ಸೇರಿದವರು. ಅವರು 1875 ರ ನವೆಂಬರ್ 15 ರಂದು ಜಾರ್ಖಂಡ್‌ನಲ್ಲಿ ಜನಿಸಿದರು . ಬಿರ್ಸಾ 'ಉಲ್ಗುಲಾನ್' ಅಥವಾ 'ದಿ ಗ್ರೇಟ್ ಟುಮಲ್ಟ್' ಎಂಬ ಚಳವಳಿಯನ್ನು ಆರಂಭಿಸಿದರು. ಆ ಸಮಯದಲ್ಲಿ ಜನರು ಅವರನ್ನು ಧರ್ತಿ ಅಬ್ಬಾ ಎಂದು ಕರೆಯುತ್ತಿದ್ದರು, ಅಂದರೆ ಭೂಮಿಯ ತಂದೆ. ಅವರು ಬ್ರಿಟಿಷ್ ಮಿಷನರಿಗಳು ಮತ್ತು ಅವರ ಮತಾಂತರ ಚಟುವಟಿಕೆಗಳ ವಿರುದ್ಧ ಪ್ರಮುಖ ಧಾರ್ಮಿಕ ಚಳುವಳಿಯನ್ನು ರಚಿಸಿದರು. ಮುಖ್ಯವಾಗಿ ಮುಂಡಾ ಮತ್ತು ಓರಾನ್ ಬುಡಕಟ್ಟು ಸಮುದಾಯಗಳ ಜನರ ಸಹಾಯದಿಂದ ಕ್ರಿಶ್ಚಿಯನ್ ಮಿಷನರಿಗಳ ಧಾರ್ಮಿಕ ಪರಿವರ್ತನೆ ಚಟುವಟಿಕೆಗಳ ವಿರುದ್ಧ ಅವರು ಬಂಡಾಯವೆದ್ದರು. ನೀರು, ಅರಣ್ಯ, ಭೂಮಿ ಮತ್ತು ಆದಿವಾಸಿಗಳಿಗೆ ಅವರು ಸಾಕಷ್ಟು ಕೆಲಸ ಮಾಡಿದ್ದಾರೆ.

ಬಿರ್ಸಾ ಮುಂಡಾ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ಆಂದೋಲನ ನಡೆಸಿದ್ದರು. ಜಮೀನ್ದಾರಿ ಪದ್ಧತಿ ಮತ್ತು ಬ್ರಿಟಿಷರ ಆಡಳಿತದ ವಿರುದ್ಧ ದೊಡ್ಡ ಹೋರಾಟ ನಡೆಸಿದರು. ಬಿರ್ಸಾ ಮುಂಡಾ ಆದಿವಾಸಿಗಳಿಗೆ ನೀರು, ಕಾಡುಗಳನ್ನು ರಕ್ಷಿಸಲು ಸ್ಫೂರ್ತಿ ನೀಡಿದರು ಮತ್ತು ಉಲ್ಗುಲಾನ್ ಎಂಬ ಚಳವಳಿಯನ್ನು ಪ್ರಾರಂಭಿಸಿದರು. ಈ ಚಳವಳಿ ಬ್ರಿಟಿಷ್ ಆಡಳಿತ ಮತ್ತು ಮಿಷನರಿಗಳ ವಿರುದ್ಧವಾಗಿತ್ತು. ಬಿರ್ಸಾ ಮುಂಡಾ ರವರು ಅಬುವಾ ಡಿಶುಂ ಅಬುವಾ ರಾಜ್ ಎಂಬ ಘೋಷಣೆಯನ್ನು ನೀಡಿದ್ದರು. ಅವರು ಅಬುವಾ ರಾಜ್ ಅತೆ ಜನ, ಮಹಾರಾಣಿ ರಾಜ್ ತುಂಡು ಜನ ಅಂದರೆ ರಾಣಿಯ ಆಡಳಿತವನ್ನು ರದ್ದುಗೊಳಿಸಿ ನಮ್ಮ ಆಡಳಿತವನ್ನು ಸ್ಥಾಪಿಸಿ ಎಂದು ಹೇಳಿದರು. ನಮ್ಮ ರಾಜ್ಯ, ನಮ್ಮ ಆಡಳಿತ ಎಂದರ್ಥ. ಇದು ಜಾರ್ಖಂಡ್ ಭೂಮಿಯಿಂದ ಬಂದ ಮತ್ತು ಭಾರತೀಯ ಸ್ವಾತಂತ್ರ್ಯ ಹೋರಾಟದ ಭಾಗವಾಗಿದ್ದ ಲಕ್ಷಾಂತರ ಬುಡಕಟ್ಟು ಜನರಿಗೆ ಸ್ಫೂರ್ತಿಯ ಮೂಲವಾಗಿತ್ತು. ಬಿರ್ಸಾ ಮುಂಡಾ ರವರು ಇನ್ನೂ ಹಲವಾರು ಘೋಷಣೆ ನೀಡಿ ಅವುಗಳನ್ನು ಕಾರ್ಯರೂಪಕ್ಕೆ ತರಲು ಬಹಳ ಶ್ರಮಿಸಿದರು. ಅವರ ಇತರೆ ಘೋಷಣೆ ಗಳೆಂದರೆ: ವಿಜಯವು ಹೋರಾಟದ ಮೂಲಕ ಮಾತ್ರ ಬರುತ್ತದೆ, ಶರಣಾಗತಿಯ ಮೂಲಕ ಅಲ್ಲ.

ನಮ್ಮ ಮಾತೃಭೂಮಿಯನ್ನು ರಕ್ಷಿಸುವುದು ನಮ್ಮ ಕರ್ತವ್ಯ. ಶಿಕ್ಷಣ, ಹೋರಾಟ ಮತ್ತು ಏಕತೆಯ ಮೂಲಕ ಮಾತ್ರ ನಾವು ನಮ್ಮ ಹಕ್ಕುಗಳನ್ನು ಸಾಧಿಸಬಹುದು.

ಬಿರ್ಸಾ ಮುಂಡಾರವರ 150ನೇ ಜನ್ಮ ದಿನದ ಪ್ರಯುಕ್ತ ಸರಕಾರಗಳು ದೇಶಾದ್ಯಂತ ಅವರ ಜಯಂತಿ ಆಚರಿಸುವ ಮೂಲಕ ಗೌರವ ಸೂಚಿಸುತ್ತಿರುವುದು ಬಹಳ ಉತ್ತಮ ಕಾರ್ಯ. ಇದರ ಜೊತೆಯಲ್ಲಿ ದೇಶಾದ್ಯಂತ ಶಾಲಾ ಕಾಲೇಜುಗಳಲ್ಲಿ ಮುಂಡಾರವ ಬಗ್ಗೆ ವಿವಿಧ ಸ್ಪರ್ಧೆ ಮತ್ತು ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಾ ಯುವ ಜನರಿಗೆ ನಮ್ಮ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸ್ತುತ್ಯಾರ್ಹ.

ಪದಬಂಧ



ಎಡದಿಂದ ಬಲಕ್ಕೆ:

1. ಮಂಗಳನಿಗೊಂದು ಚಂದದ ಹೆಸರು (4)
2. ಆದಿಕವಿಯೆಂದು ಹೆಸರಾದವನು (2)
6. ಸದ್ದಿಲ್ಲ, ಮೌನ ಮಾತ್ರ (3)
8. ಶಾಶ್ವತವಲ್ಲದ್ದು (3)
9. ಮತ್ತೊಂದು ಕಾಡಿನೊಂದಿಗೆ ಬಂದಿದೆ ಬದುಕು (3)
11. ಸರದ ಮಧ್ಯೆ ಸಿಲುಕಿದೆ ಸಲುಗೆ (3)
13. ಸಂಪತ್ತಿಗೆ ಇನ್ನೊಂದು ಹೆಸರು (2)
15. ಬೆಲೆಬಾಳುವ ಮಣಿ (2)
16. ಕಡಿಯುವಾಗ ಕಂಡಿತು ಬಾವಲಿ (3)
18. ಹನ್ನೆರಡು ಮೈಲು ದೂರದ ಅಳತೆ (3)
19. ಮತ್ತೊಂದು ಕಾಡಿನೊಂದಿಗೆ ಬಂದಿರುವ ಹೋಮ (3)
22. ಸರಾಗವಾದ ಅಥವಾ ಸಲೀಸಾದ ಎಂದರ್ಥ (3)
24. ನಾಸಿಕದ ಆಭರಣ (2)
25. ದುಂಬಿಯು ಹೂವಿನಿಂದ ಹೀರುವ ರಸ (4)

ಮೇಲಿನಿಂದಕೆಳಕ್ಕೆ:

1. ಹೆದರಿಕೆಗೆ ಇನ್ನೊಂದು ಹೆಸರು (3)
2. ರುಚಿ ತಿಳಿಸುವ ನಾಲಗೆ (3)
3. ಏಳು ದಿನಗಳ ಅವಧಿ (2)
5. ವಾಯುವಿನ ಮಗ ಎಂಬರ್ಥದಲ್ಲಿ ಹನುಮನಿಗೆ ಹೀಗೆಯೂ ಹೇಳಬಹುದು (5)
6. ರಸಹೀನವಾದದ್ದು (3)
7. ಕುದುರೆಸವಾರರ ಮುಖ್ಯಸ್ಥ (3)
10. ರೋಗಕ್ಕೆ ಪರ್ಯಾಯ ಪದ (2)
12. ವಸ್ತುವೊಂದರ ಬೆಲೆ (2)
13. ಉಪಯೋಗಕ್ಕೆ ಬಾರದುದು (5)
14. ಬೆಣ್ಣೆಯನ್ನು ಕಾಯಿಸಿ ತಯಾರಿಸಿದ್ದು (2)
15. ಹಗ್ಗ ಅಥವಾ ಬಳ್ಳಿ (2)
16. ನಿದ್ರೆಯಲ್ಲಿ ಕಂಡ ಸ್ವಪ್ನ (3)
17. ತಿರುಗಿ ಬಂದಿರುವ ಅಂತಸ್ತು (3)
20. ಅಂಗಡಿಯಲ್ಲಿ ಕಂಡ ವ್ಯಾಪಾರಿ (3)
21. ಬಾಗಿಲಿನ ಚೌಕಟ್ಟು (3)
23. ಎಲ್ಲೆ ಅಥವಾ ಸರಹದ್ದು (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಏಕದಂತ 4. ಆಲೆಮನೆ 6. ಯಾಚಕ 7. ವಿರಸ 10. ಕನಕ 12. ಮಹಾಭಾರತ 13. ಹರಯ 15. ಹಂಬಲ 19. ರಾಜಸ 20. ಬಾಣಸಿಗ 21. ಗೆಳೆತನ

ಮೇಲಿನಿಂದ ಕೆಳಕ್ಕೆ: 2. ಕರವೀರ 3. ತಯಾರಿ 4. ಆಕರ 5. ಮತದಾನ 7. ವಿರಹ 8. ಸಮಯ 9. ಪ್ರಭಾವ 10. ಕತಹಂ 11. ಕಮಲ 14. ರಣಾಂಗಣ 16. ಬಹುಮತ 17. ಸರಾಗ 18. ಒಸಗೆ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಬುದ್ಧಿವಂತ ಜೀವಿ ಸೊಳ್ಳೆ

ಮನುಷ್ಯನ ಅಥವಾ ಯಾವುದೇ ಪ್ರಾಣಿಯ ಪೋಷಕಾಂಶ ತುಂಬಿದ ರಕ್ತವು, ಸೊಳ್ಳೆಯ ವಂಶಾಭಿವೃದ್ಧಿಗಾಗಿ ಅತ್ಯಗತ್ಯ. ಮನುಷ್ಯನ ಇರುವಿಕೆಯನ್ನು ಹತ್ತಿಪ್ಪತ್ತು ಮೀಟರ್ ದೂರ ಇರುವ ಸೊಳ್ಳೆಗಳು, ನಾವು ಬಿಟ್ಟ ಕಾರ್ಬನ್ ಡೈಆಕ್ಸೈಡ್‌ನ ವಾಸನೆಯಿಂದ ಗ್ರಹಿಸುತ್ತದೆ. ವಾಸನೆಯ ಗ್ರಹಿಕೆಯಾದ ಒಂದೆರಡು ಸೆಕೆಂಡಿನಲ್ಲಿ ಅವು ಮನುಷ್ಯನ ಶರೀರದ ಮೇಲೆ ಕೂತಿರುತ್ತವೆ. ಮನುಷ್ಯನ ಚರ್ಮದ ಮೇಲಿರುವ ಬ್ಯಾಕ್ಟೀರಿಯಾಗಳು ಮತ್ತು ಚರ್ಮದ ಮೇಲೆ ಉತ್ಪತ್ತಿಯಾಗುವ ಕೆಲ ರಾಸಾಯನಿಕಗಳ ವಾಸನೆಯ ಆಧಾರದ ಮೇಲೆ ಆ ವ್ಯಕ್ತಿಯ ರಕ್ತದ ಗುಂಪನ್ನು ಕೂಡಾ ಈ ಚಿಕ್ಕ ಸೊಳ್ಳೆ ಗುರುತಿಸಬಲ್ಲದು , ಅದೂ ಕ್ಷಣಾರ್ಧದಲ್ಲಿ. ಅದಕ್ಕೆ ಯಾವುದೇ ಲ್ಯಾಬಿನ ಅಗತ್ಯ ಇಲ್ಲ. ಅದಕ್ಕೆ ಬೇಕಾದ ಗುಂಪಿನ ರಕ್ತವನ್ನೇ ಅದು ಹೀರುತ್ತದೆ.

ಪುಸ್ತಕ ಲೋಕ

ಹೆಜ್ಜೆ ಮೂಡದ ಹಾದಿ



ಪೂರ್ಣಚಂದ್ರ ತೇಜಸ್ವಿಯವರ ಹೆಜ್ಜೆ ಮೂಡದ ಹಾದಿ ಕೃತಿಯು ಕನ್ನಡ ನಾಡಿನ ಹಕ್ಕಿಗಳು ಕೃತಿ ಎರಡನೆಯ ಭಾಗ. ಕನ್ನಡ ನಾಡಿನ ಹಕ್ಕಿಗಳ ಜೊತೆಗೆ ಅವನ್ನು ಹೋಲುವ ಇತರೆ ನಾಡು-ದೇಶಗಳ ಪಕ್ಷಿಗಳ ಪರಿಚಯವೂ ಇಲ್ಲಿದೆ. ಈ ದೃಷ್ಟಿಯಿಂದ ಇದು ಮೊದಲನೆ ಭಾಗಕ್ಕಿಂತ ಹೆಚ್ಚು ವಿಸ್ತಾರ, ವೈವಿಧ್ಯವುಳ್ಳದ್ದಾಗಿದೆ. ಸೌರೋಲೋಪಸ್, ಜವುಗಿನ ಹಕ್ಕಿಗಳು ಗಿಳಿಗಳು, ಟ್ರೋಜನ್ ಮತ್ತು ಆಫ್ರಿಕಾದ ಮೂಷಿಕ, ಕಾಡುಕೋಳಿಗಳು, ಚಿಟ್ಟುಕೋಳಿಗಳು, ನೀರಿನ ಹಕ್ಕಿ ಟುವ್ವಿ, ಮಡಿವಾಳ ಹಕ್ಕಿ ಮುಂತಾದ ವಿವಿಧ ಜಾತಿಯ ಪಕ್ಷಿಗಳ ನಿರೂಪಣೆಯಿದೆ. ಹಕ್ಕಿಗಳ ಬಗ್ಗೆ ಗೊತ್ತಿಲ್ಲದವರಿಗೆ ಅಥವಾ ನಿರಾಸಕ್ತರಿಗೆ ಈ ಅದ್ಭುತ ಜೀವಿಗಳ ಬಗ್ಗೆ ಆಸಕ್ತಿ ಹುಟ್ಟಿಸಲು, ಹಕ್ಕಿಗಳ ಹಲವಾರು ಸ್ವಾನುಭವದ ಆಪ್ತ ಘಟನೆಗಳನ್ನು ಆಧಾರವಾಗಿಟ್ಟುಕೊಂಡು ಹೇಳಿರುವ ಚಿಕ್ಕ ಕಥೆಗಳ ಸಂಕಲನ ಇದು.

ಟ್ವೀಟ್‌ಮೆಂಟ್

ಗಿರೀಶ್ ಕಾರ್ನಾಡ್: ಒಬ್ಬ ಅಗಸ ತೊಳೆದಷ್ಟು ಕೊಳೆಯನ್ನು ಯಾವ ಧರ್ಮಗುರುವೂ ತೊಳೆದಿಲ್ಲ.

ನಿರ್ಮಲಾ ಉಪಾಸೆ: ಕೇವಲ ಬಟ್ಟೆ ಕೊಳೆ ತೊಳೆಯೋಕೆ ಅಗಸನೆ ಬೇಕು ಅಂತ ಏನಿಲ್ಲ,ಈಗ ಮಸಿನ್‌ಗಳು ತೊಳೆಯುತ್ತವೆ ಬಟ್ಟೆ ಕೊಳೆಯನ್ನು. ಆದ್ರೇ ಮನುಷ್ಯನ ಮನಸಿನ ಕೊಳೆ ತೊಳೆಯೋಕೆ ಗುರುನೇ ಬೇಕು, ಗುರು ಇಲ್ಲದೆ ಮನಸಿನ ಕೊಳೆ ತೊಳೆಯೋದಿಲ್ಲ.

ಕಂಪನಿ ಉದ್ಯೋಗಿಗಳ ಕಪ್ಪೆ ಜಿಗಿತ

● ಕಿಲಾರ ವಿಕ್ರಂ ಹೆಗಡೆ

ಓಡುತ್ತಾ ಸಾಗುವ ಜೀವನದಲ್ಲಿ ಇಂದು ಪ್ರತಿಯೊಬ್ಬರಿಗೂ ಜೀವನ ಸಾಗಿಸಲು ಉದ್ಯೋಗ ಬೇಕೇ ಬೇಕು. ಅಣಬೆಗಳಂತೆ ಹುಟ್ಟಿಕೊಂಡಿರುವ ಸಾವಿರಾರು ಕಂಪನಿಗಳು ಉದ್ಯೋಗವನ್ನು ನೀಡುತ್ತಿರುವುದು ನಿಜಕ್ಕೂ ಸಂತೋಷದ ಸಂಗತಿ. ಆದರೆ ಆ ಕಂಪನಿಗಳು ಉದ್ಯೋಗಿಗಳನ್ನು ತಮ್ಮಲ್ಲಿ ಎಷ್ಟು ಕಾಲ ಹಿಡಿದಿಟ್ಟುಕೊಳ್ಳಬಹುದು ಎನ್ನುವುದು ತರ್ಕದ ವಿಚಾರ.

ಕಂಪನಿಯನ್ನು ಸೇರಿದ ಹೊಸತರಲ್ಲಿ ಎಲ್ಲವೂ ಚೆನ್ನಾಗಿ ಸಾಗುತ್ತದೆ. ತಿಂಗಳ ಕೊನೆಯಲ್ಲಿಯೂ ಅಥವಾ ಮೊದಲಿನಲ್ಲಿಯೂ ಬರುವ ಸ್ಯಾಲರಿ ಹೊಸತರಲ್ಲಿ ಖುಷಿಯನ್ನೇ ನೀಡುತ್ತದೆ. ಆದರೆ ಕಾಲ ಬದಲಾಗುತ್ತದೆ, ನಂಬಿಕೆಗಳು ತಲೆಕೆಳಗಾಗುತ್ತವೆ, ನಿರೀಕ್ಷೆಗಳು ಹೆಚ್ಚುತ್ತವೆ. ಅದು ಉದ್ಯೋಗಗಳಿಗೆ ಕಂಪನಿಯ ಮೇಲಿರಬಹುದು ಅಥವಾ ಕಂಪನಿಗಳಿಗೆ ಉದ್ಯೋಗಿಗಳ ಮೇಲಿರಬಹುದು. ಇದೇ ಮುಂದಿನ ದಿನಗಳಲ್ಲಿ ಕಂಪನಿಯನ್ನು ಬದಲಾಯಿಸುವ ವಿಚಾರಕ್ಕೆ ಮುನ್ನುಡಿ ಬರೆಯುತ್ತದೆ.

ಬಡ್ತಿ ವಿಚಾರ: ಒಂದೇ ಕಂಪನಿಯಲ್ಲಿ ಹಲವಾರು ವರ್ಷಗಳ ಕಾಲ ಇದ್ದರೂ ಸರಿಯಾದ ಸಮಯಕ್ಕೆ ಸರಿಯಾದ ಬಡ್ತಿ ಸಿಗದೇ ಇದ್ದಾಗ, ಹೆಚ್ಚಿನ ಸಂಬಳ ಅಥವಾ ಉತ್ತಮ ಬಡ್ತಿಗೆ ಇಚ್ಛಿಸುತ್ತಾರೆ. ಅದು ಸಿಗದೇ ಹೋದಾಗ ಕಂಪನಿಯನ್ನು ಬದಲಾಯಿಸುತ್ತಾರೆ.

ರಾತ್ರಿ ಹಗಲಾಗುವುದು: ಹೆಚ್ಚಿನ ಸಂಬಳ ಯಾರಿಗೆ ಬೇಡ? ಆದರೆ ನೈಟ್ ಶಿಫ್ಟ್ ಯಾರಿಗೂ ಬೇಡ. ಇಡೀ ಜಗತ್ತೇ ನಿದ್ರಿಸುತ್ತಿರುವಾಗ ಈ ಉದ್ಯೋಗಿಗಳಿಗೆ ಮಾತ್ರ ಕೆಲಸದ ಒತ್ತಡ, ಮನೆಯವರಿಂದಲೂ ಬೈಗುಳದ ಸರಮಾಲೆ. ಇದು ಖಂಡಿತವಾಗಿಯೂ ಕಂಪನಿಗಳ ತಪ್ಪಲ್ಲ; ಉದ್ಯೋಗಿಗಳು ಮಾಡಿಕೊಂಡಿರುವ ಆಯ್ಕೆ. ವರ್ಷಪೂರ್ತಿ ನೈಟ್ ಶಿಫ್ಟ್ ಮಾಡುವವರ ಪಾಡು ಅದೋಗತಿಯಾಗಿ ಒಂದು ದಿನ ಕಂಪನಿಯನ್ನೇ ಬಿಡುವ ಪರಿಸ್ಥಿತಿ ತರಿಸುತ್ತದೆ.

ಮಿತಿಮೀರಿದ ಕೆಲಸದ ಒತ್ತಡ: ಕೆಲವು ಕಂಪನಿಗಳು ತಮ್ಮ ಉದ್ಯೋಗಳು ಕೆಲಸ ಮಾಡುತ್ತಾರೆ ಎನ್ನುವ ನೆಪದಲ್ಲಿ ನಾಲ್ಕು ಜನ ಸೇರಿ ಮಾಡುವ ಕೆಲಸವನ್ನು ಒಬ್ಬರ ಮೇಲೆ ಹಾಕಿ ಅವರ ಮಾನಸಿಕ ಸ್ಥಿತಿಯನ್ನು ಕೆಡಿಸುತ್ತಾರೆ. ಬಲೂನಿನಲ್ಲಿ ಎಷ್ಟು ಗಾಳಿ ಹಿಡಿಯುತ್ತದೆಯೋ ಅದಕ್ಕಿಂತ ಹೆಚ್ಚು ತುಂಬಿದರೆ ಅದು ಒಡೆಯುತ್ತದೆ. ಉದ್ಯೋಗಿಗಳು ಮನುಷ್ಯರೇ ಎನ್ನುವುದನ್ನು ಕಂಪನಿಗಳು ಮರೆತಾಗ, ಅವರು ಉದ್ಯೋಗಿಗಳನ್ನು ಕಳೆದುಕೊಳ್ಳುತ್ತಾರೆ.

ನಾನೇ ಬ್ರಹ್ಮ: ಕೇಳುವುದಕ್ಕೆ ವಿಚಿತ್ರವೆನಿಸಿದರೂ, ಇದು ಸತ್ಯ. ಕೆಲವು ಉದ್ಯೋಗಿಗಳು ತಮ್ಮನ್ನು ತಾವೇ ಬ್ರಹ್ಮರೆಂದು ಭಾವಿಸುತ್ತಾರೆ, ಮತ್ತು ಮತ್ತಾರಾದರೂ ಇವರಿಗಿಂತ ಉತ್ತಮವಾದ ಕೆಲಸ ಮಾಡಿದಾಗ ಅಸೂಯೆ ಪಡುತ್ತಾರೆ. ಇದೇ ಅಸೂಯೆ ಅವರಿಗೆ ಕಂಪನಿಯಿಂದ ಹೊರ ಹೋಗುವುದಕ್ಕೆ ಕಾರಣವಾಗುತ್ತದೆ.

ಉದ್ಯೋಗಿಗಳಿಗೆ ಸ್ಪಂದಿಸದಾಗ: ಇತ್ತೀಚಿನ ದಿನಗಳಲ್ಲಿ ಇದೊಂದು ಸಾಮಾನ್ಯ ಸಮಸ್ಯೆ. ಉದ್ಯೋಗಿಗಳು ಹಗಲು ರಾತ್ರಿ ಎನ್ನದೆ ಕಂಪನಿಯ ಬೊಕ್ಕಸವನ್ನು ತುಂಬಿಸುತ್ತಿರುತ್ತಾರೆ. ಆದರೆ ಯಾವುದೋ ಒಂದು ಸಂದರ್ಭದಲ್ಲಿ ಉದ್ಯೋಗಿ ಸಮಸ್ಯೆಯಲ್ಲಿದ್ದಾಗ, ಕಂಪನಿ ಚಕಾರವನ್ನೂ ಎತ್ತದೆ ಅವರನ್ನು ನಿರ್ಲಕ್ಷಿಸುತ್ತದೆ. ನಂತರದ ದಿನಗಳಲ್ಲಿ ಉದ್ಯೋಗಿ ಕೆಲಸವನ್ನು ಬಿಡುವುದಕ್ಕೆ ಇದೂ ಒಂದು ಕಾರಣವಾಗುತ್ತದೆ. ಬೇರೆಡೆ ಬೇಡಿಕೆ ಬಂದಾಗ: ಕಾರ್ಯನಿರ್ವಹಿಸುತ್ತಿರುವ ಕಂಪನಿಗಿಂತ ಉತ್ತಮ ಕಂಪನಿಯಲ್ಲಿ ಉತ್ತಮ ಸಂಬಳ ದೊರೆತಾಗ ಉದ್ಯೋಗಿ ಕಂಪನಿಯನ್ನು ಬದಲಾಯಿಸುತ್ತಾನೆ.

ತಪ್ಪು ಯಾರದ್ದು?: ಉದ್ಯೋಗಿ ತನ್ನ ಕಂಪನಿಯನ್ನು ಬದಲಾಯಿಸುತ್ತಾನೆಂದರೆ ಯಾವುದೇ ಕಾರಣಕ್ಕೂ ಕಂಪನಿ ಹೊಣೆಗಾರಿಕೆ ಹೊಂದಿರುವುದಿಲ್ಲ. ಯಾಕೆಂದರೆ, ಕಂಪನಿ ತನ್ನ ನಿಯಮಾವಳಿಗಳನ್ನು ಬಿಟ್ಟು ಹೋಗುವುದಿಲ್ಲ. ಕಂಪನಿಗಳು ಮತ್ತು ಉದ್ಯೋಗಿಗಳು ಹರಿಯುವ ನೀರಿನಂತೆ. ಕಂಪನಿಗಳು ಹೊಸಬರನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಲೇ ಇರುತ್ತವೆ, ಉದ್ಯೋಗಿಗಳು ಹೊಸ ಅವಕಾಶಗಳನ್ನು ಹುಡುಕಿ ಸಾಗುತ್ತಲೇ ಇರುತ್ತಾರೆ.

ಈ ದಿನ ಇತಿಹಾಸ

- 1915: ಗದಾರ್ ಪಕ್ಷದ ಕರ್ತಾರ್ ಸಿಂಗ್ ಸರಭ ಜೊತೆ ಇನ್ನೂ ಆರು ಜನ ಭಾರತದ ಸ್ವಾತಂತ್ರ್ಯಕ್ಕೋಸ್ಕರ ಮರಣಹೊಂದಿದರು
- ರಾಷ್ಟ್ರೀಯ ಮಾಧ್ಯಮ ದಿನ
- 2005: ಮೊದಲ ಬಾರಿಗೆ ಆಸ್ಟ್ರೇಲಿಯಾ ತಂಡವು ಫಿಫಾ ವರ್ಲ್ಡ್ ಕಪ್‌ಗೆ ಅರ್ಹತೆ ಪಡೆಯಿತು

ಚಿತ್ರಸ್ಫೂರ್ತಿ



ದಮನಿತರ ದನಿಯಾದ ಭೈರತಿ

ಮಫ್ತಿ ಸಿನಿಮಾ ನೋಡಿದವರಿಗೆ ಭೈರತಿ ರಣಗಲ್ ಪಾತ್ರ ಮನದಲ್ಲಿ ಅಚ್ಚಳಿಯದೇ ಉಳಿದಿದೆ. ರೋಣಪುರದ ರಕ್ಷಕನ ಜತೆಗೆ ರಾಕ್ಷಸನಾಗಿ ಅಬ್ಬರಿಸಿದ ಭೈರತಿ ಬಡವರ ನೋವಿಗೆ ದನಿಯಾದವರು. ಅಷ್ಟಕ್ಕೂ ಈ ಭೈರತಿ ಯಾರು., ಆತ ಅಂಡರ್‌ವರ್ಲ್ಡ್ ಡಾನ್ ಆಗಿದ್ದು ಯಾಕೆ ಎಂಬ ಕುತೂಹಲ ಮಫ್ತಿಯಲ್ಲಿ ಕಾಡುತ್ತಿತ್ತು ಅದಕ್ಕೆ ಭೈರತಿ ರಣಗಲ್ ಚಿತ್ರದಲ್ಲಿ ಉತ್ತರ ಸಿಕ್ಕಿದೆ. ಭೈರತಿ ರಣಗಲ್ ಖ್ಯಾತ ವಕೀಲ, ಬಡವರ ಪರವಾಗಿ ವಾದ ಮಾಡುವ ಅವರ ನೋವಿಗೆ ದನಿಯಾಗುವ ಸಹೃದಯಿ. ಹೀಗೆ ವಕೀಲನಾಗಿದ್ದ ಭೈರತಿ ರಣಗಲ್ ಮುಂದೆ ತಾನೇ ಕಾನೂನು ಕೈಗೆತ್ತಿಕೊಳ್ಳುತ್ತಾನೆ ಅದು ಯಾಕೆ, ಅದರ ಹಿಂದಿನ ಕಥೆ ಏನು ಎಂಬುದನ್ನು ಈ ಚಿತ್ರದಲ್ಲಿ ಅದ್ಭುತವಾಗಿ ಕಟ್ಟಿಕೊಡಲಾಗಿದೆ. ಮಾಸ್, ಕ್ಲಾಸ್ ಜತೆಗೆ ಕೌಟುಂಬಿಕ ಕಥೆ ಚಿತ್ರದುದ್ದಕ್ಕೂ ಹಾಸು ಹೊಕ್ಕಾಗಿದೆ. ಮಫ್ತಿಯಲ್ಲಿ ತಂಗಿ ಸೆಂಟಿಮೆಂಟ್ ಇತ್ತು, ಅಂತೆಯೇ ಇಲ್ಲಿ ಸೆಂಟಿಮೆಂಟ್ ಬದಲಿಗೆ ಬಡವರ ಸಂಕಷ್ಟಗಳು ಏನು ಎಂಬುದನ್ನು ಮನಕ್ಕೆ ಮುಟ್ಟುವಂತೆ ಕಟ್ಟಿಕೊಡಲಾಗಿದೆ.

ಮಫ್ತಿ ಸಿನಿಮಾದ ಮೂಲಕ ನಿರ್ದೇಶಕರಾಗಿ ಗುರುತಿಸಿಕೊಂಡಿದ್ದ ನರ್ತನ್, ಈ ಚಿತ್ರದ ಮೂಲಕ ಭರವಸೆಯ ನಿರ್ದೇಶಕರಾಗಿ ಹೊರ ಹೊಮ್ಮಿದ್ದಾರೆ. ಮಾಸ್ ಸಿನಿಮಾ ಅಂದರೆ ಹೇಗಿರಬೇಕು ಎಂಬುದನ್ನು ಅರಿತು ಅದಕ್ಕೆ ಬೇಕಾದ ಅಂಶಗಳನ್ನು ಬೆರೆಸಿ ಪ್ರೇಕ್ಷಕರಿಗೆ ರುಚಿಸುವಂತೆ ಕಟ್ಟಿಕೊಟ್ಟಿದ್ದಾರೆ.



ಭೈರತಿ ಆಗಿ ಶಿವಣ್ಣ ಅವರನ್ನು ಕಣ್ತುಂಬಿಕೊಳ್ಳುವುದೇ ಖುಷಿ. ಮಫ್ತಿಯಲ್ಲಿ ಸೆಕೆಂಡ್ ಹಾಫ್‌ನಲ್ಲಿ ಕಾಣಿಸಿಕೊಂಡಿದ್ದ ಶಿವಣ್ಣ, ಭೈರತಿ ರಣಗಲ್‌ನಲ್ಲಿ ಚಿತ್ರದುದ್ದಕ್ಕೂ ಆವರಿಸಿದ್ದಾರೆ. ಸಿಂಪಲ್ ಲುಕ್ ಜತೆಗೆ ಕರೀ ಕೋಟ್ ತೊಟ್ಟು ಕಂಗೊಳಿಸಿದ್ದಾರೆ. ಅವರು ತೆರೆಯಲ್ಲಿ ಬಂದಾಗಲೆಲ್ಲ ಮಿಂಚು ಕೋರೈಸಿದಂತಾಗುತ್ತದೆ. ಶಿವಣ್ಣನಿಗೆ ಶಿವಣ್ಣನೆ ಸಾಟಿ ಎನಿಸುತ್ತದೆ. ಚಿತ್ರದಲ್ಲಿ ಒಂದಷ್ಟು ಸರ್‌ಪ್ರೈಸ್ ಕೂಡ ಇದೆ ಅದೇನು ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ಹಿರಿಯ ನಟ ಅವಿನಾಶ್ ಈ ಚಿತ್ರದಲ್ಲಿ ಹಿಂದೆಂದು ಕಾಣಿಸಿದ ಪಾತ್ರದಲ್ಲಿ ಮಿಂಚಿದ್ದಾರೆ, ರಾಹುಲ್ ಬೋಸ್ ಪಾತ್ರ ಪ್ರೇಕ್ಷಕರ ಮನದಲ್ಲಿ ಉಳಿಯುತ್ತದೆ. ಛಾಯಾ ಸಿಂಗ್, ರುಕ್ಮಿಣಿ ವಸಂತ್ ಪಾತ್ರ ಹಾಗೆ ಬಂದು ಮರೆಯಾಗುತ್ತದೆ. ಉಳಿದಂತೆ ದೇವರಾಜ್ ಸೇರಿದಂತೆ ಎಲ್ಲರೂ ತಮ್ಮ ಪಾತ್ರಕ್ಕೆ ಜೀವತುಂಬಿ ನಟಿಸಿದ್ದಾರೆ. ಕಾವಲಿಗ.. ಹಾಗೂ ಟೈಟಲ್ ಸಾಂಗ್ ಸಿನಿಮಾ ನೋಡಿಬಂದು ಹೊರಬಂದ ಮೇಲೂ ಮನದಲ್ಲಿ ಉಳಿಯುತ್ತದೆ. ಛಾಯಾಗ್ರಹಣ ಹಾಗೂ ಸಂಗೀತಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ಒಟ್ಟಾರೆ ಭೈರತಿ ರಣಗಲ್ ಚಿತ್ರವನ್ನು ಮನೆಮಂದಿಯೆಲ್ಲಾ ಒಟ್ಟಾಗಿ ಕುಳಿತು ನೋಡಬಹುದಾಗಿದೆ.

ಚಿತ್ರ : ಭೈರತಿ ರಣಗಲ್
ನಿರ್ದೇಶನ : ನರ್ತನ್
ನಿರ್ಮಾಣ: ಗೀತಾ ಶಿವರಾಜ್ ಕುಮಾರ್
ತಾರಾಗಣ : ಶಿವರಾಜ್ ಕುಮಾರ್, ಅವಿನಾಶ್, ದೇವರಾಜ್, ಗೋಪಾಲಕೃಷ್ಣ ದೇಶಪಾಂಡೆ, ಛಾಯಾಸಿಂಗ್, ರುಕ್ಮಿಣಿ ಮುಂತಾದವರು.
ರೇಟಿಂಗ್ : ★★★½

ದಾಖಲೆ ಬರೆದ ನಿಲ್ಲಬೇಡ

ಚಂದನ್ ಶೆಟ್ಟಿ ಹಾಡಿ, ಸಂಗೀತ ನಿರ್ದೇಶಿಸಿರುವ ಆಲ್ಬಂ ಸಾಂಗ್ ಇತ್ತೀಚೆಗೆ ಬಿಡುಗಡೆಯಾಗಿತ್ತು. ನಿಲ್ಲಬೇಡ... ಎಂಬ ಈ ಹಾಡು ಇದೀಗ ಒಂದು ಮಿಲಿಯನ್ ಹಿಟ್ಸ್ ದಾಖಲಿಸಿ ಮುನ್ನುಗ್ಗುತ್ತಿದೆ. ಕಪ್ ಗೆಲ್ಲೋದು ಮುಖ್ಯ ಅಲ್ಲ, ಮನಸ್ಸು ಗೆಲ್ಲೋದು ಮುಖ್ಯ ಎಂಬ ಥೀಮ್ ಹೊಂದಿರುವ ಈ ಹಾಡಿಗೆ ಸಂಗೀತ ಪ್ರಿಯರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ನಿರ್ದೇಶಕ ಅಭಿಷೇಕ್ ಮಠದ್ ನಿರ್ದೇಶಿಸಿರುವ ಈ ಹಾಡು ಇದಾಗಿದ್ದು, ಉತ್ತರ ಕರ್ನಾಟಕ ಮೂಲದ ಸುನಿಧಿ ನಿಲೋಪಂತ್ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ಸುನಿಧಿ ಅಜ್ಜಿ ಪ್ರತಿಭಾ ಅವರು ಈ ಹಾಡನ್ನು ನಿರ್ಮಿಸಿದ್ದಾರೆ. ಎಲ್ಲರ ಸಹಕಾರದಿಂದ ಹಾಡು ಚೆನ್ನಾಗಿ ಮೂಡಿಬಂದಿದೆ. ಇದೀಗ ಹಾಡು ಕೇಳಿದವರು, ನೋಡಿದವರು ಮೆಚ್ಚಿಕೊಂಡಾಡಿದ್ದಾರೆ ಎಂದು ಸುನಿಧಿ ನಿಲೋಪಂತ್ ಸಂತಸದಿಂದ ನುಡಿಯುತ್ತಾರೆ.

ಡಿವೋರ್ಸ್ ಆಗಿ ಮೂರು ವಾರಗಳಾಗಿತ್ತಷ್ಟೇ. ಆಗ ಈ ಥರದ್ದೊಂದು ಆಲ್ಬಂ ಸಾಂಗ್ ಮಾಡಿಕೊಡುವಂತೆ ನಿರ್ದೇಶಕ ಅಭಿಷೇಕ್ ಮಠದ್ ವಿನಂತಿಸಿಕೊಂಡರು. ನನಗೇ ನಾನು ಮೋಟಿವೇಷನ್ ಮಾಡಿಕೊಳ್ಳಬೇಕಾದಂಥ ಸಂದರ್ಭವಾಗಿತ್ತದು. ಅಂಥ ಹೊತ್ತಿನಲ್ಲಿ ನಿಲ್ಲಬೇಡ ಮುನ್ನುಗ್ಗು ಎಂಬಂಥ ಹಾಡು ಬಂದದ್ದು ಕಾಕತಾಳೀಯ ಎನ್ನುತ್ತಾರೆ ಚಂದನ್ ಶೆಟ್ಟಿ.

ವಿಟಾಕೀಸ್

ಲಾಂಗ್ ಬಿಟ್ಟು ಪೆನ್ನು ಹಿಡಿದ ಶಿವಣ್ಣ

ಭೈರತಿ ರಣಗಲ್‌ನಲ್ಲಿ ಲಾಯರ್, ಟಗರು ಸಿನಿಮಾದಲ್ಲಿ ಪೊಲೀಸ್, ಮಫ್ತಿಯಲ್ಲಿ ಡಾನ್... ಹೀಗೆ ಪ್ರತಿ ಬಾರಿಯೂ ವಿಭಿನ್ನ ಪಾತ್ರಗಳ ಮೂಲಕ ಪರಕಾಯ ಪ್ರವೇಶಿಸುವ ಶಿವರಾಜ್ ಕುಮಾರ್ ಈಗ ಮಾಸ್ ನಿಂದ ಮಾಸ್ಟರ್ ಆಗಿ ಬದಲಾಗುತ್ತಿದ್ದಾರೆ. ಹೌದು, ಭಜರಂಗಿ ಈಗ ಶಿಕ್ಷಕನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಭೈರತಿ ರಣಗಲ್ ಸಿನಿಮಾ ಬಿಡುಗಡೆ ಹೊಸ್ತಿಲಿನಲ್ಲಿ ದೊಡ್ಮನೆ ದೊರೆ ಭರ್ಜರಿ ಉಡುಗೊರೆ ನೀಡಿದ್ದಾರೆ. ಇಂದು ಮಕ್ಕಳ ದಿನಾಚರಣೆ, ಈ ಶುಭ ದಿನದಂದು ಶಿವಣ್ಣ ಮಕ್ಕಳ ಸಿನಿಮಾದಲ್ಲಿ ನಟಿಸುವ ಬಗ್ಗೆ ಘೋಷಿಸಿದ್ದಾರೆ. ಚಿತ್ರದ ಟೈಟಲ್ ಪೋಸ್ಟರ್ ಕೂಡ ಬಿಡುಗಡೆಯಾಗಿದ್ದು, ಎ ಫಾರ್ ಆನಂದ್ ಶೀರ್ಷಿಕೆಯಲ್ಲಿ ಸಿನಿಮಾ ಸೆಟ್ಟೇರಲಿದೆ. ಇದು ನೈಜ ಘಟನೆಯಾಧಾರಿತ ಸಿನಿಮಾ ಎಂಬುದು ವಿಶೇಷ.

ಘೋಸ್ಟ್ ಚಿತ್ರವನ್ನು ನಿರ್ದೇಶಿಸಿದ್ದ ಶ್ರೀನಿ, ಶಿವಣ್ಣ ಅವರ ಹೊಸ ಚಿತ್ರಕ್ಕೂ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ವೇದ, ಭೈರತಿ ರಣಗಲ್ ಸಿನಿಮಾಗಳನ್ನು ನಿರ್ಮಿಸಿದ ಗೀತಾ ಶಿವರಾಜ್ ಕುಮಾರ್, ಗೀತಾ ಪಿಕ್ಚರ್ಸ್ ಮೂಲಕ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಘೋಸ್ಟ್ ಚಿತ್ರದಲ್ಲಿ ಕಾರ್ಯನಿರ್ವಹಿಸಿದ್ದ ತಾಂತ್ರಿಕ ವರ್ಗವೇ ಇಲ್ಲಿಯೂ ಕೆಲಸ ಮಾಡುತ್ತಿದೆ. ಮಹೇನ್ ಸಿಂಹ ಛಾಯಾಗ್ರಹಣ, ದೀಪು.ಎಸ್.ಕುಮಾರ್ ಸಂಕಲನ ಈ ಚಿತ್ರಕ್ಕಿದ್ದು ವಿ.ಎಂ.ಪ್ರಸನ್ನ ಸಂಭಾಷಣೆ ಬರೆದಿದ್ದಾರೆ. ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ಸಿನಿಮಾದ ಶೂಟಿಂಗ್ ಆರಂಭವಾಗಲಿದೆ.

ಮಹಾವೀರ ಹನುಮನ ಹೊಸ ಗಾನ

ಮಹಾವೀರ ಹನುಮನನ್ನು ಸ್ತುತಿಸುವ ಹೊಸ ಆಲ್ಬಂ ಸಾಂಗ್ ಬಿಡುಗಡೆಯಾಗಿದೆ. ಹಿರಿಯ ನಿರ್ಮಾಪಕ ಸೂರಪ್ಪ ಬಾಬು ಈ ಹಾಡನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ರಾಘವ ಸೂರ್ಯ ನಿರ್ದೇಶನದಲ್ಲಿ ಈ ಹಾಡು ಮೂಡಿಬಂದಿದ್ದು ಹನುಮನ ಗುಣಗಾನ ಮಾಡಿದೆ. ಗ್ರಾಫಿಕ್ಸ್ ಮೂಲಕ ಹಾಡು ಎಲ್ಲರ ಮನಕ್ಕೆ ಮುಟ್ಟುವಂತೆ ಕಟ್ಟಿಕೊಟ್ಟಿದ್ದಾರೆ. ಬಾಲ ನಟಿ ಋತು ಸ್ಪರ್ಶ ಹಾಡಿನಲ್ಲಿ ಹೆಜ್ಜೆ ಹಾಕಿರುವುದು ವಿಶೇಷ.

ರಾಮನಾಗಿ ರೋಹಿತ್ ರೆಡ್ಡಿ, ಲಕ್ಷ್ಮಣನಾಗಿ ರಾಜ್, ಅಂಗದರಾಗಿ ಜೀವನ್, ಸೀತೆಯಾಗಿ ಪ್ರಿಯಾ ನಟಿಸಿದ್ದಾರೆ. ಸಾಯಿ ಸರ್ವೇಶ್ ಸಾಹಿತ್ಯ, ಸಂಗೀತ ಸಂಯೋಜಿಸುವ ಜತೆಗೆ ಗೀತೆಗೂ ದನಿಯಾಗಿದ್ದಾರೆ. ರಂಗಸ್ವಾಮಿ ಛಾಯಾಗ್ರಹಣ, ಕಂಬಿರಾಜು ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ. ಅಂಜನಾದ್ರಿ, ಬೆಟ್ಟ, ಆನೆಗುಂದಿಯ ಲಕ್ಷ್ಮೀ ರಂಗನಾಥಸ್ವಾಮಿ ದೇವಸ್ಥಾನ ಮತ್ತು ಚಿಂತಾಮಣಿ ಮಠದಲ್ಲಿ ಚಿತ್ರೀಕರಿಸಿದ್ದು ಚಾಲೆಂಜ್ ಹಾಗೂ ಸಾಹಸವಾಗಿತ್ತು. ಜಾಕಿಚಾನ್ ಅಭಿನಯದ ದಿ ಮಿಥ್ ಸಿನಿಮಾದ ಶೂಟಿಂಗ್ ಕೂಡ ಅಲ್ಲೇ ನಡೆದಿದ್ದು, ನಂತರ ನಾವು ಅಲ್ಲಿಗೆ ತೆರಳಿ ಚಿತ್ರೀಕರಿಸಿದೆವು. ಇದು ಭಾರತೀಯ ಚಿತ್ರರಂಗದಲ್ಲೇ ಮೊದಲು ಎನ್ನಬಹುದು. ಹಂಪಿ ಪ್ರಾಧಿಕಾರದವರು ವಿಶೇಷ ಅನುಮತಿಯೊಂದಿಗೆ, ನೂರು ತಂತ್ರಜ್ಞರ ಜತೆಗೆ ಬೆಟ್ಟವನ್ನು ಹತ್ತಿ ಇಳಿದು ತುಂಬಾ ಶ್ರಮಪಟ್ಟು ಹಾಡನ್ನು ಚಿತ್ರೀಕರಿಸಿದ್ದೇವೆ ಎಂದು ನಿರ್ದೇಶಕರು ತಿಳಿಸಿದರು.

"ಸಹಕಾರಂ ಗೆಲ್ಗೆ ಸಹಕಾರಂ ಬಾಳ್ಗೆ"

71ನೇ ಅಖಿಲ ಭಾರತ ಸಹಕಾರ ಸಪ್ತಾಹ 2024
ಧ್ಯೇಯ "ವಿಕಸಿತ ಭಾರತ" ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಬೆಂಗಳೂರು
ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತ, ಬೆಂಗಳೂರು
ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿಯಮಿತ, ಮಂಗಳೂರು
ನೇತೃತ್ವದಲ್ಲಿ
ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಸಹಕಾರಿ ಯೂನಿಯನ್ ನಿಯಮಿತ | ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿಯಮಿತ, ಮಂಗಳೂರು
ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್ ರಿ., ಮಂಗಳೂರು | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಕೃಷಿ ಪತ್ತಿನ ಸಹಕಾರ ಸಂಘಗಳು
ಪಟ್ಟಣ ಸಹಕಾರ ಬ್ಯಾಂಕ್‌ಗಳು /ಎಲ್ಲಾ ವಿಧದ ಸಹಕಾರ ಸಂಘಗಳು ಹಾಗೂ ಸಹಕಾರ ಇಲಾಖೆ
ಸಹಯೋಗದೊಂದಿಗೆ

71ನೇ ಅಖಿಲ ಭಾರತ ಸಹಕಾರ ಸಪ್ತಾಹ-2024

ಇಂದು
ತಾ. 16-11-2024ನೇ ಶನಿವಾರ
ಸಮಯ: ಪೂರ್ವಾಹ್ನ 10.00 ಗಂಟೆಗೆ
ಸ್ಥಳ: ಕರಾವಳಿ ಉತ್ಸವ ಮೈದಾನ, ಮಂಗಳೂರು

ಸಹಕಾರ ಜಾಥಾ
ಪೂರ್ವಾಹ್ನ 9.00 ಗಂಟೆಗೆ
ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಆವರಣದಿಂದ ಕರಾವಳಿ ಉತ್ಸವ ಮೈದಾನದವರೆಗೆ

ವಿಷಯ: "ಉದ್ಯಮಶೀಲತೆ, ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ"

ವಸ್ತು ಪ್ರದರ್ಶನ ಮಳಿಗೆಗಳ ಉದ್ಘಾಟನೆ	ಸಮಾರಂಭದ ಉದ್ಘಾಟನೆ	ಉತ್ತಮ ಸಹಕಾರ ಸಂಘಗಳಿಗೆ ಪ್ರಶಸ್ತಿ ಪ್ರದಾನ	ಶತಮಾನೋತ್ಸವ ಪೂರೈಸಿದ ಸಹಕಾರ ಸಂಘಗಳಿಗೆ ಪುರಸ್ಕಾರ	ಉತ್ತಮ ಸ್ವ-ಸಹಾಯ ಸಂಘಗಳಿಗೆ ಪುರಸ್ಕಾರ	ಸಹಕಾರಿ ಧ್ವಜಾರೋಹಣ	ಅಧ್ಯಕ್ಷತೆ	ಮೆರವಣಿಗೆ ಉದ್ಘಾಟನೆ
ಸನ್ಮಾನ್ಯ ಶ್ರೀ ಯು.ಟಿ. ಖಾದರ್ ಫರೀದ್ ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ	ಸನ್ಮಾನ್ಯ ಶ್ರೀ ಕೆ.ಎನ್. ರಾಜಣ್ಣ ಮಾನ್ಯ ಸಹಕಾರ ಸಚಿವರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ	ಸನ್ಮಾನ್ಯ ಶ್ರೀ ದಿನೇಶ್ ಗುಂಡೂರಾವ್ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ಸಚಿವರು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ	ಸನ್ಮಾನ್ಯ ಶ್ರೀ ಲಕ್ಷ್ಮಣ ಸಂಗಪ್ಪ ಸವದಿ ಮಾನ್ಯ ಶಾಸಕರು ಹಾಗೂ ಮಾಜಿ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ	ಸನ್ಮಾನ್ಯ ಶ್ರೀ ಜಿ. ಟಿ. ದೇವೇಗೌಡ ಮಾನ್ಯ ಶಾಸಕರು ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು	ಸನ್ಮಾನ್ಯ ಶ್ರೀ ಕ್ಯಾಪ್ಟನ್ ಬ್ರಿಜೇಶ್ ಚೌಟ ಮಾನ್ಯ ಸಂಸದರು ಮಂಗಳೂರು ಲೋಕಸಭಾ ಕ್ಷೇತ್ರ	ಸನ್ಮಾನ್ಯ ಡಾ|| ಎಂ.ಎನ್. ರಾಜೇಂದ್ರ ಕುಮಾರ್ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು ಅಧ್ಯಕ್ಷರು, ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಲಿ., ಮಂಗಳೂರು ಮೆನೇಜಿಂಗ್ ಟ್ರಸ್ಟಿ, ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್ (ರಿ.), ಮಂಗಳೂರು.	ಸನ್ಮಾನ್ಯ ಶ್ರೀ ವೇದವ್ಯಾಸ್ ಡಿ. ಕಾಮತ್ ಮಾನ್ಯ ಶಾಸಕರು ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ

ಮುಖ್ಯ ಅತಿಥಿಗಳು
ಗೌರವ ಉಪಸ್ಥಿತಿ
ವಿಶೇಷ ಆಹ್ವಾನಿತರು

ಡಾ|| ಭರತ್ ಶೆಟ್ಟಿ ವೈ. ಮಾನ್ಯ ಶಾಸಕರು, ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರ
ಶ್ರೀ ಮಂಜುನಾಥ ಭಂಡಾರಿ ಮಾನ್ಯ ಶಾಸಕರು ಕರ್ನಾಟಕ ವಿಧಾನಪರಿಷತ್
ಶ್ರೀ ಯಶ್‌ಪಾಲ್ ಎ. ಸುವರ್ಣ ಮಾನ್ಯ ಶಾಸಕರು; ಅಧ್ಯಕ್ಷರು, ದ.ಕ. ಮತ್ತು ಉಡುಪಿ ಜಿಲ್ಲಾ ಸಹಕಾರಿ ಮೀನು ಮಾರಾಟ ಮಹಾಮಂಡಳ ನಿ., ಮಂಗಳೂರು
ಶ್ರೀ ಐವನ್ ಡಿ'ಸೋಜ ಮಾನ್ಯ ಶಾಸಕರು ಕರ್ನಾಟಕ ವಿಧಾನಪರಿಷತ್
ಶ್ರೀ ಕಿಶೋರ್ ಕುಮಾರ್ ಬೊಟ್ಯಾಡಿ ಮಾನ್ಯ ಶಾಸಕರು ಕರ್ನಾಟಕ ವಿಧಾನಪರಿಷತ್
ಶ್ರೀ ಕೆ.ವಿ.ಎಸ್.ಎಸ್.ಎಲ್.ವಿ. ಪ್ರಸಾದ್ ರಾವ್ ಮುಖ್ಯ ಮಹಾಪ್ರಬಂಧಕರು ನಬಾರ್ಡ್
ಶ್ರೀ ಮನೋಜ್ ಕುಮಾರ್ ಕೋಡಿಕಲ್ ಮಾನ್ಯ ಮಹಾಪೌರರು ಮಂಗಳೂರು ಮಹಾನಗರ ಪಾಲಿಕೆ
ಶ್ರೀ ಕೆ.ಪಿ. ಸುಚರಿತ ಶೆಟ್ಟಿ ಅಧ್ಯಕ್ಷರು, ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿ. ಮಂಗಳೂರು
ಡಾ. ಅಜಯ್ ನಾಗಭೂಷಣ್ ಎಂ.ಎನ್. ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು
ಶ್ರೀ ಟಿ.ಎಚ್.ಎಂ. ಕುಮಾರ್ ಭಾ.ಆ.ಸೇ. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ ಬೆಂಗಳೂರು
ಶ್ರೀ ಮುಲ್ಲೈ ಮುಹಿಲನ್ ಎಂ.ಪಿ. ಭಾ.ಆ.ಸೇ. ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ
ಶ್ರೀ ಅನುಪಮ್ ಅಗರ್‌ವಾಲ್ ಭಾ.ಪೊ.ಸೇ. ಪೊಲೀಸ್ ಆಯುಕ್ತರು, ಮಂಗಳೂರು

ಆದರದ ಸ್ವಾಗತ ಕೋರುವ
ಶ್ರೀ ಬೆಳ್ಳಿಪ್ಪಾಡಿ ಪ್ರಸಾದ್ ಕೌಶಲ್ ಶೆಟ್ಟಿ ಅಧ್ಯಕ್ಷರು, ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ನಿ., ಮಂಗಳೂರು
ಶ್ರೀ ಬಿ. ಜಯಕರ ಶೆಟ್ಟಿ ಇಂದ್ರಾಳಿ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಅಧ್ಯಕ್ಷರು, ಉಡುಪಿ ಜಿಲ್ಲಾ ಸಹಕಾರಿ ಯೂನಿಯನ್ ನಿ., ಉಡುಪಿ
ಶ್ರೀ ಕೆ.ಎಸ್. ನವೀನ್ ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ವ್ಯವಸ್ಥಾಪಕ ನಿರ್ದೇಶಕರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು
ಶ್ರೀ ಹೆಚ್. ಬಾಲಶೇಖರ್ ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು) ಬೆಂಗಳೂರು
ಶ್ರೀ ಏಕಳಬಾವ ದೇವಿಪ್ರಸಾದ್ ಶೆಟ್ಟಿ ಬೆಳಪು ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು
ಶ್ರೀ ಗುರುಸ್ವಾಮಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು
ಶ್ರೀ ಪ್ರಸಾದ್ ರೆಡ್ಡಿ ಪಿ. ಸಹಕಾರ ಸಂಘಗಳ ಜಂಟಿ ನಿಬಂಧಕರು ಮೈಸೂರು ಪ್ರಾಂತ, ಮೈಸೂರು
ಶ್ರೀ ರಮೇಶ್ ಹೆಚ್.ಎನ್. ಸಹಕಾರ ಸಂಘಗಳ ಉಪ ನಿಬಂಧಕರು ದಕ್ಷಿಣ ಕನ್ನಡ ಜಿಲ್ಲೆ
ಶ್ರೀಮತಿ ಲಾವಣ್ಯ ಕೆ.ಆರ್. ಸಹಕಾರ ಸಂಘಗಳ ಉಪ ನಿಬಂಧಕರು ಉಡುಪಿ ಜಿಲ್ಲೆ
ಶ್ರೀ ಕೆ. ಗೋಪಾಲಕೃಷ್ಣ ಭಟ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರಭಾರ) ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿಯಮಿತ, ಮಂಗಳೂರು
ಶ್ರೀಮತಿ ಪೂರ್ಣಿಮಾ ಶೆಟ್ಟಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್ ರಿ., ಮಂಗಳೂರು